
ಕರ್ನಾಟಕ ನಾಟಕ ಅಕಾಡೆಮಿ

# ಶಿವಮೊಗ್ಗ

## ಜಿಲ್ಲಾ ರಂಗಮಾಹಿತಿ

ಹರಿಗೆ ಗೋಪಾಲಸ್ವಾಮಿ



ಜಿಲ್ಲಾ ರಂಗಮಾಹಿತಿ ಮಾಲಿಕೆ

# ಶಿವಮೊಗ್ಗ

## ಜಿಲ್ಲಾ ರಂಗ ಮಾಹಿತಿ

ಹರಿಗೆ ಗೋಪಾಲಸ್ವಾಮಿ

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 02

**SHIVAMOGA JILLA RANGA MAHITHI :**
District theatre information written by **Harige Gopalaswami**
Published by **B. Manjunatha Aradya,** Registrar, Karnataka Nataka Academy, Kannada Bhavana, J.C. Road, Bengaluru - 560 002.
Phone: 080-22237484

| | | |
|---|---|---|
| ಹಕ್ಕುಗಳು | : | ಕರ್ನಾಟಕ ನಾಟಕ ಅಕಾಡೆಮಿ |
| ಮೊದಲ ಮುದ್ರಣ | : | 2017 |
| ಪ್ರತಿಗಳು | : | 1000 |
| ಪುಟಗಳು | : | xii+196 |
| ಬೆಲೆ | : | ರೂ. 60.00 |

ಪ್ರಕಾಶಕರು : **ಬಿ. ಮಂಜುನಾಥ ಆರಾಧ್ಯ, ರಿಜಿಸ್ಟ್ರಾರ್**
**ಕರ್ನಾಟಕ ನಾಟಕ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು
ದೂರವಾಣಿ : ೦೮೦ ೨೨೨೩೭೪೮೪
ಇಮೇಲ್: academy.nataka@gmail.com

ಪ್ರಕಟಣಾ ಸಮಿತಿ ಸದಸ್ಯರು : **ಎಂ.ಎಸ್. ಗುಣಶೀಲನ್**
**ಎಸ್.ಕೆ. ಕೊನೆಸಾಗರ**
**ಮುದ್ದಣ್ಣ ರಟ್ಟೀಹಳ್ಳಿ**

ಮುದ್ರಕರು : ಎಂ.ಎಸ್. ಗ್ರಾಫಿಕ್ಸ್
ಬೆಂಗಳೂರು-೭೯.
ದೂ.: ೦೮೦ ೨೩೫೮೦೨೭೧

# ಅಧ್ಯಕ್ಷರ ನುಡಿ

ಕರ್ನಾಟಕ ನಾಟಕ ಅಕಾಡೆಮಿ ಮೂರು ವರ್ಷದ ನಮ್ಮ ಅವಧಿಯ ಮುಕ್ತಾಯದ ಹಂತಕ್ಕೆ ಬಂದಿದ್ದೇವೆ. ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಬಾಗಲಕೋಟೆ ಜಿಲ್ಲೆ ಇಳಕಲ್‌ನಲ್ಲಿ 30 ದಿನಗಳ ವೃತ್ತಿರಂಗಭೂಮಿ ತರಬೇತಿ ಶಿಬಿರ, ಮುಂಬಯಿ, ದೆಹಲಿ ಹಾಗೂ ಕೇರಳದ ತ್ರಿಶೂರಿನಲ್ಲಿ ಹೊರರಾಜ್ಯ ನಾಟಕೋತ್ಸವ, ಕಾಸರಗೋಡಿನಲ್ಲಿ ಗಡಿನಾಡು ಬಹುಭಾಷಾ ನಾಟಕೋತ್ಸವ ಮತ್ತು ಮೈಂದರ್ಗಿಯಲ್ಲಿ ಗಡಿನಾಡ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮಗಳನ್ನು ಕಳೆದ ಮೂರು ವರ್ಷಕಾಲ ಹಮ್ಮಿಕೊಂಡಿದ್ದೆವು.

ವಿಜಯಪುರದಲ್ಲಿ 2015 ಸೆ.24 ರಿಂದ 30ರ ವರೆಗೆ ನಡೆದರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್. ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ, ಹಿರಿಯ ನಟ ಕಂಚಿಕೇರಿ ಶಿವಣ್ಣ ಅವರಿಗೆ ದಾವಣಗೆರೆಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ 21 ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಹಾಗೂ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಏಳು ದಿನಗಳ ಕಾಲ ನಡೆದ ವೃತ್ತಿರಂಗಭೂಮಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ 30 ಜಿಲ್ಲೆಗಳಲ್ಲಿ ರಂಗ ಶಿಬಿರ, ನಾಟಕ ಪ್ರದರ್ಶನ ಏರ್ಪಡಿಸಿದ್ದೇವೆ. ವಿಶೇಷ ಘಟಕ ಯೋಜನೆಯಡಿ ಐದು ಕಲಾವಿದರ ಮತ್ತು ಗಿರಿಜನ ಯೋಜನೆಯಲ್ಲಿ ಇಬ್ಬರು ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣ ಮಾಡಲಾಗಿದೆ. 12 ವೃತ್ತಿ ನಾಟಕ ಕಂಪನಿಗಳ

ಸಾಕ್ಷ್ಯಚಿತ್ರ ನಿರ್ಮಿಸಲಾಗುತ್ತಿದೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಸರಿಸುಮಾರು 20 ವರ್ಷಗಳಿಂದ ಸ್ಥಗಿತಗೊಂಡಿದ್ದ ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ. ನಾಟಕ ರಚನಾ ಶಿಬಿರದಲ್ಲಿ ಆಯ್ಕೆಯಾದ ಏಳು ನಾಟಕಗಳ ಸಂಕಲನವನ್ನು ಹೊರತರಲಾಗುವುದು.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪ್ರಥಮ ಹಂತದಲ್ಲಿ ಜಿಲ್ಲಾ ರಂಗಮಾಹಿತಿ ಮಾಲಿಕೆ ಮತ್ತು ರಂಗ ಸಂಪನ್ನರು ಮಾಲಿಕೆಯ 18 ಪುಸ್ತಕಗಳು ಬಿಡುಗಡೆಯಾಗಿವೆ. ಎರಡನೇ ಹಂತದಲ್ಲಿ 15 ಪುಸ್ತಕಗಳು ಬಿಡುಗಡೆಯಾಗುತ್ತಿವೆ. ಶತಮಾನದ ಶಕಪುರುಷ ಏಣಗಿ ಬಾಳಪ್ಪ, ರಂಗಭೂಮಿ ಮತ್ತು ಮಹಿಳೆ ಪುಸ್ತಕಗಳನ್ನು ಹೊರತರಲಾಗಿದೆ. 1959 ರಿಂದ 2016ರ ವರೆಗಿನ ನಾಟಕ ಅಕಾಡೆಮಿಯ ಎಲ್ಲಾ ಪ್ರಶಸ್ತಿ ಪುರಸ್ಕೃತರ ಪರಿಚಯದ ಪುಸ್ತಕವನ್ನು ಹೊರತರಲು ಕ್ರಮವಹಿಸಲಾಗುತ್ತಿದೆ. ಈ ಎಲ್ಲಾ ಕನಸು ಸಾಕಾರಗೊಳ್ಳಲು ಶ್ರಮಿಸಿದ ಪ್ರಕಟಣಾ ಸಮಿತಿ ಸದಸ್ಯರು/ನಾಟಕ ಅಕಾಡೆಮಿ ಸದಸ್ಯರು ಹಾಗೂ ಜಿಲ್ಲಾರಂಗ ಮಾಹಿತಿ ಮಾಲಿಕೆಯಡಿ ಸರಿಸುಮಾರು 25 ಮತ್ತು ರಂಗ ಸಂಪನ್ನರು ಮಾಲಿಕೆಯಡಿ 15 ಕಲಾವಿದರ ಪುಸ್ತಕಗಳನ್ನು ಬರೆದುಕೊಟ್ಟ ಎಲ್ಲಾ ಲೇಖಕರಿಗೆ, ಪುಸ್ತಕವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಎಂ.ಎಸ್. ಗ್ರಾಫಿಕ್ಸ್ ಅವರಿಗೂ, ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಮಂಜುನಾಥ ಆರಾಧ್ಯ ಹಾಗೂ ಅಕಾಡೆಮಿಯ ಎಲ್ಲ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳು.

ಎಲ್.ಬಿ. ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ರಂಗ ಕೈಪಿಡಿಗೊಂದು ಮುನ್ನುಡಿ

ಒಂದೊಂದು ಜಿಲ್ಲೆಗಳ ರಂಗಮಾಹಿತಿ ಪ್ರತ್ಯೇಕವಾಗಿ ಪುಸ್ತಕ ರೂಪದಲ್ಲಿ ಲಭ್ಯವಿರಬೇಕು ಎನ್ನುವುದು ನಾಟಕ ಅಕಾಡೆಮಿಯ ಬಹುದಿನದ ಕನಸು. ಇದು ಗುರುತರ ಕೆಲಸ. ಬಿ.ವಿ. ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಇದಕ್ಕೆ ಚಾಲನೆ ನೀಡಲಾಯಿತು. ಅಕಾಡೆಮಿ ಸದಸ್ಯರಿಗೆ ಇದರ ಹೊಣೆ ಹೊರಿಸಿ ಜಿಲ್ಲೆಯ ಮಟ್ಟದಲ್ಲಿ ಮಾಹಿತಿ ಸಂಗ್ರಹಿಸುವ ಹತ್ತಾರು ರಂಗಕರ್ಮಿಗಳ ಸಂಪಾದಕೀಯ ಸಮಿತಿ ರಚಿಸಲಾಯಿತು. ಹಾಗೂ ಹೀಗೂ 5–6 ಜಿಲ್ಲೆಗಳ ರಂಗಮಾಹಿತಿಯೂ ಸಿದ್ಧಗೊಂಡಿತು. ಆದರೆ ಪುಸ್ತಕಗಳು ಹೊರಬರಲಿಲ್ಲ. ಜಿಲ್ಲೆಯ ಮಟ್ಟದಲ್ಲಿ ಹೆಚ್ಚಿನ ಜನರನ್ನು ಈ ಕೆಲಸಕ್ಕಾಗಿ ತೊಡಗಿಸುವುದು ಕಷ್ಟಕರ. ನಮ್ಮ ಮಿತಿಯಲ್ಲಿ ಅಪ್ರಾಯೋಗಿಕ ಎನಿಸಿತು. ಅಂತೆಯೇ ಒಂದು ಜಿಲ್ಲೆಯ ರಂಗಮಾಹಿತಿ ಸಂಗ್ರಹಿಸಿ ಬರೆಯುವ ಕೆಲಸವನ್ನು ಒಬ್ಬರಿಗೇ ವಹಿಸಿ ಕಾರ್ಯಪ್ರವೃತ್ತರಾದೆವು. ಅದಕ್ಕಾಗಿ 'ಜಿಲ್ಲಾ ರಂಗಮಾಹಿತಿ' ಮಾಲಿಕೆ ಯೋಜನೆ ರೂಪಿಸಲಾಯಿತು. ಅದು ಫಲ ನೀಡಿತು. ಇಪ್ಪತ್ತಕ್ಕೂ ಅಧಿಕ ಜಿಲ್ಲೆಗಳ ರಂಗಮಾಹಿತಿ ಪುಸ್ತಕಗಳು ಈಗ ಹೊರಬಂದವು.

ಜಿಲ್ಲೆಯ ರಂಗಭೂಮಿ ಸಂಕ್ಷಿಪ್ತ ಇತಿಹಾಸ; ಹವ್ಯಾಸಿ, ವೃತ್ತಿ ತಂಡಗಳು, ನಟ ನಟಿ, ನಿರ್ದೇಶಕ, ನೇಪಥ್ಯ ಕಲಾವಿದರ ಸಂಕ್ಷಿಪ್ತ ಪರಿಚಯ; ರಂಗಮಂದಿರ – ಹೀಗೆ 13 ವಿಷಯಗಳ ಪಟ್ಟಿಮಾಡಿ ಲೇಖಕರಿಗೆ ಕಳಿಸಿಕೊಟ್ಟಿದ್ದೆವು. ರಂಗ ಲೇಖಕರು ವಿರಳವಾಗಿರುವುದರಿಂದ ಕೆಲವು ಜಿಲ್ಲೆಗಳಲ್ಲಿ ಕಲಾವಿದರಿಗೇ ಬರಹದ ಕೆಲಸ ನೀಡಲಾಗಿತ್ತು. ಒಬ್ಬರು ಕಲಾವಿದರ ಮೂಲಕ, ಮತ್ತೊಬ್ಬರು ನಾಟಕಕಾರರ ಮೂಲಕ, ಮತ್ತೆ ಕೆಲವರು ರಂಗ ತಂಡಗಳ ಕ್ರಿಯಾಶೀಲತೆ ಮೂಲಕ ಜಿಲ್ಲೆಯ ರಂಗಮಾಹಿತಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಮಗ್ರ ಎಂದು ಭಾವಿಸಬಾರದು. ಜಿಲ್ಲೆಯ ಕುರಿತು ಒಂದು ಪಕ್ಷಿನೋಟ ಇದು. ಒಂದು ಜಿಲ್ಲೆಯ ಕೆಲವಷ್ಟು ಮಾಹಿತಿಯನ್ನು ಈ ಪುಸ್ತಕಗಳು ಒಳಗೊಂಡಿವೆ. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

# ತಂಡದ ಮೂಲಕ ಇತಿಹಾಸ

ಸಾಂಸ್ಕೃತಿಕ ಚಟುವಟಿಕೆಗಳು ಮುಂಚೂಣಿಯಲ್ಲಿರುವ ಜಿಲ್ಲೆ ಶಿವಮೊಗ್ಗ. ವೈವಿಧ್ಯಮಯ ರಂಗಚಟುವಟಿಕೆಯ ತವರು ಇದು. ವೃತ್ತಿ ನಾಟಕ ಕಂಪನಿಗಳ ಸುಧಾರಿತ ಮುಂದುವರಿಕೆಯಂತೆ ರೆಪರ್ಟರಿಗಳಿಗೆ (ಸಂಚಾರಿ ವೃತ್ತಿ ನಾಟಕತಂಡ) ಜನ್ಮ ನೀಡಿದ ಹೆಗ್ಗಳಿಕೆ ಈ ಜಿಲ್ಲೆಯದು. ಹವ್ಯಾಸಿ ರಂಗತಂಡಗಳ ಸಂಕ್ಷಿಪ್ತ ಪರಿಚಯದ ಮೂಲಕ ಜಿಲ್ಲೆಯ ರಂಗಇತಿಹಾಸವನ್ನು ಗೋಪಾಲಸ್ವಾಮಿ ಗ್ರಹಿಸಿದ್ದಾರೆ.

ಲೇಖಕ ಹರಿಗೆ ಗೋಪಾಲಸ್ವಾಮಿ ರಂಗಸಜ್ಜಿಕೆ, ಬೆಳಕುವಿನ್ಯಾಸ ತಜ್ಞರು. ಇತಿಹಾಸಕಾರನಿಗೆ ಇರಬೇಕಾದ ಸಹನೆ, ತಾಳ್ಮೆಯಿಂದ ಮಾಹಿತಿಯನ್ನು ಕಲೆಹಾಕಿದ್ದಾರೆ. ಲೇಖಕರ ನೆರವಿನಿಂದ ಬರಹ ರೂಪಕ್ಕಿಳಿಸಿದ್ದಾರೆ. ಮೊದಲ ಸಂಕ್ಷಿಪ್ತ ಆಕರ ಗ್ರಂಥವಾಗಿ ಇದಕ್ಕೆ ಮನ್ನಣೆ ಇದೆ.

–ಗುಡಿಹಳ್ಳಿ ನಾಗರಾಜ

ಪ್ರಕಟಣಾ ಸಮಿತಿ ಪರವಾಗಿ

# "ಒಂದು ಸಾರ್ಥಕ ಪ್ರಯತ್ನ..."

ಕರ್ನಾಟಕ ನಾಟಕ ಅಕಾಡೆಮಿಯು ರಾಜ್ಯದ ಪ್ರತೀ ಜಿಲ್ಲೆಯ ರಂಗ ಇತಿಹಾಸ ಮತ್ತು ಮಾಹಿತಿಗಳನ್ನು ದಾಖಲಿಸಿ ಪುಸ್ತಕ ರೂಪದಲ್ಲಿ ಹೊರತರುವ ಸಂಕಲ್ಪ ಮಾಡಿತು. ಅಕಾಡೆಮಿಯ ಕೋರಿಕೆ ಮೇರೆಗೆ ಈ ಹಿಂದೆ ಅಕಾಡೆಮಿಗೆ ಶಿವಮೊಗ್ಗದ ಪ್ರತಿನಿಧಿಯಾಗಿದ್ದ ನಾನು ಈ ಕೆಲಸವನ್ನು ಸವಾಲಾಗಿಯೇ ಸ್ವೀಕರಿಸಿದೆ. ಪ್ರತೀ ತಾಲ್ಲೂಕುಗಳಿಗೂ ಭೇಟಿ ನೀಡಿ ಅಲ್ಲಿಯ ಹಿರಿಯ–ಕಿರಿಯ ಕಲಾವಿದರು, ರಂಗತಜ್ಞರು–ರಂಗಾಸಕ್ತರು ಹೀಗೆ ಎಲ್ಲ ವರ್ಗದವರನ್ನೂ ಸಂಪರ್ಕಿಸಿ, ಸುಮಾರು 55 ವರ್ಷಗಳ ಸುಧೀರ್ಘ ರಂಗ ಇತಿಹಾಸ–ಮಾಹಿತಿಗಳನ್ನು ದಾಖಲೆಗಳ ಸಮೇತ ಸಮಗ್ರವಾಗಿ ಸಂಗ್ರಹಿಸುವ ಸಾರ್ಥಕ ಪ್ರಯತ್ನ ನಡೆಸಲಾಯಿತು. ಸುಮಾರು ಒಂದು ವರ್ಷಗಳ ಈ ನಮ್ಮ ಪ್ರಯತ್ನವು ಈಗ ಈ ಪುಸ್ತಕರೂಪದಲ್ಲಿ ದಾಖಲಾಗಿರಿಸುವ ಹೆಮ್ಮೆ ನಮಗಿದೆ. ಶಿವಮೊಗ್ಗ ಜಿಲ್ಲೆಯ ಎಲ್ಲಾ ಹವ್ಯಾಸಿ ಮತ್ತು ವೃತ್ತಿ ರಂಗ ತಂಡಗಳೂ ಈ ನಮ್ಮ ಪ್ರಯತ್ನಕ್ಕೆ ಸಹಕರಿಸಿದ್ದಾರೆ. ಬಹು ಮುಖ್ಯವಾಗಿ ಈ ಸಂದರ್ಭದಲ್ಲಿ ಸ್ಮರಿಸಬೇಕಾದ್ದೆಂದರೆ ಹೆಗ್ಗೋಡಿನ 'ನೀನಾಸಂ' ರಂಗಶಾಲೆಯವರನ್ನು. ನಮ್ಮ ಪ್ರಯತ್ನದ ಯಶಸ್ಸಿನ ಸಿಂಹಪಾಲು ಅವರಿಗೇ ಸಲ್ಲುತ್ತದೆ.

ಆರಂಭದಲ್ಲಿ ಶಿವಮೊಗ್ಗ ರಂಗಪರಂಪರೆಯನ್ನು ದಾಖಲಿಸುವ ಯಜ್ಞಕ್ಕೆ ಮುಂದಾದಾಗ ಇದೊಂದು ಸರಳವಾದ–ಕ್ಲಿಷ್ಟವಲ್ಲದ ಕಾರ್ಯ ಎಂಬುದಾಗಿ ಭಾವಿಸಿದ್ದೆವು. ಆದರೆ ನಂತರದ ದಿನಗಳಲ್ಲಿ ಇದರ ಉದ್ದ–ಆಳ–ಅಗಲದ ಅರಿವಾದಾಗ ನಾವೆಂತಹಾ ಮಹಾನ್ ಕೆಲಸಕ್ಕೆ ಮುಂದಾಗಿದ್ದೇವೆ ಎಂಬ ಅರಿವು ಮೂಡಿತು. ಪ್ರತಿಯೊಬ್ಬರನ್ನೂ ಪರಿಗಣನೆಗೆ ತೆಗೆದುಕೊಂಡು, ಅವರ ಮನ ಒಲಿಸಿ, ನಮ್ಮ ಪ್ರಯತ್ನದ ಹಿಂದಿರುವ ಸದುದ್ದೇಶವನ್ನು ವಿವರಿಸಿ, ಸಮಗ್ರದಾಖಲೆ ಸಹಿತ ಮಾಹಿತಿಯನ್ನು ಸಂಗ್ರಹಿಸುವ ಈ ನಮ್ಮ ಕಾರ್ಯ ಮಾದರಿ ಎಂದರೆ ತಪ್ಪಾಗಲಾರದು. ಜೊತೆಗೆ ಇನ್ನೊಂದು ಹೆಮ್ಮೆಯ ಸಂಗತಿ ಎಂದರೆ, ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲೂ ಈ ರೀತಿಯ ರಂಗಪರಂಪರೆಯ ಇತಿಹಾಸ ಮತ್ತು ಮಾಹಿತಿಯನ್ನು ಪುಸ್ತಕರೂಪದಲ್ಲಿ ದಾಖಲಿಸಿಡಬೇಕೆಂಬ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಡಾ. ರಾಜಾರಾಮ್‌ರವರ ಕನಸಿಗೆ ಪುಷ್ಠಿಕೊಟ್ಟು ಮೊಟ್ಟ ಮೊದಲಿಗೆ ಜಿಲ್ಲೆಯ ಸಮಗ್ರ ರಂಗ ಮಾಹಿತಿಯನ್ನು ಪುಸ್ತಕ ರೂಪದಲ್ಲಿ ಹೊರತಂದ ಕೀರ್ತಿ ನಮ್ಮ ಶಿವಮೊಗ್ಗ ಜಿಲ್ಲೆಗೆ ಸಲ್ಲುತ್ತದೆ. ಈ ಯಶಸ್ಸಿಗೆ ಕಾರಣೀಭೂತರಾದ ಎಲ್ಲರಿಗೂ ನನ್ನ ವೈಯಕ್ತಿಕ ಕೃತಜ್ಞತೆಗಳು.

ಶಿವಮೊಗ್ಗ ಜಿಲ್ಲೆಯ ರಂಗಪರಂಪರೆಯನ್ನು ದಾಖಲಿಸಲು ಪ್ರಮುಖವಾಗಿ ನನ್ನ ಕಲಾವಿದ ಸ್ನೇಹಿತರಾದ ಶ್ರೀ ಎನ್.ಆರ್. ಪ್ರಕಾಶ್ (ಆಚಿ), ಶ್ರೀ ಎಸ್.ಆರ್. ಗಿರೀಶ್, ಶ್ರೀ ಎನ್.ಕೆ. ಶಂಕರಪ್ಪ, ಶ್ರೀ ಮ್ಯಾಥ್ಯೂ ಸುರಾನಿ, ಶ್ರೀ ಸಿ.ಟಿ. ಬ್ರಹ್ಮಾಚಾರ್, ಶ್ರೀ ಗಣೇಶ್ ಎಂ. (ನೀನಾಸಂ), ಶ್ರೀ ರವಿ ಬಿದನೂರು, ಶ್ರೀ ಶ್ರೀಪಾದ ಬಿಚ್ಚುಗತ್ತಿ, ಶ್ರೀ ಗುರುಪ್ರಸಾದ್ ಟಿ.ಆರ್. ತುಂಬು ಹೃದಯದಿಂದ ಸಹಕರಿಸಿದ್ದಾರೆ. ಅಲ್ಲದೆ, ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಇನ್ನಷ್ಟು ಸ್ನೇಹಿತರು ಸಹಕಾರ ನೀಡಿದ್ದಾರೆ. ಆದರೆ, ಅವರ ಹೆಸರನ್ನೆಲ್ಲಾ ಇಲ್ಲಿ ಹೇಳಲು ಸಾಧ್ಯವಾಗಿಲ್ಲ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಜಿಲ್ಲೆಯ ರಂಗ ಪರಂಪರೆಯನ್ನು ಕೆದಕಿ ದಾಖಲಿಸಿರುವ ಈ ನಮ್ಮ ಪ್ರಯತ್ನ ಕೇವಲ 'ಆರಂಭ'ವಷ್ಟೆ. ಇನ್ನೂ ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿ ದಾಖಲಿಸಲು ನಮಗಿದೊಂದು ಸ್ಫೂರ್ತಿ..

– ಹರಿಗೆ ಗೋಪಾಲಸ್ವಾಮಿ

# ಕರ್ನಾಟಕ ನಾಟಕ ಅಕಾಡೆಮಿ

ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿ

**ಶ್ರೀ ಎಲ್.ಬಿ.ಶೇಖ (ಮಾಸ್ತರ)**

ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ, ವಿಜಾಪುರ ಜಿಲ್ಲೆ

ಸದಸ್ಯರು, ಕರ್ನಾಟಕ ನಾಟಕ ಅಕಾಡೆಮಿ

ಶ್ರೀ ಪಿ.ತಿಪ್ಪೇಸ್ವಾಮಿ, ಚಳ್ಳಕೆರೆ

ಶ್ರೀ ರಾಜಪ್ಪಕಿರಗಸೂರು, ಮೈಸೂರು ಜಿಲ್ಲೆ

ಶ್ರೀ ಎಸ್.ಕೆ.ಕೊನೆಸಾಗರ, ಹುನಗುಂದ

ಶ್ರೀ ಎಂ.ಎಸ್.ಗುಣಶೀಲನ್, ಬೆಂಗಳೂರು

ಶ್ರೀಮತಿ ಕಲ್ಪನಾ ನಾಗನಾಥ್, ಬೆಂಗಳೂರು

ಶ್ರೀ ಮುದ್ದಣ್ಣ ರಟ್ಟೆಹಳ್ಳಿ, ಹಾವೇರಿ ಜಿಲ್ಲೆ

ಶ್ರೀಮತಿ ಅನ್ನಪೂರ್ಣ ಸಾಗರ, ಶಿವಮೊಗ್ಗ ಜಿಲ್ಲೆ

ಶ್ರೀ ಎಚ್.ಷಡಾಕ್ಷರಪ್ಪ ಹೊಸಮನಿ, ಹರಪ್ಪನ ಹಳ್ಳಿ

ಶ್ರೀ ಕೆ.ಜಗುಚಂದ್ರ, ಧಾರವಾಡ

ಶ್ರೀ ಉಮೇಶ ಸಾಲಿಯಾನ್, ಕಾಸರಗೋಡು

ಶ್ರೀ ಹಾಲ್ಕುರಿಕೆ ಶಿವಶಂಕರ್, ಕೊಪ್ಪಳ ಜಿಲ್ಲೆ

ಶ್ರೀ ವಿ.ಎನ್.ಅಕ್ಕಿ, ರಾಯಚೂರು

ಶ್ರೀ ಬಿ.ಎಂ.ರಾಮಚಂದ್ರ, ಮೈಸೂರು

ಶ್ರೀ ಎನ್.ಕೆ.ರಾಮಕೃಷ್ಣ, ಬೆಂಗಳೂರು

ಶ್ರೀಮತಿ ಎ.ವರಲಕ್ಷ್ಮಿ, ಬಳ್ಳಾರಿ

ಕೋಪ್ಟ್ ಆದ ಸಹಸದಸ್ಯರು

ಶ್ರೀ ಗುಡಿಹಳ್ಳಿ ನಾಗರಾಜ, ಬೆಂಗಳೂರು

ಡಾ. ಶ್ರೀಪಾದ ಭಟ್, ಉತ್ತರಕನ್ನಡಜಿಲ್ಲೆ

ಶ್ರೀ ಎಲ್.ಎಚ್.ರಂಗನಾಥಪ್ಪ, ತುಮಕೂರುಜಿಲ್ಲೆ

ರಿಜಿಸ್ಟ್ರಾರ್: ಬಿ.ಮಂಜುನಾಥ ಆರಾಧ್ಯ

ಯೋಜನಾ ಸಹಾಯಕರು: ಕೆ.ರೇವಣ್ಣ

ಕಚೇರಿ ಸಿಬ್ಬಂದಿ: ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ

# ಪರಿವಿಡಿ


ಅಧ್ಯಕ್ಷರ ನುಡಿ

ರಂಗ ಕೈಪಿಡಿಗೊಂದು ಮುನ್ನುಡಿ


ತಂಡದ ಮೂಲಕ ಇತಿಹಾಸ

ಮುನ್ನುಡಿ

ಅಕಾಡೆಮಿಗೆ ಆಯ್ಕೆಯಾಗಿರುವ ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿ

1. ಶಿವಮೊಗ್ಗ ಜಿಲ್ಲಾ ರಂಗ ಇತಿಹಾಸ 1
2. ಸಿಹಿಮೊಗೆಯ ರಂಗ ಚರಿತೆ 12
3. ಭದ್ರಾವತಿ ತಾಲೂಕು ರಂಗಭೂಮಿ 53
4. ತೀರ್ಥಹಳ್ಳಿ ತಾಲೂಕು ರಂಗಭೂಮಿ 77
5. ಸಾಗರ ತಾಲೂಕು ರಂಗಭೂಮಿ 107
6. ಸೊರಬ ತಾಲೂಕು ರಂಗಭೂಮಿ 171
7. ಶಿಕಾರಿಪುರ ತಾಲೂಕು ರಂಗಭೂಮಿ 175

# ಶಿವಮೊಗ್ಗ ಜಿಲ್ಲಾ ರಂಗ ಇತಿಹಾಸ



# ಶಿವಮೊಗ್ಗ ಜಿಲ್ಲೆಯ ಒಂದು ರಂಗಪಕ್ಷಿನೋಟ...

"ಸಿಹಿಮೊಗೆ" ಎಂಬ ಅಭಿಮಾನದ ನುಡಿಯನ್ನು ಹೊತ್ತ ಶಿವಮೊಗ್ಗವು ವೈವಿಧ್ಯಮಯ ಸಂಸ್ಕೃತಿಯನ್ನು ಹೊಂದಿರುವ ನಾಡು. ಮಲೆನಾಡಿನ "ಹೆಬ್ಬಾಗಿಲು" ಎಂದೇ ಖ್ಯಾತವಾಗಿರುವ "ಸಿಹಿಮೊಗೆ"ಯು ನೈಸರ್ಗಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಸಾಹಿತ್ಯಾತ್ಮಕವಾಗಿ, ರಾಜಕೀಯವಾಗಿ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ತನ್ನದೇ ಆದ ವಿಭಿನ್ನ ನೆಲೆಯನ್ನು ಹೊಂದಿರುವ ಬೀಡು. ಜ್ಞಾನಪೀಠ ಪುರಸ್ಕೃತರನ್ನು, ಹೆಮ್ಮೆಯ ಮುಖ್ಯಮಂತ್ರಿಗಳನ್ನು, ಕೇವಲ ರಂಗಕ್ರಿಯೆಗಾಗಿಯೇ ಮ್ಯಾಗ್ಸಸ್ಸೆಯಂತಹ ಪ್ರತಿಷ್ಠಿತ ಪ್ರಶಸ್ತಿ ಪಡೆದವರನ್ನು, ಹಲವು ಸಾಧಕರನ್ನು ನಾಡಿಗೆ ನೀಡಿದ ಜಿಲ್ಲೆ. ನೈಸರ್ಗಿಕ ಸಂಪತ್ತಿನಿಂದ ಸಮೃದ್ಧವಾಗಿರುವ ನಾಡು. ಪ್ರಬುದ್ಧ ನಾಗರೀಕರನ್ನು ಹೊಂದಿರುವ ಶಿವಮೊಗ್ಗವು ಇಡೀ ನಾಡಿಗೇ ಹೆಮ್ಮೆಯ ಮಾದರಿ.

ಮಲೆಗಳ ನಾಡಾದ ಶಿವಮೊಗ್ಗವು ತನ್ನದೇ ಆದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಕರಾವಳಿಯ ಕಲೆಗಳಿಗೂ-ಬಲುಸೀಮೆಯ ಸಂಸ್ಕೃತಿಗೂ ನಡುವಿನ ಸೇತುವೆಯಾಗಿ ಮೈದಳೆದಿದೆ. ಯಕ್ಷಗಾನ, ದೊಡ್ಡಾಟ, ಬಯಲಾಟ, ಗೊಂಬೆಯಾಟ, ವೀರಗಾಸೆ, ತಾಳಮದ್ದಳೆ, ಗಮಕವಾಚನ, ಡೊಳ್ಳುಕುಣಿತ, ತಮಟೆ ಇತ್ಯಾದಿಗಳ ಉಗಮಸ್ಥಾನವೆಂದರೆ 'ಸಿಹಿಮೊಗೆ' ಎಂಬ ಅಭಿಮಾನದ ಶಿವಮೊಗ್ಗ, ಒಂದು ಅಪೂರ್ವ ಇತಿಹಾಸವನ್ನು ಹೊಂದಿರುವ ಶಿವಮೊಗ್ಗವು ಹಲವಾರು ಸಾಧಕರನ್ನು ನಾಡಿಗೆ ನೀಡಿದ ಮಣ್ಣಿದು. ರಾಷ್ಟ್ರಕವಿ ಕುವೆಂಪು, ಪೂರ್ಣಚಂದ್ರ ತೇಜಸ್ವಿ, ಡಾ.ಯು.ಆರ್.ಅನಂತಮೂರ್ತಿ, ಎಂ.ಕೆ.ಇಂದಿರಾ, ಹಾಮಾ ನಾಯಕರಂತಹ ಸಾಹಿತ್ಯ ದಿಗ್ಗಜರನ್ನು ನಾಡಿಗೆ ನೀಡಿದ ಕೀರ್ತಿ ಈ ಮಣ್ಣಿನದು. ಇವರೆಲ್ಲರೂ ರಂಗಭೂಮಿ ಹಾಗೂ ಚಲನಚಿತ್ರ ಮಾಧ್ಯಮಗಳಿಗೆ ತಮ್ಮದೇ ಆದ ಕೊಡುಗೆ ನೀಡಿರುವುದು ಹೆಮ್ಮೆಯ ಸಂಗತಿ. ಕೇವಲ ಸಾಹಿತ್ಯ ಕ್ಷೇತ್ರಕ್ಕಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಳ್ಳದೆ, ಸಾಂಸ್ಕೃತಿಕ ಕ್ಷೇತ್ರಗಳಿಗೂ ತಮ್ಮನ್ನು ವಿಸ್ತರಿಸಿಕೊಂಡಿರುವ ಈ ಮಹನೀಯರು ಪ್ರಾತಃಸ್ಮರಣೀಯರು.


ಇದಲ್ಲದೇ ಶಿವಮೊಗ್ಗ ಜಿಲ್ಲೆಯಲ್ಲಿ ನೆನಪಿನಲ್ಲಿಡಬಹುದಾದಂತಹ ರಂಗಭೂಮಿ ಕಾರ್ಯಕ್ರಮಗಳಲ್ಲಿ 'ವಸಂತ ರಂಗೋತ್ಸವ', ನಾಟಕ ಅಕಾಡೆಮಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ 'ದೇಶೀ ನಾಟಕೋತ್ಸವ', 'ಜಿಲ್ಲಾ ನಾಟಕೋತ್ಸವ', 'ಗ್ರಾಮೀಣ ನಾಟಕೋತ್ಸವ'ಗಳಲ್ಲದೇ 'ಸಹ್ಯಾದ್ರಿ ಉತ್ಸವ'ದ ಅಂಗವಾಗಿ

ನಡೆದ ನಾಟಕೋತ್ಸವ, ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆದ ನಾಟಕೋತ್ಸವ, ಜೋಗದಲ್ಲಿ ನಡೆದ ರಾಜ್ಯಮಟ್ಟದ ಮಕ್ಕಳ ನಾಟಕೋತ್ಸವ, ಕಲಾವಿದರ ಒಕ್ಕೂಟ ಪ್ರಸ್ತುತ ಪಡಿಸಿದ ಸಮಗ್ರ ಶಿವಮೊಗ್ಗ ಜಿಲ್ಲಾ ಇತಿಹಾಸವನ್ನು ಬಿಂಬಿಸುವ 'ನಿತ್ಯುಳ್ಳ ಜ್ಯೋತಿ ನಡೆಮುಂದೆ', ರಾಜ್ಯಮಟ್ಟದ ಹಾಸ್ಯ ನಾಟಕೋತ್ಸವ ಸ್ಪರ್ಧೆ, ಕುವೆಂಪು ವಿಶ್ವ ವಿದ್ಯಾನಿಲಯದಲ್ಲಿ ನಿರಂತರವಾಗಿ ನಡೆಯುತ್ತಿರುವ 'ಅಂತರ ಕಾಲೇಜು ನಾಟಕ ಸ್ಪರ್ಧೆಗಳು' ಇವು ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿದ್ದು, ಜಿಲ್ಲೆಯಲ್ಲಿ ರಂಗಭೂಮಿ ಸದಾ ಸಕ್ರಿಯವಾಗಿರಲು ಕಾರಣವಾಗಿದೆ.

ಕರ್ನಾಟಕದಲ್ಲೇ ಪ್ರಪ್ರಥಮವಾಗಿ ಹೆಗ್ಗೋಡಿನಂತಹ ಕುಗ್ರಾಮದಲ್ಲಿ ರಂಗತರಬೇತಿ ಶಾಲೆ ಒಂದು ಹೊಸ ರಂಗ ಆವಿಷ್ಕಾರ ಆರಂಭವಾಯಿತು. ತಿರುಗಾಟ-ಮರುತಿರುಗಾಟಗಳಂತಹ ಪ್ರಯತ್ನದಿಂದ ನಾಡಿನಾದ್ಯಂತ ರಂಗದ ಕಂಪನ್ನು ಹರಡುವ ಪ್ರಯತ್ನ ನಡೆಯಿತು. ನಿರಂತರ ರಂಗಕ್ರಿಯೆಗೆ ಇದು ನಾಂದಿಯಾಯಿತು. ಹತ್ತು-ಹಲವು ಹೊಸ ಹೊಸ ಪ್ರತಿಭೆಗಳು ಬೆಳಕಿಗೆ ಬರಲು ಕಾರಣೀಭೂತವಾಯಿತು. ಫ್ರಾನ್ಸ್‌ನ ವಿದೇಶಿ ನಾಟಕ ತಂಡವೊಂದು ಈ ನಾಡಿನಲ್ಲಿ 'ಫಾರ್ಚೂನ್ ಆಫ್ ದ ಡ್ರೀಮ್' ಎಂಬ ನಾಟಕವನ್ನು ಪ್ರದರ್ಶಿಸಿದ ಕೀರ್ತಿಯಿದೆ. ಇನ್ನೊಂದೆಡೆ ತುಮರಿಯಂತಹ ಕುಗ್ರಾಮದಲ್ಲೂ ರಂಗಕ್ರಿಯೆಯ ಕಾರಂಜಿ ಚಿಮ್ಮಿದೆ. ಸ್ಥಳೀಯ ಪ್ರತಿಭೆಗಳನ್ನು ಬಳಸಿಕೊಂಡು ಹತ್ತು ಹಲವು ವಿಭಿನ್ನ ರಂಗಪ್ರದರ್ಶನ ನೀಡಿದ, ಹೊಸತನಕ್ಕೆ ತನ್ನನ್ನು ತಾನು ತೆರೆದುಕೊಳ್ಳುವಲ್ಲಿ ಶಿವಮೊಗ್ಗ ರಂಗಭೂಮಿಯು ಮುಂಚೂಣಿಯಲ್ಲಿದೆ. ಈ ಕಾರಣಕ್ಕಾಗಿಯೇ 2011ನೇ ಸಾಲಿನಿಂದ ಶಿವಮೊಗ್ಗದಲ್ಲಿ ಪ್ರತಿಷ್ಠಿತ ರಂಗಾಯಣ ಸಂಸ್ಥೆ ಆರಂಭಗೊಂಡಿದೆ. ಆ ಮೂಲಕ ರಂಗಭೂಮಿ ಕ್ಷೇತ್ರದಲ್ಲಿ ಆರೋಗ್ಯಕರ ಬೆಳವಣಿಗೆ ಸಾಗಿದೆ. ಕಾರ್ಖಾನೆಗಳ ನಗರ ಭದ್ರಾವತಿ, ಸಮಾಜವಾದಿ ನೆಲೆಗಟ್ಟಿನ ನಗರ ತೀರ್ಥಹಳ್ಳಿ, ಪ್ರಜ್ಞಾವಂತ ಮತ್ತು ಕುಶಲಕರ್ಮಿಗಳ ನಗರ ಸಾಗರ, ಹೋರಾಟಗಾರರ ಭೂಮಿಯಾದ ಶಿಕಾರಿಪುರ, ಪ್ರಾಕೃತಿಕ ಸಂಪನ್ಮೂಲದ ಹೊಸನಗರ, ಗ್ರಾಮ್ಯ ಸಂಸ್ಕೃತಿಯ ಹೊಳೆಹೊನ್ನೂರು ಇಂತಹ ವಿಭಿನ್ನ ಪರಂಪರೆಯನ್ನು ಹೊಂದಿರುವ ಶಿವಮೊಗ್ಗ ಜಿಲ್ಲೆಯು ಸಮಗ್ರವಾಗಿ ಮತ್ತು ಸಮೃದ್ಧವಾಗಿ ರಂಗಭೂಮಿಗೆ ತೆರೆದುಕೊಂಡಿದೆ.

– ಎಸ್.ಆರ್.ಗಿರೀಶ್

## ಶಿವಮೊಗ್ಗ ತಾಲೂಕು ರಂಗಭೂಮಿ



# ಪ್ರೇಕ್ಷಣೀಯ ಸ್ಥಳಗಳು

**ಸಾಂಸ್ಕೃತಿಕ ತಾಣಗಳು:**

1. ಮತ್ತೂರು – ಸಂಸ್ಕೃತ ಗ್ರಾಮ

**ವನ್ಯಜೀವಿ ತಾಣಗಳು:**

1. ಸಕ್ರೆಬೈಲು – ಆನೆ ಬಿಡಾರ
2. ಮಂಡಗದ್ದೆ – ಪಕ್ಷಿಧಾಮ
3. ಶೆಟ್ಟಿಹಳ್ಳಿ – ಆನೆ, ಜಿಂಕೆ
4. ತ್ಯಾವರೇಕೊಪ್ಪ – ಹುಲಿ, ಸಿಂಹ

**ಚಾರಣ ತಾಣಗಳು:**

1. ಶೆಟ್ಟಿಹಳ್ಳಿ
2. ಮಲೆಶಂಕರ

**ಶಿಲಾರೋಹಣಕ್ಕೆ ಸೂಕ್ತ ಸ್ಥಳಗಳು:**

1. ಗುಡ್ಡೇಮರಡಿ
2. ಗುಡ್ಡೇಕಲ್

**ಜಲಾಶಯಗಳು:**

1. ಗಾಜನೂರು
2. ಪುರದಾಳು

**ದೇವಸ್ಥಾನ ಹಾಗೂ ಐತಿಹಾಸಿಕ ಸ್ಥಳಗಳು:**

1. ಶಿವಪ್ಪನಾಯಕನ ಅರಮನೆ
2. ಗುಡ್ಡೇಕಲ್
3. ಗುಡ್ಡೇಮರಡಿ
4. ದೂರ್ವಾಸ ಕ್ಷೇತ್ರ
5. ಸೇಕ್ರೆಡ್ ಹಾರ್ಟ್ ಚರ್ಚ್
6. ರಾಗಿಗುಡ್ಡ
7. ಕೂಡ್ಲಿ ಸಂಗಮ
8. ಪಿಳ್ಳಂಗೆರೆ
9. ಮುಪ್ಪನಾಯಕಮಠ

**ಆರೋಗ್ಯಧಾಮ:**

1. ಆಶ್ವಿನಿವನ, ಗಾಜನೂರು

## ಶಿವಮೊಗ್ಗ ತಾಲ್ಲೂಕು ರಂಗಭೂಮಿ ಕ್ಷೇತ್ರದಲ್ಲಿನ ಸಾಧಕರ ವಿವರ

### ನಾಟಕ ಆಕಾಡೆಮಿ ಪ್ರಶಸ್ತಿ ಪಡೆದವರು

| | | | |
|---|---|---|---|
| 1. | ಡಿ.ಬಿ.ಶಂಕರಪ್ಪ | | 1992 |
| 2. | ಬಿ.ಚನ್ನಪ್ಪ ಕತ್ತಿಗೆ (ನಾಟಕ ಅಕಾಡೆಮಿ ಯುವ ಪುರಸ್ಕಾರ) | | 1994 |
| 3. | ದಿ॥ ಹೆಚ್.ಎಂ.ಪ್ರಭಾಕರ್ | | 1997 |
| 4. | ಶ್ರೀ ಬಿ.ಎಂ.ಕುಮಾರಸ್ವಾಮಿ | | 2003 |
| 5. | ಶ್ರೀ ಕಾಂತೇಶ್ ಕದರಮಂಡಲಗಿ | – ನಟ, ನಿರ್ದೇಶಕರು | 2008 |
| 6. | ಶ್ರೀ ಮಂಜುನಾಥ ಹೆಗ್ಡೆ | – ನಟ, ನಿರ್ದೇಶಕರು | 2008 |
| 7. | ಡಾ. ಗಜಾನನ ಶರ್ಮಾ | – ಲೇಖಕ, ನಿರ್ದೇಶಕರು | 2011 |
| 8. | ಶ್ರೀ ಎನ್.ಆರ್. ಪ್ರಕಾಶ್ (ಆಚಿ) | – ಲೇಖಕ, ನಿರ್ದೇಶಕರು | 2011 |
| 9. | ಶ್ರೀ ಹರಿಗೆ ಗೋಪಾಲಸ್ವಾಮಿ | – ಬೆಳಕು, ರಂಗಸಜ್ಜಿಕೆ | 2012 |
| 10. | ಶ್ರೀಮತಿ ಎಸ್.ಆರ್. ವಿಜಯಲಕ್ಷ್ಮೀ | – ಲೇ। ನಟಿ–ನಿರ್ದೇಶಕಿ | 2013 |

### ರಾಜ್ಯೋತ್ಸವ ಪ್ರಶಸ್ತಿ ಪಡೆದ ರಂಗ ಕಲಾವಿದರು

1. ಬಿ.ಎಂ.ಕುಮಾರಸ್ವಾಮಿ – ನಟ, ನಿರ್ದೇಶಕರು 2010
   ದೂ: 98453 78873
2. ಶ್ರೀ ಬಿ.ಆರ್.ರೇಣುಕಪ್ಪ – ನಟ, ನಿರ್ದೇಶಕರು 2010
   ದೂ: 98459 07703

### ರಂಗಭೂಮಿ ವಿಷಯದಲ್ಲಿ ಪಿಹೆಚ್‌ಡಿ ಪದವಿ ಪಡೆದವರು

1. ಡಾ. ಗಜಾನನಶರ್ಮಾ – ಲೇಖಕ. ನಿರ್ದೇಶಕರು,
   ದೂ: 94495 96841
2. ಡಾ. ಸಾಸ್ವೇಹಳ್ಳಿ ಸತೀಶ್ – ಲೇ/ನಟ/ ನಿ/ ಪ್ರಸಾದನ
   ದೂ: 98444 367071

### ಎನ್‌ಎಸ್‌ಡಿ ಪದವಿ ಪಡೆದವರು

1. ಕು॥ ಪನ್ನಗ ಎಸ್.ಜಿ., ದೂ: 9650294909 2014

### ರಂಗ ನಿರ್ದೇಶಕರುಗಳು

1. ಶ್ರೀ ಡಾ. ನಾಗಭೂಷಣ್ ಹೆಚ್.ಎಸ್. – ನಟ, 9449284495
2. ಶ್ರೀ ಹೊನ್ನಾಳಿ ಚಂದ್ರಶೇಖರ್ – ನಟ, 98445 18866
3. ಶ್ರೀ ಕೊಟ್ರಪ್ಪ ಹಿರೇಮಾಗಡಿ – ನಟ, 98445 69645

4. ಶ್ರೀ ಕಿರಣ ಮಾರಶೆಟ್ಟಿಹಳ್ಳಿ – ನಟ, 97310 03363
5. ಶ್ರೀ ಅಜಯಸಿಂಹ – ನಟ, 94810 93826
6. ಶ್ರೀಮತಿ ಅಪರ್ಣಾ ಸಿಂಹ – ನಟಿ, 96208 71852
7. ಶ್ರೀ ಎನ್.ಆರ್.ಪ್ರಕಾಶ್ (ಆಚಿ) – ನಟ, 97432 71787
8. ಶ್ರೀ ಹಾಲಸ್ವಾಮಿ ಅರ್.ಎಸ್. – ನಟ, 94481 38183

## ನಾಟಕ ರಚನಾಕಾರರು

1. ಶ್ರೀ ಎಸ್.ಸಿ.ಗೌರಿಶಂಕರ್ – ನಟ, ನಿರ್ದೇಶಕರು 94487 92092
2. ಶ್ರೀ ಮಧುಸೂದನ ಜೆ.ಘಾಟೆ – ನಟ, ನಿರ್ದೇಶಕರು 99646 84250
3. ಶ್ರೀ ಬಿ.ಚಂದ್ರೇಗೌಡ – ನಟ, 99013 48138
4. ಶ್ರೀ ಡಾ. ಗಜಾನನಶರ್ಮಾ – ನಿರ್ದೇಶಕರು, 94495 96841
5. ಶ್ರೀ ಹೊ.ನಾ.ಸತ್ಯ – ನಟ, ನಿರ್ದೇಶಕರು, 99861 45698

## ರಂಗಸಜ್ಜಿಕೆ ಪರಿಣಿತರು

1. ಶ್ರೀ ಗಿರೀಶ್ ಎಸ್.ಆರ್. – ಲೇ/ನಟ/ನಿ/ಪ್ರಸಾದನ, 98441 67563
2. ಶ್ರೀ ಯು.ಎನ್.ವಾಸುದೇವ – ನಟ, ದೂ. 98443 30074

## ಬೆಳಕು ಸಂಯೋಜನೆ

1. ಶ್ರೀ ಹರಿಗೆ ಗೋಪಾಲಸ್ವಾಮಿ – ರಂಗಸಜ್ಜಿಕೆ, ದೂ. 94482 01230

## ಪೌರಾಣಿಕ, ಐತಿಹಾಸಿಕ ವಸ್ತ್ರ ವಿನ್ಯಾಸಕರು

1. ಶ್ರೀ ಕಾಶಿನಾಥ್ – ದೂ. 97423 71642

## ರಂಗಸಂಗೀತ

1. ನವಿಲೇಶ್ ನಿಧಿಗೆ – ತಬಲಾ, ಕೀಬೋರ್ಡ್
   ದೂ. 99016 35576
2. ಉಮೇಶ್ – ತಬಲಾ, ದೂ. 97432 30589
3. ಉಮೇಶ್ ಆಚಾರ್ಯ – ಕೀಬೋರ್ಡ್, ತಬಲಾ
   ದೂ. 77600 62701

## ರಂಗಮಂದಿರಗಳು

### 1. ಕುವೆಂಪು ರಂಗಮಂದಿರ (ರಾಜ್ಯದಲ್ಲೇ ಸುಸಜ್ಜಿತವಾದ ರಂಗಮಂದಿರ): ದೂ:– 08182–223354




ಸ್ಥಾಪನೆ: 1994, ರಂಗಮಂಚದ ಅಳತೆ: 45'X32', ಆಸನ ವ್ಯವಸ್ಥೆ: 820, ಕಪ್ಪು ಸೈಡ್ ವಿಂಗ್ಸ್: 8, ಬಿಳಿಪರದೆ(ಸೈಕ್): 1, ಪರದೆಗಳು: 2, ಅಂಕಪರದೆ: 1, ಬೆಳಕಿನ ವ್ಯವಸ್ಥೆ: ಸ್ಪಾಟ್‌ಲೈಟ್ 2 ಕಿ.ವ್ಯಾ. 8, 1 ಕಿ.ವ್ಯಾ. 24, 500 ವ್ಯಾ. 10, ಪಾರ್‌ಕ್ಯಾನ್ 20, ಮಿಲ್ಕಿ ಹ್ಯಾಲೋಜೆನ್ 6, 24 ಚಾನೆಲ್ ಎಲೆಕ್ಟ್ರಾನಿಕ್ ಡಿಮ್ಮರ್, ಸುಸಜ್ಜಿತವಾದ ಧ್ವನಿವರ್ಧಕ, ಡಯಾಸ್: 2$^{1/2}$'X5' ಅಳತೆಯದ್ದು 8, 2'X4' ಅಳತೆಯದ್ದು 8, ಜನರೇಟರ್: 35ಕಿ.ವ್ಯಾ, 35ಕಿ.ವ್ಯಾ. ಯುಪಿಎಸ್, 2ಎಲ್.ಸಿ.ಡಿ. ಪ್ರೊಜೆಕ್ಟರ್‌ಗಳು, ವಿಶೇಷ ಬೆಳಕಿನ ಪರಿಣಾಮಕಾರಿ ಲೈಟ್‌ಗಳು ಲಭ್ಯ. 2 ಪ್ರಸಾಧನ ಕೊಠಡಿ.

### 2. ಡಿ.ವಿ.ಎಸ್. ರಂಗಮಂದಿರ: ದೂ:– 94487 92092

ಸ್ಥಾಪನೆ: 1956, ರಂಗಮಂಚ ಅಳತೆ 30'X25', ಆಸನ ವ್ಯವಸ್ಥೆ: 500 (ಹೊರಗಿನಿಂದ ತರಬೇಕು), ಸೈಡ್‌ವಿಂಗ್ಸ್, ಪರದೆ ಲಭ್ಯ, ಬೆಳಕಿನ ವ್ಯವಸ್ಥೆ: 500 ವ್ಯಾ.10, 1 ಕಿ.ವ್ಯಾ. 3, ಪಾರ್‌ಕ್ಯಾನ್ 8, ಡಿಮ್ಮರ್ 7, ಧ್ವನಿವರ್ಧಕವನ್ನು ಹೊರಗಿನಿಂದ ತರಬೇಕು.

## 3. ಕೋಟೆ ಬಯಲು ರಂಗಮಂದಿರ:




ಸ್ಥಾಪನೆ: 2005, ಸಾಮಾನ್ಯ ಪರದೆಗಳು ಲಭ್ಯ. ಬೆಳಕಿನ ವ್ಯವಸ್ಥೆ, ಧ್ವನಿವರ್ಧಕ ಹೊರಗಿನಿಂದ ತರಬೇಕು. ಆಸನ ವ್ಯವಸ್ಥೆ ಲಭ್ಯ.


## 4. ಕರ್ನಾಟಕ ಸಂಘ : ದೂ:– 08182–277406



ಸ್ಥಾಪನೆ: 1943, ರಂಗಮಂಚದ ಅಳತೆ: 30' ಫಿ 20', ಆಸನ ವ್ಯವಸ್ಥೆ: 250, ಬೆಳಕಿನ ವ್ಯವಸ್ಥೆ: ಪಾರ್‌ಕ್ಯಾನ್ 9, ಸ್ಪಾಟ್‌ಲೈಟ್ 500 ವ್ಯಾ. 8, 6 ಚಾನೆಲ್ ಎಲೆಕ್ಟ್ರಾನಿಕ್ ಡಿಮ್ಮರ್ ಲಭ್ಯ, ಸಾಮಾನ್ಯ ಧ್ವನಿವರ್ಧಕ, ಸಾಮಾನ್ಯ ಪರದೆಗಳು ಲಭ್ಯ.

**5. ಡಾ. ಬಿ.ಆರ್. ಅಂಬೇಡ್ಕರ್ ಭವನ (ಜಿಲ್ಲಾಡಳಿತ):**

**ದೂ:– 08182–226268**



ಸ್ಥಾಪನೆ: 2002, ರಂಗಮಂಚದ ಅಳತೆ: 30'X20'"", ಆಸನ ವ್ಯವಸ್ಥೆ: 650, ಸಾಮಾನ್ಯ ಪರದೆಗಳು, ಬೆಳಕಿನ ವ್ಯವಸ್ಥೆ, ಧ್ವನಿವರ್ಧಕ.

**6. ಸುವರ್ಣ ಸಂಸ್ಕೃತಿ ಭವನ (ಹವಾ ನಿಯಂತ್ರಿತ):**

**ದೂ:– 08182–224199**

ಸ್ಥಾಪನೆ: 2010, ರಂಗಮಂಚದ ಅಳತೆ: (30'X20',)* ಆಸನ ವ್ಯವಸ್ಥೆ: 450, ಬೆಳಕು: 20 ಪಾರ್‌ಕ್ಯಾನ್, 16 ಚಾನೆಲ್ ಎಲೆಕ್ಟ್ರಾನಿಕ್ ಡಿಮ್ಮರ್, ಉತ್ತಮ ಧ್ವನಿವರ್ಧಕ, ಸೈಡ್‌ವಿಂಗ್ ಅಂಕಪರದೆ, ಪರದೆಗಳು ಲಭ್ಯ, ಪ್ರಸಾಧನ ಕೊಠಡಿ–2, ರಂಗತಾಲೀಮು ಕೊಠಡಿ–1, ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ವಸತಿ ಕೊಠಡಿ.



**ತುಂಗಾ ಜಲಾಶಯ, ಗಾಜನೂರು**

## ಶಿವಮೊಗೆಯ ರಂಗ ಚರಿತೆ

ಪ್ರಬುದ್ಧ ನಾಗರೀಕ ಸಮಾಜವನ್ನು ಹೊಂದಿರುವ ಶಿವಮೊಗ್ಗವು ಸಾಂಸ್ಕೃತಿಕವಾಗಿ ತನ್ನದೇ ಆದ ವಿಶಿಷ್ಟ ಸ್ಥಾನಮಾನವನ್ನು ಹೊಂದಿದೆ. ಅದರಲ್ಲೂ 'ರಂಗಭೂಮಿ' ವಿಚಾರದಲ್ಲಿ ವಿಶೇಷವಾಗಿ ಗುರುತಿಸಲ್ಪಡುತ್ತದೆ. ಇಲ್ಲಿಯ ಪ್ರೇಕ್ಷಕರ ಮನ ಗೆಲ್ಲುವ ನಾಟಕಗಳು ರಾಷ್ಟ್ರದ ಯಾವುದೇ ಮೂಲೆಯಲ್ಲಿಯೂ ಗೆಲ್ಲುತ್ತವೆ ಎಂಬ ವಾಡಿಕೆ ಸೃಷ್ಟಿಯಾಗಿದೆ. ಅನೇಕ, ವಿಭಿನ್ನ, ಸಾಹಸಮಯ ಮತ್ತು ದಾಖಲೆಗಳನ್ನು ನಿರ್ಮಿಸುವಂತಹ ರಂಗಪ್ರಯೋಗಗಳು ನಡೆದಿರುವುದು ಈ ನಾಡಿನಲ್ಲೇ.

"1950 ರಿಂದ 60ರ ಅವಧಿ" ಅದೊಂದು ಸಂಕೀರ್ಣ ಕಾಲ. ವೃತ್ತಿ ರಂಗಭೂಮಿ ವಿಜೃಂಭಿಸುತ್ತಿದ್ದ ಸಮಯ. ನಾಡಿನ ಪ್ರತಿಷ್ಠಿತ ನಾಟಕ ಕಂಪನಿಗಳು ಶಿವಮೊಗ್ಗದಲ್ಲಿ ಬೀಡುಬಿಟ್ಟು ತಿಂಗಳುಗಟ್ಟಲೇ ನಾಟಕವನ್ನು ಯಶಸ್ವಿಯಾಗಿ ಪ್ರದರ್ಶಿಸುತ್ತಿದ್ದವು. 'ಗುಬ್ಬಿ ವೀರಣ್ಣನವರ ಕಂಪನಿ', 'ಹೊನ್ನಪ್ಪ ಭಾಗವತರ್ ಕಂಪನಿ', 'ಮಾಸ್ಟರ್ ಹಿರಣ್ಣಯ್ಯನವರ ಕಂಪನಿ', 'ವರದಾಚಾರ್‌ರವರ ಕಂಪನಿ', 'ಯೋಗಾನರಸಿಂಹನವರ ಕಂಪನಿ', 'ಹೊಳೇಹುಚ್ಚೇಶ್ವರರ ಕಂಪನಿ' ಹೀಗೆ ಅನೇಕ ವೃತ್ತಿರಂಗಭೂಮಿಯ ನಾಟಕ ಕಂಪನಿಗಳು ತಮ್ಮ ಹಲವಾರು ರಂಗಪ್ರಯೋಗಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದ ಇತಿಹಾಸವಿದೆ. ಕಂಪನಿಯ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದ ಡಾ.ರಾಜ್‌ಕುಮಾರ್, ಬಾಲಕೃಷ್ಣ, ನರಸಿಂಹರಾಜು, ಜಿ.ವಿ.ಅಯ್ಯರ್‌ರಂಥಾ ಘಟಾನುಘಟಿಗಳಿಗೆ ಆ ದಿನಗಳಲ್ಲಿ ಆಶ್ರಯತಾಣವಾಗಿದ್ದುದು "ಕೋರ್ಪಲಯ್ಯನ ಛತ್ರ". ಇಲ್ಲಿನ ಹಿರಿಯರಾದ ರಾಮಚಂದ್ರರಾವ್‌ರವರು ನಾಟಕ ಪ್ರದರ್ಶನಕ್ಕಾಗಿ ಬರುತ್ತಿದ್ದ ಕಂಪನಿ ಕಲಾವಿದರಿಗೆ–ತಂತ್ರಜ್ಞರಿಗೆ ಸಹಾಯ ಮಾಡುತ್ತಿದ್ದರು. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳೇ ಆಗ ರಂಗದ ಮೇಲೆ ವಿಜೃಂಭಿಸುತ್ತಿದ್ದವು. ಕರ್ನಾಟಕ ಸಂಘ ಭವನ, ನ್ಯಾಷನಲ್ ಬಾಯ್ಸ್ ಹೈಸ್ಕೂಲ್ ಆವರಣ, ಮೈನ್ ಮಿಡ್ಲ್ ಸ್ಕೂಲ್ ಆವರಣ, ಬಸ್‌ಸ್ಟ್ಯಾಂಡ್ ಸಮೀಪದ ರೈಸ್‌ಮಿಲ್ ಆವರಣ ಇವುಗಳೇ ಕಂಪನಿ ನಾಟಕದ ಸ್ಥಳಗಳಾಗಿದ್ದವು. ಕೆಲವು ನಾಟಕಗಳು ದಾಖಲೆ ನಿರ್ಮಿಸಿದ್ದೂ ಉಂಟು. ಕೆಲವು ನಾಟಕಗಳು ದುಡ್ಡು ಮಾಡಿದ್ದೂ ಉಂಟು, ಮತ್ತೆ ಕೆಲವು ನಾಟಕಗಳು ಕೈ ಸುಟ್ಟುಕೊಂಡಿದ್ದೂ ಇತಿಹಾಸದಲ್ಲಿ ಸೇರಿದೆ.

## ಹವ್ಯಾಸಿ ರಂಗಭೂಮಿ

1950–60ರ ದಶಕದಲ್ಲಿ ಬಂಡಾಯ ಸಾಹಿತ್ಯ, ಆಧುನಿಕ ಸಾಹಿತ್ಯ, ಅಸಂಗತ ಕೃತಿಗಳ ಉಗಮದ ಸಮಯ, ಈ ರೀತಿಯ ಕ್ರಾಂತಿಯ ರಂಗಭೂಮಿಗೂ ಆವರಿಸಿತ್ತು. ವೃತ್ತಿ ರಂಗಭೂಮಿಗೆ (ಕಂಪನಿ ನಾಟಕ ತಂಡಗಳಿಗೆ) ಕೆಲವೊಂದು ಕಟ್ಟುಪಾಡುಗಳಿರುತ್ತಿತ್ತು. ಜನರನ್ನು ರಂಜಿಸುವುದೇ ಮೂಲ ಉದ್ದೇಶವಾಗಿರುತ್ತಿತ್ತು. ಆದರೆ ಹವ್ಯಾಸಿ ರಂಗ ತಂಡಗಳಿಗೆ ಈ ರೀತಿಯ ಬಂಧನವಿರಲಿಲ್ಲ. ಹೊಸ ಹೊಸ ರಂಗಪ್ರಯೋಗಗಳಿಗಾಗಿ ತನ್ನನ್ನು ತಾನು ತೆರೆದುಕೊಂಡಿತು. ಶಿವಮೊಗ್ಗ ನಗರದ ವಿವಿಧ ವೃತ್ತಿಯ ಜನ, ಸಮಾನ ಮನಸ್ಕರಾಗಿ ಸೃಷ್ಟಿಸಿಕೊಂಡ ಸಂಸ್ಥೆಯೇ "ಯುನೈಟೆಡ್ ಆರ್ಟಿಸ್ಟ್ಸ್". ಈ ತಂಡದಲ್ಲಿ ವಿದ್ಯಾರ್ಥಿಗಳು–ಶಿಕ್ಷಕರು, ವ್ಯಾಪಾರಸ್ಥರು, ವಕೀಲರು–ವೈದ್ಯರು ಹೀಗೆ ಹಲವು ವರ್ಗದ ಜನ ತೊಡಗಿಕೊಂಡರು. ಹಳಗನ್ನಡದ ನಾಟಕಗಳಾದ 'ಬೆರಳ್‌ಗೆ ಕೊರಳ್', 'ಸ್ವಪ್ನ ವಾಸವದತ್ತ', 'ನಾಗರೀಕ', 'ಮಹಾರಾತ್ರಿ'ಯಂತಹ ನಾಟಕಗಳನ್ನು ಪ್ರದರ್ಶಿಸಲಾಯಿತು. ಜೊತೆ–ಜೊತೆಗೆ ಕೈಲಾಸಂರವರ 'ನಮ್ ಕಂಪ್ನಿ', 'ಟೊಳ್ಳುಗಟ್ಟಿ', 'ಹೋಂ ರೂಲ್', 'ಗಂಡ ಸತ್ರೆ'ಯಂತಹ ವಿಡಂಬನಾತ್ಮಕ ಹಾಸ್ಯ ನಾಟಕಗಳ ಪ್ರಯೋಗವೂ ನಡೆದಿತ್ತು. ಈ ತಂಡದ ವಿಭಿನ್ನ ಪ್ರಯೋಗವೆಂದರೆ 'ವೀರ ಭಾರತಿ' ಎಂಬ ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ 'ವೈವಸ್ವತ ಮನು'ವಿನಿಂದ 'ಲಾಲ್ ಬಹದ್ದೂರ್ ಶಾಸ್ತ್ರಿ'ಗಳವರೆಗೆ ಎಲ್ಲ ಮಹನೀಯರನ್ನೂ ರಂಗದ ಮೇಲೆ ತರುವ ಪ್ರಯತ್ನ ಮಾಡಿದುದು. ಆ ಕಾಲಕ್ಕೆ ಇದೊಂದು ದಾಖಲೆಯ ಪ್ರಯೋಗವಾಗಿ ಜನರ ಮನದಾಳದಲ್ಲಿ ನೆಲೆಯಾಗಿತ್ತ. ಇಂಥಾ ಒಂದು ರಂಗಪ್ರಯೋಗದಲ್ಲಿ ಸಾ.ಶಿ.ಮರುಳಯ್ಯ, ನಿಸ್ಸಾರ್ ಅಹ್ಮದ್‌ರಂತಹವರು ತೊಡಗಿಕೊಂಡಿದ್ದರು ಎಂಬುದು ವಿಶೇಷ. ಕಾರಣಾಂತರದಿಂದಾಗಿ, ಮತ್ತು ಉದ್ಯೋಗವನ್ನು ಅರಸಿ ಬೇರೆ–ಬೇರೆ ಸ್ಥಳಗಳಿಗೆ ತೆರಳಿದ ತಂಡದ ಸದಸ್ಯರು ತಂಡ ನಿಷ್ಕ್ರಿಯವಾಗುವಂತೆ ಮಾಡಿದರು.

ಇದೇ ಸಂದರ್ಭದಲ್ಲಿ 'ಶಾರದಾ ಕಲಾ ಸಂಘ', 'ನವರತ್ನ ಕಲಾ ಸಂಘ' ಎಂಬ ನಾಟಕ ತಂಡಗಳು ಉಗಮಿಸಿ, 'ಪೌರಾಣಿಕ–ಐತಿಹಾಸಿಕ–ಸಾಮಾಜಿಕ' ನಾಟಕಗಳನ್ನು ಪ್ರಸ್ತುತಪಡಿಸತೊಡಗಿದವು. ಈ ತಂಡದಲ್ಲಿ ದುಡಿದ ಅನೇಕ ಕಲಾವಿದರು ಇಂದಿಗೂ ಚಲನಚಿತ್ರರಂಗದಲ್ಲಿ ಗುರುತರ ಸ್ಥಾನ ಪಡೆದಿದ್ದಾರೆ. 'ಶಿವ–ಜಲಂದರ', 'ಗಧಾಯುದ್ಧ', 'ಟಿಪ್ಪೂ ಸುಲ್ತಾನ್', 'ಶಿಶುಪಾಲ ವಧೆ', 'ಎಚ್ಚಮ್ಮನಾಯಕ' ಇವು ಈ ತಂಡಗಳ ಕೊಡುಗೆ. ಶ್ರೀಸಾಮಾನ್ಯನಿಂದ ಹಿಡಿದು ದೊಡ್ಡ–ದೊಡ್ಡ ಉದ್ಯಮಿಗಳೂ ಸಹ ಈ ಕಲಾ ತಂಡಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಇತಿಹಾಸವಿದೆ.

"ಯುನೈಟೆಡ್ ಆರ್ಟಿಸ್ಟ್ಸ್" ತಟಸ್ಥವಾದ ನಂತರ ಕಾಲೇಜು ಉಪನ್ಯಾಸಕರು, ಚಿಂತಕರು, ವಿವಿಧ ಉದ್ಯೋಗಸ್ಥ ರಂಗಾಸಕ್ತರು ಒಗ್ಗೂಡಿ 1972ರಲ್ಲಿ "ಅಭಿನಯ" ಎಂಬ ತಂಡವನ್ನು ಹುಟ್ಟುಹಾಕಿದರು. ಕೇವಲ ಹವ್ಯಾಸಿ ರಂಗಕ್ರಿಯೆಗಾಗಿ ಜನ್ಮತಳೆದ ಈ ಸಂಸ್ಥೆಯು ಸುಧೀರ್ಘ ರಂಗಪಯಣವನ್ನು ಸಾಗುವಲ್ಲಿ ಯಶಸ್ವಿಯಾಗಿತ್ತು. ಆಧುನಿಕ–

ಅಸಂಗತ–ಸಾಂಪ್ರದಾಯಿಕ, ಜಾನಪದ ಹೀಗೆ ಹಲವು ಪ್ರಾಕಾರಗಳ ರಂಗಪ್ರಯೋಗ ನಡೆದವು. ಒಂದು ರೀತಿಯಲ್ಲಿ 'ರಂಗಸುಗ್ಗಿ'ಯನ್ನೇ ನಿರ್ಮಿಸಿತ್ತು ಎಂದರೆ ಅತಿಶಯೋಕ್ತಿಯಲ್ಲ. ತನ್ನದೇ ಆದ ಸುಮಾರು 3000 ಪ್ರೇಕ್ಷಕವೃಂದವನ್ನು ಆ ಕಾಲದಲ್ಲಿ ಹೊಂದಿತ್ತು ಎಂದರೆ, ಅದೊಂದು ರಂಗ ಇತಿಹಾಸದಲ್ಲೇ ಆಶ್ಚರ್ಯಪಡುವ ಸಂಗತಿ. ವಿವಿಧ ವೃತ್ತಿಯಲ್ಲಿ ತೊಡಗಿಕೊಂಡ ಜನರನ್ನು 'ವಾರ್ಷಿಕ ಪೋಷಕ ಸದಸ್ಯರನ್ನಾಗಿ' ರಂಗಭೂಮಿಗೆ ಕರೆತರುವ ಹೊಸ ಪ್ರಯತ್ನ ಸಾಕಾರವಾಯಿತು. ಕೇವಲ 12 ರೂಪಾಯಿಗೆ ವರ್ಷಕ್ಕೆ 4 ನಾಟಕಗಳನ್ನು ನೀಡುವ ವಾಗ್ದಾನ ಮಾಡಿ, ಶಿವಮೊಗ್ಗದಲ್ಲಿ ರಂಗಕ್ರಿಯೆ ನಿರಂತರವಾಗಿ ಸಾಗುವ ಸಾಹಸಕ್ಕೆ ನಾಂದಿ ಹಾಡಲಾಯ್ತು. ಉದ್ಯಮಿಗಳು–ಶಿಕ್ಷಕರು–ಪ್ರಾಧ್ಯಾಪಕರು–ಸರ್ಕಾರಿ ನೌಕರರು ಹೀಗೆ ಹಲವುವರ್ಗದ ಜನರಿಗೆ ಪ್ರತ್ಯೇಕವಾಗಿ ನಾಟಕವನ್ನು ಪ್ರದರ್ಶಿಸುವ ಸಂಪ್ರದಾಯ ಶುರುವಾಯಿತು. ನಾಡಿನ ಖ್ಯಾತ ನಿರ್ದೇಶಕರನ್ನು ಆಹ್ವಾನಿಸಿ ಅವರಿಂದ ನಾಟಕಗಳನ್ನು ಮಾಡಿಸಲಾಗಿದೆ. 'ಅಂಧಯುಗ' ಎಂಬ ನಾಟಕವು ಹವ್ಯಾಸಿ ರಂಗಭೂಮಿಯಲ್ಲಿ ಆ ಕಾಲದಲ್ಲೇ ದಾಖಲೆ ನಿರ್ಮಿಸಿತ್ತು. ನಾಟಕ ಪ್ರದರ್ಶನವನ್ನು ನೋಡದ 'ಪೋಷಕ ಸದಸ್ಯರನ್ನು' ಗುರುತಿಸಿ ಅವರಿಗಾಗಿಯೇ ಪ್ರತ್ಯೇಕವಾಗಿ ರಾತ್ರಿ 10 ಗಂಟೆಯ ನಂತರ ಪ್ರದರ್ಶನವನ್ನು ಮಾಡಿದ ನಿದರ್ಶನಗಳಿವೆ.

'ಉದ್ಭವ', 'ಕತ್ತಲೆ ಬೆಳಕು', 'ಮೃಚ್ಛಕಟಿಕ'. 'ಸ್ವರ್ಗಕ್ಕೆ 3 ಬಾಗಿಲು', 'ಮಾಡು ಸಿಕ್ಕದಲ್ಲ', 'ಉತ್ತಮ ಪ್ರಭುತ್ವ ಲೊಳಲೊಟ್ಟೆ', 'ಒಥೆಲೋ', 'ಮ್ಯಾಕ್‌ಬೆತ್', 'ಈ ಮುಖದವರು', ಸುಣ್ಣ ಹಚ್ಚಿದ ಸಮಾಧಿ', 'ನಮ್ಮ ನಿಮ್ಮೊಳಗೊಬ್ಬ', 'ದಾಹಿ', 'ವೆನ್ನಿಸಿನ ವ್ಯಾಪಾರಿ', 'ಮೃಗತೃಷ್ಣಾ', 'ತಲೆದಂಡ', 'ಭೀಮ ಕಥಾನಕ', 'ಪೀಠಾರೋಹಣ', 'ಹುಲಿಯ ನೆರಳು', 'ಬೆಕುವ' ಇವು ಈ ತಂಡದಿಂದ ಯಶಸ್ವಿಯಾಗಿ ಪ್ರದರ್ಶನಗೊಂಡ ನಾಟಕಗಳು.

ಇದೇ 70ರ ದಶಕದಲ್ಲಿ ಸಮಾನಾಂತರವಾಗಿ ಬೆಳೆದ ರಂಗತಂಡಗಳೆಂದರೆ 'ಕಲಾ ಜ್ಯೋತಿ' ಮತ್ತು 'ಕಲಾಕಿರಣ'. 'ಅಭಿನಯ' ತಂಡದ ಪರ್ಯಾಯ ಸಂಸ್ಥೆ ಎಂದೇ ಗುರುತಿಸಲ್ಪಡುತ್ತಿದ್ದ 'ಕಲಾಜ್ಯೋತಿ' ತಂಡವು 'ಮಕ್ಕಳ ರಂಗಭೂಮಿ'ಗೆ ಹೆಚ್ಚು ಒತ್ತು ನೀಡಿದುದು ವಿಶೇಷ. ಹಗ್ಗೋಡಿನ ನೀನಾಸಂ ರಂಗತರಬೇತಿ ಶಿಬಿರದಲ್ಲಿ ಭಾಗವಹಿಸಿ, ತರಬೇತು ಪಡೆದು, ಅಲ್ಲಿಯ ರಂಗ ಅನುಭವವನ್ನು ಇಡೀ ಶಿವಮೊಗ್ಗ ನಗರದ ಮಕ್ಕಳಿಗೆ ಹಂಚುವ ಸಾಹಸ ಮಾಡಿತು. ಅಷ್ಟೇ ಅಲ್ಲದೇ, 'ಮಕ್ಕಳ ನಾಟಕೋತ್ಸವ'ದಂತಹ ಕಾರ್ಯಕ್ರಮಗಳ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ರಂಗಭೂಮಿಗೆ ಮಕ್ಕಳು ಬರುವ ಸಾರ್ಥಕ ಕಾರ್ಯವಾಗಿತ್ತು. 'ಪಂಜರ ಶಾಲೆ'–'ಕಿಟ್ಟಿಕಥೆ'–'ಹೊಸಾ ಮೇಡಂ'–'ಬಾದಾಮ್ ರಾಣಿ'–'ಚೌಪಾಟ್ ಗುಲಾಂ', 'ಅಳಿಲು ರಾಮಾಯಣ'–'ಕಾಡಿನ ಕಥೆ'ಯಂತಹ ಹಲವು ಮಕ್ಕಳ ನಾಟಕಗಳು ಪ್ರದರ್ಶನಗೊಂಡವು. ನಂತರದ ದಿನಗಳಲ್ಲಿ ದೊಡ್ಡವರ ನಾಟಕಗಳನ್ನು ಆಡುವ ಪ್ರಯತ್ನಕ್ಕೆ ಮುಂದಾಗಿ, 'ಅದ್ರೇಶಿ ಪರದೇಶಿಯಾದ'–'ಗಾಂಧಾರಿ', 'ಡುಬಾಯ್ ಪಾದ್ರಿಯ ಒಂದು ಪತ್ರ'–'ಶಾಲಾಭಂಜಿಕೆ'ಯಂತಹ ಯಶಸ್ವಿ ನಾಟಕಗಳನ್ನು

ಪ್ರದರ್ಶಿಸಲಾಯಿತು. ಜೊತೆಯಲ್ಲೇ ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಹಲವು ಪ್ರಥಮ ಸ್ಥಾನವನ್ನು ಗಳಿಸಿದ ಕೀರ್ತಿ 'ಕಲಾಜ್ಯೋತಿ' ತಂಡಕ್ಕೆ ಸಲ್ಲುತ್ತದೆ.

ಒಂದೆಡೆ ಶಿವಮೊಗ್ಗದ ಹೃದಯಭಾಗವಾದ ಕೋಟೆ ವಲಯದಲ್ಲಿ 'ಕಲಾಜ್ಯೋತಿ' ತಂಡ ಸಕ್ರಿಯವಾಗಿದ್ದರೆ, ಇನ್ನೊಂದು ಸಾಂಸ್ಕೃತಿಕ ವಲಯವಾದ ಕೆ.ಆರ್.ಪುರಂ ಭಾಗದ ರಂಗಾಸಕ್ತರು ಒಗ್ಗೂಡಿ 'ಕಲಾಕಿರಣ' ತಂಡವನ್ನು 70ರ ದಶಕದಲ್ಲಿ ಆರಂಭಿಸಿದರು. ಆರಂಭದಲ್ಲಿ ಮನರಂಜನಾತ್ಮಕ ಕ್ರೀಡೆಗಳಿಗೆ ಸೀಮಿತವಾಗಿದ್ದ ತಂಡವು ನಂತರದ ದಿನಗಳಲ್ಲಿ ತನ್ನನ್ನು ತಾನು ರಂಗಭೂಮಿಗೆ ವಿಸ್ತರಿಸಿಕೊಂಡಿತು. ಕೇವಲ ಮನರಂಜನೆಯನ್ನೇ ಮೂಲ ಉದ್ದೇಶವಾಗಿಸಿಕೊಂಡು ತಂಡವು ಹಾಸ್ಯಭರಿತ ನಾಟಕಗಳನ್ನೇ ಪ್ರದರ್ಶಿಸಿತು. ಅಷ್ಟೇ ಅಲ್ಲದೇ, ರಾಜ್ಯಮಟ್ಟದಲ್ಲಿ ದಿ॥ ಬಾಲಕೃಷ್ಣ ಸ್ಮಾರಕ ಹಾಸ್ಯನಾಟಕವನ್ನು ಸತತ ಮೂರು ವರ್ಷಗಳ ಕಾಲ ಅದ್ದೂರಿಯಾಗಿ ನಡೆಸಿದ ಕೀರ್ತಿಯೂ 'ಕಲಾಕಿರಣ' ಸಂಸ್ಥೆಗೆ ಸಲ್ಲುತ್ತದೆ. ಇಡೀ ಶಿವಮೊಗ್ಗ ರಂಗ ಇತಿಹಾಸದಲ್ಲೇ ಯಾವ ತಂಡಗಳೂ ಮಾಡದ ಒಂದು ದುಸ್ಸಾಹಸವನ್ನು ಈ ಕಲಾಕಿರಣ ತಂಡವು ಮಾಡಿದೆ. 'ಘೋರ' ಎಂಬ ಭಯಾನಕ ನಾಟಕವನ್ನು ರಂಗದ ಮೇಲೆ ತರುವ ಪ್ರಯತ್ನ ಒಂದು ಹೊಸ 'ರಂಗ ಇತಿಹಾಸವನ್ನೇ' ನಿರ್ಮಿಸಿದೆ.

ಇಂತಹ ವಿನೂತನ ರಂಗಪ್ರಯೋಗಗಳಲ್ಲಿ ತೊಡಗಿಕೊಂಡಿದ್ದ 'ಕಲಾಕಿರಣ' ಸಂಸ್ಥೆ ಮಕ್ಕಳ ರಂಗಭೂಮಿಗೂ ತನ್ನದೇ ಆದ ಕೊಡುಗೆಯನ್ನು ನೀಡುತ್ತಾ ಬಂದಿದೆ. ಸಂವೇದನಾಶೀಲ ಬರಹಗಾರರಾದ ಶ್ರೀ ಗಜಾನನಶರ್ಮಾರವರ 'ಮೃಗ ಮತ್ತು ಸುಂದರಿ', 'ಪುಸ್ತಕ ಪಾಂಡಿತ್ಯ', 'ಜುಗ್ಗಪ್ಪಯ್ಯನ ತಿಪ್ಪರಲಾಗ', 'ಹಂಚಿನ ಮನೆ ಪರಸಪ್ಪ', 'ನಾಣಿ ಭಟ್ಟನ ಸ್ವರ್ಗದ ಕನಸು'ಗಳಂಥಾ ಮಕ್ಕಳ ನಾಟಕಗಳು ಶಿವಮೊಗ್ಗ ರಂಗಭೂಮಿಯಲ್ಲಿ ಒಂದು ಹೊಸ ಕ್ರಾಂತಿಯನ್ನೇ ಮಾಡಿತು ಎಂದರೆ ಉತ್ಪ್ರೇಕ್ಷೆಯಲ್ಲ. ಮಕ್ಕಳ ರಂಗಭೂಮಿ ಒಂದು ಹೊಸ ಚೈತನ್ಯ ನೀಡುವಲ್ಲಿ ಈ ನಾಟಕಗಳು ಯಶಸ್ವಿಯಾಗಿದೆ. ಸರಳವಾದ ಮತ್ತು ಸೂಕ್ಷ್ಮವಾದ ನೀತಿ–ಬೋಧನೆಗಳನ್ನು ತಮ್ಮ ನಾಟಕಕೃತಿಯಲ್ಲಿ ಅಳವಡಿಸುವಲ್ಲಿ ಶ್ರೀಯುತ ಶರ್ಮಾರವರು ನಿಸ್ಸೀಮರು. ಹಾಗಾಗಿಯೇ ಅವರ ಈ ಎಲ್ಲ ನಾಟಕಗಳೂ ಇಂದಿಗೂ ವಿವಿಧೆಡೆ ಪ್ರದರ್ಶನಗೊಳ್ಳುತ್ತಿದೆ.

* 80ರ ದಶಕದಲ್ಲಿ ಶಿವಮೊಗ್ಗದ ರಂಗಭೂಮಿ:

ಶಿವಮೊಗ್ಗದ ರಂಗಭೂಮಿ ಇತಿಹಾಸದಲ್ಲಿ ರಂಗಾಸಕ್ತರು ಹೊಸ–ಹೊಸ ಪ್ರಯೋಗಗಳಿಗೆ ಮುಂದಾದಾಗ ಒಂದು ಹೊಸಾ 'ತಂಡ' ಮೈದಳೆದಿರುವುದು ಸರ್ವೇಸಾಮಾನ್ಯ. ಅಥವಾ ವಿಭಿನ್ನ ಕಲ್ಪನೆಯೊಂದಿಗೆ ತಮ್ಮದೇ ಆದ ಸ್ವತಂತ್ರ ಸಂಸ್ಥೆಯನ್ನು ಅಸ್ತಿತ್ವಕ್ಕೆ ತಂದಿರುವ ನಿದರ್ಶನಗಳೂ ಇವೆ. ಈ ರೀತಿಯಲ್ಲಿ ಅಸ್ತಿತ್ವ ಮೂಡಿಸಿಕೊಂಡ ಸಂಸ್ಥೆಗಳೆಂದರೆ...

* ಸಹ್ಯಾದ್ರಿ ರಂಗತರಂಗ * ರಂಗಪ್ರಯೋಗ * ಸಮುದಾಯ * ಗೆಳೆಯರ ಬಳಗ * ಚಿಗುರು ಕಲಾತಂಡ * ಸೃಷ್ಟಿ ಸಾಂಸ್ಕೃತಿಕ ವೇದಿಕೆ * ಸೂತ್ರಧಾರ *

ಹೊಂಗಿರಣ * ನಮ್ ಟೀಮ್ * ರಂಗಬೆಳಕು * ಬೆಳಕು * ಸಮನ್ವಯ * ತೋರಣ ಇತ್ಯಾದಿ, ಇತ್ಯಾದಿ., ಇವುಗಳಲ್ಲಿ ಕೆಲವೊಂದು ತಂಡಗಳು ಕಾಲಾನುಕಾಲಕ್ಕೆ ಸಕ್ರಿಯವಾಗಿದ್ದರೆ, ಮತ್ತೆ ಕೆಲವು ನಿರಂತರ ಸಕ್ರಿಯವಾಗಿದ್ದಾವೆ.

1986ರಲ್ಲಿ ಆರಂಭವಾದ 'ಸಹ್ಯಾದ್ರಿ ರಂಗ ತರಂಗ' ತಂಡವು ತನ್ನದೇ ಆದ ತತ್ವ-ಸಿದ್ಧಾಂತದ ನಾಟಕಗಳನ್ನು ಪ್ರದರ್ಶಿಸುತ್ತಾ ಬೆಳೆಯಿತು. 'ಸತ್ತವನ ಸಂತಾಪ', 'ಬಿರುಗಾಳಿ', 'ಕಾನಿನ', 'ಸಂಕ್ರಾಂತಿ', 'ಜೂಲಿಯಸ್-ಸೀಸರ್', 'ರಾವಿ ನದಿ ದಂಡೆಯಲ್ಲಿ', 'ಗಂಗಾವತರಣ' ಇತ್ಯಾದಿ., ನಾಟಕಗಳನ್ನು ಪ್ರದರ್ಶಿಸಿಸಲಾಗಿದೆ.

1987ರಲ್ಲಿ ಆರಂಭವಾದ 'ರಂಗಪ್ರಯೋಗ' ಸಂಸ್ಥೆಯು ತನ್ನದೇ ಆದ ವಿಭಿನ್ನ ನಾಟಕಗಳನ್ನು ಪ್ರದರ್ಶಿಸುತ್ತ ಶಿವಮೊಗ್ಗದಲ್ಲಿ, ಆ ಕಾಲದಲ್ಲಿ ಅಗ್ರಸ್ಥಾನವನ್ನು ಪಡೆದಿದ್ದ ರಂಗತಂಡ, ಜಾನಪದ ಮತ್ತು ಸಂಗೀತಮಯ ನಾಟಕ. 'ಅದ್ರೇಶಿ ಪರದೇಶಿಯಾದ' – 'ಜಲಗಾರ'–'ರಕ್ತಾಕ್ಷಿ'–'ಬಾರೋ ಬಾರೋ ಬಸವಣ್ಣ'ಗಳಂತಹ ನಾಟಕಗಳನ್ನು ಪ್ರದರ್ಶಿಸುವ ಮೂಲಕ ಒಂದು ಹೊಸ ಪರಂಪರೆಗೆ ನಾಂದಿ ಹಾಡಿತಾದರೂ ಅದು ನಿರಂತರವಾಗಲಿಲ್ಲ. ಆದರೆ, ಆ ತಂಡದ ಬೆನ್ನೆಲುಬಾಗಿದ್ದ ಮತ್ತು ಶಿವಮೊಗ್ಗ ರಂಗಕ್ರಿಯೆಯ ಹೆಮ್ಮೆಯ ಬಂಧುವಾಗಿದ್ದ ಶ್ರೀ ಹೆಚ್.ಎಂ.ಪ್ರಭಾಕರ್‌ರವರ 'ರಂಗಶತಕ' ಎಂಬ ಕಾರ್ಯಕ್ರಮವು ಮಕ್ಕಳ ರಂಗಭೂಮಿಯಲ್ಲಿ ಒಂದು ಹೊಸ ಸಂಚಲನವನ್ನು ಉಂಟುಮಾಡಿತು. ಒಂದು ವರ್ಷದಲ್ಲಿ ಮಕ್ಕಳ ನೂರು ನಾಟಕವನ್ನು ಮಾಡಿಸುವ ಸಂಕಲ್ಪ ಮಾಡಿದರು. ಇವರ ಈ ಸಾಹಸದಿಂದಾಗಿ ಹಲವಾರು ರಂಗಕೃತಿಗಳು ಮತ್ತು ಹಲವಾರು ಪ್ರತಿಭೆಗಳು ಮತ್ತು ಹಲವಾರು ನಿರ್ದೇಶಕರು ಬೆಳಕಿಗೆ ಬರುವಂತಾಯಿತು. 'ರಂಗಶತಕ' ಎಂಬುದು ರಂಗಪ್ರಯೋಗ ತಂಡಕ್ಕೊಂಡು ಗರಿಮೆ. ಶ್ರೀಯುತ ಹೆಚ್.ಎಂ.ಪ್ರಭಾಕರ್ ನಿಧನಾನಂತರ ಅವರ ಸ್ಮರಣಾರ್ಥ ನಾಟಕೋತ್ಸವವನ್ನು ಏರ್ಪಡಿಸಿದ್ದೂ ಅಲ್ಲದೇ, ಹೊಸಬರಿಗೆ ರಂಗ ಪ್ರಸಾಧನ ತರಬೇತಿಯನ್ನೂ ಏರ್ಪಡಿಸಲಾಗಿತ್ತು. ಹೆಚ್.ಎಂ.ಪ್ರಭಾಕರ್‌ರವರು ತಮ್ಮದೇ ಆದ ಶಿಷ್ಯವೃಂದವನ್ನು ಕ್ರೋಢೀಕರಿಸಿ, 'ನೇಪಥ್ಯ' ಎಂಬ ತಂಡವನ್ನು ಹುಟ್ಟುಹಾಕಿದ್ದರು. ಆ ತಂಡದಲ್ಲಿರುವ ಎಲ್ಲರೂ ಹದಿಹರೆಯದವರೇ. ಉತ್ಸಾಹಿ ಯುವ ಸಮೂಹವನ್ನು ರಂಗಪ್ರಯೋಗಗಳ ಮೂಲಕ ಮುನ್ನಡೆಸಿದ ಕೀರ್ತಿ ಹೆಚ್‌ಎಂಪಿಯವರದು.

ಈ ನಡುವೆ ರಂಗಾಸಕ್ತ ಪತ್ರಿಕಾ ಮಿತ್ರರು ಒಡಗೂಡಿ 'ನಮ್ ಟೀಮ್' ಎಂಬ ಸ್ವತಂತ್ರ ಸಂಸ್ಥೆಯನ್ನು ಹುಟ್ಟುಹಾಕಿಕೊಂಡರು. ಡಾ.ಯು.ಆರ್. ಅನಂತಮೂರ್ತಿಯವರ 'ಸೂರ್ಯನ ಕುದುರೆ' ಎಂಬ ಕೃತಿಯನ್ನು ರಂಗಕೃತಿಯನ್ನಾಗಿಸಿ ಪ್ರಯೋಗಿಸುವ ಮೂಲಕ ರಂಗಸಾಹಸಕ್ಕೆ ಇಳಿದರು. ಸ್ವಂತ ಪ್ರದರ್ಶನಗಳ ಜೊತೆ ಜೊತೆಗೆ ನೀನಾಸಂ, ಸಾಣೇಹಳ್ಳಿಯ ನಾಟಕಗಳನ್ನು ಆಹ್ವಾನಿಸಿ ಪ್ರದರ್ಶಿಸತೊಡಗಿದರು. 'ರಂಗಸುಗ್ಗಿ', 'ಕಾಲೇಜು ರಂಗೋತ್ಸವ', 'ದೇಶೀ ನಾಟಕಗಳು' ಇವು 'ನಮ್ ಟೀಮ್' ತಂಡದ ಸಾಧನೆಗಳು. ಲಂಕೇಶ್ ಪತ್ರಿಕೆಯ ಅಂಕಣಕಾರರಾದ ಬಿ.ಚಂದ್ರೇಗೌಡರ 'ಬಯಲು ಸೀಮೆಯ

ಕಟ್ಟೇಪುರಾಣ' ಎಂಬ ನಾಟಕವನ್ನು ಸುಮಾರು 40ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ ಕೀರ್ತಿ ಈ ತಂಡಕ್ಕಿದೆ. 'ಗುಣಮುಖ', 'ದಾರಾಶಿಕೋ', 'ಕೆಂಡದ ಮಳೆಯಲ್ಲಿ ಉದಕವಾದವರು', 'ದ್ವಂದ್ವ ದ್ವಾಪರ', 'ಕಲ್ಲು ಕರಗುವ ಸಮಯ', 'ಸಧಾರಮೆ', 'ಮೋಟೆ ರಾಮನ ಸತ್ಯಾಗ್ರಹ ಪ್ರಸಂಗ', 'ಗಾಂಧಿ ಮತ್ತು ಗೋಡ್ಸೆ', 'ಯಾಪಿಲ್ಲೋ', 'ಧನ್ವಂತರಿ ಚಿಕಿತ್ಸೆ', 'ಭಳಾರೆ ವಿಚಿತ್ರಮ್' ಇತ್ಯಾದಿ., ಈ ತಂಡದಿಂದ ಮೂಡಿಬಂದ ವಿಭಿನ್ನ ನಾಟಕಗಳು.

ಶಿವಮೊಗ್ಗದ ರಂಗಕರ್ಮಿಗಳಲ್ಲಿ ಶಿಕ್ಷಕರು ಹಾಗೂ ಸರ್ಕಾರಿ ನೌಕರರು ಸ್ವತಂತ್ರವಾಗಿ ತಮ್ಮದೇ ಆದ 'ಹೊಂಗಿರಣ' ತಂಡವನ್ನು ರೂಪಿಸಿಕೊಂಡರು. ಇವರು ಆರಂಭದಿಂದಲೂ ಶಾಲಾ ಮಕ್ಕಳಿಂದ ಅನೇಕ ಅದ್ಭುತ ನಾಟಕಗಳನ್ನು ಪ್ರದರ್ಶಿಸುತ್ತಾ ಬಂದಿದ್ದರು. ಮೊರಾರ್ಜಿ ದೇಸಾಯಿ ಹಾಗೂ ನವೋದಯ ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ಹಲವು ನಾಟಕಗಳನ್ನು ಮಾಡಿಸಿದ್ದಾರೆ. ಹಲವಾರು ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಮಕ್ಕಳು ಭಾಗವಹಿಸುವಂತೆ ಮಾಡಿ, ಹಲವು ಪ್ರಶಸ್ತಿಗಳನ್ನೂ ಗಳಿಸಿದ್ದಾರೆ. ಈ ರಂಗಪೀಳಿಗೆಯ ಮುಂದುವರೆದ ಭಾಗವೇ 'ಹೊಂಗಿರಣ ತಂಡ'. 'ಬೊಂಬೆಯಾಟ', 'ಕುಣಿ ಕುಣಿ ನವಿಲೆ', 'ನನ್ನ ಪ್ರೀತಿಯ ನರಕ', 'ಮೃತ್ಯು', 'ದೇವರ ಹೆಣ', 'ಕರ್ಣಾಂತರಂಗ' ಇತ್ಯಾದಿ., ನಾಟಕಗಳು ಈ ತಂಡದ ಕೊಡುಗೆ.

ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರ ಯುವ ಸಮೂಹದೊಂದಿಗೆ ಬೇರುಬಿಟ್ಟ ಇನ್ನೊಂದು ತಂಡವೆಂದರೆ, 'ಸೃಷ್ಟಿ ಸಾಂಸ್ಕೃತಿಕ ವೇದಿಕೆ'. ಆರಂಭದಲ್ಲಿ 'ಬಾವಿ ಕಳೆದೈತ್ರಿ ಹುಡುಕೋಣ ಬನ್ನಿ' ಎಂಬ ಹಾಸ್ಯ ನಾಟಕಗಳೊಂದಿಗೆ ಆರಂಭವಾದ ಈ ತಂಡವು ನಂತರದ ದಿನಗಳಲ್ಲಿ 'ಭಾಮತಿ', 'ಮೃಗತೃಷ್ಣ', 'ಕಿರಿ ಕಿರಿ ಕಿರಿಗೆಟ್ಟು'ಗಳಂತಹ ಪ್ರಬುದ್ಧ ನಾಟಕಗಳನ್ನು ಪ್ರದರ್ಶಿಸಿದೆ. ಮುಂಬೈ ಕರ್ನಾಟಕ ಸಂಘದವರು ನಡೆಸುವ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಶಸ್ತಿಯನ್ನು ಗಳಿಸಿ ಬಂದ ಕೀರ್ತಿ ಈ ತಂಡಕ್ಕೆ ಸಲ್ಲುತ್ತದೆ.

ಇನ್ನು 'ಕಲಾರೋಹಣ' ತಂಡದ ರಂಗ ಕೊಡುಗೆಗಳೆಂದರೆ, 'ನಮ್ ನಮ್ ರಸ್ತೆ' ಮತ್ತು ಕೆಲವು ಕಿರು ಪ್ರಹಸನಗಳು. 'ಸಮನ್ವಯ' ತಂಡವು ಜನಜಾಗೃತಿಯ ಬೀದಿ ನಾಟಕಗಳಲ್ಲಿ ತೊಡಗಿಸಿಕೊಂಡಿದ್ದರೆ, 'ರಂಗಬೆಳಕು' ತಂಡದವರು ಇದುವರೆಗೂ ವೀರಭಗತ್ ಸಿಂಗ್, ಬಾಬಾ ಸಾಹೇಬ್ ಅಂಬೇಡ್ಕರ್, ಗಾಂಧಿ ಬಂದ ಹೀಗೆ ಇನ್ನೂ ಹಲವಾರು ನಾಟಕಗಳನ್ನು ಪ್ರದರ್ಶಿಸುತ್ತಾ ಬಂದಿರುತ್ತಾರೆ. 'ಬೆಳಕು', 'ಚಿಗುರು', 'ಮಲೆನಾಡು ಕಲಾತಂಡ' ಇತ್ಯಾದಿ ಸಂಸ್ಥೆಗಳು ಕೂಡ ರಂಗಭೂಮಿಯಲ್ಲಿ ಮಿನುಗುತ್ತಿವೆ.

ಇನ್ನು ಸಮಾಜಿಕ ಸೇವಾ ಸಂಸ್ಥೆಗಳಾದ ರೋಟರಿ, ಲಯನ್ಸ್, ಜೇಸಿಸ್, ಐಎಂಎಯಂಥಾ ಸಂಸ್ಥೆಗಳೂ ಸಹ ವಾರ್ಷಿಕೋತ್ಸವ, ಪ್ರಾತ್ಯಕ್ಷತೆ ಇತ್ಯಾದಿ., ಕಾರ್ಯಕ್ರಮಗಳಲ್ಲಿ ಹಲವಾರು ರಂಗಪ್ರಯೋಗಗಳನ್ನು ಮಾಡುವ ಪ್ರಯತ್ನ ಮಾಡಿದ್ದಾರೆ.

ಶಿವಮೊಗ್ಗದ ಸುತ್ತಮುತ್ತ ಹಳ್ಳಿಗಳಲ್ಲೂ ಗ್ರಾಮಸ್ಥರು ಸಂಘಟಿತರಾಗಿ ನಾಟಕ ಕಲಿಸುವ 'ಮೇಸ್ಟ್ರನ್ನು' ಆಹ್ವಾನಿಸಿ ಅವರಿಂದ ನಾಟಕವನ್ನು ಕಲಿತು ಆಡುವ ಸಂಪ್ರದಾಯ

ಇಂದಿಗೂ ನಿರಂತರವಾಗಿದೆ. ಗೆಜ್ಜೇನಹಳ್ಳಿ, ಸಕಾತಿಕೊಪ್ಪ, ಸೋಮಿನಕೊಪ್ಪ, ಹೊಳೆಬೆನವಳ್ಳಿ, ಹೊಸಳ್ಳಿ, ಹೊಳೆಹೊನ್ನೂರು ಹೀಗೆ ಹೇಳುತ್ತಾ ಹೋದರೆ ಮುಗಿಯುವುದೆಂದೋ? ರಂಗಕ್ರಿಯೆ ಗ್ರಾಮ್ಯಮಟ್ಟದಲ್ಲೂ ಇನ್ನೂ ಜೀವಂತವಾಗಿದೆ ಎಂಬುದಕ್ಕೆ ಇದೊಂದು ನಿದರ್ಶನ ಎಂದು ಹೇಳಬಹುದು.

## ಇನ್ನಿತರ ರಂಗಕ್ರಿಯೆಗಳು...

ಶಿವಮೊಗ್ಗಕ್ಕೂ ಮತ್ತು ರಂಗಕ್ರಿಯೆಗೂ ಒಂದು ಅವಿನಾಭಾವ ಸಂಬಂಧವಿರುವುದನ್ನು ಹಲವು ಸಾಕ್ಷಿಗಳ ಮೂಲಕ ಸಾದರಪಡಿಸಬಹುದು. ಕಂಪನಿಯ ವೃತ್ತಿರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿಯಲ್ಲದೇ, ಮತ್ತೊಂದು ರೀತಿಯ ರಂಗ ಚಾಲನೆಯೂ ನಿರಂತರ ನಡೆಯುತ್ತಿದೆ. ಕೋಟೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ 'ಮಾರುತಿ ಕಲಾ ಸಂಘ'ದವರು ಬೇಲೂರು ಕೃಷ್ಣಮೂರ್ತಿಯವರ ನಾಟಕಗಳನ್ನು ಆಡಿಸಿದ್ದಾರೆ. ಶ್ರೀ ಮೈಲಾರೇಶ್ವರ ಸ್ವಾಮಿ ದೇವಸ್ಥಾನದ 'ಶ್ರೀ ಗಜಾನನ ಕಲಾ ಸಂಘ'ದ ಸದಸ್ಯರು ಗಣೇಶೋತ್ಸವಕ್ಕಾಗಿ ಹಲವು ಹಾಸ್ಯ ನಾಟಕಗಳನ್ನು ಪ್ರದರ್ಶಿಸಿದ್ದಾರೆ. 'ಜನತಾ ಕಲಾ ಸಂಘ', 'ವಾಸವಿ ಯುವಜನ ಸಂಘ', 'ಶ್ರೀ ಕೃಷ್ಣ ಟೈಪಿಂಗ್ ಇನ್‌ಸ್ಟಿಟ್ಯೂಟ್' ಮುಂತಾದ ಹವ್ಯಾಸೇತರ ಸಂಸ್ಥೆ–ಸಮುದಾಯದವರು ವಾರ್ಷಿಕೋತ್ಸವ–ಉತ್ಸವದಂತಹ ಕಾರ್ಯಕ್ರಮಗಳಿಗಾಗಿ ನಾಟಕಗಳನ್ನು ಆಡಿದ ಚರಿತ್ರೆ ಇದೆ. ಶಿವಮೊಗ್ಗದ ಶ್ರೀಗಂಧದ ಎಣ್ಣೇ ಕಾರ್ಖಾನೆಯ ಕಾರ್ಮಿಕರಾದ ಶ್ರೀಯುತ ವಿಶ್ವನಾಥ್‌ರವರು ತಾವೇ ರಚಿಸಿ, ನಿರ್ದೇಶಿಸಿದ 'ರೌಡಿ ರಂಗಣ್ಣ' ಎಂಬ ನಾಟಕವು ನಂತರದ ದಿನಗಳಲ್ಲಿ ಸಿನಿಮಾ ಆದುದು ಇತಿಹಾಸ. ಆರ್.ಎಂ.ಸಿ. ಕಚೇರಿಯ ನೌಕರರು ಒಗ್ಗೂಡಿ ಪ್ರತೀವರ್ಷ ಒಂದು ನಾಟಕವನ್ನು ಆಡುವ ಸಂಪ್ರದಾಯ ರೂಢಿಸಿಕೊಂಡಿದ್ದರು. ಕ್ಯಾಥೋಲಿಕ್ ಯುವಕ ಸಂಘದವರೂ ಸಹ ವರ್ಷಕ್ಕೊಂದು ಹಾಸ್ಯ ನಾಟಕವನ್ನು ಪ್ರದರ್ಶಿಸುವ ಮೂಲಕ ತಮ್ಮ ಸಂಘಟನೆಯನ್ನು ಪ್ರದರ್ಶಿಸುತ್ತಿದ್ದರು. 'ರಿಮ್ಯಾಂಡ್ ಹೋಂ'ನ ಬಾಲಾಪರಾಧಿಗಳಿಗಾಗಿ ನಾಟಕಗಳನ್ನು ಆಡಿಸಿದ ನಿದರ್ಶನಗಳಿವೆ. ಜೈಲಿನ ಖೈದಿಗಳಿಗೆ ಸಾಂಸ್ಕೃತಿಕ ಆಸಕ್ತಿ ಮೂಡಿಸುವ ಸಲುವಾಗಿ ಆಡಿದ ನಾಟಕದ ದಾಖಲೆಗಳೂ ಇವೆ.

ಕೋಟೆ ಶಿವಪ್ಪನಾಯಕನ ಅರಮನೆಯು ಒಂದು ಕಾಲದಲ್ಲಿ ಟಿಂಬರ್ ಸಾಮಿಲ್ ಆಗಿತ್ತು, ಆಗ ಅಲ್ಲಿ ಕೆಲಸ ಮಾಡುತ್ತಿದ್ದ ನೌಕರರು ಸಂಘಟಿತರಾಗಿ ಪ್ರತೀವರ್ಷ ತಮ್ಮ ಸ್ವಂತ ಹಣವನ್ನು ಖರ್ಚು ಮಾಡಿ, ಶಿವರಾತ್ರಿಯ ದಿನದಂದು ಅಹೋರಾತ್ರಿ 'ಶನಿಮಹಾತ್ಮೆ' ನಾಟಕವನ್ನು ಆಡುತ್ತಿದ್ದರು. ಶಿವಮೊಗ್ಗ ನಗರದ 'ಕಾವೇರಿ ಸೌಂಡ್ ಸಿಸ್ಟಂ'ನವರು ಹಲವಾರು ಕಂಪನಿ ನಾಟಕಗಳಣ್ನು ಆಹ್ವಾನಿಸಿ ಪ್ರದರ್ಶಿಸುವ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ.

ಹಾಗೆಯೇ 2001ರಿಂದ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಪ್ರತೀವರ್ಷ ಒಬ್ಬ ಪ್ರತಿಭಾನ್ವಿತ ನಿರ್ದೇಶಕನಿಂದ ಕಾಲೇಜು ವಿದ್ಯಾರ್ಥಿಗಳಿಗೆ ನಾಟಕವನ್ನು ನಿರ್ದೇಶಿಸಿ ಪ್ರದರ್ಶನ ನೀಡುತ್ತಾ ಬಂದಿದೆ. ಅಲ್ಲದೇ ಪ್ರತೀವರ್ಷ ಅಂತರ ಕಾಲೇಜು ನಾಟಕ

ಸ್ಪರ್ಧೆಯನ್ನು ಏರ್ಪಡಿಸುತ್ತಾ ರಂಗಭೂಮಿಗೆ ತನ್ನ ಕೊಡುಗೆಯನ್ನು ನೀಡುತ್ತಿದೆ. ಇದರೊಂದಿಗೆ ದೂರಶಿಕ್ಷಣದಡಿಯಲ್ಲಿ ಒಂದು ವರ್ಷದ ಪಿಜಿ ಡಿಪ್ಲಮೋ ರಂಗ ಅಧ್ಯಯನ ಕೋರ್ಸ್ ನಡೆಸುತ್ತಿದೆ. ನಾಡಿನ ಪ್ರತಿಭಾನ್ವಿತ ರಂಗಕರ್ಮಿಗಳು ಇಲ್ಲಿ ಪ್ರಾತ್ಯಕ್ಷಿಕೆ–ಉಪನ್ಯಾಸಗಳನ್ನು ನೀಡುತ್ತಿದ್ದಾರೆ.

ಈ ನಡುವೆ ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ದೇಶೀಯ ವಿದ್ಯಾಶಾಲೆಯು ಒಂದುವರ್ಷದ ಶಾಸ್ತ್ರೋಕ್ತ ರಂಗಶಿಕ್ಷಣವನ್ನು ನೀಡುವ ಕೈಂಕರ್ಯವನ್ನೂ ಆರಂಭಿಸಿದೆ.

ಬೇರೆ ಜಿಲ್ಲೆಗಳಲ್ಲಿ ಒಂದು ತಂಡದ ಕಲಾವಿದರು ಅಥವಾ ತಂತ್ರಜ್ಞರು ಇನ್ನೊಂದು ತಂಡದಲ್ಲಿ ಭಾಗವಹಿಸಲು ಹಿಂಜರಿಯುತ್ತಾರೆ ಅಥವಾ ಕೆಲವು ನಿರ್ಬಂಧಗಳು ಇರುತ್ತವೆ. ಆದರೆ, ಶಿವಮೊಗ್ಗದ ರಂಗಕ್ರಿಯೆಯಲ್ಲಿ ಎಲ್ಲರೂ ಎಲ್ಲ ತಂಡಗಳಲ್ಲೂ ಸಕ್ರಿಯರಾಗಿ ದುಡಿಯುತ್ತಾರೆ. ಈ ಮುಕ್ತಭಾವದ ರಂಗಕ್ರಿಯೆಗೆ ಉದಾಹರಣೆ ಎಂದರೆ 'ಕಲಾವಿದರು, ಹವ್ಯಾಸಿ ರಂಗತಂಡಗಳ ಒಕ್ಕೂಟವು' ಶಿವಮೊಗ್ಗ ನಗರದ ಎಲ್ಲ ಕಲಾವಿದರು–ತಂತ್ರಜ್ಞರು ಸಂಘಟಿತರಾಗಿ ರೂಪಿಸಿಕೊಂಡಿರುವ ಒಂದು ಮುಕ್ತ ಸಂಸ್ಥೆ. ಶಿವಮೊಗ್ಗದಲ್ಲಿ ಯಾವುದೇ ವಿಭಿನ್ನ ರಂಗಕ್ರಿಯೆ ನಡೆಯಬೇಕೆಂದರೂ 'ಕಲಾವಿದರು' ಒಕ್ಕೂಟದ ಸಹಕಾರ ಅನಿವಾರ್ಯವಾಗಿದೆ. ಬಹುಶಃ ಇಂತಹ ಆರೋಗ್ಯಕರವಾದ ರಂಗಚಿಂತನೆ ಬೇರೆಲ್ಲೂ ಕಾಣಲು ಸಿಗುವುದಿಲ್ಲ.

## ಮಕ್ಕಳ ರಂಗಭೂಮಿ

ಹಿಂದಿನಿಂದಲೂ ವಠಾರ–ಕೇರಿ–ಬೀದಿಗಳಲ್ಲಿ ಹತ್ತು ಹಲವು ಮಕ್ಕಳ ನಾಟಕಗಳು ಪ್ರದರ್ಶನಗೊಳ್ಳುತ್ತಿದ್ದವು. ಅಪ್ಪಾಜಿರಾವ್ ಕಾಂಪೌಂಡ್, ದೊಡ್ಡ ಬ್ರಾಹ್ಮಣರ ಬೀದಿ (ಕಾಮನ ಹಬ್ಬದ ಸಲುವಾಗಿ) ಜಯನಗರದ ಶ್ರೀರಾಮಮಂದಿರ, ಸೋಗಾನೆ ಕಾಂಪೌಂಡ್, ರಾಮಚಂದ್ರರಾವ್ ಕಾಂಪೌಂಡ್, ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಹೀಗೆ ಹಲವು ಸ್ಥಳಗಳು ಮಕ್ಕಳ ರಂಗಕ್ರಿಯೆಗೆ ಭೂಮಿಕೆಯಾಗಿದ್ದವು. ಇಂತಹ ಪ್ರದರ್ಶನಗಳ ರೂವಾರಿಗಳೆಂದರೆ ಶ್ರೀಮತಿ ಮುತ್ತಮ್ಮ, ಶ್ರೀಯುತ ವೆಂಕಟೇಶ್ ಮೊದಲಿಯಾರ್, ಶ್ರೀಯುತ ಡಿ.ಎಂ.ಅಯ್ಯರ್. ಶಿವಮೊಗ್ಗದ ಮಕ್ಕಳ ರಂಗಭೂಮಿಯ ಇತಿಹಾಸವನ್ನು ನೆನೆದಾಗ ಎದ್ದು ಕಾಣುವ ಹೆಸರೆಂದರೆ, ಶ್ರೀಯುತ ಶಿವರಾಮಶಾಸ್ತ್ರಿಗಳು. ಮಕ್ಕಳ ರಂಗಭೂಮಿಗೆ ಇವರ ಕೊಡುಗೆ ಅನನ್ಯವಾದುದು. ಇಂಗ್ಲೀಷಿನ ಹಲವಾರು ನಾಟಕಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಆಡಿಸಿದ್ದಾರೆ. ಜೊತೆಗೆ ಮಲ್ಲಾಡಿಹಳ್ಳಿ ಶ್ರೀಗಳ ಹಲವಾರು ನಾಟಕಗಳನ್ನು ಮಕ್ಕಳ ಮೂಲಕ ಆಡಿಸಿ ರಂಗಕ್ಕೆ ತಂದ ಕೀರ್ತಿ ಇವರಿಗೇ ಸಲ್ಲುತ್ತದೆ.

ರಂಗಕ್ರಿಯೆಯಲ್ಲಿ 'ನೆಕ್ಸ್ಟ್ ಜನರೇಷನ್' ತರಬೇಕೆಂಬ ತುಡಿತ ಮೊದಲಿನಿಂದಲೂ ಇದೆ. ಅದಕ್ಕೆ ಸೂಕ್ತ ಪರಿಹಾರವೆಂದರೆ 'ಮಕ್ಕಳ ರಂಗಭೂಮಿ'. ಭವಿಷ್ಯದ ವಾರಸುದಾರರಾದ ಮಕ್ಕಳನ್ನು ಸೆಳೆಯುವಲ್ಲಿ ಹಲವು ರಂಗತಂಡಗಳು 'ರಂಗಶಿಬಿರ'–

'ರಂಗೋತ್ಸವ' – 'ಬೇಸಿಗೆ ರಂಗ ಶಿಬಿರ' – 'ರಂಗಶತಕ'ದಂತಹ ಕಾರ್ಯಕ್ರಮಗಳಿಂದ ನೂರಾರು ಮಕ್ಕಳು ರಂಗಕ್ರಿಯೆಯಲ್ಲಿ ತೊಡಗಿಕೊಳ್ಳುವಂತೆ ಮಾಡಲಾಗಿದೆ. 'ರಂಗದ ಮೂಲಕ ಶಿಕ್ಷಣ' ಎಂಬ ಹೊಸ ಆವಿಷ್ಕಾರವೂ ನಡೆದಿದೆ. ರಂಗಾಸಕ್ತರು, ರಂಗ ತಜ್ಞರು ಈ ನಿಟ್ಟಿನಲ್ಲಿ ಆಲೋಚಿಸಿ ಹಲವು ಪ್ರಯತ್ನಗಳನ್ನೂ ಮಾಡಿದ್ದಾರೆ. ಕಲಾಕಿರಣ–ಕಲಾಜ್ಯೋತಿಯಂತಹ ತಂಡಗಳು, ಮಕ್ಕಳ ರಂಗಭೂಮಿಗಾಗಿಯೇ ಹಲವಾರು ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಅಂದಿನ ಮಕ್ಕಳು ಇಂದು ಪ್ರಬುದ್ಧ ನಟರಾಗಿ–ತಂತ್ರಜ್ಞರಾಗಿ ಶಿವಮೊಗ್ಗ ರಂಗಕ್ರಿಯೆಯಲ್ಲಿ ಸಕ್ರಿಯರಾಗಿರುವುದೇ ಅದಕ್ಕೆ ಜೀವಂತಸಾಕ್ಷಿ. 'ರಂಗಶತಕ'ದಂತಹ ಸಾಹಸದ ಮೂಲಕ ದಿ. ಹೆಚ್.ಎಂ.ಪ್ರಭಾಕರ್‌ರವರು ಸಾವಿರಾರು ಮಕ್ಕಳು ರಂಗಪ್ರವೇಶ ಮಾಡುವ ಸಾರ್ಥಕ ಕಾರ್ಯ ಮಾಡಿದ್ದಾರೆ. ಇವತ್ತಿಗೂ ಎಷ್ಟೋ ಮಕ್ಕಳು ಸ್ವತಂತ್ರವಾಗಿ ಮತ್ತು ಸಂಯುಕ್ತವಾಗಿ ರಂಗಕ್ರಿಯೆಯಲ್ಲಿ ಸಕ್ರಿಯರಾಗಿದ್ದಾರೆ. ಶಿವಮೊಗ್ಗ ನಗರದ ಕೆಲವೊಂದು ಶಾಲೆಗಳೂ ಸಹ ರಂಗಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ವಾಸವಿ ವಿದ್ಯಾಲಯ, ವಿಕಾಸ ವಿದ್ಯಾಲಯ, ಜ್ಞಾನದೀಪ ವಿದ್ಯಾಲಯ, ಮಂದಾರ ಶಾಲೆ ಇತ್ಯಾದಿ ಶಾಲೆಗಳು ತಮ್ಮ ಶಾಲಾ ವಾರ್ಷಿಕೋತ್ಸವದಲ್ಲಿ ಹೊಸ–ಹೊಸ ನಾಟಕಗಳನ್ನು ಪ್ರದರ್ಶಿಸುವ ಪ್ರಯತ್ನ ಮಾಡಿವೆ. ಹಲವಾರು ಶಿಕ್ಷಕರು ನಿರ್ದೇಶನದ ಕೌಶಲ್ಯವನ್ನು ಅರಿತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಎಂ.ಪಿ. ಪ್ರಕಾಶ್ ಆರ್ಟ್ಸ್ ಫೌಂಡೇಷನ್ ಸಂಸ್ಥೆಯವರು ಮತ್ತು ಸಮುದಾಯ ತಂಡದವರು ಪ್ರತೀವರ್ಷ ಬೇಸಿಗೆ ಶಿಬಿರವನ್ನು ಮಾಡಿ ಸುಮಾರು 30ರಿಂದ 40 ಮಕ್ಕಳನ್ನು ರಂಗಕ್ರಿಯೆಯಲ್ಲಿ ತೊಡಗಿಸಿ ಹೊಸ ಹೊಸ ನಿರ್ದೇಶಕರಿಂದ ನಾಟಕಗಳನ್ನು ಪ್ರದರ್ಶಿಸುವ ಕಾರ್ಯ ನಡೆದಿದೆ. ಶಿವಮೊಗ್ಗೆಯಲ್ಲಿ ರಂಗಾಯಣದಂತಹ ಸಂಸ್ಥೆ ಪ್ರಾರಂಭವಾಗಿರುವುದು ರಂಗಭೂಮಿಗೆ ಕೊಟ್ಟ ದೊಡ್ಡ ಕೊಡುಗೆಯಾಗಿದೆ. ಒಂದು ರೀತಿಯಲ್ಲಿ ಶಿವಮೊಗ್ಗವು ನಿರಂತರ ರಂಗ ಚಟುವಟಿಕೆಯ ತಾಣವೆಂದು ಹೆಮ್ಮೆಯಿಂದ ಹೇಳಲು ಯಾವುದೇ ಮುಜುಗರವಿಲ್ಲ.


– ಎನ್.ಆರ್. ಪ್ರಕಾಶ್ (ಆಚಿ)

# ರಂಗಾಯಣ ಶಿವಮೊಗ್ಗ

ರಂಗಾಯಣ ಶಿವಮೊಗ್ಗ 2011ರ ಸೆಪ್ಟೆಂಬರ್‌ನಲ್ಲಿ ವಿಧ್ಯುಕ್ತವಾಗಿ ಆರಂಭಗೊಂಡಿತು. ಇದರ ಪ್ರಥಮ ನಿರ್ದೇಶಕರಾಗಿ ಹೊ.ನ. ಸತ್ಯ ನಿಯುಕ್ತಿಗೊಂಡಿದ್ದರು. ಇವರ ನೇತೃತ್ವದಲ್ಲಿ ಶಿವಮೊಗ್ಗ ರಂಗಾಯಣವು ಹಲವು ಅದ್ಭುತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು.

ಪಠ್ಯರಂಗ, ಕಾಲೇಜು ರಂಗೋತ್ಸವ, ಜಿಲ್ಲಾ ನಾಟಕೋತ್ಸವ, ಮಕ್ಕಳ ಬೇಸಿಗೆ ರಂಗತರಬೇತಿ ಶಿಬಿರ ನಡೆಸಿದೆ. ಇದಲ್ಲದೆ, ವಿಶೇಷವಾಗಿ 2012ನೇ ಸಾಲಿನಲ್ಲಿ 'ರಂಗಶತಕ' ಎಂಬ ವಿಭಿನ್ನ ಪ್ರಯೋಗದ ಮೂಲಕ 9 ಜಿಲ್ಲೆಗಳ ಗ್ರಾಮೀಣ ಶಾಲೆಗಳ ಮಕ್ಕಳಿಗೆ ರಂಗ ತರಬೇತಿ ನೀಡಿ, 100 ನಾಟಕಗಳನ್ನು ಪ್ರದರ್ಶನ ಮಾಡಲಾಯಿತು. ಈ ಪ್ರಯೋಗದಲ್ಲಿ ವಿವಿಧ ಭಾಗದ 3000 ಗ್ರಾಮೀಣ ಮಕ್ಕಳು ಭಾಗವಹಿಸಿದ್ದರು. ಸುಮಾರು 75 ಜನ ನಿರ್ದೇಶಕರು ತರಬೇತಿ ನೀಡಿದರು. ಈ ವಿಭಿನ್ನ ಪ್ರಯೋಗದಲ್ಲಿ ಈ ಯುವ ನಿರ್ದೇಶಕರಿಗೆ ಹಾಗೂ ನೀನಾಸಮ್‌ನಿಂದ ರಂಗ ಶಿಕ್ಷಣದ ಪದವಿ ಪಡೆದ ಕಲಾವಿದರಿಗೆ ಅವಕಾಶ ನೀಡಿದ್ದು ಹೆಮ್ಮೆಯ ವಿಷಯ.

ರಂಗಾಯಣ ಆರಂಭದಲ್ಲೇ ಉತ್ತಮ ಕಾರ್ಯಕ್ರಮಗಳ ಮೂಲಕ ಜನತೆಯ ಮೆಚ್ಚುಗೆಗೆ ಪಾತ್ರವಾಗಿದೆ.



ಸುವರ್ಣ ಸಾಂಸ್ಕೃತಿಕ ಭವನ ಶಿವಮೊಗ್ಗ

# ಅಭಿನಯ, ಶಿವಮೊಗ್ಗ

**ಸಂಪರ್ಕ: ಎಸ್.ಸಿ.ಗೌರಿಶಂಕರ್, ದೂ: 94487 92092**

ಶಿವಮೊಗ್ಗ ಕಲಾರಸಿಕರಿಗೆ "ಅಭಿನಯ" ಹವ್ಯಾಸಿ ತಂಡ ಮೂರುದಶಕಗಳಿಂದ ನಾಟಕಗಳನ್ನು ಪ್ರದರ್ಶಿಸುತ್ತಿದೆ. 1972ರಲ್ಲಿ ಶಿವಮೊಗ್ಗದ ಸಹೃದಯೀ ರಂಗಾಸಕ್ತರಿಗೆ, ಕಲಾರಸಿಕರಿಗೆ ನಾಟಕಗಳನ್ನು ಪ್ರದರ್ಶಿಸಲು ಕೆಲ ಸ್ನೇಹಿತರುಗಳು ಸೇರಿಕೊಂಡು ಕಟ್ಟಿದ ಸಂಸ್ಥೆ "ಅಭಿನಯ". ರಂಗ ತಂಡಗಳನ್ನು ನಡೆಸಿಕೊಂಡು ಬರುವುದು ಅಷ್ಟು ಸುಲಭದ ಮಾತಲ್ಲ. ನಾಟಕ ಒಂದು ಸಂಕೀರ್ಣ ಕಲೆ. ಅಭಿನಯ, ಸಂಗೀತ, ವೇಷಭೂಷಣ, ಬೆಳಕು, ರಂಗಸಜ್ಜಿಕೆ ಎಲ್ಲ ವಿಚಾರಗಳಲ್ಲಿ ಪರಿಣತಿ ಹೊಂದಿರುವವರನ್ನು ಒಟ್ಟುಗೂಡಿಸಿ ರಂಗಕ್ಕೆ ಒಂದು ನಾಟಕವನ್ನು ತರಬೇಕಾದರೆ ಸಾಕಷ್ಟು ಪರಿಶ್ರಮ ಅತ್ಯಗತ್ಯ. ಈ ಎಲ್ಲವನ್ನು ಹೊಂದಿಸಿದ ಮೇಲೆ ಸಂಸ್ಥೆ ಎದುರಿಸುವ ಮತ್ತೊಂದು ಸಮಸ್ಯೆ ಅದಕ್ಕೆ ಒದಗಿಸಬೇಕಾದ ಖರ್ಚುವೆಚ್ಚ. ಈ ಎಲ್ಲ ತೊಡಕುಗಳನ್ನು ನಿಭಾಯಿಸಲು ನಮಗೆ ಬೆನ್ನೆಲುಬಾಗಿ ಆಶೀರ್ವದಿಸಿ ಸಹಕಾರ ನೀಡುತ್ತಿರುವವರು ನಮ್ಮ ಪೋಷಕ ಸದಸ್ಯ ಬಂಧುಗಳು ಮತ್ತು ಡಿ.ವಿ.ಎಸ್. ಆಡಳಿತ ಮಂಡಳಿ.


"ಅಭಿನಯ" 1972ರಲ್ಲಿ ಕೆ. ಎಸ್. ನಿಸಾರ್ ಅಹಮದ್‌ರ ನಿರ್ದೇಶನದಲ್ಲಿ ಲಂಕೇಶರ "ಟಿ. ಪ್ರಸನ್ನನ ಗೃಹಸ್ಥಾಶ್ರಮ" ನಾಟಕ ಪ್ರದರ್ಶಿಸಿತು. ನಂತರ ಶಿವಮೊಗ್ಗದ ಪ್ರೇಕ್ಷಕರಿಗೆ ಜಯತೀರ್ಥ ಜೋಷಿ ನಿರ್ದೇಶನದಲ್ಲಿ ಅಂಧಯುಗ, ಎನ್. ಆರ್. ಮಾಸೂರ್‌ರವರ ನಿರ್ದೇಶನದಲ್ಲಿ "ಸ್ವರ್ಗಕ್ಕೆ ಮೂರೇ ಬಾಗಿಲು" ಜಂಬೆಯವರ ನಿರ್ದೇಶನದಲ್ಲಿ ತಾಮ್ರಪತ್ರ, ಬಾದರಿದನ್ನಿಯವರಿಂದ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್ ಅಲ್ಲದೆ, ಕತ್ತಲೆ ಬೆಳಕು, ಮಾಡುಸಿಕ್ಕದಲ್ಲ, ತೋಘಲಕ್, ಸಾಯೋಆಟ, ಮೃಚ್ಛಕಟಿಕ ನಾಟಕಗಳನ್ನು ಪರಿಚಯಿಸಿತು.

ನಂತರ "ಅಭಿನಯ" ರಂಗಾಸಕ್ತ ಗೆಳೆಯರು ಒಟ್ಟುಗೂಡಿ ತಂಡಕ್ಕೆ ಬೇಕಾದ ಎಲ್ಲ ಪರಿಕರಗಳನ್ನು ಜೋಡಿಸಿಕೊಂಡರು. ಪ್ರದರ್ಶನಕ್ಕೆ ಬೇಕಾದ ಎಲ್ಲ ಪರಿಕರಗಳನ್ನು ಹೊಂದಿರುವ ಶಿವಮೊಗ್ಗದ ಏಕೈಕ ತಂಡ "ಅಭಿನಯ", ಶಿವಮೊಗ್ಗ ಕಲಾರಸಿಕರಿಗೆ ಒಥೆಲೋ, ಮ್ಯಾಕ್‌ಬೆತ್, ವೇಲಿಯಂಟ್, ವೆನಿಸಿನ ವರ್ತಕ, ಈಡಿಪಸ್, ಣುಜ ತಿಣ– ಟಿಜ ಜಿಂಡಿ ೀಡಿಛಜಛಿಜಜಣುಂಟಿ ಪ್ರಾಣಿ ಪ್ರಭುತ್ವದಂತಹ ಪಾಶ್ಚಾತ್ಯ ನಾಟಕಗಳನ್ನು ಪ್ರದರ್ಶಿಸಿದೆ. ಶ್ರೀ ಗುರುರಾವ್ ಬಾಪಟ್ ನಿರ್ದೇಶನದ 'ಹಯವದನ', ಶಿವಮೊಗ್ಗ ವೆಂಕಟೇಶ್ವರವರ "ಉದ್ಭವ" ಅಲ್ಲದೆ ಡಾ॥ ಸಿದ್ರಾಜ್, ಮೂರುಕಾಸಿನ ಆಟ, ಕೈಲಾಸಂ

ಸ್ಮರಣೆ ಈಗಲೂ ಹಿಂದಿನ ತಲೆಮಾರಿನ ಪ್ರೇಕ್ಷಕರಲ್ಲಿ ಹಚ್ಚಹಸಿರಾಗಿ ಉಳಿದಿರುವ ನಾಟಕಗಳು.

ಇತ್ತೀಚಿನ ದಿನಗಳಲ್ಲಿ "ಮೃಗತೃಷ್ಣ" ಹುಲಿಯ ನೆರಳು, 'ಸುಣ್ಣಹಚ್ಚಿದ ಸಮಾಧಿ' "ನಮ್ಮೊನಿಮ್ಮೊಳಗೊಬ್ಬ" ಮುಕ್ತದಾರ ನಾಟಕಗಳು "ಅಭಿನಯ"ಕ್ಕೆ ಹೆಸರು ತಂದು ಕೊಟ್ಟಿವೆ.

ಅಭಿನಯ ತಂಡ ನೂರಾರು ನಟರನ್ನು ಶಿವಮೊಗ್ಗ ರಂಗಭೂಮಿಗೆ ಒದಗಿಸಿಕೊಟ್ಟಿದೆ. ನೂರಾರು ಜನ "ಅಭಿನಯ"ದ ಏಳಿಗೆಗಾಗಿ ದುಡಿದಿದ್ದಾರೆ.



ನಾಟಕ: ಹುಲಿಯ ನೆರಳು, ನಿರ್ದೇಶನ: ಮಂಜುನಾಥ ಹೆಗಡೆ

## ಕಲಾವಿದರ ವಿವರ

ಎ.ಎಸ್.ಕೃಷ್ಣಮೂರ್ತಿ (ಕಿಟ್ಟಿ)
ಟಿ.ವಿ.ಹೆಗ್ಗಡೆ
ಮಂಜುನಾಥ್ ಕೂದುವಳ್ಳಿ (ಮಂಕು)
ಹೆಚ್.ಸಿ.ಸುರೇಶ್
ರಮಾನಾಥ ಗಿರಿಮಾಜಿ (ಮಟ್ಟಿ)
ಕೆ. ಎನ್. ಕಾಂತೇಶ್ ಮೂರ್ತಿ
ಪ್ರೊ. ಎಸ್. ಸಿ. ಗೌರಿಶಂಕರ್
ಚೇತನ್ ಕುಮಾರ್ ಸಿ.
ಸಿ. ಪಿ. ಶಿವಕುಮಾರಾಚಾರಿ
ಮಂಜುನಾಥ್ ಕೆ. ಪಿ.
ಸುಮಾ ಎನ್. ಕೆ.
ಮದನ್
ನಿರಂಜನ್
ತಬಲ ಮಂಜು
ದೇವರಾಜ್
ರಾಜೇಂದ್ರ ಬಾಬು ಎಸ್.ಕೆ.
ಶಶಿಕಿರಣ್

ಬಿ.ಎಂ.ಕುಮಾರಸ್ವಾಮಿ
ಮಹೇಶ
ಜಯಣ್ಣ
ಎಲ್.ಎಂ.ಎಲ್.ಶಾಸ್ತ್ರಿ
ಎನ್. ಕೆ. ಹಾಲೇಶ್
ಅಶೋಕ್ ಡಿ. ಸಿ.
ಮದನ್ ಬಿ. ಎಸ್.
ನಂದನ್
ನಿರಂಜನ್ ಉಪ್ಪಾರ
ರೇಣುಕಾ ಶಿವಶಂಕರ್
ನಾಗಶಯನ ಜಿ. ಎಸ್.
ಎಸ್. ಸ್ನೇಹಾರಾವ್
ಪ್ರಹ್ಲಾದ್ ದೀಕ್ಷಿತ್
ಮೋಹನ್
ಪ್ರತೀಕ್ ಸಿ.ಎಂ.
ಪ್ರಭಾಕರ ಕೆ.ವಿ.

## ಕಲಾಜ್ಯೋತಿ, ಶಿವಮೊಗ್ಗ

ಸಂಪರ್ಕ: ಹರಿಗೆ ಗೋಪಾಲಸ್ವಾಮಿ, ದೂ: 94482 01230

1976 ನವೆಂಬರ್ 1 ರಂದು ಉದಯಿಸಿದ ಸಮಾನ ಮನಸ್ಕರ ಒಂದು ಹವ್ಯಾಸಿ ನಾಟಕ ಸಂಸ್ಥೆ. ನಾಟಕ ರಂಗದ ಅನೇಕ ಮುಖಗಳು ಕಳೆದ 33 ವರ್ಷಗಳಿಂದ ಎಲೆ ಮರೆಯ ಕಾಯಿಯಂತೆ ರಂಗ ಚಟುವಟಿಕೆಗಳಲ್ಲಿ, ತೊಡಗಿಸಿಕೊಂಡು ರಾಜ್ಯದ ಹಾಗೂ ಜಿಲ್ಲಾ ಮಟ್ಟದ ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ, ಬಹುಮಾನಗಳನ್ನೂ ಗಳಿಸಿ ತನ್ನ ಛಾಪನ್ನು ಮೂಡಿಸಿದೆ. ರಂಗ ಸಂಘಟನೆಗೆ ಹೊಸ ಆಯಾಮವನ್ನು ನೀಡಿದ್ದು ಕಲಾ ಜ್ಯೋತಿಯ ಹೆಗ್ಗಳಿಕೆ.

**ಕಲಾಜ್ಯೋತಿ ಮಕ್ಕಳ ರಂಗ:**

ಮಕ್ಕಳ ಮಾನಸಿಕ ಅಭಿವೃದ್ಧಿಯ ರಂಗ ತಾಲೀಮಿನಿಂದ ಮಾತ್ರ ಸಾಧ್ಯ ಎನ್ನುವುದನ್ನು 25 ವರ್ಷಗಳ ಹಿಂದೆಯೇ ಮಕ್ಕಳ ರಂಗದ ಮೂಲಕ ಶಿವಮೊಗ್ಗ ಜಿಲ್ಲೆಗೆ ಪರಿಚಯಿಸಿದ ಹೆಮ್ಮೆಯ ಸಂಸ್ಥೆ ಕಲಾಜ್ಯೋತಿ. 1979 ರಿಂದ ಉಚಿತವಾಗಿ ಮಕ್ಕಳ ರಂಗ ತರಬೇತಿ ಶಿಬಿರ ಹಾಗೂ 5 ವರ್ಷಗಳ ಕಾಲ ಮಕ್ಕಳ ನಾಟಕೋತ್ಸವ ನಡೆಸಿ ಮಕ್ಕಳಲ್ಲಿ ರಂಗಭೂಮಿಯ ಬಗ್ಗೆ ಅರಿವು ಮೂಡಿಸಿದ ಹೆಮ್ಮೆ ನಮ್ಮದು. ಬಹಳ ಹಿಂದೆಯೇ ಬೆಂಗಳೂರಿನ ಬಾಲಭವನದಲ್ಲಿ ಹಾಗೂ ರವೀಂದ್ರ ಕಲಾಕ್ಷೇತ್ರದಲ್ಲಿ ಮಕ್ಕಳು ಹಾಗೂ ಹಿರಿಯರ ನಾಟಕಗಳನ್ನು ಪ್ರದರ್ಶಿಸಿ ಹೆಸರು ಗಳಿಸಿದ ತಂಡ.

ಅನೇಕ ಪ್ರತಿಭಾವಂತ ಕಲಾವಿದರಿಗೆ ನಿರ್ದೇಶನದ ಅವಕಾಶಗಳನ್ನು ಕೊಟ್ಟು ತನ್ಮೂಲಕ ಅವರ ಪ್ರತಿಭೆಯನ್ನು ಹೊರತರಲು ಶ್ರಮಿಸಿರುವ ಕಲಾಜ್ಯೋತಿ, ಉಡುಪಿ, ಬೈಂದೂರು, ಜೋಗ, ಗಂಗೊಳ್ಳಿ ಹಾಗೂ ಶಿವಮೊಗ್ಗ ರಂಗ ಸಂಸ್ಥೆಗಳು ನಡೆಸಿದ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಅತೀ ಹೆಚ್ಚು ಬಹುಮಾನಗಳನ್ನು ತನ್ನ ಮಡಿಲಿಗೆ ಏರಿಸಿಕೊಂಡು ಜಿಲ್ಲೆಯ ಗರಿಯನ್ನು ರಾಜ್ಯಮಟ್ಟದಲ್ಲಿಯೂ ಕೂಡಾ ಬಿಂಬಿಸಿದೆ.

2010ರಲ್ಲಿ ತಂಡವು ತನ್ನ 35ನೇ ವರ್ಷದ ಸಂಭ್ರಮದ ಸಂದರ್ಭದಲ್ಲಿ ಹತ್ತು ದಿನಗಳ ನಾಟಕೋತ್ಸವ ಮಾಡಿದ್ದು, ತಂಡದ ಹೆಗ್ಗಳಿಕೆ.




ನಾಟಕ: ಡೂಬಾಯ್ ಪಾದ್ರಿಯ ಒಂದು ಪತ್ರ, ನಿರ್ದೇಶನ: ಮಧುಸೂದನ ಜೆ.ಘಾಟೆ

**ಸಂಸ್ಥೆಯ ಬಹುಮಾನಿತ ನಾಟಕಗಳು :**

ಅದ್ರೇಶಿ ಪರದೇಶಿ ಆದ, ಪರಹಿತಪಾಶಾಣ, ರಾವಿನದಿಯ ದಂಡೆಯಲ್ಲಿ, ಡುಬಾಯಿಪಾದ್ರಿಯ ಒಂದು ಪತ್ರ, ಈ ಮುಖದವರು, ಹುಲಿಯ ನೆರಳು, ಒಂದು ಆಕಸ್ಮಿಕ ಸಾವು, '36ರಲ್ಲ 63', 'ಮಿತ್ರ ಲಾಭ' ಮತ್ತು ಶಾಲಭಂಜಿಕೆ ಐತಿಹಾಸಿಕ ನಾಟಕ, ಬಿಂಬ ಮುಂತಾದ ಪ್ರಶಸ್ತಿ ಪಡೆದ ನಾಟಕಗಳು. ಹಾಗೂ ಇದಲ್ಲದೆ ಇನ್ನು ಅನೇಕ ನಾಟಕಗಳನ್ನು ಪ್ರದರ್ಶಿಸಿ ಹೆಸರುವಾಸಿಯಾಗಿದೆ.

**ಕಲಾವಿದರ ವಿವರ**

| | |
|---|---|
| ಹರಿಗೆ ಗೋಪಾಲಸ್ವಾಮಿ | ಅನಂತರಾಮ ಅಯ್ಯಂಗಾರ್ |
| ಬಾಲಚಂದ್ರ ಬಿ. ಎಸ್. | ಶಾಂಭವಿ |
| ರಮೇಶ್ ಜೋಯ್ಸ್ | ರೂಪಾ |
| ವಾಸುದೇವ (ವಿಕ್ರಂ) | ರೇಖಾ |
| ಮಧುಸೂಧನ ಜೆ. ಘಾಟೆ | ಅರವಿಂದ ಹೊಳ್ಳ |
| ಸುಧೀಂದ್ರ ಎನ್. ಎಸ್. | ಗೋಪಾಲಕೃಷ್ಣ ಕೋಗಿಲೆ |
| ಕೃಷ್ಣರಾವ್ ಎನ್. ಎಸ್. | ಮಧು ವಿ. ಡಿ. |
| ಶ್ರೀಧರ ಖು. | ರವಿ ವಿ. ಡಿ. |

| | |
|---|---|
| ನಂದಿನಿ (ಪುಟ್ಟಿ) | ಕೃಷ್ಣಪ್ರಸಾದ್ |
| ಪ್ರಕಾಶ್ ಬಿ. ಎನ್. | ವೇಣುಗೋಪಾಲ |
| ಪ್ರಸಾದ್ ಬಿ. ಎನ್. | ಶ್ರೀನಿವಾಸ ಎಸ್. ಆರ್. |
| ವಿಶ್ವನಾಥ | ಜ್ಯೋತಿ |
| ರಮಾನಂದ | ಕುಸುಮ |
| ಮನೋಹರ | ಲತಾ |
| ಮಂಜುನಾಥ | ವಿನುತಾ |
| ವಿದ್ಯಾಶಂಕರ | ವಾಸುಕಿ |
| ಮಂಗಳ | ಮಂಜುನಾಥ |
| ದಯಾಳು | ಅರವಿಂದ |
| ಪ್ರಸಾದ್ | ನಿರಂಜನ |
| ಬದರಿನಾಥ್ | ನಾಗಭೂಷಣ |
| ಪ್ರಸಾದಿ | ಬಂಡಿಸೂರಿ |
| ಶ್ರೀವತ್ಸ ಅಯ್ಯಂಗಾರ್ | ಶಂಕರಮೂರ್ತಿ |
| ಸೂರ್ಯನಾರಾಯಣ | ಮನೋಹರ |
| ಶಿವಸ್ವಾಮಿ | ಮೈನಾ ಸುಬ್ರಮಣ್ಯ |
| ಧರ್ಮರಾವ್ | ಸಂಗೀತ |
| ಸೂರಿ | ನಾಗೇಶ್ ಭಟ್ |
| ನರಸಿಂಹಮೂರ್ತಿ | ನಟರಾಜ |
| ರಾಜು ಅಲ್ಸೆ | ಪ್ರಮೋದ್ |
| ವಿಜಯಕುಮಾರ್ | ಕಾಶಿನಾಥ |
| ಜಯಶ್ರೀ | ಕುಮಾರ |
| ಶ್ರೀಷನಾರಾಯಣ | ಚಂದ್ರಶೇಖರ |
| ಕಲ್ಪನಾ | ಮಂಜುಳ |
| ಎಸ್. ಎಂ. ದತ್ತಾತ್ರಿ | ಪ್ರತಿಭಾ |
| ಮಂಜು ಹೆಗಡೆ | ರಾಜಕುಮಾರ್ |
| ರಂಗಸ್ವಾಮಿ | ವೇಣುಗೋಪಾಲ ಎನ್. ಹೆಚ್. |
| ಅಮರಬಾಬು | ಶಾಂತ |
| ಚನ್ನಬಸಪ್ಪ | ವಾಣಿ |
| ಶ್ರೀಪಾದರಾವ್ | ಪದ್ಮಿನಿ |
| ವಸಂತಕುಮಾರ | ವೀಣಾ |
| ಕೃಷ್ಣರಾವ್ ಅರಳಿಕಟ್ಟೆ | ಪ್ರಕಾಶ್ ಎನ್. ಆರ್. |

ವಿಜಯಲಕ್ಷ್ಮಿ
ಸುರೇಶ್
ಸಂಜಯ
ಉದಯಭಾಸ್ಕರ
ಸುಬ್ರಮಣ್ಯ
ಪ್ರಕಾಶ್ ಕಮ್ಮರಡಿ
ನಾಗರಾಜ
ನರಸಿಂಹಮೂರ್ತಿ
ಹೇಮಾ ರವಿ
ಸುಬ್ರಮಣ್ಯ

ಚೇತನಾ ಎ.
ಅನಸೂಯ
ವಿನುತಾ
ಜಯಶ್ರೀ
ಮನೋರಮಾ
ಇಂದುಮತಿ ಶ್ರೀಧರ್
ಕಾವ್ಯ
ಪ್ರವೀಣ್
ಅನುಪಮ
ಉಮಾ

* * * *



ಮಂಡಗದ್ದೆ ಪಕ್ಷಿಧಾಮ

## ಸಮುದಾಯ

ಸಂಪರ್ಕ: ಕೆ. ಲಕ್ಷ್ಮೀನಾರಾಯಣರಾವ್ ಮೊ: 9901239869



1979ರಲ್ಲಿ ಶಿವಮೊಗ್ಗ ಘಟಕದ ಸ್ಥಾಪನೆಯೊಂದಿಗೆ ಮೊತ್ತಮೊದಲ ಬಾರಿಗೆ ಮೂರು ತುಣುಕುಗಳು ಎಂಬ ನಾಟಕದ ಅರ್ಪಣೆ. ಹಾಗೆಯೇ ಶಿವಮೊಗ್ಗದ ಜನತೆಗೆ ಮೊದಲಬಾರಿಗೆ ಬೀದಿನಾಟಕಗಳ ಪರಿಚಯ ಮಾಡುವುದರೊಂದಿಗೆ ಆರಂಭವಾದ ತಂಡವು, ರಾಜ್ಯದ ವಿವಿಧ ಭಾಗಗಳಿಂದ ನಾಟಕ ತಂಡಗಳನ್ನು ಆಹ್ವಾನಿಸಿ ಶಿವಮೊಗ್ಗದ ಜನತೆಗೆ ವಿವಿಧ ನಾಟಕಗಳನ್ನು ಪ್ರಸ್ತುತ ಪಡಿಸಿದೆ.

ತಂಡವು ಇದುವರೆಗೆ ಪುರೂರವ ಊರ್ವಶಿ, ಉರುಳು, ಖರೆ, ಚರಣದಾಸನೆಂಬ ಕಳ್ಳ, ರಿಂಗಿನಾಟ, ಪಾಪು ಬಾಪುವಾದ ಕಥೆ, ಮನಸುಖರಾಯನ ಮನಸ್ಸು, ಹಕ್ಕಿಯ ಹಾಡು, ಬೆಳಕಿನ ಕಡೆಗೆ, ಬೆಳಕು ಹಂಚಿದ ಬಾಲಕ, ಎತ್ತಿಗೆ ನ್ಯಾಯ, ಉಷಾಹರಣ, ಪಂಜರಶಾಲೆ, ಯಯಾತಿ, ಮಕ್ಕಳ ರವೀಂದ್ರ, ಸತ್ತು ಅಂದ್ರೆ ಸಾಯ್ತಾರೆ, ಕನಸುಗಳು, ಕಿಟ್ಟಿಕತೆ, ಮಿಸ್ಟೇಕ್, ಕುಲಂ ಇತ್ಯಾದಿ ನಾಟಕಗಳನ್ನು ಪ್ರಸ್ತುತಪಡಿಸಿದೆ.


ಇದಲ್ಲದೆ ಭಗತ್‌ಸಿಂಗ್, ಚಂದ್ರಶೇಖರ ಆಜಾದ್‌ರ ಜನ್ಮಶತಾಬ್ಧಿ, 1857ರ ವಿಪ್ಲವಕ್ಕೆ 150 ವರ್ಷ, ರವೀಂದ್ರನಾಥ್ ಟಾಗೂರ್‌ರವರ 150ನೇ ಹುಟ್ಟುವರ್ಷದ ಆಚರಣೆ ಮತ್ತು ಸ್ನೇಹ ಮಿಲನ ಎಂಬ ಅಸ್ಪೃಶ್ಯತೆ ವಿರುದ್ಧ ಜಾಥಾ ನಡೆಸಿದೆ.

ಹೀಗೆ ರಂಗಭೂಮಿ ಸೇವೆಯಲ್ಲಿ ತನ್ನದೇ ಆದ ಕೊಡುಗೆಯನ್ನು ತಂಡವು ನೀಡುತ್ತಾ ಬಂದಿದೆ.

## ಸಹ್ಯಾದ್ರಿ ರಂಗ ತರಂಗ (ರಿ.), ಶಿವಮೊಗ್ಗ

ಸಂಪರ್ಕ: ಕಾಂತೇಶ್ ಕದರಮಂಡಲಗಿ, ದೂ: 94484 14752

ಸಹ್ಯಾದ್ರಿ ರಂಗ ತರಂಗ, ಶಿವಮೊಗ್ಗ ಇದಕ್ಕೀಗ 25ರ ಪ್ರಾಯ. ತಂಡವು ತನ್ನ ಇತಿಮಿತಿಯಲ್ಲಿ ಪ್ರತಿವರ್ಷ ಎರಡು ಹೊಸ ನಾಟಕಗಳನ್ನು ಕೊಡಲು ಪ್ರಯತ್ನಿಸಿ ಸಾಕಷ್ಟು ಯಶಸ್ವಿಯಾಗಿದೆ. ಆ ಯಶಸ್ಸಿಗೆ ಮುಖ್ಯ ಕಾರಣ ತಮ್ಮ ಸಹಕಾರ. ನಿಮ್ಮ ಆಶೀರ್ವಾದವೇ ನಮಗೆ ಶ್ರೀ ರಕ್ಷೆ. ಜುಲೈ 1986ರಲ್ಲಿ "ಅನ್ವೇಷಕರು" ನಾಟಕದ ಮೂಲಕ ಪ್ರಾರಂಭಿಸಿ ರಂಗಭೂಮಿಯಲ್ಲಿ ಒಂದು ರೀತಿಯಲ್ಲಿ ಅನ್ವೇಷಣಾ ಕೆಲಸವನ್ನು ತಂಡ ಮಾಡುತ್ತಿದೆ. ತಂಡದಲ್ಲಿ ಕಾರ್ಮಿಕರಿಂದ ಹಿಡಿದು ವಿದ್ಯಾವಂತ, ಧೀಮಂತರು, ನಟನೆ, ಸಂಗೀತ, ಪ್ರಸಾಧನ ಮತ್ತು ಹಿನ್ನೆಲೆಯಲ್ಲಿನ ಎಲ್ಲಾ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಎಲ್ಲರೂ ಈ ಸಂದರ್ಭದಲ್ಲಿ ಸ್ಮರಣಾರ್ಹರು. ಜುಲೈ 2010-11ರ ವರ್ಷ ತಂಡಕ್ಕೆ 25ನೇ ವರ್ಷವಾಗಿದ್ದೂ, ಮುಂದೆ ಕ್ರಿಯಾಶೀಲ, ಸೃಜನಾತ್ಮಕ ಕೆಲಸಗಳನ್ನು ಮಾಡುತ್ತೇವೆ. ಮನೋರಂಜನೆಯ ಜೊತೆಗೆ ಸಾಮಾಜಿಕ ಕಳಕಳಿಯ



ನಾಟಕ: ಇತಿಹಾಸ ಚಕ್ರ, ನಿರ್ದೇಶನ: ಕಾಂತೇಶ್ ಕದರಮಂಡಲಗಿ

ಕೆಲಸಗಳು ರಂಗಭೂಮಿಯ ಜವಾಬ್ದಾರಿ ಎಂಬುದು ನಮ್ಮ ನಂಬಿಕೆ. ಹಾವು ಹರಿದಾಡ್ತಾವ, ಚೋರಪುರಾಣ, ಸಿರಿಸಂಪಿಗೆ ಮುಂತಾದ ಸಂಗೀತ ಪ್ರಧಾನ ನಾಟಕಗಳ ಜೊತೆಗೇ ಸೂರ್ಯಶಿಕಾರಿ, ಶೋಕಚಕ್ರ, ಇತಿಹಾಸ ಚಕ್ರ, ರಾವಿ ನದಿಯ ದಂಡೆಯಲ್ಲಿ, ಸಂಕ್ರಾಂತಿ ಮುಂತಾದ ವಿಚಾರ ಪ್ರಚೋದಕ ನಾಟಕಗಳನ್ನು ತಂಡ ತಮ್ಮ ಮುಂದೆ ತಂದಿದೆ. ಟಿಂಗರ ಬುಡ್ಡಣ್ಣ, ದಿಂಡಿ, ವಿಧೂಷಕ, ಕೊಡೆ, ಜಾಳೀಶ.... ಮುಂತಾದ ಅಸಂಗತ ನಾಟಕಗಳೂ ನಮ್ಮಿಂದ ಪ್ರದರ್ಶನಗೊಂಡಿದೆ. "ದಿ ಪೈ ಅಂಡ್ ದಿ ಟಾರ್ಟ್" ಎಂಬ ಇಂಗ್ಲೀಷ್ ನಾಟಕವನ್ನು ನಮ್ಮ ತಂಡ ನೀಡಿದೆ. 25ನೇ ವರ್ಷದಲ್ಲಿ ಇನ್ನೂ ಒಂದಿಷ್ಟು ವಿನೂತನ ಕಾರ್ಯಕ್ರಮಗಳಲ್ಲಿ ತೊಡಗುವ ಪ್ರಯತ್ನದಲ್ಲಿದ್ದೇವೆ.

## ಕಲಾವಿದರ ವಿವರ


1. ಕಾಂತೇಶ ಕದರಮಂಡಲಗಿ
2. ಬಿ. ವಿ. ತಿಪ್ಪಣ್ಣ
3. ಡಾ॥ ಹೆಚ್. ಎಸ್. ನಾಗಭೂಷಣ
4. ಹೆಚ್. ಎಸ್. ಸುರೇಶ್
5. ದಾಸಪ್ಪ ಎಂ. ಜಿ.
6. ಯುವರಾಜ್ ಕೆ.
7. ಪ್ರಕಾಶ್ ಹಯವದನ
8. ಅಜಯ ಸಿಂಹ ಕೆ. ವಿ.
9. ಶ್ರೀಧರ್‌ಬಾಬು
10. ಪ್ರದೀಶಕುಮಾರ್ ಎ.
11. ಅಪರ್ಣ ಅಜಯ ಸಿಂಹ
12. ಗೌರಿ
13. ನಾಗರಾಜ ಎಸ್. ಸಿ.
14. ಆನಿಸ್
15. ಮೊಹಮ್ಮದ್ ಶಾಬುದ್ದೀನ್
16. ಅವಿನಾಶ ಬಿ. ಎನ್. ಶೆಟ್ಟಿ
17. ಶ್ರೀಧರ
18. ಎಸ್. ಆರ್. ವಿಜಯಲಕ್ಷ್ಮಿ
19. ನಂದಿನಿ ಎಂ. ಟಿ.
20. ಮಧುರ
21. ಭವಾನಿ ಶಂಕರ್ ತಂತ್ರಿ
22. ಬಿ. ಆರ್. ಚಂದ್ರಯ್ಯ
23. ಪ್ರಕಾಶ್‌ರಾವ್
24. ಶ್ರೀಕಂಠಪ್ರಸಾದ್ ಎಸ್. ಪಿ.
25. ಎನ್. ಡಿ. ಶೇಷಗಿರಿರಾವ್
26. ಅಬ್ಬಾಸ್ ಅಬ್ಬಲಗೆರೆ
27. ವಿಜಯಶ್ರೀ
28. ರವಿಶಂಕರ್ ಡಿ. ಎಸ್.
29. ಶ್ರೀಮತಿ ಸುಧಾ
30. ಸುಷ್ಮಾ ಭಾರಧ್ವಾಜ್
31. ಪ್ರಮೋದ್ ಶಶಾಂಕ ಎನ್.
32. ಹೇಮ ರಾಜಗೋಪಾಲ
33. ಶ್ರೀ ಹರ್ಷ ಜಿ. ಗೋ ಭಟ್ಟ
34. ವಿಶಾಲ ಹೆಚ್. ವಿ.
35. ಇಮ್ರಾನ್
36. ಪ್ರವೀಣ ಎಸ್.
37. ಸಾತ್ವಿಕ್ ಹೆಬ್ಬಾರ್
38. ನಾಗೇಶ ಎನ್. ಎಸ್.
39. ಸುರೇಖಾ
40. ರಮ್ಯಾ ಪಾಟೀಲ್
41. ವಿಶಾಲಾಕ್ಷಿ ಹಂದೆ
42. ತೇಜಸ್ವಿನಿ

43. ನೃತ್ಯ
44. ಪ್ರೊ. ಸೋಮಶೇಖರ್
45. ಗಣೇಶ
46. ಕು. ಶಮಾ
47. ರಾಮಚಂದ್ರ ಉಬ್ರಾಣಿ
48. ಹು. ಮ. ಸತೀಶ್
49. ಕೊಲ್ಲಪ್ಪ
50. ವಿದ್ಯಾ
51. ಮಂಜಪ್ಪ (ಕೆ.ಇ.ಬಿ.)
52. ಚಂದ್ರಿಕಾ ಮೂರ್ತಿ
53. ಶ್ರೀಮತಿ ನಾದ ಪ್ರಕಾಶ್
54. ಐತಾಳ್
55. ನಾರಾಯಣಮೂರ್ತಿ
56. ಬಾಲಕೃಷ್ಣ ಹೆಗ್ಡೆ
57. ಶೃತಿ ಶೆಟ್ಟಿ
58. ಡೆವಿಡ್
59. ಅಶೋಕ (ಕೆ.ಜಿ.ಐ.ಡಿ.)
60. ಕೃಷ್ಣಮೂರ್ತಿ

## ರಂಗಪ್ರಯೋಗ (ರಿ.)

ಸಂಪರ್ಕ: ಹೊ. ನ. ಸತ್ಯ, ಮೊ: 9986145698

ತಂಡವು 1987ರಲ್ಲಿ ಸ್ಥಾಪನೆಗೊಂಡಿದ್ದು, ಆಗಿನಿಂದಲೂ ಹಲವಾರು ರಂಗಪ್ರಯೋಗಗಳನ್ನು ನೀಡುವುದರ ಜೊತೆಗೆ ಹೊಸ ಹೊಸ ಕಲಾವಿದರನ್ನು ರಂಗಭೂಮಿಗೆ ಪರಿಚಯಿಸುತ್ತಾ, ಪ್ರೋತ್ಸಾಹಿಸುತ್ತಾ ಬಂದಿದೆ. ಹಾಗೆಯೇ ರಾಜ್ಯದ ವಿವಿಧ ಭಾಗಗಳಲ್ಲಿ ನಾಟಕಗಳ ಪ್ರದರ್ಶನ ನೀಡಿ, ಹಲಾವರು ರಾಜ್ಯಮಟ್ಟದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿರುತ್ತದೆ.



ನಾಟಕ: ಅದ್ರೇಶಿ ಪರದೇಶಿ ಆದ, ನಿರ್ದೇಶನ: ಹೊ.ನ. ಸತ್ಯ

ತಂಡದಲ್ಲಿ ಚಲನಚಿತ್ರ ನಟ ಎಸ್. ದೊಡ್ಡಣ್ಣ, ಹಂಸಲೇಖ, ಶಾಂತಾರಾಮ್, ಹೊ.ನ. ಸತ್ಯ, ಎಂ.ಎ. ಪದ್ಮನಾಭ್, ಪಿ.ಎಸ್. ಹಾಲಸ್ವಾಮಿ, ವಿಕ್ರಮ್, ನಿರ್ಮಲಾಮೂರ್ತಿ, ಶಾಂತಾ ಶೆಟ್ಟಿ, ಉಮಾ ದಿಲೀಪ್, ಸುಮಾ, ಬಾಬು ಸೇರಿದಂತೆ ಹಲವಾರು ಕಲಾವಿದರು ತಂಡದ ಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದಾರೆ.

ತಂಡವು ಇದುವರೆಗೆ ಜೋಕುಮಾರಸ್ವಾಮಿ, ಸಂಗ್ಯಾಬಾಳ್ಯಾ, ಜೈಸಿದ ನಾಯಕ, ರಾಮಜಾಣ ಭೀಮಜಾಣ, ಸಾವಂತ್ರಿ, ಅದ್ರೇಶಿ ಪರದೇಶಿ ಆದ, ರಕ್ತಾಕ್ಷಿ, ಜಲಗಾರ, ಬಾರೋ ಬಾರೋ ಬಸವಣ್ಣ, ಬೆನವ ಎಲ್ಲಿರುವೆ? (ಮಕ್ಕಳ ನಾಟಕ) ಬಯಲು ಸೀಮೆ ಕಟ್ಟೆ ಪುರಾಣ, ಕಿಂದರಜೋಗಿ ಮೊದಲಾದ ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸಿರುತ್ತದೆ.

ವಿಶೇಷವಾಗಿ ಅದ್ರೇಶಿ ಪರದೇಶಿ ಆದ ನಾಟಕವನ್ನು ಅತಿ ಹೆಚ್ಚು ಬಾರಿ ಪ್ರದರ್ಶನ ಮಾಡಿದ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಅಲ್ಲದೆ, 2001ರಲ್ಲಿ ರಂಗಶತಕ ಎಂಬ ಯೋಜನೆಯಡಿ 100 ಮಕ್ಕಳ ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶನ ಮಾಡಿದೆ.


## ಹೊಂಗಿರಣ (ರಿ.), ಶಿವಮೊಗ್ಗ

ಸಂಪರ್ಕ: ಡಾ.ಸತೀಶ್ ಸಾಸ್ವೆಹಳ್ಳಿ, ದೂ: 98443 67071

ನಮ್ಮ ಸಂಸ್ಥೆಯು ಸುಮಾರು 15 ವರ್ಷಗಳಿಂದ ರಂಗಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದು, ನೂರಾರು ನಾಟಕಗಳನ್ನು ಪ್ರದರ್ಶಿಸಿದೆ. ಯುವ ನಟ-ನಿರ್ದೇಶಕರನ್ನು ಪರಿಚಯಿಸಿದೆ. ಜಿಲ್ಲಾ ಮಟ್ಟದಿಂದ ರಾಜ್ಯ ಮಟ್ಟದವರೆಗಿನ ನಾಟಕೋತ್ಸವ, ಕಲಾಪ್ರತಿಭೋತ್ಸವ, ಯುವಜನೋತ್ಸವ, ಪ್ರತಿಭಾ ಕಾರಂಜಿ ಸೇರಿದಂತೆ ಇನ್ನೂ ಮುಂತಾದ ಉತ್ಸವಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದುಕೊಂಡಿದೆ.

ಇದೀಗ ತನ್ನ ವ್ಯಾಪ್ತಿಯನ್ನು ರಾಷ್ಟ್ರಮಟ್ಟದವರೆಗೂ ಹಬ್ಬಿಸಿಕೊಂಡಿದೆ. ತಂಡವು ನುರಿತ ಅನುಭವಿಗಳು, ತಂತ್ರಜ್ಞರು, ಕಲಾ ಪೋಷಕರನ್ನು ಒಳಗೊಂಡಿದೆ.

ಹೊಂಗಿರಣ ಸಂಸ್ಥೆಯು ರಂಗಭೂಮಿಯಲ್ಲದೇ ಸಾಕ್ಷ್ಯಚಿತ್ರ ನಿರ್ಮಾಣ, ಸಂಗೀತ, ನೃತ್ಯ, ಪುಸ್ತಕ ಪ್ರಕಾಶನ ಹೀಗೆ ಇತರೇ ಕ್ಷೇತ್ರಗಳ ಕಡೆಯೂ ಗಮನಹರಿಸುವ ಆಲೋಚನೆಯಲ್ಲಿದೆ.



ನಾಟಕ: ಕುಣಿ ಕುಣಿ ನವಿಲೇ, ನಿರ್ದೇಶನ: ಡಾ.ಸತೀಶ್ ಸಾಸ್ವೆಹಳ್ಳಿ

## ಕಲಾವಿದರ ವಿವರ

1. ಡಾ॥ ಸಾಸ್ವೆಹಳ್ಳಿ ಸತೀಶ್
2. ಹೆಚ್. ಟಿ. ಕೃಷ್ಣಮೂರ್ತಿ
3. ಮೋಹನ್
4. ಬಿ. ಚಂದ್ರೇಗೌಡ
5. ಚಂದ್ರಶೇಖರ್ ಹಿರೇಗೋಣಿಗೇರೆ
6. ನೌಶದ್ ಹರ್ಲಾಪುರ್
7. ಮೇಘನಾ
8. ರಕ್ಷಿತ್ ಹೆಚ್.ಸಿ.
9. ಹರ್ಷ
10. ಮಂಜುನಾಥ್
11. ರಾಘವೇಂದ್ರ ಹೊಳ್ಳೇರ
12. ಅಭಿಷೇಕ್ ಎನ್.
13. ಪ್ರಹ್ಲಾದ್ ನಾಯಕ್
14. ಅನಿಲ್‌ಕುಮಾರ್
15. ಅರುಣ್‌ಕುಮಾರ್
16. ಡಾ॥ ವತ್ಸಲಾ
17. ಸಿ. ಎಸ್. ಚಿಕ್ಕಮಠ್
18. ಸತೀಶ್
19. ಅಣ್ಣಪ್ಪ ಒಂಟಿಮಾಳಗಿ
20. ಹುಮಾಯೂನ್ ಹರ್ಲಾಪುರ್
21. ನಿಶಾದ್ ಹರ್ಲಾಪುರ್
22. ಸುರೇಂದ್ರ ಕೆ. ಎನ್.
23. ದರ್ಶನ್
24. ಅಜಯ್‌ಗೌಡ
25. ಸುಬ್ರಹ್ಮಣ್ಯ
26. ಕನಕದಾಸ್ ಮಹಾರಾಜ್
27. ಧನಶೇಖರಯ್ಯ ವಿ. ಎಮ್.
28. ರಮೇಶ್
29. ಹಾಲೇಶಪ್ಪ
30. ಉಮೇಶ್‌ನಾಯ್ಕ

## ಸೃಷ್ಟಿ ಸಾಂಸ್ಕೃತಿಕ ವೇದಿಕೆ, ಶಿವಮೊಗ್ಗ

ಸಂಪರ್ಕ: ಕಲೀಮುಲ್ಲಾ, ದೂ: 94482 44184

1999ರಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆಂದೇ ಸ್ಥಾಪಿತವಾದ ಈ ವೇದಿಕೆಯು ನಂತರ ವಿವಿಧ ರಂಗಾಸಕ್ತರೊಂದಿಗೆ ಬೆರೆತು ಬೆಳೆದು ನಿಂತಿದೆ ಇದನ್ನು ಸ್ಥಾಪಿಸಿದ್ದು ಚನ್ನಯ್ಯ ಬಿ. ಮಾರವಳ್ಳಿ ಇತಿಹಾಸ ಉಪನ್ಯಾಸಕರು, ಶಿವಮೊಗ್ಗ. ಇದುವರೆಗೂ ರಾಜ್ಯ ಮತ್ತು ಮುಂಬೈನಲ್ಲಿ ಹಲವಾರು ನಾಟಕಗಳನ್ನಾಡಿ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿಗಳನ್ನು ಪಡೆದುಕೊಂಡಿದೆ.



ನಾಟಕ: ಮಾಯಾಮೃಗ, ನಿರ್ದೇಶನ: ಡಿ.ಎಂ.ರಾಜ್‌ಕುಮಾರ್

## ಕಲಾವಿದರ ವಿವರ

1. ಕಲೀಮುಲ್ಲಾ
2. ಪ್ರಕಾಶ್ ಎನ್.ಜೆ.
3. ಸುರೇಶ್ ಎಚ್.ಆರ್.
4. ಎಸ್. ಬಿ. ಕಬೀರ್,
5. ದಾಮೋದರರಾವ್‌ಗಾಂವ್‌ಕರ್
6. ಈರನಗೌಡ,
7. ಮಲ್ಲಯ್ಯ ಮಾರವಳ್ಳಿ
8. ಶಿವಕುಮಾರಯ್ಯ ಮಾರವಳ್ಳಿ
9. ಮಂಜುಳಾ,
10. ಸುದೀಪ ಬಿ. ಎಮ್.
11. ಬಸವರಾಜ ಬಿ.
12. ಚನ್ನಯ್ಯ ಬಿ. ಮಾರವಳ್ಳಿ
13. ವಿರೇಶ್ ಎಸ್.
14. ಕುಟ್ರಿ ಜಿ. ಎಫ್. ಸೂಫಿ ಕೆ., ಸಾಹಿತ್ಯ
15. ಲಕ್ಷ್ಮಣ ಎ. ಟಿ.
16. ಸಂಕೇತ ಬಿ. ಎಮ್.
17. ಶಿವಕುಮಾರ ತಾಶಿಲ್ದಾರ್
18. ನಾಗರತ್ನ ಟಿ. ಜೆ.
19. ಶಿವಕುಮಾರ ಬಿ.
20. ಡಾ॥ ನುಸ್ರತ್ ಬೇಗಂ
21. ಡಾ॥ ಶೈಲಜಾ ಹೊಸಳ್ಳೇರ್

* * * * *

## ನಮ್‌ಟೀಮ್ - ಶಿವಮೊಗ್ಗ

**ಸಂಪರ್ಕ: ಹೊನ್ನಾಳಿ ಚಂದ್ರಶೇಖರ್, ದೂ: 98445 18866**

ನಮ್‌ಟೀಮ್ ಪ್ರಸ್ತಾಪವಿಲ್ಲದೆ ಶಿವಮೊಗ್ಗ ಜಿಲ್ಲೆಯ ರಂಗ ಚಟುವಟಿಕೆ ಕುರಿತು ಮಾತಾಡಲು ಸಾಧ್ಯವಿಲ್ಲ. ಏಕೆಂದರೆ ಕಳೆದ 10 ವರ್ಷದಲ್ಲಿ ನಮ್‌ಟೀಮ್ ಈ ಕ್ಷೇತ್ರದಲ್ಲಿ ಮಾಡಿರುವ ಸಾಧನೆ ನಿರ್ಲಕ್ಷಿಸಲು ಸಾಧ್ಯವಿಲ್ಲ. ಹಲವು ವಿನೂತನ ಪ್ರಯೋಗಗಳನ್ನು ನಮ್‌ಟೀಮ್ ಪ್ರೇಕ್ಷಕರಿಗೆ ನೀಡಿದೆ. ಅಲ್ಲದೆ ನಾಡಿನ ಖ್ಯಾತ ರಂಗ ತಂಡಗಳನ್ನು ಶಿವಮೊಗ್ಗಕ್ಕೆ ಆಹ್ವಾನಿಸಿ ನಾಟಕಗಳನ್ನು ಆಯೋಜಿಸಿದೆ. ಹಲವು ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದಿದೆ. ನಮ್‌ಟೀಮ್ ನಾಟಕಗಳು ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೇರಿದಂತೆ ಹಲವು ಸಂಸ್ಥೆಗಳು ಆಯೋಜಿಸಿದ್ದ ಉತ್ಸವಗಳಲ್ಲಿ ನಾಟಕಗಳನ್ನು ಪ್ರದರ್ಶಿಸಿದೆ. ಶಿವಮೊಗ್ಗದಲ್ಲಿ ಹಲವು ರಂಗೋತ್ಸವಗಳನ್ನು ನಮ್‌ಟೀಮ್ ಆಯೋಜಿಸಿದೆ. ರಂಗಸುಗ್ಗಿ, ರಂಗರಂಗು, ಚಳಿಗಾಲದ ನಾಟಕೋತ್ಸವ, ನೀನಾಸಂ ನಾಟಕೋತ್ಸವ ಸೇರಿದಂತೆ ಹಲವು ಉತ್ಸವಗಳು ನಮ್‌ಟೀಮ್ ಖ್ಯಾತಿಗೆ ಸೇರಿವೆ.

ಸ್ವಂತ ಪ್ರಯೋಗಗಳಷ್ಟೇ ಅಲ್ಲದೆ ನಾಡಿನ ಖ್ಯಾತ ರಂಗ ತಂಡಗಳ 43 ನಾಟಕಗಳನ್ನು ಶಿವಮೊಗ್ಗದ ಪ್ರೇಕ್ಷಕರಿಗೆ ನೀಡಿದೆ. ನೀನಾಸಂ, ನೇಪಥ್ಯ, ಪ್ರೋಥಿಯೂ, ಚಿಣ್ಣಬಣ್ಣ, ಕಿನ್ನರ ಮೇಳ, ಶಿವ ಸಂಚಾರ ಸೇರಿದಂತೆ ಹಲವು ತಂಡಗಳ ನಾಟಕಗಳನ್ನು ಶಿವಮೊಗ್ಗದಲ್ಲಿ ಆಯೋಜಿಸಿದೆ. ಮಕ್ಕಳ ರಂಗಭೂಮಿಗೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಶಾಲೆಗಳನ್ನು ದತ್ತು ತೆಗೆದುಕೊಂಡು ಮಕ್ಕಳಿಗಾಗಿ ನಾಟಕ ಕಲಿಸುವ ಯೋಜನೆ ಜಾರಿಯಲ್ಲಿದೆ.

ರಂಗಭೂಮಿ ಬೆಳವಣಿಗೆ ಉದ್ದೇಶದಿಂದ ರಂಗ ಶಿಬಿರಗಳನ್ನು ಆಯೋಜಿಸಿದೆ. ನಾಡಿನ ಖ್ಯಾತ ರಂಗ ನಿರ್ದೇಶಕರನ್ನು ಆಹ್ವಾನಿಸಿ ರಂಗಶಿಸ್ತಿಗೆ ಒಳಪಡುವ ಉದ್ದೇಶದಿಂದ ಅವರ ನಿರ್ದೇಶನದಲ್ಲಿ ನಾಟಕಗಳನ್ನು ಪ್ರಯೋಗಿಸಿದೆ. ಈ ಯೋಜನೆಯ ಮೊದಲ ಕಾರ್ಯಕ್ರಮವಾಗಿ ಖ್ಯಾತ ರಂಗತಜ್ಞ ನಟರಾಜ್ ಹೊನ್ನವಳ್ಳಿ ಅವರ ನಿರ್ದೇಶನದಲ್ಲಿ ಗುಣಮುಖ ನಾಟಕವನ್ನು ಸಿದ್ಧಪಡಿಸಿದೆ. ಈ ನಾಟಕವನ್ನು ನಾಡಿನಾದ್ಯಂತ ಪ್ರದರ್ಶಿಸಲು ತಿರುಗಾಟ ಯೋಜನೆಯನ್ನು ಹಮ್ಮಿಕೊಂಡಿದೆ. ಸಾಣೇಹಳ್ಳಿಯ ನಿರ್ದೇಶಕ ವೈ. ಡಿ. ಬದಾಮಿ ಅವರ ನಿರ್ದೇಶನದಲ್ಲಿ ರಾಜಪ್ಪ ದಳವಾಯಿ ಅವರ ರಂಗಕೃತಿ ದಾರಾಶಿಕೊ

ಏಕವ್ಯಕ್ತಿ ರಂಗಪ್ರಯೋಗವನ್ನು ನಿರ್ಮಿಸಿದೆ.

ರಂಗಕಲೆಯೊಂದಿಗೆ ಇನ್ನೊಂದು ಕಲಾ ಪ್ರಕಾರಕ್ಕೂ ಅವಕಾಶ ನೀಡುವ ಉದ್ದೇಶದಿಂದ ರಂಗೋತ್ಸವಗಳನ್ನು ಹಮ್ಮಿಕೊಂಡ ಸಂದರ್ಭದಲ್ಲಿ ಸೃಜನಶೀಲ ಕಲಾವಿದರ ಛಾಯಾಚಿತ್ರ ಪ್ರದರ್ಶನ, ಚಿತ್ರಕಲಾ ಪ್ರದರ್ಶನ, ಕಲಾಕೃತಿಗಳ ಪ್ರದರ್ಶನಗಳನ್ನು ಏರ್ಪಡಿಸಿ ಜನಮೆಚ್ಚುಗೆ ಗಳಿಸಿದೆ.

ನಮ್ಮ ತಂಡದ ಎಲ್ಲಾ ಕಾರ್ಯಕ್ರಮಗಳೂ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ. ನಮ್‌ಟೀಮ್ ನಾಟಕಗಳೆಂದರೆ ತಪ್ಪದೆ ನೋಡಲು ಬರುವ ಪ್ರೇಕ್ಷಕರು ನಮ್ಮ ತಂಡಕ್ಕಿದ್ದಾರೆ. ಹೊಸತನ ಹಾಗೂ ಗುಣಮಟ್ಟದ ನಾಟಕಗಳನ್ನು ರಂಗದ ಮೇಲೆ ತರುವ ನಮ್ಮ ಉದ್ದೇಶಗಳು ಬಹು ಸಫಲವಾಗಿವೆ.

## ಸ್ವಂತ ನಾಟಕಗಳು

ಮಣ್ಣಿನ ಕಣ್ಣು, ಸೂರ್ಯನ ಕುದುರೆ, ಕಲ್ಲು ಕರಗುವ ಸಮಯ, ಓಲ್ಡ್ ಮ್ಯಾನ್ ಅಂಡ್ ದಿ ಸೀ, ಗಾಂಧಿ ಮತ್ತು ಗೋಡ್ಸೆ, ಮೂಟೇರಾಮನ ಉಪವಾಸ ಪ್ರಸಂಗ, ದ್ವಂದ್ವ ದ್ವಾಪರ, ಅಂತೆಂಬರ ಗಂಡ, ಯಯಾತಿ, ಕುದುರೆ ಮೊಟ್ಟೆ, ಧನ್ವಂತರಿ ಚಿಕಿತ್ಸೆ, ಸಧಾರಮೆ, ಯಾಪಿಲ್ಲೂ, ನೀ ಕೊಡೆ ನಾ ಬಿಡೆ, ಗುಣಮುಖಿ, ಬಯಲುಸೀಮೆ ಕಟ್ಟೆ ಪುರಾಣ, ಕೆಂಡದ ಮಳೆ ಕರೆವಲ್ಲಿ ಉದಕವಾದರು, ಏಕಲವ್ಯ, ದಾರಾಶಿಕೋ, ಭಳಾರೆ ವಿಚಿತ್ರಂ, ಅಂಧಯುಗ, ಕಡಿದಾಳು ಶಾಮಣ್ಣ, ಧಕ್ಷಯಜ್ಞ,



ನಾಟಕ: ಬಯಲುಸೀಮೆಯ ಕಟ್ಟೇಪುರಾಣ, ನಿರ್ದೇಶನ: ಎಸ್.ಆರ್.ಗಿರೀಶ್

## ಕಲಾವಿದರ ವಿವರ

1. ಹೊನ್ನಾಳಿ ಚಂದ್ರಶೇಖರ್
2. ಆಚಿ ಪ್ರಕಾಶ್
3. ಆರ್.ಎಸ್.ಹಾಲಸ್ವಾಮಿ
4. ಸಹನಾ ಪ್ರಭು
5. ನಾಗರಾಜ್
6. ಡಾ॥ ಅರುಣ್
7. ದುರ್ಗೇಶ್
8. ಹೊತ್ತಾರೆ ಶಿವು
9. ಸಾಸ್ವೆಹಳ್ಳಿ ರಂಗರಾಜ್
10. ಸುಧೀಂದ್ರ ಕೋಟೆ
11. ಸುಬ್ರಹ್ಮಣ್ಯ ಅಯ್ಯರ್
12. ಡಾ॥ ನಾಗಮಣಿ
13. ರವೀಂದ್ರ
14. ಶಿವಮೊಗ್ಗ ನಂದನ್
15. ಎ. ಆರ್. ರಘುರಾಮ್,
16. ಅನ್ನಪೂರ್ಣದೇವಿ
17. ಕೆ. ಎಸ್. ಚೇತನ್
18. ವೈದ್ಯ
19. ಬಿ. ಚಂದ್ರೇಗೌಡ
20. ಆದರ್ಶ ಎಂ.
21. ನಾರಾಯಣ್
22. ಜಾನ್‌ಪಾಲ್
23. ಸತ್ಯನಾರಾಯಣ ರಾಜು
24. ಗಜೇಂದ್ರಸ್ವಾಮಿ
25. ಜಿ.ಚಂದ್ರಶೇಖರ್
26. ಮಾಲತೇಶ್
27. ಆನಂದರಾವ್
28. ಎಚ್.ಎಂ. ಪೂರ್ಣಿಮಾ
29. ಗದಿಗೆಯ್ಯಸ್ವಾಮಿ
30. ಶಿವಮೊಗ್ಗ ಯೋಗರಾಜ್
31. ಶಿ.ಪಿ. ಸಿದ್ದಪ್ಪ

## ಚಿಗುರು ರಂಗ ತಂಡ – ಶಿವಮೊಗ್ಗ

ಸಂಪರ್ಕ: ಅಂಜನಮೂರ್ತಿ ಹೆಚ್., ದೂ: **98808 68005**

ನಮ್ಮ ತಂಡವು 1983ರಲ್ಲಿ ಸ್ಥಾಪನೆಯಾಗಿದ್ದು ಕಾಲೇಜು ದಿನಗಳಲ್ಲಿ ಬೀದಿ ನಾಟಕದ ಮೂಲಕ ಪ್ರಾರಂಭಗೊಂಡು ಪ್ರಥಮವಾಗಿ ನಮ್ಮ ತಂಡದಿಂದ ಪಿ. ಮಹಾದೇವನ್‌ರವರ ರಚಿತವಾದ "ಆಶ್ವಾಸನೆ" ಎಂಬ ವಿಡಂಬನಾತ್ಮಕ ಹಾಗೂ ನಗೆ ನಾಟಕವನ್ನು ಯಶಸ್ವಿ 90 ಬಾರಿ ಪ್ರದರ್ಶನಗೊಂಡಿತ್ತು. ನಂತರ ದಿನಗಳಲ್ಲಿ ಕಲೆಯ ಕೊಲೆ, ಆಹುತಿ, ಲಚ್ಚಿ 36, 69, ರಣದುಂಧುಬಿ, ಸಂಗೋಳ್ಳಿ ರಾಯಣ್ಣ, ಕುದುರೆ ಮೊಟ್ಟೆ, ಶಿವಾಜಿ, ಶ್ರೀಕೃಷ್ಣ ಸಂಧಾನ, ಅನಿರೀಕ್ಷಿತಗಳು, ಭೂಲೋಕಕ್ಕೆ ಬಂದ ಬಸವಣ್ಣ ಹೀಗೆ ಹಲವಾರು ನಾಟಕಗಳನ್ನು ಮಾಡಿಕೊಂಡು ಹೊಸ ಪ್ರತಿಭೆಗಳನ್ನು ಹೊರತಂದ ಹೆಮ್ಮೆ ನಮ್ಮ ತಂಡದಾಗಿದೆ. ಯುವ ನಿರ್ದೇಶಕರಿಗೆ ಅವಕಾಶಗಳನ್ನು ಕಲ್ಪಿಸಿಕೊಟ್ಟು ಯಶಸ್ವಿಯ ಹಾದಿಯಲ್ಲಿ ಚಿಗುರು ರಂಗ ತಂಡ, ಶಿವಮೊಗ್ಗ ನಗರದಲ್ಲಿ ಗುರುತಿಸಿಗೊಂಡಿದೆ. ಇನ್ನು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದಿದೆ. ಇನ್ನು ಹೊಸ ಹೊಸ ನಾಟಕಗಳನ್ನು ಸ್ವರಚಿತ ನಾಟಕಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಿದೆ. ನಮ್ಮ ರಂಗ ತಂಡವನ್ನು ಹುಟ್ಟು ಹಾಕಿದವರು ಮತ್ತು ಕಲಾವಿದರು.

### ಕಲಾವಿದರ ವಿವರ

ಪಿ. ಮಹಾದೇವ್, ರಮೇಶ್, ಡಾ॥ ಪ್ರಭಾಕರ್, ಶಿವಣ್ಣ, ಅಂಜನಮೂರ್ತಿ, ಸತ್ಯನಾರಾಯಣ್, ಪಿ. ಸಂಪಂಗಿರಾಮಯ್ಯ, ಸಿದ್ದಪ್ಪ, ನರಸಿಂಹಮೂರ್ತಿ, ಸಿಂಪೋಣಿ ರಾಮು, ಕೇಶವ, ಶಿವಕುಮಾರ್, ಪರಶುರಾಮ್, ಜಾನ್‌ಪಾಲ್, ರವಿ, ಕೃಷ್ಣಮೂರ್ತಿ, ರಾಜ್‌ಕುಮಾರ್, ಎಂ. ಡಿ. ಪದ್ಮನಾಭ್ ಇನ್ನು ಅನೇಕ ಕಲಾವಿದರುಗಳು ಈ ತಂಡದಲ್ಲಿ ಅಭಿನಯಿಸಿರುವರು.

## ಮಲೆನಾಡು ಕಲಾ ತಂಡ, ಶಿವಮೊಗ್ಗ

**ಸಂಪರ್ಕ: ಗಣೇಶ್ ಆರ್. ಕೆಂಚನಾಲ, ದೂ: 94816 91337**

ಗ್ರಾಮೀಣ ಜನರಲ್ಲಿ ರಂಗ ಚಟುವಟಿಕೆಗಳ ಬಗ್ಗೆ ಅರಿವು ಕಾರ್ಯಕ್ರಮ ಹಾಗೂ ವಿದ್ಯಾರ್ಥಿ ದಿಸೆಯಲ್ಲಿ ಕಲಿಯಲು ಅವಕಾಶ ಮಾಡಿಕೊಡುವುದು. ಹಿರಿಯರ ಮಾರ್ಗದರ್ಶನ ಪಡೆದು ನಶಿಸುತ್ತಿರುವ ರಂಗ ಚಟುವಟಿಕೆಗಳನ್ನು ಉಳಿಸಿ ಬೆಳೆಸುವುದು. ವಿವಿಧ ಶಾಲಾ ಕಾಲೇಜು ಗಳಲ್ಲಿ ರಂಗ ತರಬೇತಿ ಹಾಗೂ ನಾಟಕಗಳನ್ನು ಕಲಿಸಿ ರಂಗದ ಮೇಲೆ ಪ್ರಯೋಗ ಮಾಡಲು ಅವಕಾಶ ಕಲ್ಪಿಸಿಕೊಡುವ ಸಲುವಾಗಿ ಈ ತಂಡ ಸ್ಥಾಪನೆಯಾಗಿದೆ.

**ತಂಡದಿಂದ ಅಭಿನಯಿಸಿರುವ ನಾಟಕಗಳು**

ಕಾನೂರು ಹೆಗ್ಗಡತಿ, ಜ್ಞಾನೋದಯ, ಹುಡುಕೋಣ ಬನ್ನಿ, ಮೊಬೈಲ್ ಮ್ಯಾಜಿಕ್, ಶ್ರೀಕೃಷ್ಣ (ಹಿಂದಿ ನಾಟಕ), ರಾಜಕೀಯ ದರ್ಬಾರ್, ಹೆಣದ ಪರದಾಟ, ಚಂಡಿ ಪೂಜೆ, ಬಣ್ಣ ಹಚ್ಚಿದವರು

**ಕಲಾವಿದರ ವಿವರ**

| | | |
|---|---|---|
| ಗಣೇಶ ಆರ್. ಕೆಂಚನಾಲ | ಸೂರ್ಯಾನಂದದೀವ | ಕಾರ್ತಿಕ್ |
| ಶ್ರೀಮತಿ ರೇಖಾ ಮಲ್ಲಿಕಾರ್ಜುನ | ಪ್ರದೀಪ್ | ದತ್ತಾತ್ರಿ |
| ಪ್ರಮೋದ | ಯೋಗೀಶ್ | |
| ಅನ್ನಪೂರ್ಣ | ಕಲ್ಪನಾ | ಇಂದ್ರೋಜಿರಾವ್ |
| ಲಿಂಗೇಶ್ | ಸವಿತಾ | ಸ್ವಾತಿ |
| ಶಿವಕುಮಾರ್ | ಹರ್ಷ | ಶಶಾಂಕ |
| ನಾಗರಾಜ | ತೇಜಸ್ವಿನಿ | ಸಂದೀಪ್‌ಕುಮಾರ್ |
| ಮಹದೇವ್‌ಸ್ವಾಮಿ | ರೇವಣಪ್ಪ | ನಯನ |

* * * * *

## ರಂಗಬೆಳಕು (ರಿ.),

ಸಂಪರ್ಕ: ಕೊಟ್ರಪ್ಪ ಜಿ.ಹಿರೇಮಾಗಡಿ, ಮೊ: 98445 69645.

ಸಾಹಿತ್ಯ, ಸಂಗೀತ, ರಂಗಭೂಮಿಯನ್ನು ಆಯ್ದುಕೊಂಡ ನಾವು ಕಳೆದ ಐದಾರು ವರ್ಷಗಳಿಂದ ನಿರಂತರ ರಂಗವಟುವಟಿಕೆಗಳನ್ನು ನಡೆಸುತ್ತಾ ಬಂದಿದ್ದೇವೆ. ಯುವಕರಲ್ಲಿ ಜವಾಬ್ದಾರಿಯನ್ನು ಹೆಚ್ಚಿಸುವಂತಹ ಮತ್ತು ಅರಿವು ಮೂಡಿಸುವಂತಹ ರಂಗಚಟುವಟಿಕೆಗಳನ್ನು ಹಮ್ಮಿಕೊಂಡು ರಂಗಭೂಮಿಯನ್ನು ಹೆಚ್ಚು ಸಾಮಾಜೀಕರಿಸುವಲ್ಲಿ ತೊಡಗಿಸಿಕೊಂಡಿದೆ.

ಇದುವರೆಗೂ ವೀರ ಭಗತ್‌ಸಿಂಗ್, ಬಾಬಾಸಾಹೇಬ್ ಅಂಬೇಡ್ಕರ್, ಅಂಕ, ಗಾಂಧಿ ಬಂದ, ನಾಟಕಗಳನ್ನು ನಿರ್ಮಿಸಿದೆ. ರಾಜ್ಯದ ಹಲವೆಡೆ ಪ್ರದರ್ಶನವೂ ನೀಡಿದೆ.

'ರೈತ ಮತ್ತು ಬುತ್ತಿಗಂಟು' ಎಂಬ ಬೀದಿನಾಟಕವನ್ನು ಉಚಿತವಾಗಿ ಸುತ್ತಮುತ್ತ ಹಳ್ಳಿಗಳಲ್ಲಿ ಪ್ರದರ್ಶನ ನೀಡುತ್ತಿದೆ. ಸೂರ್ಯ ಬಂದ, ಊರು-ಕೇರಿ ನಾಟಕಗಳನ್ನು ಪ್ರಾಯೋಜಿಸಿದೆ. ಈ ಬಾರಿ ಈಶ ಎಂ.ಸಿ.ಹಳ್ಳಿಯವರ ನಿರ್ದೇಶನದಲ್ಲಿ "ಮೂಗೂರ ಮಹೋತ್ಸವ" ನಾಟಕವನ್ನು ಪ್ರದರ್ಶಿಸಿದೆ.




ನಾಟಕ: ಮೂಗೂರು ಮಹೋತ್ಸವ, ನಿರ್ದೇಶನ: ಈಶ ಎಂ.ಸಿ.ಹಳ್ಳಿ

## ಕಲಾವಿದರ ವಿವರ

| | | |
|---|---|---|
| ತರುಣ್ | ಸುಮಂತ್ ಕೋಹಿಮಾ | |
| ಅಕ್ಷಯ್ | ಅಂಕಿತ | ಅಂಜಲಿ |
| ಹನುಮಂತ | | |
| ಪ್ರದೀಪ್ ಎಂ.ಡಿ. | ಶಶಿಧರ ಎಲ್.ಆರ್. | ಮಧು ಎಂ. |
| ರಿಯಾಜ್ ಎಸ್. | ಪ್ರದೀಪ ಕೆ.ವಿ. | ಭಾಸ್ಕರ್ ಟಿ.ಪಿ. |
| ಪ್ರವೀಣ್ ಎಸ್.ಹಾಲ್ಮುತ್ತೂರ್ | ಉಮೇಶ್ ಎಂ.ಪಿಳ್ಳಂಗಿರಿ | |
| ಸಂತೋಷ್ ಎಂ.ಪಿಳ್ಳಂಗಿರಿ | ರೇಣುಕಮ್ಮ ಸತೀಶ್‌ಕುಮಾರ್ ಕೆ. ಕೊಟ್ರಪ್ಪ | |
| ಜಿ.ಹಿರೇಮಾಗಡಿ | ಮೋಹನ್ ಚಂದ್ರಗುತಿ ಗಾಮನಹಳ್ಳಿ ಸ್ವಾಮಿ | |
| ಮೇಘನಾ ಎಂ. | ಮನು ಟಿ.ಕಿರಣ್ ಕುಮಾರ್ | |
| ಕೆ.ಮಾರಶೆಟ್ಟಿಹಳ್ಳಿ | | |
| ಸಂತೋಷ್ | ಪ್ರಕಾಶ್ ಮರ್ಗನಹಳ್ಳಿ | |
| ನಂಜುಂಡ | ಮಲ್ಲೇಶ್ ನಾಯಕ್ | |

## ಸ್ಪಂದನ (ರಿ.,)

ಬೆಳಲಕಟ್ಟೆ, ಮೇಲಿನ ಹನಸವಾಡಿ ಅಂಚೆ, ಶಿವಮೊಗ್ಗ ತಾಲೂಕು.
**ಅಣ್ಣಪ್ಪ ಒಂಟಿಮಾಳಗಿ ದೂ: 99022 35073**

ಬೆಳಲಕಟ್ಟೆಯು ಸುಮಾರು ಐದಾರು ವರ್ಷಗಳಿಂದ ರಂಗಭೂಮಿಯಲ್ಲಿ ಸಕ್ರಿಯವಾಗಿ ಕಾರ್ಯನಿರತವಾಗಿದೆ. ಅದರಲ್ಲಿಯೂ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ರಂಗಭೂಮಿಯತ್ತ ಹೆಚ್ಚು ಕ್ರಿಯಾಶೀಲವಾಗಿದೆ. ಶಿಕ್ಷಣದಲ್ಲಿ ರಂಗಕಲೆ, ನಾಟಕ, ಮಕ್ಕಳ ನಾಟಕ, ಕೋಲಾಟ, ಡೊಳ್ಳು, ಬೇಸಿಗೆ ಸಿಬಿರ ನೆಡೆಸುತ್ತಾ ಬಂದಿದೆ. ಬೇರೆ ಬೇರೆ ತಂಡಗಳ ನಾಟಕಗಳನ್ನು ಪ್ರದರ್ಶಿಸುವುದು ಮತ್ತು ರಂಗಭೂಮಿಯ ಹಿರಿಯ ಕಲಾವಿದರಿಂದ, ತಂತ್ರಜ್ಞರಿಂದ ಮಾಹಿತಿ, ತರಬೇತಿ ಕೊಡಿಸುತ್ತಿದೆ. ಹಾಗೂ ಗ್ರಾಮೀಣ ಜಾನಪದ ಕಲೆಗಳಿಗೆಪ್ರೋತ್ಸಾಹ ನೀಡುತ್ತಿದೆ.

ಖ್ಯಾತ ರಂಗ ನಿರ್ದೇಶಕರಿಂದ ನಾಟಕ ನಿರ್ದೇಶಿಸಿ ಪ್ರದರ್ಶಿಸುತ್ತದೆ. "ಹಂಚಿನ ಮನೆ ಪರಸಪ್ಪ", ಪಂಜರಶಾಲೆ, ಮೃತ್ಯು, ಸೊನ್ನೆ, ನಿಸರ್ಗ, ನಾ ದ್ಯಾವರನ್ ನೋಡಬೇಕು ಮುಂತಾದ ನಾಟಕಗಳು ಯಶಸ್ವಿಯಾಗಿ ಪ್ರದರ್ಶನಗೊಂಡಿದೆ.

ತೀರಾ ಇತ್ತೀಚೆಗೆ ಬೆಳಕಟ್ಟೆ ಗ್ರಾಮದಲ್ಲಿ ನಡೆದ 40 ದಿನಗಳ ಮಕ್ಕಳ ಯಶಸ್ವಿ ಬೇಸಿಗೆ ಶಿಬಿರ, ಈಗ ಅಧಿಕೃತ ನೊಂದಾವಣೆಯಾಗಿದ್ದು, ಸಾಂಸ್ಕೃತಿಕ ಕ್ಷೇತ್ರದಲ್ಲಿ ದಾಪುಗಾಲು ಇಡುತ್ತಿದೆ ಎಂದು ಹೇಳಲು ಹರ್ಷಿಸುತ್ತೇನೆ.



ನಾಟಕ: ನಾ ಡ್ರ್ಯಾವ್ರಸ್ ನೋಡ್ಬೇಕು, ನಿರ್ದೇಶನ: ಡಾ. ಸತೀಶ್ ಸಾಸ್ವೆಹಳ್ಳಿ

## ಕಲಾವಿದರ ವಿವರ

| | | |
|---|---|---|
| ಅಣ್ಣಪ್ಪ ಒಂಟಿಮಾಳಗಿ | ಚೆನ್ನಕಣ್ಣಮ್ಮ | ವಸಂತನಾಯ್ಕ ಎಸ್. |
| ಚಂದ್ರಶೇಖರ ಹಿರೇಗೋಣಗೇರ | ಕೆ.ಶಂಕರ | ಭಾನುಚಂದ್ರನಾಯ್ಕ |
| ಬಿ.ಆರ್.ಸಂತೋಷಕುಮಾರ | ಬಿ.ಆರ್.ಮಧು | ಬಿ.ಎಲ್.ಪವನಕುಮಾರ |
| ಬಿ.ಎಂ.ಅರುಣ | ಇಂದುಮತಿಬಾಯಿ | ಬಿ.ಎಸ್.ವೇಲು ಭರತ್ ಎಂ. |
| ಸೋಮೇಶ್‌ನಾಯ್ಕ | ಬಿ.ಎಸ್.ಶಶಿಕುಮಾರ್ | |

## ಸಹ್ಯಾದ್ರಿ ಕಲಾತಂಡ

ಸಂಪರ್ಕ: ಜಿ.ಆರ್. ಲವ, ಮೊ: 9449201919

2003ರಲ್ಲಿ ಆರಂಭವಾದ ತಂಡವು ಕಳೆದ ಹತ್ತುವರ್ಷಗಳಿಂದ ರಂಗಭೂಮಿ, ಜಾನಪದ ಕಲೆಗಳ ಪ್ರದರ್ಶನಗಳಲ್ಲಿ ತೊಡಗಿದ್ದು, ವಿದ್ಯಾರ್ಥಿಗಳನ್ನು ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸಿರುತ್ತದೆ. ಸಹ್ಯಾದ್ರಿ ಕಾಲೇಜಿನ ವಿದ್ಯಾರ್ಥಿಗಳನ್ನೇ ಕೇಂದ್ರವಾಗಿರಿಸಿಕೊಂಡು ರಂಗಭೂಮಿಯಲ್ಲಿ ಕ್ರಿಯಾಶೀಲರಾಗಿರುವ ವಿದ್ಯಾರ್ಥಿಗಳಿಂದ ಆರಂಭವಾಗಿ ಕಾಲೇಜಿನ ಹಳೆ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರ ಸಹಕಾರದಿಂದ ರಂಗ ಚಟುವಟಿಕೆ, ಬೀದಿ ನಾಟಕ, ಜಾನಪದ ಕಲೆ, ಸಾಹಿತ್ಯ, ಸಂವಾದ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

ತಂಡವು ಮಕ್ಕಳ ಬೇಸಿಗೆ ಶಿಬಿರ, ಕಾಲೇಜು ವಿದ್ಯಾರ್ಥಿ ನಾಟಕೋತ್ಸವ, ರಂಗಶಿಬಿರದಲ್ಲಿ ಸದಾ ತೊಡಗಿದೆ. ಇದುವರೆಗೆ ಗುಣಮುಖಿ, ಸ್ಮಶಾನ ಕುರುಕ್ಷೇತ್ರ, ಜಲಗಾರ, ಮೋಡಣ್ಣನ ತಮ್ಮ, ಜತೆಗಿರುವನು ಚಂದಿರ, ಜಲಸ್ತಂಭ, ಕಾಕನಕೋಟೆ, ಆ ಊರು ಈ ಊರು, ನಾಯಿ ತಿಪ್ಪಾ, ಹೆಡ್ಡಾಯಣ, ಬಾಲಕಾರ್ಮಿಕ ಮಂಟೇಸ್ವಾಮಿ ಕಥಾ ಪ್ರಸಂಗ, ಗ್ರಾಮ ಪಂಚಾಯಿತಿ, ಧನಿಯರ ಸತ್ಯನಾರಾಯಣ, ಕಾಡಿಗೆ ಬೇಲಿ, ನಮಗೆ ನ್ಯಾಯ ಬೇಕು, ಕನಸಿನವರು ಮುಂತಾದ ನಾಟಕಗಳನ್ನು ಪ್ರದರ್ಶಿಸಿದೆ.



ನಾಟಕ: ಸ್ಮಶಾನ ಕುರುಕ್ಷೇತ್ರ, ನಿರ್ದೇಶನ: ಜಿ.ಆರ್. ಲವ

## ಬೆಳಕು ಸಾಹಿತ್ಯ ಸಾಂಸ್ಕೃತಿಕ ವಿದ್ಯಾಮಂದಿರ (ರಿ.)

**ಸಂಪರ್ಕ: ನಾಗರಾಜ್ ಹವಾಲ್ದಾರ್, ಮೊ: 9741770051**

2005ರ ಮೇ 16ರಂದು ಪ್ರಾರಂಭಗೊಂಡು ಅಂದಿನಿಂದ ಇಲ್ಲಿಯವರೆಗೆ ಹಲವು ಕಾರ್ಯ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆ. ರಂಗ ಕಾರ್ಯಾಗಾರ, ರಂಗ ಸಂವಾದ, ರಂಗ ಪ್ರಯೋಗಗಳನ್ನು ನಡೆಸುತ್ತಿದೆ. ಅದ್ವಾನ ಪುರ, ಮನಸ್ಸಿನಾಟ, ಊರುಭಂಗ, ವೀರ ಭಗತ್‌ಸಿಂಗ್, ರವೀಂದ್ರ ಕಥನ, ಚಾಳೇಶ, ಹಕ್ಕಿ ಹಾರಿತು ಪ್ರಮುಖ ನಾಟಕ ಪ್ರಯೋಗಗಳಾಗಿವೆ.

ಹೊರ ಜಿಲ್ಲೆಗಳಿಂದ ಹಲವು ನಾಟಕ ತಂಡಗಳನ್ನು ಕರೆಸಿ ನಾಟಕೋತ್ಸವಗಳನ್ನು ನಡೆಸಿದೆ. ಅಲ್ಲದೆ ಪುಸ್ತಕ ಬಿಡುಗಡೆ ಮತ್ತು ಜಾನಪದ ಕಾರ್ಯಕ್ರಮಗಂತಹ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದೆ.

ತಂಡದಲ್ಲಿ ಎಲ್. ಕೃಷ್ಣಪ್ಪ, ವ್ಯಾಸ ದೇಶಪಾಂಡೆ, ಎಂ.ಸಿ. ಮಂಜುನಾಥ್, ನಾಗರಾಜ್ ಹವಾಲ್ದಾರ್ ಸೇರಿದಂತೆ ಸುಮಾರು 15ಕ್ಕೂ ಹೆಚ್ಚು ಜನ ಸದಸ್ಯರುಗಳನ್ನು ಒಳಗೊಂಡಿದೆ.

## ಕಲಾರೋಹಣ ಸಂಸ್ಥೆ

ಸಂಪರ್ಕ: ಬಿ.ಆರ್. ರೇಣುಕಪ್ಪ, ಮೊ: 9845907703

2006ರಲ್ಲಿ ಪ್ರಾರಂಭವಾದ ಸಂಸ್ಥೆ ಮಕ್ಕಳ ನಾಟಕಗಳನ್ನು ಆಡಿಸುವುದು, ಭಿನ್ನ ನಾಟಕಗಳ ಪ್ರಯೋಗ, ಕ್ರಿಯಾಶೀಲ ಚಟುವಟಿಕೆಯಿಂದ ರಂಗಾಸಕ್ತರನ್ನು ರಂಗಭೂಮಿಗೆ ಸೆಳೆಯುವ ಪ್ರಯತ್ನ, ರಂಗ ಸಂಘಟನೆ, ಹೊಸ ಪ್ರತಿಭೆಗಳ ಅನಾವರಣ, ಹಿರಿಯ ರಂಗಭೂಮಿ ಕಲಾವಿದರ ಒಡನಾಟ ಸೇರಿದಂತೆ ರಂಗಭೂಮಿಯ ಎಲ್ಲಾ ಸಾಧ್ಯತೆಗಳನ್ನು ಒಂದೆಡೆ ಕಲೆ ಹಾಕುವ ಪ್ರಯತ್ನ ಕಲಾರೋಹಣದ್ದು.

ತಂಡವು ಇದುವರೆಗೆ ಲಾಕೌಟಲ್ಲ ನಾಕೌಟ್, ಕಿವುಡು ಸಾರ್ ಕಿವುಡು, ಮದುವೆ ಮಾರ್ಕೆಟ್, ಸನ್ಮಾನ ಸುಖ, ಶ್ರೀ ಕೃಷ್ಣ ಸಂಧಾನ, ಅದ್ರೇಶಿ ಪರದೇಶಿ ಆದ, ಅಳಿಲು ರಾಮಾಯಣ, ಮನುಷ್ಯರು ಬರುತ್ತಿದ್ದಾರೆ ಜಾಗೃತಿ, ಗಿರಿಜಾ ಕಲ್ಯಾಣ, ತಂತಿ, ಮೈಸೂರು ಮಲ್ಲಿಗೆಯಂಥ ಭಿನ್ನ ನಾಟಕಗಳನ್ನು ಪ್ರದರ್ಶಿಸಿದೆ.

ರಂಗ ತರಬೇತಿ, ಬೀದಿ ನಾಟಕಗಳ ಪ್ರದರ್ಶನ, ರಂಗ ಸಾಧಕರಿಗೆ ಸನ್ಮಾನದಂತಹ ಕಾರ್ಯಕ್ರಮಗಳನ್ನು ಕಲಾರೋಹಣ ನಿರ್ವಹಿಸುತ್ತಾ ಬಂದಿದೆ.

ವಿದ್ಯಾರ್ಥಿಗಳು, ಉಪನ್ಯಾಸಕರು, ವೈದ್ಯರು, ವಿವಿಧ ವೃತ್ತಿಯಲ್ಲಿರುವ ಶಿವಮೊಗ್ಗ-ತೀರ್ಥಹಳ್ಳಿಯ ಹವ್ಯಾಸಿ ಕಲಾವಿದರು ಕಲಾರೋಹಣದ ಕಲಾವಿದರಾಗಿದ್ದಾರೆ. ಹೆಚ್ಚಾಗಿ ಹೊಸ ಪ್ರತಿಭೆಗಳಿಗೆ ಅವಕಾಶ ನೀಡಿದ್ದು, ಶಿವಮೊಗ್ಗೆಯ ಬೇರೆ ಬೇರೆ ತಂಡಗಳ ಜೊತೆ ಗುರುತಿಸಿಕೊಳ್ಳಲು ಅವಕಾಶ ನೀಡಿದೆ.




ನಾಟಕ: ನಮ್ಮ ಆಯ್ಕೆಗಳೇ ನಮಗೆ ಭವಿಷ್ಯ, ರಚನೆ–ನಿರ್ದೇಶನ: ಬಿ.ಆರ್. ರೇಣುಕಪ್ಪ



ಶಿವಪ್ಪನಾಯಕರ ಅರಮನೆ, ಶಿವಮೊಗ್ಗ

## ಭದ್ರಾವತಿ ತಾಲೂಕು ರಂಗಭೂಮಿ



## ಪ್ರೇಕ್ಷಣೀಯ ಸ್ಥಳಗಳು

**ಸಾಂಸ್ಕೃತಿಕ ತಾಣಗಳು:**

1. ಕುವೆಂಪು ವಿಶ್ವ ವಿದ್ಯಾನಿಲಯ, ಶಂಕರಘಟ್ಟ.

**ಜಲಾಶಯಗಳು:**

1. ಬಿ.ಆರ್.ಪ್ರಾಜೆಕ್ಟ್

**ಪ್ರಕೃತಿ ಅಧ್ಯಯನ ಸ್ಥಳ:**

1. ಸುಕಾಲರಹಟ್ಟಿ

**ದೇವಸ್ಥಾನ ಹಾಗೂ ಐತಿಹಾಸಿಕ ಸ್ಥಳಗಳು:**

1. ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ
2. ಭದ್ರಗಿರಿ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ



ಭದ್ರಾ ಜಲಾಶಯ, ಬಿ.ಆರ್. ಪ್ರಾಜೆಕ್ಟ್

## ಭದ್ರಾವತಿ ತಾಲ್ಲೂಕು ರಂಗಭೂಮಿ ಕ್ಷೇತ್ರದಲ್ಲಿನ ಸಾಧಕರ ವಿವರ

### ರಾಜ್ಯೋತ್ಸವ ಪ್ರಶಸ್ತಿ ಪಡೆದ ರಂಗ ಕಲಾವಿದರು

1. ಶ್ರೀ ಎಡೆಯೂರು ಮೂಡಲಗಿರಿ
2. ಕಲಾಶ್ರೀ ಎಸ್.ಶ್ಯಾಮಮೂರ್ತಿ

### ನಾಟಕ ಅಕಾಡೆಮಿ ಪ್ರಶಸ್ತಿ ಪಡೆದವರು

1. ಕಲಾಶ್ರೀ ಎಸ್.ಶ್ಯಾಮಮೂರ್ತಿ 1993
2. ಕೆ.ಬಿ.ಕಪನಿಗೌಡ (ಸುವರ್ಣ ಕರ್ನಾಟಕ ಗೌರವ ಪುರಸ್ಕಾರ) 2006

### ರಂಗ ನಿರ್ದೇಶಕರುಗಳು

1. ಕಲಾಶ್ರೀ ಎಸ್.ಶಾಮಮೂರ್ತಿ – ನ/ನಿ 95915 58336
2. ಶ್ರೀ ಲಕ್ಷ್ಮೀಪತಿ – ನ/ನಿ
3. ಶ್ರೀ ಡಿ.ವೆಂಕಟರಮಣಯ್ಯ – ನ/ನಿ 99450 99897
4. ಶ್ರೀ ಮಾಯಿಗಯ್ಯ – ನ/ನಿ/ಪ್ರ 99162 01212
5. ಶ್ರೀ ಟಿ.ಕ್ಷೇತ್ರಪಾಲ – ನ/ನಿ 96631 00864
6. ಶ್ರೀ ಸಿ.ಲಕ್ಷ್ಮೀನಾರಾಯಣಪ್ಪ – ನ/ನಿ 94482 00424
7. ಶ್ರೀ ಹೆಚ್.ಎ.ಮಹೇಂದ್ರ – ನ/ನಿ/ಪ್ರ/ರಂ.ವಿನ್ಯಾಸ 94812 56504
8. ಶ್ರೀ ಎಸ್.ಎನ್.ಪರಶುರಾಮರಾವ್ – ನ/ನಿ 99454 52609
9. ಶ್ರೀ ಎಸ್.ಜೆ.ಶಂಕರಮೂರ್ತಿ – ಲೇ/ನ/ನಿ/ರಂ.ಸಜ್ಜಿಕೆ. 94480 50244
10. ಶ್ರೀ ಪರಿಸರ ಶಿವರಾಮ್ – ನ/ನಿ 94484 38313

### ನಾಟಕ ರಚನೆ

1. ಶ್ರೀ ಜಿ.ವಿ.ಸಂಗಮೇಶ್ವರ – 93427 76054

### ಬೆಳಕು ವಿನ್ಯಾಸ

1. ಶ್ರೀ ಹೆಚ್.ಬಿ.ಉಮೇಶ್‌ರಾವ್ – ನ/ನಿ/ಬೆಳಕು 9980941902

## ರಂಗಮಂದಿರಗಳು

**1. ಶಾರದಾ ಮಂದಿರ, ನ್ಯೂಟೌನ್: ದೂ: 94498 70680**

ರಂಗಮಂಚ ಅಳತೆ: 30'X10', ಹಿಂದೆ 15'X10', ಆಸನ ವ್ಯವಸ್ಥೆ: 500 ಹೊರಗನಿಂದ ತರಬೇಕು. ಬೆಳಕಿನ ವ್ಯವಸ್ಥೆ, ಧ್ವನಿವರ್ಧಕ, ಪರದೆಗಳನ್ನು ಎಲ್ಲವನ್ನೂ ಹೊರಗಿನಿಂದ ಹೊಂದಿಸಬೇಕು.



**2. ಲಯನ್ಸ್ ಕ್ಲಬ್, ನ್ಯೂಟೌನ್ (ಉಂಬ್ಳೇಬೈಲು ರಸ್ತೆ):**

ರಂಗಮಂಚ ಅಳತೆ: 20'X15', ಆಸನ ವ್ಯವಸ್ಥೆ: 150 ಹೊರಗಿನಿಂದ ತರಬೇಕು. ಬೆಳಕಿನ ವ್ಯವಸ್ಥೆ, ಧ್ವನಿವರ್ಧಕ, ಪರದೆಗಳನ್ನು ಎಲ್ಲವನ್ನೂ ಹೊರಗಿನಿಂದ ಹೊಂದಿಸಬೇಕು.

**3. ಎಂ.ಪಿ.ಎಂ. ಕಲ್ಯಾಣ ಮಂದಿರ, ಪೇಪರ್‌ಟೌನ್:ದೂ: 08282–273483**

ರಂಗಮಂಚ ಅಳತೆ: 40'X30', ಆಸನ ವ್ಯವಸ್ಥೆ: 800, ಬೆಳಕಿನ ವ್ಯವಸ್ಥೆ, ಧ್ವನಿವರ್ಧಕ, ಪರದೆಗಳನ್ನು, ಎಲ್ಲವನ್ನೂ ಹೊರಗಿನಿಂದ ಹೊಂದಿಸಬೇಕು.

**4. ಬಸವೇಶ್ವರ ಸಭಾಭವನ, ಸಿದ್ಧಾರೂಢನಗರ: ದೂ: 08282–269797**

ರಂಗಮಂಚ ಅಳತೆ: 40'X0', ಆಸನ ವ್ಯವಸ್ಥೆ: 600, ಬೆಳಕಿನ ವ್ಯವಸ್ಥೆ, ಧ್ವನಿವರ್ಧಕ, ಪರದೆಗಳನ್ನು ಎಲ್ಲವನ್ನೂ ಹೊರಗಿನಿಂದ ಹೊಂದಿಸಬೇಕು.

**5. ಜಯಶ್ರೀ ಕಲ್ಯಾಣಮಂದಿರ, ಜನ್ನಾಪುರ: ದೂ: 08282–272446**

ರಂಗಮಂಚ ಅಳತೆ: 40'X30', ಆಸನ ವ್ಯವಸ್ಥೆ: 600, ಬೆಳಕಿನ ವ್ಯವಸ್ಥೆ, ಧ್ವನಿವರ್ಧಕ, ಪರದೆಗಳನ್ನು ಎಲ್ಲವನ್ನೂ ಹೊರಗಿನಿಂದ ಹೊಂದಿಸಬೇಕು.

# ಭದ್ರಾವತಿ ರಂಗಭೂಮಿಯ ಪಕ್ಷಿನೋಟ

ಪಶ್ಚಿಮ ವಾಹಿನಿಯಾದ ಭದ್ರೆಯ ತಟದಲ್ಲಿನ 'ಬೆಂಕಿಪುರ' ಮುಂದೆ 'ಭದ್ರಾವತಿ' ಎಂದು ಬದಲಾಗಿ ಕಬ್ಬಿಣ, ಉಕ್ಕು, ಸಿಮೆಂಟ್, ಕಾಗದ, ಸಕ್ಕರೆ ಕಾರ್ಖಾನೆಗಳ ಸ್ಥಾಪನೆಯಿಂದ ಕೈಗಾರಿಕಾ ನಗರವೆಂದೇ ಪ್ರಸಿದ್ಧವಾಗಿದೆ. ರಾಜ್ಯ ಮತ್ತು ರಾಷ್ಟ್ರದ ನಾನಾ ಭಾಗಗಳಿಂದ ಈ ಕಾರ್ಖಾನೆಗಳಲ್ಲಿ ದುಡಿಯಲು ಬಂದವರು ಸಾವಿರಾರು ಜನ, ಜಾತಿ ಮತ, ಬಾಧೆ, ಈ ಯಾವುದೇ ಬೇಧವಿಲ್ಲದೆ ಒಟ್ಟಾಗಿ ದುಡಿದವರಿವರು. ಕಾರ್ಖಾನೆಯ ಕೆಲಸದ ನಂತರ ಇವರಿಗೆ ಸಂಜೆ ಸ್ವಲ್ಪವಾದರೂ ಮನರಂಜನೆಯ ವಾತಾವರಣ ಬೇಕಿತ್ತು ದುಡಿದು ದಣಿದ ಜೀವಕ್ಕೆ ಉಲ್ಲಾಸಬೇಕಿತ್ತು. ಈ ಕೆಲವರಲ್ಲಿ ನಾಟಕದ ಹಂಬಲವಿದ್ದವರು ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡರು. ಅಲ್ಲದೆ ದೇವಸ್ಥಾನ ಮಂದಿರಗಳಲ್ಲಿ ಭಜನೆಗೆಂದು ಸೇರುತ್ತಿದ್ದ ಕೆಲವರು ಇದಕ್ಕೆ ಒತ್ತಾಸೆಯಾದರು. ಹೀಗೆ 30/40ರ ದಶಕದಲ್ಲಿ ಭದ್ರಾವತಿಯಲ್ಲಿ ರಂಗಭೂಮಿಗೆ ಮುನ್ನುಡಿ ಬರೆಯಿತು. ಇದರಿಂದಾಗಿ ನಾಟಕ ತಂಡಗಳ ಉದಯ. ಕಲಾವಿದರ ಬೆಳವಣಿಗೆ ಅವಕಾಶ. ಕಬ್ಬಿಣ ಕಾರ್ಖಾನೆ ಕಾಗದ ಕಾರ್ಖಾನೆ ಕಾರ್ಮಿಕರು ಮತ್ತು ಇತರೆ ಉದ್ಯೋಗಿ ಮಿತ್ರರು ಸೇರಿ ರೂಪಿಸಿಕೊಂಡ ಕಲಾ ತಂಡಗಳು ಸುಮಾರು 30-32 ಎಂದರೆ ಆಶ್ಚರ್ಯ ಪಡಬೇಕಿಲ್ಲ. ಕಾಲದ ಬದಲಾವಣೆಯಿಂದ ಈಗ ಕೇವಲ ಬೆರಳೆಣಿಕೆಯಷ್ಟು ತಂಡಗಳಿವೆ ಎಂಬುದು ಅಷ್ಟೇ ನೋವಿನ ಸಂಗತಿ.

ಇದು ಭದ್ರಾವತಿಯ ಕಲಾ ತಂಡಗಳ, ಕಲಾವಿದರ ಹುಟ್ಟು ಬೆಳವಣಿಗೆ ಪ್ರತಿಭೆಗಳ ಒಂದು ಇಣುಕು ನೋಟವಷ್ಟೆ ಸದ್ಯ ನಮಗೆ ಮಾಹಿತಿ ಲಭ್ಯವಿರುವ ಅನೇಕ ಕಲಾವಿದರು ತೆರೆಯ ಮರೆಯಲ್ಲಿಯೆ ಉಳಿದಿರಬಹುದು. ಆ ಹಿರಿಯ ಪ್ರತಿಭಾವಂತ ಕಲಾಚೇತನಗಳಿಗೆ ನಮ್ಮ ಆತ್ಮೀಯ ನಮನಗಳು ಸಲ್ಲುತ್ತವೆ.

1930ರಲ್ಲಿ ಶ್ರೀ ಪಿ. ಆರ್. ಬಾಲಕೃಷ್ಣ, ಶ್ರೀವೇಣು ಗೋಪಾಲ್, ಶ್ರೀ ಬಿ. ಸುಬ್ಬರಾವ್, ತಬಲ ಶ್ರೀನಿವಾಸರಾವ್ ಮುಂತಾದವರ ನೇತೃತ್ವದಲ್ಲಿ ಪ್ರಾರಂಭವಾದದ್ದು "ಶ್ರೀರಾಮ ಸೇವಾ ಡ್ರಾಮಾಟಿಕ್ ಅಸೋಸಿಯೇಷನ್" ಮುಂದೆ ಅದು "ವರ್ಕ್ಸ್ ಅಮೇಚೂರ್ಸ್" ಎಂದು ಬದಲಾಯಿತು. ಇದರಲ್ಲಿ ಶ್ರೀ ಎಲ್. ದೊರೆಸ್ವಾಮಿ ಅಯ್ಯಂಗಾರ್, ಶ್ರೀ ಬಿ. ಕೆ. ಚನ್ನಪ್ಪ, ಶ್ರೀ ಎಂ. ಜಿ. ರಂಗಯ್ಯ, ಶ್ರೀ ಕೆ. ರಂಗಚಾರ್ ಅವರೊಡಗೂಡಿ 'ಟೊಳ್ಳುಗಟ್ಟಿ', 'ರಾಮದಾಸ್' ಎಂಬ ನಾಟಕಗಳನ್ನು ಪ್ರದರ್ಶಿಸಿದ್ದಾರೆ.

1936ರಲ್ಲಿ ಜನ್ಮತಾಳಿದ್ದು "ಶ್ರೀರಾಮ ಕೃಪಾಪೋಷಿತ ನಾಟಕ ಮಂಡಳಿ". ಇದೇ ಸಂಸ್ಥೆ 1943ರಲ್ಲಿ 'ಆರ್ಯಮಾಲ ನಾಟಕ ಸಭಾ" ಎಂದು ಬದಲಾಯಿತು. ಶ್ರೀಯುತರಾದ ಹೆಚ್. ಎನ್. ಖಂಡೇರಾವ್. ಎನ್. ವೆಂಕಟರಾವ್, ಹೆಚ್. ಎನ್. ಸೂರ್ಯ ನಾರಾಯಣರಾವ್, ಎನ್. ಜಿ. ಸೂರ್ಯ ನಾರಾಯಣರಾವ್, ಬಿ. ರೂಪಸಿಂಗ್, ಎ. ಎಸ್. ಲಿಂಗಯ್ಯ ಮುಂತಾದವರ ತಂಡ 'ಲವಕುಶ', 'ಉತ್ತರಭೂಪ', 'ಅಕ್ಷಯಾಂಬರ' ಎಂಬ ನಾಟಕ ಪ್ರದರ್ಶಿಸಿದ್ದಾರೆ.

ಕೆಲವಾರು ಸ್ನೇಹಿತರು ಭಜನೆಗೆಂದು ಪ್ರಾರಂಭಿಸಿದ್ದ 'ಮಿತ್ರ ಮಂಡಳಿ' 1936ರಲ್ಲಿ "ಮಿತ್ರ ಕಲಾ ಮಂಡಳಿ" ಎಂದು ಹೆಸರಾಗಿ ಭದ್ರಾವತಿ ಕಲಾ ರಂಗದಲ್ಲಿ ಪ್ರಭಾವಶಾಲಿಯಾಗಿ ಬೆಳೆಯಿತು. ಆಗ ಶ್ರಮಿಸಿದ ಮಹನೀಯರು ಶ್ರೀಯುತರಾದ ಕೆ. ರಂಗಾಚಾರ್ ಕೇಶವಯ್ಯ, ನಂಜುಂಡಯ್ಯ, ಹೆಚ್. ಗಿರಿಧರ್, ಮನ್ನಾಜಿರಾವ್, ಸಿ. ರಾಜು, ಎ. ಎ. ರೆಹಮಾನ್ ಅವರು 1953 ರಿಂದ ಶ್ರೀ ಟಿ. ಎಸ್. ರಾಮಚಂದ್ರರಾವ್ ಮಂಡಳಿಯ ಅಧ್ಯಕ್ಷರಾದ ನಂತರ ಉತ್ಸಾಹಿ ಯುವಕರನ್ನು ತಂಡಕ್ಕೆ ಸೇರ್ಪಡೆಗೊಳಿಸಿ ನಟನೆ, ನಾಟಕ ರಚನೆ, ನಿರ್ದೇಶನ ಹೀಗೆ ಕಲಾ ರಂಗದ ಎಲ್ಲಾ ವಿಭಾಗದಲ್ಲಿ ಮುನ್ನಡೆಸಿದರು. 1977ರಲ್ಲಿ ತಮಿಳುನಾಡಿನ ನೈವೇಲಿ ಲಿಗ್ನೈಟ್ ಕಂಪೆನಿಯ ಕನ್ನಡ ಸಂಘದವರ ಮನವಿ ಮೇರೆಗೆ ಮಂಡಳಿಯ ಹೆಸರಾಂತ ನಾಟಕ "ಮಂಗಳಾ" ಪ್ರದರ್ಶಿಸಿದ ಕೀರ್ತಿ ಇವರದು.

ಕಬ್ಬಿಣ ಕಾರ್ಖಾನೆಯ ಎಂ.ಡಿ. ಮತ್ತು ವಿ.ಸಿ.ಯವರಾಗಿದ್ದ ಶ್ರೀ ಎಂ.ಡಿ. ಶಿವನಂಜಪ್ಪನವರ ಅಪಾರ ಪ್ರೋತ್ಸಾಹದಿಂದ 1959ರಲ್ಲಿ ಪ್ರಾರಂಭಿಸಿ ಸತತ 28 ವರ್ಷ ನಡೆಸಿದ ರಾಜ್ಯಮಟ್ಟದ ನಾಟಕ ಸ್ಪರ್ಧೆಯಿಂದಾಗಿ ಎಲೆ ಮರೆಯ ಕಾಯಂತಿದ್ದ ಅನೇಕ ಪ್ರತಿಭಾವಂತ ಕಲಾವಿದರು ಬೆಳಕಿಗೆ ಬಂದದ್ದು ಇತಿಹಾಸ. ಶ್ರೀಯುತರಾದ ಕಾಳೆ ಸೋದರರು, ಫಕೀರಯ್ಯ ಹಿರೇಮಠ, ಎನ್. ಡಿ. ನಾರಾಯಣಭಟ್ಟ, ಕೆ. ಶಾಮಾ ನಾಯ್ಕ, ಎನ್. ಕೆ. ಶಂಕರಪ್ಪ, ಎ. ಹನುಮಂತಪ್ಪ, ಎಂ. ರೇವಣಸಿದ್ದಪ್ಪ, ಸದಾಶಿವ, ನಾಗರಾಜ್, ಎಸ್. ಎನ್. ಪರದುರಾಂ, ಎಂ. ಮುನಿಸ್ವಾಮಿ ಅವರೆಲ್ಲ ಅಪಾರ ಸೇವೆ ಸಲ್ಲಿಸಿ ಮಂಡಳಿಯ ಕೀರ್ತಿಗೆ ಭಾಜನರಾಗಿದ್ದಾರೆ. ಮಂಡಳಿಯ ಸದಸ್ಯರಾದ ಶ್ರೀ ಕೆ. ಶಂಕರಪ್ಪನವರ 'ಮಂಗಳಾ', ತೆರೆದ ಹೃದಯ', 'ಅಂತರ್ವಾಣಿ', 'ತೆರೆಯ ಮರೆಯಲ್ಲಿ' ನಾಟಕಗಳನ್ನು ಮಂಡಳಿಯೇ ಪ್ರಕಾಶನಗೊಳಿಸಿದೆ.

ಭಾರತಲಕ್ಷ್ಮಿ, ರಾಜಾಭೃರ್ತಹರಿ, ಬಸವೇಶ್ವರ, ಮಸ್ತಕಾಭರಣ, ಸತೀಧರ್ಮ, ಮಂಗಳಾ ಕದಡಿದನೀರು, ಅಪೂರ್ವಸಂಗಮ, ನನ್ನ ತಂಗಿಗೊಂದು ಗಂಡು ಕೊಡಿ ಮುಂತಾದ ನಾಟಕಗಳ ನೂರಾರು ಪ್ರದರ್ಶನ ನೀಡಿ ರಾಜ್ಯ ಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಪ್ರಥಮ ಪಾರಿತೋಷಕ, ವೈಯುಕ್ತಿಕ ಬಹುಮಾನ ಪಡೆದ ಕೀರ್ತಿ ಮಂಡಳಿಯದ್ದು.

1936ರಲ್ಲಿಯೇ ಶ್ರೀಯುತರಾದ ಎಸ್. ಎನ್. ಶೇಷಗಿರಿಯಚಾರ್, ಎನ್. ಎಸ್. ಸುಬ್ಬರಾವ್, ಎಸ್. ನಾರಾಯಣರಾವ್, ಕೆ. ಆರ್. ನಾರಾಯಣ ಮುಂತಾದವರು

"ಯಂಗ್ ಮೆನ್ಸ್ ಲಿಟರರಿ ಡ್ರಾಮೆಟಿಕ್ ಅಸೋಸಿಯೇಷನ್" (ವೈ.ಎಂ.ಎಲ್.ಡಿ.ಎ.) ಎಂಬ ಸಂಸ್ಥೆ ಪ್ರಾರಂಭಿಸಿ 'ಬಹದ್ದೂರ ಗಂಡು' ಮುಂತಾದ ನಾಟಕಗಳನ್ನು ಪ್ರದರ್ಶಿಸಿದ್ದಾರೆ.

1939ರಲ್ಲಿ ರಚನೆಯಾದ 'ಶ್ರೀ ಗಂಗಾಧರ ಕೃಪಾ ಪೋಷಿತ ನಾಟಕ ಮಂಡಳಿ' 1941ರಲ್ಲಿ 'ಸಹೋದರ ನಾಟಕ ಮಂಡಳಿ' ಎಂದಾಗಿ ಮುಂದೆ 'ಮಾರುತಿ ಸಹೋದರ ನಾಟಕ ಮಂಡಳಿ' ಎಂಬ ಹೆಸರಿನಲ್ಲಿ ಮುಂದುವರೆಯಿತು, ಇದಕ್ಕಾಗಿ ಶ್ರಮಿಸಿದವರು ಶ್ರೀಯುತರಾದ ಜಿ. ಕೆ. ಚನ್ನರಾಜು ಅರಸ್, ಎ. ಎ. ರೆಹಮಾನ್, ಹೆಚ್. ಸಿ. ಚನ್ನಯ್ಯ, ಎ. ಬಿ. ಮುದ್ದಪ್ಪ, ಬಿ. ಎಂ. ಬೇಸರಸಿಂಗ್, ಬಿ. ವಿ. ಲಕ್ಷ್ಮಣ ಮುಂತಾದವರು ಕಾಲಾಂತರದಲ್ಲಿ ಈ ಮಂಡಳಿಯಿಂದ ಹೊರಬಂದ ಶ್ರೀ ಬಿ. ವಿ. ಲಕ್ಷ್ಮಣ್ ಅವರು 'ಮಹಾಲಕ್ಷ್ಮಿ ನಾಟಕ ಮಂಡಳಿ'ಯನ್ನು ಸ್ಥಾಪಿಸಿದರು. ಇವರೆಲ್ಲ ಸೇರಿ ಕೆಂಪೇಗೌಡ, ಟಿಪ್ಪು ಸುಲ್ತಾನ್, ಬೇಡರ ಕಣ್ಣಪ್ಪ, ರಕ್ತದೀಪ, ದತ್ತುಪುತ್ರ, ಭೂಕೈಲಾಸ, ಮಾತಂಗಕನ್ಯಾ ಮುಂತಾದ ನಾಟಕಗಳ ಹಲವಾರು ಪ್ರದರ್ಶನ ನೀಡಿರುತ್ತಾರೆ.

1942ರಲ್ಲಿ ಶ್ರೀಯುತರಾದ ಎಂ. ಲಿಂಗಯ್ಯ, ಭೈರಪ್ಪ, ಎನ್. ಜಿ. ಸೂರ್ಯನಾರಾಯಣ ರಾವ್, ಸಿ. ಕೆ. ಲಕ್ಕಯ್ಯ, ಆರ್. ವೆಂಕಟಪ್ಪ ಮುಂತಾದವರು "ಜೈ ಭಾರತ ಭಕ್ತ ಕಲಾ ಮಂಡಳಿ'ಯನ್ನು ರೂಪಿಸಿ ಭಾಮಾ ಪರಿಣಯ, ಕುರುಕ್ಷೇತ್ರ, ದೈವದುರಂತ ಕರ್ಣ ಮುಂತಾದ ನಾಟಕಗಳನ್ನು ಪ್ರದರ್ಶಿಸಿದ್ದಾರೆ.

1943ರಲ್ಲಿ ಶ್ರೀಯುತರಾದ ಎಂ. ರಾಮರೆಡ್ಡಿ, ಎಂ. ನಂಜುಂಡಯ್ಯ, ಬಿ. ಬೋರಯ್ಯ, ಡಿ. ಎಸ್. ಹೊನ್ನಯ್ಯ, ಡಿ. ವೆಂಕಟಪ್ಪ, ವಿಶ್ವೇಶ್ವರಯ್ಯ, ಕಪನಿಪತಿಗೌಡ ಮೊದಲಾದವರು ಒಗ್ಗೂಡಿ ರೂಪಿಸಿದ್ದು "ಶ್ರೀರಾಮ ಸೇವಾ ನಾಟಕ ಮಂಡಳಿ" ಅದರಲ್ಲಿ ರಕ್ತರಾತ್ರಿ, ವರಭ್ರಷ್ಟ ದೇವರಗೊಂಬೆ, ಹುಚ್ಚುಕುದುರೆ, ಬಂಜೆ, ಭ್ರಮೆ ಮುಂತಾದ ನಾಟಕಗಳ ಹಲವಾರು ಪ್ರದರ್ಶನ ನೀಡಿರುತ್ತಾರೆ.

1944ರಲ್ಲಿ ಪ್ರಾರಂಭವಾದ "ಅಂಬಾ ನಾಟಕ ಮಂಡಳಿ" ಮುಂದೆ "ಅಂಬಾ ಸೆಲೆಕ್ಟ್ ಆರ್ಟಿಸ್ಟ್" ಎಂಬ ಹೆಸರಿನಲ್ಲಿ ಮುಂದುವರಿಯಿತು. ಇದರಲ್ಲಿ ಶ್ರಮಿಸಿದ ಹಿರಿಯರು ಶ್ರೀಯುತರಾದ ಓ. ವಿ. ಸುಬ್ಬರಾವ್, ಸಂತುರಾಮರಾವ್, ಬಿ. ಎಂ. ಸುಬ್ಬರಾವ್, ಆರ್. ಎನ್. ಖಂಡೇರಾವ್, ಆರ್.ಎನ್.ತುಳಜಪ್ಪ, ಶ್ಯಾಮ್‌ರಾವ್, ಕೆ. ಜಿ. ಭಗವಂತರಾವ್, ಕೆ. ಆರ್. ಸುಬ್ಬರಾವ್ ಅವರೊಂದಿಗೆ ಎಲ್. ಜಿ. ರಾಮರಾವ್, ಕೆ. ಶಾಮಯ್ಯಂಗಾರ್, ಆರ್. ಎನ್. ಶಾಂತಿಗ್ರಾಂ, ಕೆ. ರಾಮಶಾಸ್ತ್ರಿ, ಟೈಲರ್ ರಾಮು, ವಿ. ಹೆಚ್. ಶಂಕರಪ್ಪ, ಮರಿಸ್ವಾಮಿ ಮುಂತಾದವರೆಲ್ಲ ತುಂಬು ಶ್ರಮವಹಿಸಿ ಹಲವಾರು ಉತ್ತಮ ಕಾರ್ಯಕ್ರಮ ನೀಡಿರುತ್ತಾರೆ. ಅದರಲ್ಲಿ ಮುಖ್ಯವಾಗಿ ಕಿತ್ತೂರಚೆನ್ನಮ್ಮ, ವೀರ ಅಭಿಮನ್ಯು, ಕೃಷ್ಣಗಾರುಡಿ, ದೇವದಾಸಿ, ನಂದಾದೀಪ ಮುಖ್ಯವಾದವುಗಳು. 60ರ ದಶಕದಲ್ಲಿಯೇ ತಮ್ಮ ಹೆಸರಾಂತ ಕಿತ್ತೂರು ಚನ್ನಮ್ಮ ನಾಟಕವನ್ನು ಬೊಂಬಾಯಿಯಲ್ಲಿ ಪ್ರದರ್ಶಿಸಿ ಹೆಸರು ಮಾಡಿದ ಖ್ಯಾತಿ ಈ ಸಂಸ್ಥೆಯದು.

1944ರಲ್ಲಿ "ತಾರಾ ಸಂಗೀತ ನಾಟಕ ಮಂಡಳಿ" ಅಥವಾ "ತಾರಾ ನಾಟಕ ಮಂಡಳಿ" ಸ್ಥಾಪನೆಗೆ ಶ್ರಮಿಸಿದವರಲ್ಲಿ ಶ್ರೀಯುತರಾದ ಎ. ಎ. ರೆಹಮಾನ್, ಸಂಜೀವಪ್ಪ, ಎನ್. ವೆಂಕಟರಾವ್, ಹೆಚ್. ಎನ್. ನಾರಾಯಣ, ಬಿ. ಎಂ. ಚಲುವಯ್ಯ, ಟಿ. ಶ್ರೀನಿವಾಸರಾವ್, ವಿ. ವೆಂಕಟಸ್ವಾಮಿ, ಸಂಗಪ್ಪ ಪ್ರಮುಖರು ಪ್ರದರ್ಶಿಸಿದ ನಾಟಕಗಳಲ್ಲಿ ಮಾನವತಿ, ನಿರ್ಮಲಾ, ಭಕ್ತಮೀರಾ, ಕೃಷ್ಣಸುಧಾಮ ಪ್ರಮುಖವಾದವುಗಳು.

1947ರಲ್ಲಿ "ಅರೇಬಿಯನ್ ಸ್ಟಾರ್ ಡ್ರಮಾಟಿಕ್ ಅಸೋಸಿಯೇಷನ್" ನಂತರದಲ್ಲಿ "ತಾಲುಮುಲ್ ಮುಸ್ಲಿಮನ್" ಎಂಬ ಸಂಸ್ಥೆಗಳನ್ನು ಸ್ಥಾಪಿಸಿದ ಅಜೀಜ್ ಖಾನ್, ಮುಸ್ತಾನ್ ಸಾಬ್, ಅಬ್ದುಲ್ ಸತ್ತಾರ್ ಅವರು ಮತ್ತೂ ಕೆಲವರನ್ನು ಸೇರಿಸಿಕೊಂಡು ಲೈಲಾ ಮಜ್ನು, ಪಾಕ್‌ದಾಮನ್, ನೇಕ್ ಪರ್ವಿನ್ ಮುಂತಾದ ನಾಟಕಗಳನ್ನು ಪ್ರದರ್ಶಿಸಿದ್ದಾರೆ.

1949ರಲ್ಲಿ ಕಾಗದ ನಗರದ ಯುವಕರು ವಿದ್ಯಾರ್ಥಿಗಳು ಒಗ್ಗೂಡಿ ಸ್ಥಾಪಿಸಿದ 'ವಿದ್ಯಾರ್ಥಿ ಕಲಾ ಸಂಘ' ಮುಂದೆ 'ವಿ.ಕ.ಸಂ." ಎಂದೇ ಹೆಸರಾಗಿ ಬೆಳೆಯಿತು. ಅನೇಕ ಪ್ರತಿಭಾವಂತರನ್ನೆಲ್ಲ ಕಲೆ ಹಾಕಿದ ತಂಡ ಅನೇಕ ಉತ್ತಮ ನಾಟಕಗಳ ಪ್ರದರ್ಶನ ನೀಡುತ್ತ ಈಗಲು ರಂಗಭೂಮಿಯಲ್ಲಿ ಸಕ್ರಿಯವಾಗಿರುವುದು ಸಂತಸದ ಸಂಗತಿ. ಇದಕ್ಕೆ ಚೈತನ್ಯ ತುಂಬುತ್ತಿರುವರಲ್ಲಿ ಶ್ರೀ ಶಾಮಮೂರ್ತಿ, ಶ್ರೀ ಸಿ. ಲಕ್ಷ್ಮೀನಾರಾಯಣಪ್ಪ, ಎ. ಕೆ. ನಾರಾಯಣಮೂರ್ತಿ ಇವರೊಂದಿಗೆ ಶ್ರೀಯುತರಾದ ಹೆಚ್. ಬಿ. ಗೋಪಾಲ್, ಎನ್. ಡಿ. ಚಂದ್ರಶೇಖರ್, ಶಿವಾಜಿರಾವ್ ಬಿ., ಟಿ. ಜೆ. ಸುಂದರ್‌ರಾಜ್, ಜೆ. ಜಯಪಾಲ್, ಬಿ. ಹನುಮಂತೇಗೌಡ, ಯೋಹಾನ್, ಬಿ. ಎನ್. ರಂಗೇಗೌಡ, ಸಿ. ಚನ್ನಕೇಶವ ಮುಂತಾದವರು ಒಗ್ಗೂಡಿ ನಾಟಕಗಳ ಹಲವಾರು ಪ್ರದರ್ಶನ ನೀಡಿರುತ್ತಾರೆ. ರಾಜ್ಯದ ಎಲ್ಲಿಯೇ ನಾಟಕ ಸ್ಪರ್ಧೆ ನಡೆದರೂ ಭಾಗವಹಿಸಿದ ಈ ತಂಡ ತಮ್ಮ ಉತ್ತಮ ಪ್ರದರ್ಶನದಿಂದ ಅಭಿನಯ, ನಿರ್ದೇಶನ, ರಂಗಸಜ್ಜಿಕೆ, ವರ್ಣಾಲಂಕಾರ ಈ ಎಲ್ಲಾ ವಿಭಾಗಗಳಲ್ಲಿ ಪಾರಿತೋಷಕ ಪ್ರಶಸ್ತಿ ಬಹುಮಾನಗಳನ್ನು ಬಾಚಿಕೊಳ್ಳುತ್ತಿದ್ದ ಪ್ರತಿಭಾವಂತರ ತಂಡವಿದು.

ಬೊಂಬಾಯಿ, ದೆಹಲಿಗಳಲ್ಲಿ ನಾಟಕಗಳ ಅತ್ಯುತ್ತಮ ಪ್ರದರ್ಶನ ನೀಡಿ ಹೆಸರು ಮಾಡಿದ ಹೆಗ್ಗಳಿಕೆ ಇವರದು. ಪ್ರದರ್ಶಿಸಿದ ನಾಟಕಗಳ ಪಟ್ಟಿ ದೊಡ್ಡದಿದೆ. ಆದರೂ ಪ್ರೇಮಬಲಿ, ವಿಷಜ್ವಾಲೆ, ದಸರಾ, ವಾತ್ಸಲ್ಯ, ಮೇಜರ್ ಶ್ರೀಧರ್, ಅಂಚೆಮನೆ, ಜೋಕುಮಾರಸ್ವಾಮಿ, ದಿವ್ಯದರ್ಶನ, ಕಲಿಕಂಠೀರವ, ರೊಟ್ಟಿಋಣ, ರಂಗಪುರಂದರ, ಮೌನಕೋಗಿಲೆ, ಮಟ್ಟಕ್ಕನ ಮೆಡಿಕಲ್ ಕಾಲೇಜ್ ಮುಂತಾಗಿ ಹೆಸರಿಸಬೇಕಿದೆ.

1951ರಲ್ಲಿ "ನವೋದಯ ನಾಟಕ ಮಂಡಳಿ" ಉದಯಕ್ಕೆ ಕಾರಣರಾದ ಶ್ರೀಯುತ ಹೆಚ್. ವಿ. ರಂಗಸ್ವಾಮಿ, ಬಿ. ವಿ. ನಾರಾಯಣರಾವ್, ಎನ್. ಡಿ. ಶಿವಪ್ಪ, ಎಂ. ಎಸ್. ಸೀತಾರಾಂ, ಟಿ. ಎಸ್. ಲಕ್ಷ್ಮಣರಾವ್, ಮುಂತಾದವರು ಸಂಸಾರನೌಕೆ, ಕರೀಮಣಿ, ಮಕ್ಮಲ್ ಟೋಪಿ ಮೊದಲಾದ ನಾಟಕಗಳನ್ನು ಪ್ರದರ್ಶಿಸಿದ್ದಾರೆ.

1952ರಲ್ಲಿ "ಜೈಹಿಂದ್ ನಾಟಕ ಮಂಡಳಿ" ಸ್ಥಾಪನೆ. ಶ್ರೀಯುತರಾದ ಸಿ. ಕೆ. ಶ್ರೀನಿವಾಸಮೂರ್ತಿ, ಬಿ. ಎಂ. ಸದಾಶಿವನ್, ಸೀತಾರಾಮಯ್ಯ ಇವರ ಮುಂದಾಳತ್ವದಲ್ಲಿ ಚಲನ ಪ್ರಪಂಚ, ನಿರ್ದೋಷಿ, ವಧು–ವರ, ದ್ರೋಹಿ ಮುಂತಾಗಿ ನಾಟಕಗಳಾಗಿವೆ.

1955ಕ್ಕೂ ಹಿಂದೆ ಇದ್ದ "ತಮಿಳು ನಾಟಕ ಸಂಘ" ಭದ್ರಾವತಿಯ ಜನತೆಗೆ ತಮಿಳು ನಾಟಕಗಳನ್ನು ಪರಿಚಯಿಸಿತು. ಇದಕ್ಕಾಗಿ ಶ್ರಮಿಸಿದ ಶ್ರೀಯುತ ಅಲೆಕ್ಸ್, ಜೆ. ಟಿ. ಕನಕರಾಜ, ಡಿ. ಎಸ್. ರಾಮಚಂದ್ರ ಅಯ್ಯರ್, ವೇಲಾಯುಧನ್, ಜಿ. ಕೃಷ್ಣೋಜಿರಾವ್, ಟಿ. ಎಂ. ವೆಂಕಟೇಶನ್ ಮೊದಲಾದವರು ಸತ್ಯವಾನ್ ಸಾವಿತ್ರಿ, ಪಾಂಡಿಯನ್, ಸುಂದ್ರಮೋಹನ್ ಮೊದಲಾದ ನಾಟಕ ಪ್ರದರ್ಶಿಸಿದ್ದಾರೆ. 1957ರಲ್ಲಿ "ಮುತ್ತಮಿಳ್ ನಾಟಕ ಮಂಡಳಿ" ಸ್ಥಾಪನೆಯಾಗಿ "ಪಾಂಡ್ಯನಾಟ್ ಇಳೆವರಸಿ" ನಾಟಕ ಪ್ರದರ್ಶಿಸಿದ ದಾಖಲೆಯಿದೆ.

1956ರಲ್ಲಿ ಪ್ರಾರಂಭವಾದ "ಶ್ರೀ ಶಾರದಾ ಸಂಗೀತ ನಾಟಕ ಮಂಡಳಿ"ಗಾಗಿ ಶ್ರಮಿಸಿದವರು ಶ್ರೀ ಡಿ. ಕೆ. ಶ್ರೀನಿವಾಸಯ್ಯಂಗಾರ್, ಕೆಂಪಯ್ಯ, ಎಂ. ಮಾದಯ್ಯ ಇನ್ನೂ ಹಲವರೊಂದಿಗೆ ನನ್ನ ಸಹೋದರ, ನೆತ್ತರದ ಔತಣ, ಕಾರಸ್ಥಾನ, ಆದರ್ಶ ಪ್ರೇಮ, ಹೃದಯ ದೇಗುಲ, ಕೀಚಕ ಮುಂತಾದ ನಾಟಕ ನೀಡಿದ್ದಾರೆ.

1959ರಲ್ಲಿ ಸ್ಥಾಪನೆಯಾದ "ನವಜ್ಯೋತಿ ನಾಟಕ ಮಂಡಳಿ' ವತಿಯಿಂದ ಜಗಜ್ಯೋತಿ ಬಸವೇಶ್ವರ ನಾಟಕ ಪ್ರದರ್ಶಿಸಿದ್ದಾರೆ.

1971ರಲ್ಲಿ "ನವೋದಯ ಕಲಾ ಸಂಘ" ಉದಯ ಇದಕ್ಕೆ ಶ್ರಮಿಸಿದವರು ಶ್ರೀಯುತರಾದ ಎಸ್. ಸುಬ್ರಮಣ್ಯ, ಲಕ್ಷ್ಮೀಪತಿ, ಎಸ್. ಜಿ. ಶಂಕರಮೂರ್ತಿ, ಬಿ. ಎನ್. ಕೆ. ನಾಗರಾಜ್, ರಂಗಸ್ವಾಮಿ, ಕ್ಷೇತ್ರಪಾಲ, ಡಿ. ವೆಂಕಟರಮಣಯ್ಯ, ಆರ್. ಪರಮೇಶ್ವರಪ್ಪ, ಡಿ. ಎನ್. ಸುರೇಶ್ ಮುಂತಾದವರು ಚತುರ ಚಾಣಕ್ಯ, ಪಾದರಕ್ಷೆ, ಆಹ್ವಾಹನೆ, ಬೆನಕನ ಕೆರೆ, ಮೀನಿನ ಹೆಜ್ಜೆ, ಕನಸು–ನನಸು, ಇವನಾರವ–ಇವನಮ್ಮವ ಮುಂತಾದ ನಾಟಕಗಳ ಯಶಸ್ವಿ ಪ್ರದರ್ಶನ ನೀಡಿದ್ದಾರೆ.

"ಪ್ರತಿಭಾ ಕಲಾ ಸಂಘ"ದ ಹೆಸರನಡಿಯಲ್ಲಿ ಒಗ್ಗೂಡಿದ ಪೀಟರ್ ಜಯಕುಮಾರ್, ಗೋಪಾಲ್ ಸಿಂಗ್, ಸಿದ್ದಯ್ಯ, ಲಕ್ಷ್ಮಿನರಸಿಂಹಯ್ಯ, ಶಿವಾಜಿರಾವ್ ಮೊದಲಾದವರು ರೋಡ್ ರೋಮಿಯೊ, ಬಾಳಬೆಳಕು, ಮಂಗಳಾ, ಹುಚ್ಚು ಕುದುರೆ, ಬಾಕಿ ಇತಿಹಾಸ, ಹೆಣ್ಣಿನ ಬಾಳು ಕಣ್ಣೀರೇನೆ ಮೊದಲಾದ ನಾಟಕಗಳ ಯಶಸ್ವಿ ಪ್ರದರ್ಶನ ನೀಡಿದ್ದಾರೆ.

1990ರಲ್ಲಿ "ಸಂಯುಕ್ತ" ತಂಡ ರೂಪಗೊಂಡಿತು. ವಿಕಸಂ. ನವೋದಯ ಮತ್ತು ಶ್ರೀರಾಮ ನಾಟಕ ಮಂಡಳಿಯ ಕಲಾವಿದರು ಒಗ್ಗೂಡಿ ಭದ್ರಾವತಿಯ ಕಲಾಭಿಮಾನಿಗಳ ಅಭಿಮಾನದ ತಂಡವಾಗಿ ಮೂಡಿಬಂದಿದೆ. ಸಂಸ್ಥೆಗೆ ನಿಗದಿತ ಸದಸ್ಯರನ್ನು ಮಾಡಿಕೊಂಡು ವರ್ಷದಲ್ಲಿ 3 ಕಾರ್ಯಕ್ರಮ ಉಚಿತವಾಗಿ ನೀಡುತ್ತಿದ್ದಾರೆ. ಉತ್ತಮ ನಾಟಕಗಳ ಆಯ್ಕೆ, ಪಾತ್ರಕ್ಕೆ ಸೂಕ್ತ ಕಲಾವಿದರು, ಜಾನಪದ ಸೊಗಡು ಇವುಗಳಿಂದ ಪ್ರೇಕ್ಷಕರ ಮನಗೆದ್ದ ತಂಡವಿದು ಎಂದರೆ ಅತಿಶಯೋಕ್ತಿಯಲ್ಲ. ಪ್ರತಿ ಕಾರ್ಯಕ್ರಮದಲ್ಲಿ ಬೇರೆ

ಹಿರಿಯ ಕಲಾ ಸಂಸ್ಥೆಗಳ ಹಿರಿಯ ಕಲಾವಿದರನ್ನು ಆಹ್ವಾನಿಸಿ ಆದರಿಸಿ ಗೌರವಿಸುವ ಒಳ್ಳೆಯ ಸಂಪ್ರದಾಯ ಹಾಕಿದ್ದು, ಈ ಸಂಯುಕ್ತ ತಂಡದ ಹಿರಿಮೆ.

ಅಲ್ಲದೆ ಹಿರಿಯ ಅಶಕ್ತ ಕಲಾವಿದರಿಗೆ ಸಹಾಯಧನ ನೀಡುವ ಪದ್ಧತಿ ಎಲ್ಲರೂ ಹೆಮ್ಮೆ ಪಡುವ ವಿಷಯ, ಈ ಎಲ್ಲವುಗಳಿಂದ ಭದ್ರಾವತಿಯ ಕಲಾ ರಂಗದಲ್ಲಿ "ಸಂಯುಕ್ತ" ಮುಂಚೂಣಿಯಲ್ಲಿರುವುದು ಗಮನಾರ್ಹ.

ಭದ್ರಾವತಿಯ ವಿದ್ಯುಚ್ಛಕ್ತಿ ಇಲಾಖೆಯ ನೌಕರರು ಸೇರಿಕೊಂಡು ಸ್ಥಾಪಿಸಿದ 'ಜೆ.ಪಿ.ಎಸ್. ಕ್ಲಬ್' ಮತ್ತು 'ಜ್ಯೋತಿ ಕಲಾ ಸಂಘ' ಇವುಗಳಲ್ಲಿ ಶ್ರಮವಹಿಸಿ ಕಾರ್ಯ ನಿರ್ವಹಿಸಿದವರು ಶ್ರೀಯುತರಾದ ಜಿ. ಕೆ. ಸತ್ಯಮೂರ್ತಿ, ಜಾನ್ ಪೆರ್ರೈರಾ ಚಂದ್ರಶೇಖರ್ ಮುಂತಾದವರು ಇವರು ಪ್ರದರ್ಶಿಸಿದ ನಾಟಕಗಳು ಪಂಗನಾಮ, ಬೀಗರು ಬರುತ್ತಾರೆ. ಬದುಕ ಮನ್ನಿಸೋ ಪ್ರಭುವೆ, ಕಂಬ್ಳಿ ಸೇವೆ, ಕಣ್ಣಿಗೆ ಮಣ್ಣು, ಬಾಡ್ಗೆಮನೆ, ಮಗಮದ್ವೆ ಮುಂತಾದವು.

"ಆಂಧ್ರ ಸೆಲೆಕ್ಟ್ ನಾಟಕ ಮಂಡಳಿ" ಸ್ಥಾಪಿಸಿದ ಸತ್ಯನಾರಾಯಣ ರಾಮರೆಡ್ಡಿ, ಎಂ. ಬಾಬುರಾವ್, ಭದ್ರಾಚಲಂ, ದೇವದಾನಂ, ಟಿ. ಪ್ರಭುದಾಸ್ ಮೊದಲಾದವರು ಕೋಡುನೀಡ, 'ಆಶಾಭಾವಂ', ವಿದ್ಯಾರ್ಥಿನಿ, ಶಾರದ, ಮನುಷ್ಯಲು ಮನಸುಲು ತೆಲುಗು ನಾಟಕಗಳನ್ನು ಪ್ರದರ್ಶಿಸಿರುವುದು ತಿಳಿದು ಬರುತ್ತದೆ.

ಅಲ್ಲದೆ "ತೆಲುಗು ಫ್ರೆಂಡ್ಸ್ ಅಸೋಸಿಯೇಷನ್" "ಆಂಧ್ರಬಾಲ ಭಾರತಿ ನಾಟಕ ಮಂಡಳಿ" ವತಿಯಿಂದಲೂ ಕೆಲವು ನಾಟಕ ಪ್ರದರ್ಶಿಸಿದ್ದಾರೆ.

"ಅಣ್ಣಾ ಕಲೈ ಮಂಡಂ" ಸ್ಥಾಪಿಸಿದ ಶ್ರೀಯುತ ಎನ್. ಶ್ರೀರಾಮುಲು, ವಿ. ಕೆ. ಸಿಂಗಾರಂ, ಎಸ್. ದೇವರಾಜನ್, ಕೆ. ವೇಲಾಯುಧನ್, ವಿ. ಕೆ. ಆರ್ಮುಗಂ, ಆರ್. ರಾಮು, ಎ. ಮುರುಗೇಶ್, ಸಿ. ಮಣಿ ಮುಂತಾದವರು ವಿದುವಿಯನ್, ಪುದುವಾಳ್ವು, ವಣ್ಣಮದಿ, ಪುದುವೈ ಪುರುಚಿ ಮೊದಲಾದ ತಮಿಳು ನಾಟಕಳನ್ನು ನೀಡಿದ್ದಾರೆ.

ಅಲ್ಲದೆ "ಉದಯ ಸೂರ್ಯ ನಾಟಕ ಮಂಡಳಿ" "ಎನ್.ಎಸ್.ಕೆ. ನಾಟಕ ಮಂಡಳಿ" "ಸೇವಾದಳ ನಾಟಕ ಮಂಡ್ರಂ" "ಕಲೈವಾಣಿ ನಾಟಕ ಮಂಡ್ರಂ" "ಜೋಮನ್ ಕ್ಯಾಥೋಲಿಕ್ ಡ್ರಾಮ ಅಸೋಸಿಯೇಷನ್" ಮುಂತಾದ ಹೆಸರಿನಡಿಯಲ್ಲಿ ಕೆಲವಾರು ಸ್ನೇಹಿತರು ನಾಟಕಗಳನ್ನು ಪ್ರದರ್ಶಿಸಿದ್ದಾರೆ.

"ಹಿಂದಿ ಪ್ರೇಮಿ ಮಂಡಳಿ" ವತಿಯಿಂದಲೂ "ಪೇಟ್ ಮೆದಾಡಿ" ಹಿಂದಿ ನಾಟಕಗಳನ್ನು ನೀಡಿರುವುದಿದೆ.

ಸುಮಾರು 60–70ರ ದಶಕದಲ್ಲಿ ಹಿರಿಯ ಸಂಸ್ಥೆ "ಮಿತ್ರ ಕಲಾ ಮಂಡಳಿ" ಆಯೋಜಿಸುತ್ತಿದ್ದ ನಾಟಕ, ಏಕಪಾತ್ರಾಭಿನಯ, ಸಂಗೀತ ಸ್ಪರ್ಧೆಗಳಲ್ಲಿ ಭಾಗಿವಹಿಸಬೇಕೆಂಬ ಉತ್ಸಾಹದಿಂದ ಅನೇಕ ಕಲಾಭಿಮಾನಿ ಯುವಕರು ಹಲವಾರು ತಂಡ ರಚಿಸಿಕೊಂಡು ಉತ್ತಮ ಪ್ರದರ್ಶನ ನೀಡಿ ಬೆಳಕಿಗೆ ಬಂದಿದ್ದಾರೆ. ಆದರೆ ಆ ಬಗ್ಗೆ ಹೆಚ್ಚು ಮಾಹಿತಿ ಇಲ್ಲದಿರುವುದು ನೋವಿನ ಸಂಗತಿ. ಆದರೂ ಪ್ರಯಾಸದಿಂದ ತಿಳಿದು ಬಂದ ಕಲಾ

ತಂಡ ಮತ್ತು ನೀಡಿದ ಪ್ರದರ್ಶನದ ಅಲ್ಪ ವಿವರ ನೀಡಲಾಗಿದೆ.

| | | |
|---|---|---|
| ಮಂಜುನಾಥ ನಾಟಕ ಮಂಡಳಿ | – | (ನಾಟಕ ನಂಜಿನ ನಾಲಿಗೆ) |
| ಯುವಕರ ಕಲಾ ಬಳಗ | – | (ಅಕ್ಕಪಕ್ಕ) |
| ಶ್ರೀವಾಗ್ದೇವಿ ಕಲಾ ಸಂಘ | – | (ನನ್ನ ಗೋಪಾಲ) |
| ಅರುಣೋದಯ ಕಲಾ ಸಂಘ | – | (ಸಮಯಕ್ಕೊಂದ್ಸುಳ್ಳು) |
| ಕರ್ನಾಟಕ ಕಲಾ ಸಂಘ | – | (ಮುಡಾರಿ ಮುಟ್ಟಪ್ಪ, ಸಾಧಿಸಿದ ಸೇಡು) |
| ಕಿರಣ್ ಕಲಾ ಸಂಘ | – | (ಅಗ್ನಿಶಿಖೆ, ಸಿಡಿಲಮರಿ, ರಕ್ತಾಂಜಲಿ) |
| ಎಂ.ಪಿ.ಎಂ. ಕಲಾ ವೃಂದ | – | (ಹುಚ್ಚ, ಕನ್ನಡವೇ ದೇವರು) |
| ವಿಶ್ವಭಾರತಿ ಕಲಾ ಸಂಘ | – | (ನಂಜಿನ ನಾಲಿಗೆ, ಗಯ್ಯಾಳಿ ಗಂಡ) |
| ಸರಸ್ವತಿ ಕಲಾ ಸಂಘ | – | (ರೊಟ್ಟಿ ಋಣ) |
| ತರುಣ ಕಲಾವಿದರು | – | (ರಕ್ತಾಕ್ಷಿ, ಗಾಡೋ) |
| ಯುವಕ ಮಿತ್ರ ಕಲಾ ಸಂಘ | – | (ಕರ್ನಾಟಕ ರಮರಮಣ, ರಣದುಂಧುಬಿ) |
| ಕಲಾಭಿಮಾನಿಗಳ ಕಲಾ ಸಂಘ | – | (ಕೊಡೆಗಳು, 36 ಅಲ್ಲ 63) |
| ಶ್ರೀಕೃಷ್ಣ ಕಲಾ ಸಂಘ | – | ಮಲತಾಯಿ, ಭಾರತಿ) |
| ಶಾರದಾ ಕಲಾ ಸಂಘ | – | (ಪಿಕ್ ಪಾಕೆಟ್) |
| ಯು.ರೈ.ಸ. | – | (ಗಾಡೋ) |
| ತರುಣ ಕಲಾವಿದರು | – | (ರಕ್ತಾಕ್ಷಿ) |
| ಸಮತಾ ರಂಗ | – | (ಗೋಕರ್ಣದ ಡೌಡಶಾನಿ) |
| ಯುವಕ ಕಲಾ ಸಂಘ | – | (ಗಂಡ್ಸಲ್ವೆ ಗಂಡ್ಸು) |
| ನಟನ ಕಲಾವಿದರು | – | (ಸಂಗ್ಯಾಬಾಳ್ಯ, ಕಿಲಾಡಿ ಹುಡುಗ) |
| ಎಂ.ಪಿ.ಎಂ. ಚಿತ್ರ ಕಲಾವಿದರು | – | (ಜನ್ಮಾಂತರೀಯ, ನಂಜಿನ ನಾಲಿಗೆ) |
| ನಟರಾಜ ಕಲಾನಿಕೇತನ | – | (ರೊಟ್ಟಿಋಣ) |
| ಜೈಹಿಂದ್ ನಾಟಕ ಮಂಡಳಿ | – | (ಘಾಟಿ ಗೋವಿಂದ) |
| ವಿನಾಯಕ ಕಲಾ ಸಂಘ | – | (ಕೆಂಬೂತ) |
| ಫ್ರೆಂಡ್ಸ್ ಕ್ಲಬ್ | – | (ವಾಲ್ಮೀಕಿಯ ಭಾಗ್ಯ) |
| ರಾಮಾಂಜನೇಯ ಕಲಾ ಸಂಘ | – | (ಅಂತು–ಇಂತು) |
| ವಿಶ್ವೇಶ್ವರಯ್ಯ ಕಲಾ ಸಂಘ | – | (ಲಕ್ಪತಿ ಲಕ್ಕಪ್ಪ) |

| | | |
|---|---|---|
| ಆರ್ಯವೈಶ್ಯ ಯುವಕ ಸಂಘ | – | (ಕಲೆಯ ಕೊಲೆ) |
| ಉದಯ ಕಲಾ ಸಂಘ | – | (ಕಂಬನಿ) |
| ನಟರಾಜ ಕಲಾ ಮಂಡಳಿ | – | (ಒಥೆಲೊ) |
| ವೆಂಕಟೇಶ್ವರ ಕಲಾ ಸಂಘ | – | (ವರದಕ್ಷಿಣೆ) |
| ರಾಘವೇಂದ್ರ ಕಲಾ ಸಂಘ | – | (ಆಹುತಿ) |
| ಕನ್ನಡ ನವೀನ ಕಲಾ ಸಂಘ | – | (ಕಲೆಯ ಕೊಲೆ) |
| ಯಂಗ್ ಆರ್ಟಿಸ್ಟ್ | – | (ಚಂದೊಳ್ಳಿ ಚಲುವೆ) |

## ಅಭಿನಯ ನಾಟ್ಯರಂಗ

ಶ್ರೀ ಜಿ. ವಿ. ಸಂಗಮೇಶ್ ಅವರು ವೈಯುಕ್ತಿಕವಾಗಿ ಹೆಸರಾಂತ ಶಿಲ್ಪಿ, ನಟರು, ನಾಟಕಕಾರರಾಗಿ ಬೆಳೆದು ನಿಂತವರು, ಯಾವ ರಂಗ ತಂಡಕ್ಕೂ ಸೀಮಿತವಾಗಿರದೆ ಎಲ್ಲರೊಂದಿಗೆ ಕಲಾ ಸೇವೆ ಸಲ್ಲಿಸಿದ ಶ್ರೀಯುತರು ಭದ್ರಾವತಿಯಲ್ಲಿ ಆತ್ಮೀಯ ಗೆಳೆಯ, ಸ್ನೇಹ ಜೀವಿ ಎನಿಸಿದ್ದಾರೆ.

ಇಷ್ಟೆಲ್ಲಾ ಕಲಾ ಕುಸುಮಗಳನ್ನು ತನ್ನೊಡಲಲ್ಲಿರಿಸಿಕೊಂಡು ಬೆಳೆಸಿ ಪೋಷಿಸಿದ ಭದ್ರಾವತಿ ಒಂದು ಸುಸಜ್ಜಿತ ರಂಗಮಂದಿರವನ್ನು ನೀಡಲಿಲ್ಲವಲ್ಲ ಎಂಬುದು ತೀವ್ರ ನೋವಿನ ಸಂಗತಿ. ಇದಕ್ಕೆ ನಾವು ನೀವು ಎಲ್ಲರೂ ಹೊಣೆಗಾರರಲ್ಲವೆ?

ಎನ್. ಕೆ. ಶಂಕರಪ್ಪ
ಭದ್ರಾವತಿ

## ವಿಕಸಂ (ರಿ.), ಭದ್ರಾವತಿ

**ಸಂಪರ್ಕ: ಎಸ್.ಶಾಮಮೂರ್ತಿ, ದೂ: 95915 58336**

ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಒಂದು ಕೈಗಾರಿಕಾ ಕೇಂದ್ರ, ಎರಡು ಬೃಹತ್ ಕೈಗಾರಿಕೆಗಳು ಇಲ್ಲಿ ತಲೆ ಎತ್ತಿ ನಿಂತಿವೆ. ಒಂದು ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಇನ್ನೊಂದು ಮೈಸೂರು ಕಾಗದ ಕಾರ್ಖಾನೆ ಜೊತೆಗೆ ಸಕ್ಕರೆ ಕಾರ್ಖಾನೆ, ಭದ್ರಾವತಿ ಕೇವಲ ಕಾರ್ಖಾನೆಗಳಿಗೆ ಮಾತ್ರ ಪ್ರಸಿದ್ಧಿಯಲ್ಲ, ಕಲಾ ತಂಡಗಳಿಗೂ, ಕಲಾವಿದರಿಗೂ ಕೂಡ ಪ್ರಸಿದ್ಧಿ ಭದ್ರಾವತಿ ನಗರ.

ರಂಗಭೂಮಿ ಸತ್ಯಶೀಲತೆಯನ್ನು ಕಾಪಾಡುವ ಯಜ್ಞಭೂಮಿ ಇಂಥಾ ಚೈತನ್ಯ ಸ್ವರೂಪದ ಭೂಮಿಕೆ ಬೇರೊಂದಿಲ್ಲ. ರಂಗ ಭೂಮಿಯೂ ಸಮಾಜದ ಬದುಕನ್ನು ಪ್ರತಿಬಿಂಬಿಸುವ ಕನ್ನಡಿ ಆದಿಕಾಲದಿಂದಲೂ ರಂಗಭೂಮಿಯು ತನ್ನ ಸ್ಥಾನವನ್ನು ಉಳಿಸಿಕೊಂಡು ಬಂದಿದೆ. ಯಾವ ಮಾಧ್ಯಮಗಳೇ ಬಂದರೂ, ರಂಗಭೂಮಿಗೆ ಎಂದಿಗೂ ಸಾವಿಲ್ಲ. ವ್ಯಕ್ತಿಯು ತನ್ನ ಬದುಕಿನಲ್ಲಿ ಹಲವಾರು ಸಂಸಾರಿಕ, ವ್ಯವಹಾರಿಕ ಸಮಸ್ಯೆಗಳ ಮಧ್ಯೆ ಒಂದಿಷ್ಟು ಇಂತಹ ರಂಗ ಚಟುವಟಿಕೆಗಳ ನ್ನಿರಿಸಿಕೊಂಡಿದ್ದರೆ 'ವ್ಯಕ್ತಿಯಾಗಿ' ಬೆಳೆಯಲು ಸಹಕಾರಿಯಾಗುತ್ತಿದೆ. "ಭೂಮಿಯಲ್ಲಿ ಬಿಸಿಲಬೇಗೆಗೆ ಹೊಳೆಯ ನೀರೆಲ್ಲಾ ಬತ್ತಿದರೂ ಭೂಗರ್ಭದಲ್ಲಿ ಗುಪ್ತ ಜಲದ ಹಾಡು" ಎಂಬಂತೆ ಕಲೆ ಪ್ರತಿಯೊಬ್ಬ ಮನುಷ್ಯನಲ್ಲೂ ಗುಪ್ತವಾಗಿರುತ್ತದೆ. ಕಲೆಗಳ ಬಗ್ಗೆ ಆಸಕ್ತಿ, ಅರಿವು, ಅಧ್ಯಯನ, ಅಭ್ಯಾಸಗಳಿಂದ ತನ್ನನ್ನು ತೊಡಗಿಸಿಕೊಂಡು ಜೀವನದಲ್ಲಿ ರಸನಿಮಿಷಗಳನ್ನು ಅನುಭವಿಸುವ ಜಾಣ್ಮೆ ರಸಪ್ರಜ್ಞೆ ಬೆಳೆಸಿಕೊಳ್ಳಬೇಕು. ಈ ಕಲಾ ಪ್ರಕಾರಗಳನ್ನು ಹಲವಾರು, ಸಂಗೀತ, ನೃತ್ಯ, ನಾಟಕ ಇತ್ಯಾದಿ ಎಂಬಂತಿರುವ ಕೇವಲ ವಿಲಾಸಕಲ್ಲ, ಅದು ವಿಕಾಸಕ್ಕೆ ಎಂಬ ಧ್ಯೇಯವನ್ನು ಹೊಂದಿ ಸಮಾಜದ ಅಂಕುಡೊಂಕುಗಳನ್ನು, ಓರೆಕೋರೆಗಳನ್ನು ಸಹಜವಾಗಿ ಅಭಿವ್ಯಕ್ತಿಗೊಳ್ಳುವ ದೃಶ್ಯ ಕಾವ್ಯವಾದ ನಾಟಕವೊಂದು ಪರಿಣಾಮಕಾರಿ ಮತ್ತು ಪ್ರಬಲ ಮಾಧ್ಯಮ ಇಂತಹ ನಾಟಕದ ಕಲೆಯನ್ನು ಜನ ಸಾಮಾನ್ಯರ ಬಳಿ ಒಯ್ದು ಅವರಲ್ಲಿ ಆಸಕ್ತಿ ಹುಟ್ಟಿಸಬೇಕೆಂಬ ಸದುದ್ದೇಶದಿಂದ ವಿದ್ಯಾರ್ಥಿ ದೆಸೆಯಿಂದಲೂ ಕಲಾ ಸೇವೆ ಗೈಯುತ್ತಿರುವ "ವಿದ್ಯಾರ್ಥಿ ಕಲಾ ಸಂಘ ಅರ್ಥಾತ್ ವಿಕಸಂ ಕಲಾವಿದರ" ತಂಡವು ಒಂದು ಹವ್ಯಾಸಿ ಕಲಾ ತಂಡವಾಗಿ ಬೆಳೆದು ಬಂದಿದೆ.

ವಿಕಸಂ ಕಲಾವಿದರ ತಂಡ ಈಗಾಗಲೇ ಅರ್ಧ ಶತಮಾನವನ್ನು ಸವಿಸಿದೆ. ಇಂದಿಗೆ

59 ವರ್ಷಗಳ ಹಿಂದೆ ಅಂದರೆ ಏಪ್ರಿಲ್ 1949ರ ಒಂದು ಶುಭದಿನದಲ್ಲಿ "ವಿದ್ಯಾರ್ಥಿಕೂಟ" ಎಂಬ ನಾಮಕರಣದಿಂದ ಪ್ರಾರಂಭವಾಗಿ "ವಿದ್ಯಾರ್ಥಿ ಕಲಾ ಸಂಘ" ಎಂಬ ಅಭಿಮಾನ ತಳೆದು "ಈಗ್ಗೆ 28 ವರ್ಷಗಳಿಂದೀಚೆಗೆ ವಿಕಸಂ ಎಂಬ ಶಿರೋನಾಮೆ ಹೊತ್ತು ನಡೆದು ಬಂದಿರುವುದು ಎಲ್ಲರಿಗೂ ತಿಳಿದ ವಿಚಾರವಾಗಿದೆ.

ಒಂದು ನಿರ್ದಿಷ್ಟ ಆಸಕ್ತಿಗಳ ಚಾಲನೆಗಾಗಿ ಸಂಘಗಳು ಪ್ರಚಲಿತಕ್ಕೆ ಬರುತ್ತವೆ. ಅರಂಭದಿಂದಲೇ ಕಾರ್ಯಪ್ರವೃತ್ತರಾದರೂ ಕ್ರಮೇಣ ಇವುಗಳು ಸಂಘಟನೆ, ಆರ್ಥಿಕ ಕೊರತೆ, ವಿಭಿನ್ನ ಅಭಿಪ್ರಾಯಗಳ ಕಾರಣ ನೇಪಥ್ಯವನ್ನು ಸೇರುತ್ತವೆ. ಆದರೆ ಈ ಎಲ್ಲಾ ಅಪವಾದಗಳನ್ನು ಮೀರಿ "ವಿಕಸಂ ತಂಡ 60 ವರ್ಷಗಳನ್ನು" ಚಟುವಟಿಕೆಯಿಂದ ದಾಟಿ ಬದುಕಿರುವುದು ಸಂತಸದ ಹಾಗೂ ಹೆಮ್ಮೆಯ ವಿಷಯ. ಆಧುನಿಕ ಕನ್ನಡ ರಂಗಭೂಮಿಯ ಬೆಳವಣಿಗಾಗಿ ನಿಷ್ಠೆಯಿಂದ ಹೆಣಗುತ್ತಿರುವ ಹವ್ಯಾಸ ಕಲಾ ತಂಡಗಳಲ್ಲಿ ಒಂದು ಎಂದರೆ ಅತಿಶಯೋಕ್ತಿಯಲ್ಲ.

"ನಮ್ಮದೊಂದು ಗೆಳೆಯರ ಗುಂಪು ಹೊಟ್ಟೆಪಾಡಿಗಾಗಿ ದಿನಂಪ್ರತಿ ಕಾರ್ಖಾನೆಯ ಕಛೇರಿ ಹಾಗೂ ಯಂತ್ರಗಳ ಜೊತೆ ಒಡನಾಡಿದ ಉತ್ಸಾಹೀ ಯುವಕರು ನಿವೃತ್ತಿಯಾದವರು ಮನಸ್ಸಿನ ಉಲ್ಲಾಸಕ್ಕಾಗಿ ಮನೋವಿಕಾಸಕ್ಕಾಗಿ ಹಚ್ಚಿಕೊಂಡ ಹವ್ಯಾಸ ನಾಟಕ" ಎನ್ನುತ್ತಾರೆ. ಈಗ್ಗೆ ಸುಮಾರು 59 ವರ್ಷಗಳ ದೀರ್ಘಾವಧಿಯಲ್ಲಿ ಎಂ.ಪಿ.ಎಂ. ಅಡಳಿತ ವರ್ಗದವರ ಹಾಗೂ ನಗರದ ಕಲಾಭಿಮಾನಿಗಳ ಸಹಾಯ ಸಹಕಾರ ಪ್ರೋತ್ಸಾಹದಿಂದಾಗಿ ಸುಮಾರು 92ಕ್ಕೂ ಮೇಲ್ಪಟ್ಟ ಸಾಮಾಜಿಕ ಐತಿಹಾಸಿಕ ಪೌರಾಣಿಕ, ಜಾನಪದ ಅಸಂಗತ ಹಾಗೂ ಬೀದಿನಾಟಕಗಳನ್ನು ಅಭ್ಯಾಸ ಮಾಡಿ, ಪ್ರಯೋಗಿಸಿ ಸುಮಾರು 500-600ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿ, ಕಲಾಭಿಮಾನಿಗಳ ಪ್ರೀತಿ ಅಭಿಮಾನಗಳಿಸಿದೆ.

ಕರ್ನಾಟಕ ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ 3 ಬಾರಿ ಸ್ವರ್ಣ ಪದಕ, 12 ಬಾರಿ ರಜತ ಪದಕಗಳು, 41 ಬಾರಿ ಪರ್ಯಾಯ ಪಾರಿತೋಷಕಗಳು, 46 ಬಾರಿ ಪ್ರಥಮ ಬಹುಮಾನ, 20 ದ್ವಿತೀಯ, 12 ತೃತೀಯ, 6 ಚತುರ್ಥ, 20 ಮೆಚ್ಚುಗೆ ಬಹುಮಾನಗಳು, 36 ಬಾರಿ ಉತ್ತಮ ರಂಗಾಲಂಕಾರ, 20 ಬಾರಿ ವರ್ಣ - ವಸ್ತ್ರಾಲಂಕಾರಕ್ಕೆ ಅತ್ಯುತ್ತಮ ಅಭಿನಯಕ್ಕೆ 6 ಸ್ವರ್ಣ ಪದಕ, ಉತ್ತಮ ಅಭಿನಯಕ್ಕೆ 50 ಬಾರಿ ಬಹುಮಾನಗಳು, ಉತ್ತಮ ಸಂಗೀತಕ್ಕೆ 20 ಬಾರಿ ಬಹುಮಾನಗಳು, ಉತ್ತಮ ನಿರ್ದೇಶನಕ್ಕೆ 41 ಬಾರಿ ಪ್ರಥಮ ಬಹುಮಾನಗಳು ಹಾಗೂ 3 ಬಾರಿ ಸ್ವರ್ಣ ಪದಕಗಳನ್ನು ಪಡೆದುಕೊಂಡು ಕರ್ನಾಟಕ ಹವ್ಯಾಸಿ ರಂಗಭೂಮಿಯಲ್ಲಿ ಒಂದು ದಾಖಲೆ ನಿರ್ಮಿಸಿದೆ.

ಹೆಸರಾಂತ ನಾಟಕಗಳಾದ ರೂಲ್ಸ್ ಮೇಷ್ಟ್ರು, ಧರ್ಮರತ್ನಾಕರ, ಅಳಿಯ ದೇವರು, ವಾತ್ಸಲ್ಯ, ಟಿಪ್ಪುಸುಲ್ತಾನ್, ಕನ್ನಡವೀರ, ವಿಷಜ್ವಾಲೆ ರಣದುಂದುಭಿ, ದಿವ್ಯದರ್ಶನ, ತೆರೆಗಳು, ಬಂಜೆ, ಕಲಿ-ಕಂಠೀರವ, ಜೋಕುಮಾರಸ್ವಾಮಿ, ಸಂಗ್ಯಾಬಾಳ್ಯಾ, ಸತ್ತವರ

ನೆರಳು, ಸಾಕ್ಷಿಕಲ್ಲು, ಬೆನಕನಕೆರೆ, ಗೌಡ್ರಗದ್ಲ, ಹಯವದನ, ಸಖೀರಾಜ್ಯ, ಹೆಡ್ಡಾಯಣ, ತಬರನಕತೆ, ಹರಕೆಯ ಕುರಿ, ಸಂಕ್ರಾಂತಿ, ದೇವದಾಸಿ, ಹಾವು ಹರಿದಾಡ್ತವ, ಒಡಲಾಳ, ಬೆಳ್ಳಕ್ಕಿ ಹಿಂಡು ಬೆದರ್‍ಯಾವೋ, ಪುಟ್ಟಕ್ಕನ ಮೆಡಿಕಲ್ ಕಾಲೇಜ್, ಮೌನ ಕೋಗಿಲೆ, ಕಾಡಟ್ಟಿ, ನನ್ನ ಗೋಪಾಲ, ನಾಗಮಂಡಲ, ಮಯಾಕಾರ ಮೈಲಾರ, ಹಿಟ್ಟಿನಹುಂಜ, ಹಲಗಲಿ ಬೇಡರದಂಗೆ, ಸತ್ಯವತಿ, ಪಳನಿಯ ಪ್ರಮೋಷನ್ ಸೂತ್ರಗಳು, ರಂಗಪುರಂದರ, ಇದಾನೋಡ್ರಿ ಬಣ್ಣದ ಬದುಕು, ದುರ್ಗದ ದುರಂತ, ಒಂದು ಸಾವಿನ ಸುತ್ತ, ಯಮನಸೋಲು, ಸೀತಾಪಹರಣ, ಅಂಗುಲೀಮಾಲ, ರಾಜಬಲಿ, ಶ್ರೀಕೃಷ್ಣ ಸಂಧಾನ ಹಾಗೂ ಮಕ್ಕಳು ನಾಟಕಗಳಾದ ವಿನಾಯಕ ವೈಭವ ಮತ್ತು ಸ್ಯಮಂತಕ ಮಣಿ ವೃತ್ತಾಂತ ಎಂಬ ಪ್ರಮುಖವಾದ ನಾಟಕಗಳು ಅಲ್ಲದೆ ರೇಡಿಯೋ ನಾಟಕಗಳನ್ನು, ಬೀದಿ ನಾಟಕಗಳನ್ನು ಅದರಲ್ಲೂ ಕೆ.ಪಿ.ಟಿ.ಸಿ.ಎಲ್‌ಗಾಗಿ ಶ್ರೀ ಹುಲಿಶೇಖರ್‌ರವರ ಅಹಿರಾವಣ–ಮಹಿರಾವಣ ಎಂಬ ಬೀದಿ ನಾಟಕವನ್ನು ಉತ್ತರ ಕರ್ನಾಟಕದ 24 ಕಡೆ ಪ್ರದರ್ಶನ ನೀಡಿದ್ದಲ್ಲದೆ ಕರೆಂಟ್–ಕರೆಂಟ್ ಎಂಬ ಬೀದಿ ನಾಟಕವನ್ನು ಉತ್ತರ ಕನ್ನಡ–ದಕ್ಷಿಣ ಕನ್ನಡ ವಿಭಾಗದಲ್ಲಿ 44 ಪ್ರದರ್ಶನಗಳನ್ನು ನೀಡಿದ್ದು ಒಂದು ದಾಖಲೆ.

ವಿಕಸಂ ತಂಡದಲ್ಲಿ ಈ ಹಿಂದೆ 60 ಜನ ಕಲಾವಿದರಿದ್ದು ಈಗ ಸುಮಾರು 40–45 ಜನ ಕಲಾವಿದರು ತಂಡವನ್ನು ಮುನ್ನಡೆಸುತ್ತಿದ್ದಾರೆ. ತಂಡ ಹಲವಾರು ಕಲಾವಿದರನ್ನು ಬೆಳಕಿಗೆ ತಂದಿದೆ. ಅಭಿನಯಕ್ಕಾಗಿ, ರಂಗ ವಿನ್ಯಾಸಕ್ಕಾಗಿ, ಸಂಗೀತಕ್ಕಾಗಿ, ನಿರ್ದೇಶನಕ್ಕಾಗಿ ಹಲವಾರು ಪ್ರಶಸ್ತಿಗಳನ್ನು ಪಡೆದಿರುವರು ಈಗಲೂ ತಂಡದ ಕಲಾವಿದರು ಒಂದಲ್ಲಾ ಒಂದು ರಂಗಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

## ಕಲಾವಿದರ ವಿವರ

| | | |
|---|---|---|
| ಸಿ. ಲಕ್ಷ್ಮೀನಾರಾಯಣಪ್ಪ, | ಎ. ಕೆ. ನಾರಾಯಣಮೂರ್ತಿ, | ಬಿ. ಗುರು, |
| ಎಸ್. ಶಾಮಮೂರ್ತಿ, | ಕೆ. ಶಿವರಾಜ್, | ಜೆ. ಜಯಪಾಲ್ |
| ಕೆ. ವಿ. ಶಂಕರಭಟ್, | ಹೆಚ್. ಬಿ. ಉಮೇಶ್‌ರಾವ್, | ಎಂ. ನಾಗರಾಜ್ |
| ಎಸ್. ಜಿ. ಶಂಕರಮೂರ್ತಿ, | ಡಿ. ರುದ್ರಯ್ಯ, | ಕೆ. ಜಿ. ಗೋಪಾಲ್ |
| ಮಾಯಿಗಯ್ಯ, | ಬಿ. ಜವರೇಗೌಡ | ಡಿ. ದಶರಥ |
| ಹೆಚ್. ಬಿ. ಗೋಪಾಲ್, | ಟಿ.ಜೆ.ಯೂಹಾನ್, | ಡಿ.ಎಸ್.ಹೊನ್ನಯ್ಯ |
| ಕೆ. ಬಿ. ಕಂಪನೀಗೌಡ, | ಜಿ. ಎಸ್. ದಾನಂ, | ಎಂ. ನಾಗರಾಜ್ |

## ಮಿತ್ರ ಕಲಾ ಮಂಡಳಿ (ರಿ.),

**ಸಂಪರ್ಕ: ಎ.ಹನುಮಂತಪ್ಪ, ದೂ: 94494 01348**

ನಾಡಿನ ಹೆಸರಾಂತ ಕೈಗಾರಿಕಾ ನಗರವಾದ ಭದ್ರಾವತಿಯಲ್ಲಿ ನಿಮ್ಮ ನೆಚ್ಚಿನ ಅತ್ಯಂತ ಹಿರಿಯ ಕಲಾ ಸಂಸ್ಥೆಯಿಂದ ಮಿತ್ರ ಕಲಾ ಮಂಡಳಿಯು ರಂಗ ಪ್ರಪಂಚಲ್ಲಿ, ಕಲಾ ಕ್ಷೇತ್ರದಲ್ಲಿ, ಕಲಾ ಪ್ರತಿಭೆಯ ಸಂಘಟನೆಗಾಗಿ 1935ರಲ್ಲಿ ಅಂದಿನ ಕಾರ್ಖಾನೆಯ ಇಲಾಖಾಧಿಕಾರಿಗಳಾಗಿದ್ದ ಶ್ರೀಮಾನ್ ರಂಗಾಚಾರ್ ಅವರಿಂದ ಸ್ಥಾಪನೆಯಾಗಿ, ಅವರ ಆಶ್ರಯದಲ್ಲಿ ಅನೇಕ ವರ್ಷಗಳು ಬೆಳೆದು ಬಂದು ನಂತರದಲ್ಲಿ ಸದರಿ ಕಾರ್ಖಾನೆಯ ಛೀಪ್ ಕ್ಯಾಶಿಯರ್ ಆಗಿದ್ದ ಮಾನ್ಯಶ್ರೀ ಟಿ.ಎಸ್.ರಾಮಚಂದ್ರರಾವ್ ಇವರು ಮಂಡಳಿಯ ಅಧ್ಯಕ್ಷರಾಗಿ ತಮ್ಮ ಸೇವಾ ಅವಧಿಯವರೆಗೆ ಅಂದರೆ 1978ರ ಪೂರ್ತ ಮಿತ್ರ ಕಲಾ ಮಂಡಳಿಯ ಅಭ್ಯುದಯಕ್ಕೆ ನಾನಾ ಮುಖದಲ್ಲಿ ಅಭಿವೃದ್ಧಿಗೊಳಿಸಿ, ಜನಾನುರಾಗಿಯಾಗಿ, ಯುವ ಪೀಳಿಗೆಗೆ ದಾರಿದೀಪವಾಗಿ, ಮಾರ್ಗದರ್ಶನ ನೀಡಿ ಸಂಸ್ಥೆಯು ಉತ್ತಮವಾಗಿ ಬೆಳೆಯಲು ಅನುವು ಮಾಡಿಕೊಟ್ಟು ಹೋದರು. ತದನಂತರ ಬಂದ ಅಧ್ಯಕ್ಷರು ಮತ್ತು ಸದಸ್ಯರ ಸಂಕಲ್ಪ ಹಾಗೂ ಕಲೆಯ ಉಳಿವಿಗಾಗಿ ಕಲಾ ಸೇವೆ ಸಲ್ಲಿಸಿದುದರ ಫಲವೇ ಸಂಸ್ಥೆಗೆ 75 ವರ್ಷಗಳು ತುಂಬಿದವು. 1986ರಲ್ಲಿ ನಾಟಕ ಅಕಾಡೆಮಿಯ ಸಹಾಯದಿಂದ ವಿಐಎಸ್ಎಲ್, ಎಂಪಿಎಂ ಸಹಕಾರದಿಂದ ರಂಗತರಬೇತಿ ಶಿಬಿರವನ್ನು ಆಯೋಜಿಸಿತ್ತು. ಇದರಲ್ಲಿ ಸುಮಾರು 240ಜನ ಕಲಾವಿದರು ಭಾಗವಹಿಸಿ ಮೃಚ್ಛಕಟಿಕ ಹಾಗೂ ತೊಘಲಕ್ ನಾಟಕವನ್ನು ಅಶೋಕ್ ಬಾದರದಿನ್ನಿ ಅವರ ನಿರ್ದೇಶನದಲ್ಲಿ ಪ್ರದರ್ಶಿಸಲ್ಪಟ್ಟಿತು. 1935 ರಿಂದ 2010ರ ವರೆಗೆ ಈ ಸಂಸ್ಥೆಯು ಬದುಕಿ ಬಾಳಿ ಬೆಳಗಲು ಎಡೆಮಾಡಿಕೊಟ್ಟಿದ್ದು ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಆಡಳಿತ ವರ್ಗ ಮತ್ತು ಕಾರ್ಮಿಕ ಕಲಾ ಪೋಷಕರು, ನಾಗರೀಕರು ಹಾಗೂ ದಾನಿಗಳು.

ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಆಡಳಿತ ವರ್ಗದವರ ಉದಾರ ಧನ ಸಹಾಯದಿಂದ ಹಾಗೂ ತಮ್ಮೆಲ್ಲರ ಸಹಕಾರದಿಂದ ಈ ಸಂಸ್ಥೆಯು 1959 ರಿಂದ 1984ರ ವರೆಗೂ ಒಟ್ಟು 23 ವರ್ಷ ಅಖಿಲ ಕರ್ನಾಟಕ ನಾಟಕ ಸ್ಪರ್ಧೆ ಹಾಗೂ ನಾಟಕೋತ್ಸವಗಳನ್ನು ನಡೆಸಿ, ಪ್ರತಿಭಾವಂತ ಹವ್ಯಾಸಿರಂಗ ಕಲಾವಿದರಿಗೆ ಪ್ರಶಸ್ತಿ ಪತ್ರ, ಬಹುಮಾನ ಹಾಗೂ ನಗದು ಬಹುಮಾನ ಕೊಟ್ಟು ಪ್ರೋತ್ಸಾಹ ನೀಡಿದೆ. ಅಲ್ಲದೆ ಆಗಿಂದಾಗ್ಗೆ ಸಾಹಿತಿಗಳಿಗೆ, ಕವಿಗಳಿಗೆ, ನಾಟಕ ಕಲಾವಿದರಿಗೆ, ರಂಗ ಕಲಾವಿದರಿಗೆ

ಹಾಗೂ ಇತರ ಪ್ರತಿಭಾವಂತರಿಗೆ ಸನ್ಮಾನ ಪುರಸ್ಕಾರವನ್ನು ಮಾಡುತ್ತಾ ಬಂದಿದೆ. ಉತ್ತಮ ಕಲಾವಿದರಿಂದ ಲೇಖನಗಳನ್ನು ಆಹ್ವಾನಿಸಿ ಕಾರ್ಯಕ್ರಮಗಳ ಜೊತೆಯಲ್ಲಿ ಅಂದವಾಗಿ ಮುದ್ರಿಸಿ 23 ವರ್ಷಗಳು ಸ್ಮರಣ ಸಂಚಿಕೆಗಳನ್ನು ಪ್ರಕಟಿಸಿದೆ.



ನಾಟಕ: ಸಂಧ್ಯಾ ಭಾರತ ನಿರ್ದೇಶನ: ಎಂ.ಕೆ.ಶಂಕರಪ್ಪ

## ಕಲಾವಿದರ ವಿವರ

| | | |
|---|---|---|
| ಎ. ಮೈಲಾರಪ್ಪ | ಸದಾಶಿವ | ಎ. ಹನುಮಂತಪ್ಪ |
| ಎಸ್.ಎನ್.ಪರಶುರಾಮರಾವ್ | ಕೆ.ಈ.ರುದ್ರಸ್ವಾಮಿ | ಹೆಚ್. ಪ್. ಶಿವಪ್ಪ |
| ಎಂ. ವೀರಪ್ಪ | ಎಸ್. ಶ್ರೀನಿವಾಸನ್ | ರಾಮು |
| ಪರ್ವತಯ್ಯ | ಸಿ.ಆರ್.ಅಶೋಕಕುಮಾರ್ | ಎಸ್. ಚಂದ್ರಶೇಖರಪ್ಪ |
| ಕೆ. ಬಸಪ್ಪ | ಲಿಂಗಪ್ಪ | ಜಿ. ವಿ. ಸುರೇಶ್ |
| ಡಿ. ದಶರಥ | ಡಿ. ರಮೇಶ ಗೋವಿಂದಯ್ಯ | ಎ. ಸಿ. ಈರೇಗೌಡ |

## ನವೋದಯ ಕಲಾ ಸಂಘ

ಸಂಪರ್ಕ: ಡಿ.ವೆಂಕಟರಮಣಯ್ಯ, ದೂ: 99450 99897

ಕೈಗಾರಿಕ ಕ್ಷೇತ್ರವಾದ ಭದ್ರಾವತಿಯಲ್ಲಿ ಕೇವಲ ಕಂಪನಿ ನಾಟಕಗಳ ಮಾದರಿಯಲ್ಲಿ ಸಾಮಾಜಿಕ, ಪೌರಾಣಿಕ, ಐತಿಹಾಸಿಕ ನಾಟಕಗಳನ್ನೇ ಆಡುತ್ತಿದ್ದ ಕಾಲದಲ್ಲಿ ನಾಟಕವೆಂದರೆ ಬರಿ ಮನರಂಜನೆಯಷ್ಟೇ ಅಲ್ಲ, ಮನೋವಿಕಾಸದ ಮಾರ್ಗದರ್ಶಿಯೂ ಆಗಬಲ್ಲದು ಎಂಬುದನ್ನು ಮನವರಿಕೆ ಮಾಡಿಕೊಡಬೇಕೆಂಬ ಮಹತ್ವಾಕಾಂಕ್ಷೆಯಿಂದ ಮೈದಳೆದ ಸಂಸ್ಥೆ.

ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕೆಲವೇ ಉತ್ಸಾಹಿ ತರುಣ ಕಾರ್ಮಿಕರ ಪ್ರಯತ್ನದಿಂದ ನವ್ಯ ನಾಟಕಗಳ ಪ್ರಯೋಗಕ್ಕೆ ನಾಂದಿಯಾಗಿ 1972ರಲ್ಲಿ ಜನ್ಮತಾಳಿದ ಸಂಸ್ಥೆ "ನವೋದಯ ಕಲಾ ಸಂಘ".

ಅಂದು ಕೇವಲ ಎಂಟು ಜನ ಸದಸ್ಯರಿಂದ ಪ್ರಾರಂಭವಾದ ಸಂಸ್ಥೆ ಇಂದು ಸುಮಾರು ಮೂವತ್ತು ಜನ ಸದಸ್ಯರನ್ನು ಹೊಂದಿ ಬೃಹತ್ ಸಂಸ್ಥೆಯಾಗಿ ಬೆಳೆದು ನಿಂತಿದೆ.

1972 ರಿಂದ ಏಕಪ್ರಕಾರವಾಗಿ, ಸಾಮಾಜಿಕ, ಅಸಂಗತ, ಜಾನಪದ, ಚಾರಿತ್ರಿಕ, ಪೌರಾಣಿಕವೇ ಮೊದಲಾದ ನಾಟಕಗಳನ್ನು ಪ್ರದರ್ಶಿಸುತ್ತಾ ಸಹೃದಯ ಕಲಾಭಿಮಾನಿಗಳ ಮೆಚ್ಚುಗೆಗೆ ಪಾತ್ರವಾಗಿದೆ.

ಕರ್ನಾಟಕ ರಾಜ್ಯದ ನಾನಾ ಕಡೆಗಳಲ್ಲಿ ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ನಾಟಕ ಹಾಗೂ ಕಲಾವಿದರ ವೈಯುಕ್ತಿಕ ಪ್ರತಿಭೆಗಳಿಗೆ ಪರ್ಯಾಯ ಫಲಕಗಳನ್ನೂ ಪ್ರಥಮ ಬಹುಮಾನಗಳನ್ನು ಪ್ರಶಂಸನಾ ಪತ್ರಗಳನ್ನೂ ಯಥೇಚ್ಛವಾಗಿ ಪಡೆದುಕೊಂಡಿದೆ.

ಭದ್ರಾವತಿಯಲ್ಲಿ ನಾಟಕ ಚಟುವಟಿಕೆ ನಿರಂತರವಾಗಿ ನಡೆಯುತ್ತಾ ಉತ್ತಮ ನಾಟಕಗಳ ಪ್ರದರ್ಶನಗಳ ಮೂಲಕ ಸದಭಿರುಚಿಯ ಪ್ರೇಕ್ಷಕರನ್ನು ಬೆಳೆಸಬೇಕೆಂಬ ಸದ್ಭಾವನೆಯೊಂದಿಗೆ ಸ್ಥಳೀಯ ಪ್ರತಿಷ್ಠಿತ ತಂಡಗಳಾದ "ವಿಕಸಂ ಕಲಾವಿದರು ಮತ್ತು ಶ್ರೀರಾಮ ಕಲಾವಿದರು" ತಂಡಗಳೊಂದಿಗೆ ನಮ್ಮ ಸಂಸ್ಥೆಯೊಂದಿಗೆ ಸೇರಿ "ಸಂಯುಕ್ತ"ದ ಆಶ್ರಯದಲ್ಲಿ ವರ್ಷಕ್ಕೆ ನಾಲ್ಕು ನಾಟಕಗಳಂತೆ ತನ್ನದೇ ಆದ ಖಾಯಂ ಸದಸ್ಯರಿಗೆ ಉತ್ತಮ ನಾಟಕಗಳನ್ನು ನೀಡುತ್ತಾ ಮೂರು ತಂಡಗಳು ಪರಸ್ಪರ ಸ್ನೇಹ ಸಹಕಾರ ಸಲಹೆಗಳೊಂದಿಗೆ ನಾಡಕ

ರಂಗಕ್ಕೆ ತಿಲಕ ಪ್ರಾಯದಂತೆ ರಾಜ್ಯಕ್ಕೆ ಮಾದರಿಯಾಗಿ ನಾಟಕ ರಂಗದ ಸರ್ವಾಂಗೀಣ ಅಭಿವೃದ್ಧಿಗೆ ಸಹಕಾರ ಹಸ್ತ ನೀಡುತ್ತಾ ಬಂದಿದೆ.

ಸಂಸ್ಥೆಯು ದಿನಾಂಕ 24-05-1997 ರಿಂದ 26-05-1997ರ ವರೆಗೆ ಮೂರು ದಿನಗಳ ಕಾಲ ವಿಶಿಷ್ಟ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಾಡಿನ ಗಣ್ಯರ ಸಮಕ್ಷಮದಲ್ಲಿ ಸೋದರ ಕಲಾ ಸಂಸ್ಥೆಗಳಿಂದ ನಾಟಕ ಪ್ರದರ್ಶನಗಳನ್ನು ಏರ್ಪಡಿಸಿ ಪ್ರತಿದಿನ ಹಿರಿಯ ರಂಗ ಕಲಾವಿದರನ್ನು ಸನ್ಮಾನಿಸಿ ವಿಜೃಂಭಣೆಯಿಂದ "ರಜತೋತ್ಸವ" ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಚರಿಸಿಕೊಂಡಿತು.

ಕಲಾಭಿಮಾನಿಗಳ ಆಶೀರ್ವಾದ ಮತ್ತು ಪ್ರೋತ್ಸಾಹದಿಂದ 1972ರಲ್ಲಿ ಸ್ಥಾಪಿಸಿದ ಸಂಸ್ಥೆಯು ಅಂದಿನಿಂದ ಇಂದಿನವರೆಗೆ ನಿರಂತರವಾಗಿ ಕಲಾ ಸೇವೆಯಲ್ಲಿ ನಿರತವಾಗಿದೆ.



ನಾಟಕ: ಶ್ರೀಕೃಷ್ಣ ಸಂಧಾನ, ನಿರ್ದೇಶನ: ಮಾಯಿಗಯ್ಯ

## ಕಲಾವಿದರ ವಿವರ

ಲಕ್ಷ್ಮೀಪತಿ

ಅಭಿನಯ ಕೇಸರಿ ಡಿ. ವೆಂಕಟರಮಣಯ್ಯ

ಮಾಯಿಗಯ್ಯ

ಬಾರಂದೂರು ಪ್ರಕಾಶ್

ಕೆ. ವಿ. ಜನಾರ್ಧನಕುಮಾರ

ಕ್ರಾಂತಿ ಕಿರಣ್

ವಿರೂಪಾಕ್ಷಯ್ಯ ಹಿರೇಮಠ

ಎಂ. ಎನ್. ಹುಚ್ಚಯ್ಯ

ಜಾಯ್‌ಸನ್

ಆರ್. ಪದ್ಮನಾಭ

ಟಿ. ಎಸ್. ಆನಂದಕುಮಾರ್

ಪಾರ್ವತಮ್ಮ

ಭಾನುಪ್ರಕಾಶ್

ಪಿ. ಆರ್. ಬಡಿಗೇರ್

ಎನ್. ರಂಗಸ್ವಾಮಿ

ಕೆ. ಎಂ. ಪಳಂಗಪ್ಪ

ಜಿ. ವಿ. ಸಂಗಮೇಶ್ವರ

ಟಿ. ಕ್ಷೇತ್ರಪಾಲ

ಯು. ಎ. ಬಸಂತಕುಮಾರ್

ಶೃಂಗೇರಿ ರಾಘವೇಂದ್ರ

ತಿಮ್ಮೇಗೌಡ

ಚಂದ್ರಕಾಂತ್

ಬಸನಗೌಡ ಮಾಳಗಿ

ಚಂದ್ರಶೇಖರ ಚಕ್ರಸಾಲಿ

ಸಿ. ಕೆ. ಮೀನಾಕ್ಷಿ

ಬಿ. ರಾಮದಾಸಯ್ಯ

ಕೆ.ಎಂ. ಶ್ರೀನಿವಾಸಮೂರ್ತಿ

## ಎಂ.ಪಿ.ಎಂ. ಲಲಿತಕಲಾ ಸಂಘ, ಭದ್ರಾವತಿ

**ಸಂಪರ್ಕ: ಹೆಚ್.ಎ.ಮಹೇಂದ್ರ, ದೂ: 94812 56504**

ಭದ್ರಾವತಿ ಮೈಸೂರು ಕಾಗದ ಕಾರ್ಖಾನೆಯ ಆಶ್ರಯದಲ್ಲಿ ಸುಮಾರು 40 ವರ್ಷಗಳಿಂದ ತಮಿಳು ಮತ್ತು ತೆಲುಗು ಭಾಷೆಗಳ ಎರಡು ತಂಡಗಳನ್ನೊಳಗೊಂಡ ಸುಮಾರು ಒಟ್ಟು ಹದಿನಾರು ನಾಟಕ ತಂಡಗಳು ರಂಗ ಚಟುವಟಿಕೆಗಳಲ್ಲಿ ಕಾರ್ಯೋನ್ಮುಖಗೊಂಡಿದ್ದವು. ಈ ತಂಡಗಳಿಗೆ ಕಾರ್ಖಾನೆಯ ಆಡಳಿತ ವರ್ಗವು ಸ್ಥಳೀಯವಾಗಿ ಪ್ರತಿಬಾರಿ ಕನ್ನಡ ರಾಜ್ಯೋತ್ಸವ. ಗಣರಾಜ್ಯೋತ್ಸವ ಹಾಗೂ ಅಂತರ ನಾಟಕ ಸ್ಪರ್ಧೆ. ಹೊರಗಿನ ರಾಜ್ಯಮಟ್ಟದ ನಾಟಕ ಸ್ಪರ್ಧೆಗಳು ಹಾಗೂ ನಾಟಕೋತ್ಸವಗಳಲ್ಲಿ ಭಾಗವಹಿಸಲು ಅನುವುಮಾಡಿಕೊಟ್ಟು ಪ್ರೋತ್ಸಾಹಿಸುತ್ತಿತ್ತು.

ತದನಂತರ ಎಲ್ಲಾ ತಂಡ ಕಲಾವಿದರು ಸೇರಿ 1988ರಲ್ಲಿ "ಎಂ.ಪಿ.ಎಂ. ಲಲಿತಕಲಾ ಸಂಘ" ಎಂಬ ಶಿರೋನಾಮೆಯ ಒಂದು ತಂಡವನ್ನು ರೂಪಿಸಿಕೊಂಡವು.



ನಾಟಕ: ನಾಯಿ ಕಥೆ, ನಿರ್ದೇಶನ: ಹೆಚ್.ಎ.ಮಹೇಂದ್ರ


ಅಂದಿನಿಂದ ತಂಡವು ನಾಟಕ. ಮಕ್ಕಳ ನಾಟಕ ಹಾಗೂ ಸಂಗೀತ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಾ ಬಂದಿದೆ. ಕಾರ್ಖಾನೆ ಆಡಳಿತ ವರ್ಗದ ಆಶ್ರಯದಲ್ಲಿ ಪ್ರತಿ ರಾಷ್ಟ್ರೀಯ ಹಾಗೂ ನಾಡಿನ ಮಹೋತ್ಸವಗಳಲ್ಲಿ ನಾಟಕ ಮತ್ತು ಸಂಗೀತ ಕಾರ್ಯಕ್ರಮಗಳನ್ನು ನೀಡುವುದಲ್ಲದೆ ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ, ಕರ್ನಾಟಕ ನಾಟಕ ಅಕಾಡೆಮಿಯ ನಾಟಕೋತ್ಸವ, ಕನ್ನಡ ಮತ್ತು ಸಂಸ್ಕೃತಿಕ ಇಲಾಖೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಹಾಗೂ ಮುಂಬಯಿನ ಕುವೆಂಪು ಸ್ಮಾರಕ ಅಖಿಲ ಭಾರತ ನಾಟಕ ಸ್ಪರ್ಧೆಯಲ್ಲಿ ನಾಟಕ ಪ್ರದರ್ಶನಗಳನ್ನು ನೀಡಿದೆ.

**ತಂಡದಲ್ಲಿ ಪ್ರಯೋಗಿಸಿದ ನಾಟಕಗಳು :**

ಅರಗಿನಬೆಟ್ಟ, ಕದಡಿದನೀರು, ಚೋಮನದುಡಿ, ಶ್ರೀಕೃಷ್ಣಸಂಧಾನ, ನಮ್‌ರಸ್ತೆ, ಕನಸಿನವರು, ಸುಣ್ಣಹಚ್ಚಿದ ಸಮಾಧಿಗಳು, ಗೆಳೆಯ (ಮಕ್ಕಳ ನಾಟಕ) ಆಷಾಢದಲ್ಲಿ ಅಳಿಯ. ಅವತಾರ. ಬಂಕಾಪುರದ ಕಥೆ. ಮಾಡ್ದೋರ್ ಪಾಪ ಆಡ್ದೋರ್ ಬಾಯಾಗ, ಒಬ್ಬನೇ ಚಂದಿರ, ನಾಯಿಕಥೆ, ಗಿರಿಜಾ ಕಲ್ಯಾಣ, ವರಬ್ರಷ್ಠ ಇನ್ನು ಮುಂತಾದವುಗಳು. ಇವುಗಳಲ್ಲದೆ ಸುಗಮ ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತಾ ನಿರಂತರ ರಂಗ ಚಟುವಟಿಕೆಗಳಲ್ಲಿ ಕ್ರಿಯಾಶೀಲವಾಗಿದೆ.


## ಕಲಾವಿದರ ವಿವರ

| | | |
|---|---|---|
| ಜಿ.ಶಿವಕುಮಾರ್ಪಿ.ಅಂಬ್ರೂಸ್ | ಇರುದೆಯನಾದನ್ | ಎಸ್.ರೇವಣಸಿದ್ದಪ್ಪ |
| ವೈ.ಕೆ.ಹನುಮಂತಪ್ಪ | ಹೆಚ್.ಎ.ಮಹೇಂದ | ಕೆ.ಎಸ್.ರವಿಕುಮಾರ್ |
| ಡಿ.ರುದ್ರಯ್ಯ | ಸಿ.ಎಸ್.ಶಿವಮೂರ್ತಿ | ಬಿ.ಕಮಲಾಕರ |
| ಎ.ಜೋಸಫ್ | | ಶಿವಾನಂದ ಮೂರ್ತಿ |
| ಬಿ.ಜವರೇಗೌಡ | ಬಿ.ಬಾಬು | ಎಸ್.ಅಂಜನೇಯ |
| ಎಲ್.ಪುಟ್ಟಸ್ವಾಮಿ | ಎಂ.ಶಿವರಾಜ್ | ಡಿ.ಎನ್.ಪುಟ್ಟಸ್ವಾಮಿ |
| ಪ್ರಾಣೇಶ್‌ರಾವ್ | ಹೆಚ್.ಬಿ.ಮೋಹನರಾವ್ | ಎಲ್.ವರದರಾಜ್ |
| ವೆಂಕಟೇಶಮೂರ್ತಿ | ಹೆಚ್.ವಿ.ನಾಗಭೂಷಣ | |
| ಜಿ.ರವಿಕುಮಾರ್ | ನರಸಿಂಹ ಮೇನೆದಾರ್ | ಶಿವಲಿಂಗಯ್ಯ |
| ವೆಂಕಟೇಶ್ ನಾಯ್ಕ್ | ಎಸ್.ಎಲ್.ಶ್ರೀಕಂಠ | ಜೆ.ಪಿ.ಜೈಕುಮಾರ್ |
| ಕೆ.ಆರ್.ಅನಂತಾಚಾರ್ | ಟಿ.ಎನ್.ದತ್ತಾತ್ರೇಯ | ಜಯರಾಮಯ್ಯ |
| ಜಂಬುಸ್ವಾಮಿ | | ಶ್ರೀಮತಿ ಜಯಲಕ್ಷ್ಮಿ |
| ಶ್ರೀಮತಿ ಉತ್ತರಮೇರಿ | ಶ್ರೀಮತಿ ಉಮಾ | ಭದ್ರಾವತಿ ಗುರು |



ಭದ್ರಾವತಿಯ ವಿಐಎಸ್‌ಎಲ್ ಕಾರ್ಖಾನೆ ಮತ್ತು ಸರ್ ಎಂ. ವಿಶ್ವೇಶ್ವರಯ್ಯನವರು

## ತೀರ್ಥಹಳ್ಳಿ ತಾಲೂಕು ರಂಗಭೂಮಿ



## ಪ್ರೇಕ್ಷಣೀಯ ಸ್ಥಳಗಳು

**ಸಾಂಸ್ಕೃತಿಕ ತಾಣಗಳು:**

1. ಕುಪ್ಪಳಿ

**ಆರೋಗ್ಯಧಾಮಗಳು, ಪ್ರಕೃತಿ ಅಧ್ಯಯನ ಕೇಂದ್ರಗಳು:**

1. ಮುಡುಬ
2. ಪವಿತ್ರವನ, ಆಗುಂಬೆ.

**ಜಲಪಾತಗಳು:**

1. ಅಬ್ಬೆ ಜಲಪಾತ
2. ಬರ್ಕಣ ಜಲಪಾತ

**ಚಾರಣ ತಾಣಗಳು:**

1. ಕುಂದಾದ್ರಿ
2. ಕವಲೇದುರ್ಗ
3. ನಿಶಾನೆಗಡ್ಡ
4. ಹೆಗ್ಗಾರುಗುಡ್ಡ
5. ಉಬ್ಬೂರು

**ದೇವಸ್ಥಾನ ಹಾಗೂ ಐತಿಹಾಸಿಕ ಸ್ಥಳ**

1. ಅಂಬುತೀರ್ಥ
2. ಮೃಗವಧೆ
3. ಚಿಪ್ಪಲುಗುಡ್ಡೆ
4. ಭೀಮನಕಟ್ಟೆ ರಾಮದೇವರು
5. ಮಹಿಷಿ
6. ಹಾದಿಗಲ್ಲು
7. ಬೆಜ್ಜುವಳ್ಳಿ (ಅಯ್ಯಪ್ಪಸ್ವಾಮಿ ದೇವಸ್ಥಾನ)

# ತೀರ್ಥಹಳ್ಳಿ ತಾಲ್ಲೂಕು ರಂಗಭೂಮಿ ಕ್ಷೇತ್ರದಲ್ಲಿನ ಸಾಧಕರ ವಿವರ

## ರಾಜ್ಯೋತ್ಸವ ಪ್ರಶಸ್ತಿ ಪಡೆದವರು

1. ಶ್ರೀ ಹೊ.ನಾ.ರಾಘವೇಂದ್ರರಾಯರು – ರಂಗ ಸಂಗೀತ
2. ದಿ॥ ಶ್ರೀ ಶಾಂತಕುಮಾರ್

## ನಾಟಕ ಅಕಾಡೆಮಿ ಪ್ರಶಸ್ತಿ ಪಡೆದವರು

1. ಶ್ರೀ ಯು. ಸೀತಾರಾಮಾಚಾರ್ – ನಟ/ರಂ.ಸಂಗೀತ – 2010

## ರಂಗ ನಿರ್ದೇಶಕರುಗಳು

1. ಶ್ರೀ ಯು. ಸೀತಾರಾಮಾಚಾರ್ – ನಟ/ರಂ.ಸಂಗೀತ 08181–227715
2. ಶ್ರೀ ಮ್ಯಾಥ್ಯೂ ಸುರಾನಿ – ನಟ, 94482 15350
3. ಶ್ರೀ ಪ್ರವೀಣ್ ಹಾಲ್ಸತ್ತೂರು – ನಟ,ರಂ.ಸಜ್ಜಿಕೆ 94492 50574

## ರಂಗಸಜ್ಜಿಕೆ ಪ್ರಸಾದನ

1. ಶ್ರೀ ಗುರುರಾಜ್ ಪಿ.ವಿ. – ಪ್ರಸಾದನ 94481 73742
2. ಶ್ರೀ ಈಶ ಎಂ.ಸಿ.ಹಳ್ಳಿ – ಪ್ರಸಾದನ 95916 13063

## ರಂಗ ಸಂಗೀತ

1. ಶ್ರೀ ಹಾದಿಗಲ್ಲು ವೆಂಕಟರಮಣ 92420 18304
2. ಶ್ರೀ ನಾಗಭೂಷಣ 94480 16442
3. ಕು॥ ಅನುಷಾ ನಾಗಭೂಷಣ
4. ಶ್ರೀಮತಿ ರಜಿನಿ ಐತಾಳ್ 08181–228573
5. ಶ್ರೀ ವಾಸುದೇವ ಕುರುವಳ್ಳಿ 94489 00321
6. ಶ್ರೀ ಅರವಿಂದ್ ಟಿ.ಎನ್. 94807 65852
7. ಶ್ರೀ ಕೃಷ್ಣದಾಸ ಹಜಮಾಡಿ 94489 40211
8. ಶ್ರೀಮತಿ ವಿಭಾ ಪ್ರಕಾಶ್ 98801 23129

**ರಂಗಮಂದಿರಗಳು**

**1. ಶಾಂತವೇರಿ ಗೋಪಾಲಗೌಡ ರಂಗಮಂದಿರ:**

ಒಂದು ಸಾವಿರ ಆಸನಗಳುಳ್ಳ ಸುಸಜ್ಜಿತ ಆಧುನಿಕ ರಂಗಮಂದಿರ.



**2. ತುಂಗಾ ಕಾಲೇಜು ರಂಗಮಂದಿರ: ದೂ: 08181–228262**

ರಂಗಮಂಚ ಅಳತೆ: 36' ಫಿ 30', ಆಸನ ವ್ಯವಸ್ಥೆ: 800, ಸಾಮಾನ್ಯ ಪರದೆಗಳು, ಬೆಳಕು, ಧ್ವನಿವರ್ಧಕ ಲಭ್ಯವಿದೆ.

**3. ರಾಮಮಂದಿರ: ದೂ: 08181–228413**

ರಂಗಮಂಚ ಅಳತೆ: 22' ಫಿ 20', ಆಸನ ವ್ಯವಸ್ಥೆ: 350, ಪರದೆಗಳು, ಬೆಳಕು, ಧ್ವನಿವರ್ಧಕ ಹೊರಗಿನಿಂದ ತರಬೇಕು.

# ತೀರ್ಥಹಳ್ಳಿ ರಂಗಭೂಮಿಯ ಪಕ್ಷಿನೋಟ

ತೀರ್ಥಹಳ್ಳಿಯ ರಂಗಭೂಮಿ ಇತಿಹಾಸದ ಪ್ರಾರಂಭಿಕ ಗುರುತುಗಳು ಬಹುತೇಕ ಪುರಾಣ ಪ್ರಸಿದ್ಧ ಎಳ್ಳು ಅಮಾವಾಸ್ಯೆ ಜಾತ್ರೆಯೊಂದಿಗೆ ತಳುಕು ಹಾಕಿಕೊಂಡಿರಬೇಕು. ಪ್ರತಿವರ್ಷ ಜಾತ್ರೆಗೆ ಬಂದು ಥಿಯೇಟರ್ ಕಟ್ಟೆ ತಿಂಗಳುಗಟ್ಟಲೆ ಯಶಸ್ವಿ ಪ್ರದರ್ಶನ ನೀಡುತ್ತಿದ್ದ ಕಂಪೆನಿ ನಾಟಕಗಳು ತೀರ್ಥಹಳ್ಳಿಯ ಉತ್ಸಾಹಿಗಳನ್ನು ತಾವೂ ತಂಡ ಕಟ್ಟಲು ನಾಟಕ ಮಾಡಲು ಪ್ರೇರೇಪಿಸಬೇಕು.

1935ಕ್ಕಿಂತ ಹಿಂದೆ ತೀರ್ಥಹಳ್ಳಿಯ ಹವ್ಯಾಸಿ ಕಲಾವಿದರು ಭಕ್ತ ಪ್ರಹ್ಲಾದ, ಶಾಕುಂತಲ ಮುಂತಾದ ನಾಟಕಗಳನ್ನು ಆಡಿದ್ದರು ಎಂದು ಹಿರಿಯರು ನೆನಪು ಮಾಡಿಕೊಳ್ಳುತ್ತಾರೆ. ಅಂತಹ ನಾಟಕಗಳಲ್ಲಿ ಪಾತ್ರವಹಿಸಿದ್ದ ಹಿರಿಯರು 1935ರ ಸುಮಾರಿಗೆ ತರುಣರನ್ನು ಒಟ್ಟುಗೂಡಿಸಿ ತೀರ್ಥಹಳ್ಳಿ ಅಮೆಚೂರ್ ನಾಟಕ ಸಂಘ ಸ್ಥಾಪಿಸಿದ್ದರಂತೆ. ದಿ॥ ಕಾಳಿಂಗಯ್ಯನ ರಾಘವೇಂದ್ರರಾಯರು ತಂಡದ ಪ್ರೇರಕರಾಗಿದ್ದರು. ದಾಮಾಜಿಪಂತ್ "ಸಂಶಯ ಪಿಶಾಚಿ", "ಲವಕುಶ", "ಮಾನಸಿ", "ಉತ್ತರಗೊಗ್ರಹಣ" ಮುಂತಾದ ನಾಟಕಗಳನ್ನು ಅಭ್ಯಾಸ ಮಾಡಿ ಉಡುಪಿ, ಕೊಪ್ಪ, ಆಗುಂಬೆ ಮುಂತಾದ ಕಡೆ ಪ್ರದರ್ಶನ ನೀಡಿದ್ದರಂತೆ. ಈ ಕಂಪೆನಿ ಸೋತು ಸುಣ್ಣವಾದರೂ ಇಂತಹ ಪ್ರಯತ್ನಗಳು ಮುಂದೆ ತೀರ್ಥಹಳ್ಳಿಯ ರಂಗಭೂಮಿಯ ವಿಕಸನಕ್ಕೆ ದಾರಿ ಮಾಡಿಕೊಟ್ಟಿರಬಹುದು.

ಕೆಲವರ್ಷಗಳ ನಂತರ ದಿ॥ ಅಣ್ಣಯ್ಯಗಿರಿ ರಾಮಕೃಷ್ಣಯ್ಯನವರು ದಿ॥ ಕಾಸರವಳ್ಳಿ ಗಣೇಶರಾಯರು ಮತ್ತು ಮಿತ್ರರು ಒಂದಾಗಿ ಕಲಾಕೂಟ ಸಂಸ್ಥೆಯನ್ನು ಪ್ರಾರಂಭಿಸಿ "ಪನ್ನದಾಸಿ" ಸಂಸಾರ ಸನ್ಯಾಸಿ, ಅನಾಥ ಬಾಲೆ, ಒಂದೇ ಬಟ್ಟಲು ಮುಂತಾದ ನಾಟಕಗಳನ್ನು ಪ್ರದರ್ಶಿಸಿದ್ದರು. ಕೋಣಂದೂರು ಲಿಂಗಪ್ಪನವರು, ಚಿದಂಬರ ಶಾಸ್ತ್ರಿಗಳು ಮತ್ತು ಮಿತ್ರರು ಉಂಡಾಡಿ ಗುಂಡ, ಗಂಡುಗೊಡಲಿ ಮುಂತಾದ ನಾಟಕಗಳನ್ನು ಪ್ರದರ್ಶಿಸಿದ್ದರು. ದಿ॥ ಕೆ. ಕೃಷ್ಣಸ್ವಾಮಿ ಐಯ್ಯಂಗಾರರು ಭಕ್ತಪ್ರಹ್ಲಾದ, ದಿ ಬಿಷಪ್ಸ್ ಕ್ಯಾಂಡಲ್ ಸ್ಟಿಕ್ ಮುಂತಾದ ನಾಟಕಗಳನ್ನು ನಿರ್ದೇಶಿಸಿದ್ದರು. ಕಮಕೋಡು ಶಂಕರ್‌ರವರು ಕಮ್ಮರಡಿ ಮತ್ತು ತೀರ್ಥಹಳ್ಳಿಯ ಕಲಾವಿದರನ್ನು ಒಟ್ಟುಗೂಡಿಸಿ, ಧರ್ಮರತ್ನಾಕರ ನಾಟಕವನ್ನು ಯಶಸ್ವಿಯಾಗಿ ಪ್ರದರ್ಶಿಸಿದ್ದರು. ಹೀಗೆ ಒಮ್ಮೆ ಪ್ರಜ್ವಲಿಸಿ ಒಮ್ಮೆ ಸ್ತಬ್ಧಗೊಂಡು ಸಾಗಿಬಂದ ರಂಗ ಚಟುವಟಿಕೆ 1950ರ ಸುಮಾರಿಗೆ ಕಂಪೆನಿ ಶೈಲಿಗೆ ಭಿನ್ನವಾಗಿ ಪ್ರಾಯೋಗಿಕ ರಂಗಭೂಮಿಯ ಕಡೆಗೆ ಹೊರಳಿತೆನ್ನಬಹುದು.

1950ರಲ್ಲಿ ಮುರುಳಿಧರ ಮಂಡಳಿ ಎಂಬ ತಂಡವನ್ನು ಯು. ಸೀತಾರಾಮಾಚಾರ್, ಕೆ. ಆರ್. ಸ್ವಾಮಿ, ಟಿ. ರಘುವೀರ್ ಭಟ್, ವಾಸುದೇವ ಭಟ್, ಮೋಹನ್‌ದಾಸ್ ಭಟ್, ಕೆ. ಪಿ. ರಾವ್, ಪ್ರಭಾಕರ ಭಟ್ ಮುಂತಾದ ಗೆಳೆಯರು ಸೇರಿ ಪ್ರಾರಂಭಿಸಿದರು. ಕುವೆಂಪುರವರ ಜಲಗಾರ, ನನ್ನ ಗೋಪಾಲ, ಭಕ್ತಧ್ರುವ, ಕೃಷ್ಣಲೀಲಾ ಮುಂತಾದ ನಾಟಕಗಳನ್ನು ಆಡಿದ್ದರು. 1956ರಲ್ಲಿ ಬಿ. ಎಸ್. ವಿಶ್ವನಾಥ್, ಎಸ್. ಕೆ. ನಾಗಪ್ಪ, ಜೆ. ನಾಗೇಂದ್ರನಾಥ್ ಮುಂತಾದವರು ಕಲಾವೃಂದ ಸಂಸ್ಥೆಯ ಮೂಲಕ ಅನೇಕ ನಾಟಕಗಳನ್ನು ಪ್ರದರ್ಶಿಸಿದ್ದರು.

ಕಾರ್ಯಕ್ರಮವೊಂದಕ್ಕೆ ಅ.ನ. ಕೃಷ್ಣರಾಯರು, ಅತಿಥಿಗಳಾಗಿ ಆಗಮಿಸಿದ್ದರು ಎಂದು ಹಿರಿಯರು ನೆನಪಿಸಿಕೊಳ್ಳುತ್ತಾರೆ. ನಂತರ ಕನ್ನಡ ಕಲಾಸಂಘ, ಸಂಸ್ಥೆಯು ಟಿಪ್ಪುಸುಲ್ತಾನ್, ದಾಮಾಜಿಪಂತ್, ಷಹಜಹಾನ್ ಮುಂತಾದ ನಾಟಕಗಳನ್ನು ಪ್ರದರ್ಶಿಸಿತು. ಯು. ಸೀತಾರಾಮಾಚಾರ್, ಹೆಚ್. ವಾಸುದೇವ ಭಟ್, ಪಿ. ಕೆ. ಜನಾರ್ಧನ ನಾಯಕ್, ಕೆ. ರಾಮಸ್ವಾಮಿ, ಹೆಚ್. ಶಂಕರನಾರಾಯಣ, ಕಾಸರವಳ್ಳಿ ಹಿರಣ್ಯಪ್ಪ, ಪುಟ್ಟಪ್ಪ, ರಾಮಕೃಷ್ಣ ಪ್ರಭು ಮುಂತಾದವರು ಈ ಸಂಸ್ಥೆಯ ನಟರಾಗಿದ್ದರು.

1962 ರಿಂದ 1974ರ ವರೆಗೆ ಅಸ್ತಿತ್ವದಲ್ಲಿದ್ದ ಸಹ್ಯಾದ್ರಿ ಕಲಾವಿದರು ಸಂಸ್ಥೆಯು ಯು. ಸೀತಾರಾಮಾಚಾರ್ ನೇತೃತ್ವದಲ್ಲಿ ಉಲ್ಲೇಖಿಸಬಹುದಾದ ರಂಗಚಟುವಟಿಕೆಗಳನ್ನು ನಡೆಸಿತು. ಗದಾಯುದ್ಧ, ಶಿವಪ್ಪನಾಯಕ, ವಿಜಯಭೇರಿ, ಟಿಪ್ಪುಸುಲ್ತಾನ್, ಕೆಟ್ಟುಹೋಯ್ತು ಕಾಲ, ರೂಪಿಸಿ, ತಾಳಿಕಟ್ಟೋ ಯೋಗ, ಅದೃಷ್ಟದ ಆಟ, ಚಂದ್ರಹಾಸ, ವಿರಾಟ ವಿಕ್ರಮ ಮುಂತಾದ ನಾಟಕಗಳನ್ನು ಭದ್ರಾವತಿ, ಉಡುಪಿ, ಚಿಕ್ಕಮಗಳೂರು, ಹೊಸನಗರ, ಮಂಗಳೂರು, ಕೋಣಂದುರು ಮುಂತಾದ ಕಡೆ ಪ್ರದರ್ಶನ ನೀಡಿದ್ದಲ್ಲದೆ, ಸ್ಪರ್ಧೆಗಳಲ್ಲಿ ಭಾಗವಹಿಸಿ ಅನೇಕ ಬಹುಮಾನಗಳನ್ನು ತನ್ನದಾಗಿಸಿಕೊಂಡಿತು. ಹಳೆಯ ಕಲಾವಿದರಲ್ಲದೆ, ಯು. ಅರುಣಾಚಲ, ಯಡಗುಡ್ಡೆ ದೇವದಾಸ್, ಎಸ್. ಉಮೇಶ್, ಆಗುಂಬೆ ಪುರುಷೋತ್ತಮ, ಎನ್. ಕೆ. ಶೆಣೈ, ಎನ್. ಆರ್. ಬಲ್ಲಾಳ್, ಯು. ಗೋಪಾಲ್ ಮುಂತಾದ ಹೊಸ ನಟರ ದಂಡು ಈ ಸಂಸ್ಥೆಗಾಗಿ ದುಡಿಯುತ್ತಿತ್ತು. ಭಾರತ ಮತ್ತು ಚೀನಾ ಯುದ್ಧದ ಸಮಯದಲ್ಲಿ ರಕ್ಷಣಾ ನಿಧಿಗಾಗಿ ಝಾನ್ಸಿರಾಣಿ ನಾಟಕವನ್ನು ಪ್ರದರ್ಶಿಸಿದ್ದು ಈ ಸಂಸ್ಥೆಯ ಹೆಗ್ಗಳಿಕೆ.

1975ರಲ್ಲಿ ಪ್ರಾರಂಭವಾದ ನಟ ಸಂಕುಲ ಸಂಸ್ಥೆಯು ರೆಕ್ಕೆ, ಕುಂಟ ಕುಂಟ ಕುರುವತ್ತಿ, ಔರಂಗಜೇಬ ಮುಂತಾದ ನಾಟಕಗಳನ್ನು ಪ್ರದರ್ಶಿಸಿತು. ಕೆ. ನಾರಾಯಣಾಚಾರ್, ಸುಬ್ರಹ್ಮಣ್ಯ ಅಡಿಗ, ಅಭಿಜಾತ್ ಜವಳಿ, ಭಾರತೀಪುರ ಶ್ರೀನಿವಾಸಮೂರ್ತಿ, ಕು. ಅಮೃತಾ, ಶೈಲಾ ಗೀಜಗಾರ್, ಶ್ರೀಧರ ಶಿರುವಂತೆ, ಸುಬ್ರಹ್ಮಣ್ಯ ಜೆ. ಕಿಶೋರ್‌ಕುಮಾರ್ ಪೈ. ರಾಮಕೃಷ್ಣ ಅಡಿಗ ಮುಂತಾದ ಯುವ ಕಲಾವಿದರು ಈ ತಂಡದಲ್ಲಿದ್ದರು.

1984ರಲ್ಲಿ ದಿವಂಗತ ರಾಘವ ಜವಳಿಯವರ ಪ್ರಯತ್ನದಿಂದ ಹೆಗ್ಗೋಡಿನ ನೀನಾಸಂ ಸಂಸ್ಥೆಯ ಜನಸ್ಪಂಧನ ಕಾರ್ಯಕ್ರಮದ ನೆರವಿನಿಂದ ಎನ್.ಎಸ್.ಡಿ. ಪದವೀಧರ ಶ್ರೀ ಅತುಲ್‌ತಿವಾರಿಯವರ ನಿರ್ದೇಶನದಲ್ಲಿ ಬ್ರೆಕ್ಟ್‌ನ ನಾಟಕ ಕನ್ನಡ ರೂಪಾಂತರ ಹಳೆಯ ಹೊಸ ಕತೆ, 1985ರಲ್ಲಿ ಅ. ರಾ. ಚಂದ್ರಶೇಖರ್‌ರವರ ನಿರ್ದೇಶನದಲ್ಲಿ "ತಾರತೂಫ್" ಮತ್ತು "ಪಶ್ಚಿಮ ಘಟ್ಟ ಉಳಿಸಿ" ಅಭಿಯಾನದಲ್ಲಿ ಬೀದಿ ನಾಟಕವನ್ನು ಪ್ರದರ್ಶಿಸಲಾಯಿತು.

# ಇತರ ಪ್ರಮುಖ ತಂಡಗಳು

## 1) ಅಂಭಾ ಮಿತ್ರ ಮಂಡಳಿ, ಹೊದಲ

ತೀರ್ಥಹಳ್ಳಿಯ ರಂಗಭೂಮಿ ಇತಿಹಾಸದಲ್ಲಿ ಅಂಭಾ ಮಿತ್ರ ಮಂಡಳಿ, ಹೊದಲ ಸಂಸ್ಥೆಯು ತನ್ನದೇ ಆದ ಪ್ರಾಮುಖ್ಯತೆ ಪಡೆದಿದೆ. 1952 ಹೆಚ್. ವಿ. ವೀರಪ್ಪಗೌಡರಿಂದ ಉದ್ಘಾಟನೆಯಾದ ಈ ಸಂಸ್ಥೆ ರಾಜ್ಯ ಮಟ್ಟದಲ್ಲಿ ನಾಟಕ ಕಂಪೆನಿಗಳಲ್ಲಿ ಗುರುತಿಸಲ್ಪಟ್ಟ ಕಂಪೆನಿಯಾಗಿ ಬೆಳೆಯಿತು. ಜನಾರ್ಧನ ಭಟ್, ಕೊಪ್ಪಲು ರಾಮಕೃಷ್ಣಯ್ಯ, ವಡ್ಡಿನಬೈಲು ಗಣಪತಿ, ಸತ್ಯನಾರಾಯಣ ಅರಳಾಪುರ ಕೃಷ್ಣಮೂರ್ತಿ ಮುಂತಾದ ಅನುಭವಿ ಕಲಾವಿದರನ್ನೊಳಗೊಂಡ ಈ ಸಂಸ್ಥೆಗೆ ನಂತರದಲ್ಲಿ, ರಾಘವೇಂದ್ರರಾವ್, ವಿಲಿಯಂ ಡಿಸೋಜ, ವಾಲ್ಟರ್ ಡಿಸೋಜಾ, ಟಿ. ಪಿ. ಸೀತಾರಾಂ, ಕೆ. ಆರ್. ಸುಬ್ರಹ್ಮಣ್ಯ, ಸುಬ್ರಾಯಾಚಾರಿ, ಅನಂತಭಟ್, ಕೊಲ್ಲೂರಯ್ಯ, ರಾಮರಾಯರು, ಶಾಮರಾಯ ಶೆಟ್ಟಿ ಮೊದಲಾದ ಹುರುಪಿನ ಹುಡುಗರು ಸೇರಿಕೊಂಡು ಸುಮಾರು ನಾಲ್ಕು ದಶಕಗಳ ಕಾಲ ಕಷ್ಟ ನಷ್ಟದಲ್ಲಿ ಏಳುಬೀಳುಗಳಲ್ಲಿ ಕದಲದೆ ಸಂಸ್ಥೆಯನ್ನು ಮುನ್ನೆಡೆಸಿದರು. ಪಾದುಕ ಪಟ್ಟಾಭಿಷೇಕ, ಎಚ್ಚಮ್ಮನಾಯಕ, ಟಿಪ್ಪುಸುಲ್ತಾನ್, ಅಣ್ಣ ತಂಗಿ, ಮದುವೆ ಹುಚ್ಚು ಮುಂತಾದ ನಾಟಕಗಳನ್ನು ಪಂಡಿತರೂ ತಲೆದೂಗುವಂತೆ ಅಭಿನಯಿಸಿ ಸೈ ಎನಿಸಿಕೊಂಡರು. ನಂತರದಲ್ಲಿ ಕಂಪೆನಿ ಶೈಲಿಯ ನಾಟಕಗಳು ಆಕರ್ಷಣೆ ಕಳೆದುಕೊಂಡಿದ್ದರಿಂದಲೋ ಹೊಸ ಹುಡುಗರ ಸೇರ್ಪಡೆ ಕಡಿಮೆಗೊಂಡಿದ್ದರಿಂದಲೊ, ಏರುತ್ತಿದ್ದ ಖರ್ಚುವೆಚ್ಚಗಳನ್ನು ನಿಭಾಯಿಸಲು ಅಸಮರ್ಥರಾದರೋ, ಒಟ್ಟಾರೆಯಾಗಿ ಅತ್ಯಂತ ಪ್ರತಿಭಾವಂತ ನಟರ ಈ ಸಂಸ್ಥೆ ಈಗ ಕುಂಟುತ್ತಾ ಸಾಗುತ್ತಿದೆ. ಆದರೂ ಗತವೈಭವವನ್ನು ಮರಳಿ ತರಲು ಹೊದಲದಲ್ಲಿ ಸುಸಜ್ಜಿತ ಬಯಲು ರಂಗಮಂದಿರದ ನಿರ್ಮಾಣ ಸುಮಾರು 2 ಲಕ್ಷ ಅಂದಾಜು ವೆಚ್ಚದಲ್ಲಿ ನಡೆಯುತ್ತಿದೆ.

## ಜಲದುರ್ಗಾ ಯುವಕ ಸಂಘ – ಹೇರಂಭಾಪುರ

1965ರಲ್ಲಿ ಪ್ರಾರಂಭವಾದ ಈ ಸಂಸ್ಥೆ ರಂಗಭೂಮಿಗೆ ತನ್ನದೇ ಆದ ಕೊಡುಗೆಗಳನ್ನು ನೀಡಿದೆ. 1982 ರಿಂದ ಸತತ ಮೂರು ವರ್ಷ ರಾಜ್ಯಮಟ್ಟದ ನಾಟಕ ಸ್ಪರ್ಧೆಯನ್ನು ಯಶಸ್ವಿಯಾಗಿ ನಡೆಸಿದ್ದಲ್ಲದೆ, ತಮ್ಮ ಸಂಸ್ಥೆಯಿಂದ ಅಣ್ಣತಂಗಿ, ದಸರಾ, ಕಣ್ಣೀರ ಕಾಣಿಕೆ, ತ್ಯಾಗಿ, ಜ್ವಾಲೆ, ಕಂಬನಿ, ಎಚ್ಚಮನಾಯಕ, ಪತೀಕಾರ, ಹರಿಹರ, ಪ್ರೇಮಹಸ್ತ,

ಕುರಿದೊಡ್ಡಿ, ಕುರುಕ್ಷೇತ್ರ, ಅಶ್ವತ್ಥಾಮನ್ ಮುಂತಾದ ನಾಟಕಗಳನ್ನು ಪ್ರದರ್ಶಿಸಿದೆ. ತಮ್ಮೂರಿನಲ್ಲಿ ವ್ಯವಸ್ಥಿತ ಬಯಲು ರಂಗಮಂದಿರವನ್ನು ಹೊಂದಿದೆ.

**ಯುವಕ ಸಂಘ, ಸಂಕದಹೊಳೆ**

1975ರಲ್ಲಿ ಶ್ರೀ ನಾಗರಾಜ ಶೆಟ್ಟಿಯವರ ನೇತೃತ್ವದಲ್ಲಿ ಪ್ರಾರಂಭವಾದ ಈ ಸಂಸ್ಥೆ ರಂಗ ಚಟುವಟಿಕೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ತ್ಯಾಗಿ, ಮುದುಕನ ಮದುವೆ, ಲಜ್ಜಿ, ಜ್ವಾಲೆ, ವರದಕ್ಷಿಣೆ ಭೂತ, ಪ್ರಜಾಪ್ರಭುತ್ವ, ಬೆಲೆ ಇಳಿದಿದೆ, ಎಲ್ಲರೂ ಮಾಡುವುದು ಏತಕ್ಕಾಗಿ, ಒಂದು ಲೋಕಕತೆ, ಆಗಂತುಕ ಮುಂತಾದ ನಾಟಕಗಳನ್ನು ಪ್ರದರ್ಶಿಸಿದೆ. ಸ್ವಂತ ಬಯಲು ರಂಗಮಂದಿರ ಹೊಂದಿದೆ. ನಟನಾಗಿ, ರಂಗ ಸಂಘಟಕನಾಗಿ, ನಿರ್ದೇಶಕನಾಗಿ ಜಿಲ್ಲೆಯಲ್ಲಿ ಚಿರಪರಿಚಿತರಾಗಿರುವ ಮ್ಯಾಥ್ಯೂ ಸುರಾನಿ ಈ ಸಂಸ್ಥೆಯ ಹೆಮ್ಮೆಯ ಕೊಡುಗೆ.

**ಪ್ರತಿಭಾ ವೇದಿಕೆ, ಸುರಾನಿ ಗಣಪತಿಕಟ್ಟೆ**

ಕಳೆದೊಂದು ದಶಕದಿಂದ ಈ ಸಂಸ್ಥೆ ರಂಗ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. "ಸಂಗೊಳ್ಳಿ ರಾಯಣ್ಣ, ಕುದುರೆ ಮೊಟ್ಟೆ, ದೇವರಿಗೇ ದಿಕ್ಕಿಲ್ಲ, ಆಗಂತುಕ, ಶ್ರೀಕೃಷ್ಣ ಸಂಧಾನ ಮುಂತಾದ ನಾಟಕಗಳನ್ನು ರಂಗಕ್ಕೆ ನೀಡಿದೆ ಹಾಗೂ ಮಕ್ಕಳ ರಂಗ ತರಬೇತಿ ಶಿಬಿರವನ್ನು ಎರಡು ವರ್ಷ ಯಶಸ್ವಿಯಾಗಿ ನಡೆಸಿ, ಮೃಗ ಮತ್ತು ಸುಂದರಿ, "ಜುಗ್ಗಪ್ಪಯ್ಯನ ತಿಪ್ಪರಲಾಗ" ನಾಟಕಗಳನ್ನು ತೀರ್ಥಹಳ್ಳಿಯಲ್ಲಿ ಪ್ರದರ್ಶಿಸಿದೆ. ದಸರಾ ಸ್ತಬ್ಧ ಚಿತ್ರಗಳನ್ನು ದಸರಾ ಮೆರವಣಿಗೆಗಾಗಿ ನೀಡಿ ಜನಮನ ಸೆಳೆದಿದೆ.

**ಇತರೆ ತಂಡಗಳು**

ಕುರುವಳ್ಳಿಯ ಸರ್ವೋದಯ ಕಲಾ ಸಂಘ ಶ್ರೀ ಹರಿದಾಸ್ ಹೆಜಮಾಡಿಯವರ ನೇತೃತ್ವದಲ್ಲಿ ಸಾಕಷ್ಟು ರಂಗ ಚಟುವಟಿಕೆಗಳನ್ನು ನಡೆಸಿದೆ. ಈ ತಂಡ ಅಭಿನಯಿಸುತ್ತಿದ್ದ "ರೊಟ್ಟಿಯ ಋಣ" ನಾಟಕ ಜನಪ್ರಿಯವಾಗಿತ್ತು. ಮೇಳಿಗೆ, ದೇಮ್ಲಾಪುರ, ಶಿವರಾಜಪುರ, ಕಮ್ಮರಡಿ, ಆಗುಂಬೆ, ಹೆಗ್ಗೋಡು, ಹಾದಿಗಲ್ಲು, ಚಿಟ್ಟೇಬೈಲು ಮುಂತಾದ ತಂಡಗಳು ಈಗ ಚಟುವಟಿಕೆಗಳನ್ನು ನಿಲ್ಲಿಸಿದೆ. ಇಲ್ಲಿನ ಯುವಕರು ಗಣಪತಿ ಹಬ್ಬಗಳಲ್ಲಿ ನಾಟಕ ಅಭ್ಯಾಸ ಮಾಡಿ ಪ್ರದರ್ಶಿಸುವ ಅಭ್ಯಾಸ ಇಟ್ಟುಕೊಂಡಿದೆ.

ಕೋಣಂದೂರಿನ ಎನ್.ಇ.ಎಸ್. ಶಿಕ್ಷಣ ಸಂಸ್ಥೆಯು ಊರಿನವರೊಂದಿಗೆ ಸೇರಿ ಕೆಲವೊಂದು ಚಟುವಟಿಕೆಗಳನ್ನು ನಡೆಸುತ್ತಿದೆ. ಉಪನ್ಯಾಸಕ ಕೆ. ಯುವರಾಜ್, ನಿರ್ದೇಶನದಲ್ಲಿ "ಕೆರೆಗೆ ಹಾರ" ನಾಟಕವನ್ನು 90ರ ದಶಕದಲ್ಲಿ ಪ್ರದರ್ಶಿಸಿತ್ತು. ಮಲೆನಾಡ ಸೇನೆ "ಗುಡಿಯಾ" ಎಂಬ ನಾಟಕವನ್ನು ಪ್ರದರ್ಶಿಸಿತ್ತು. ಶಿವಮೊಗ್ಗದ "ಅಭಿನಯ" ತೀರ್ಥಹಳ್ಳಿಯ "ನಟಮಿತ್ರರು" ಸಂಸ್ಥೆಗಳು ಇಲ್ಲಿ ನಾಟಕ ಪ್ರದರ್ಶಿಸಿದೆ. ಇತ್ತೀಚಿನ

ವರ್ಷಗಳಲ್ಲಿ ಸಾಗರದ ಶ್ರೀಮತಿ ಎಸ್. ಮಾಲತಿ ಮತ್ತು ಪುರುಷೋತ್ತಮ ತಲವಾಟ ನಿರಂತರವಾಗಿ ರಂಗ ತರಬೇತಿ ಶಿಬಿರಗಳನ್ನು ನಡೆಸಿಕೊಡುತ್ತಿದ್ದಾರೆ.

ಹಾದಿಗಲ್ಲಿನ ಪ್ರತಿಭಾ ವಿಕಾಸ ರಂಗತಂಡ ಹಾದಿಗಲ್ ವೆಂಕಟರಮಣ ಇವರ ನೇತೃತ್ವದಲ್ಲಿ ವರ್ಷಕ್ಕೆ ಕನಿಷ್ಠ ಒಂದಾದರೂ ನಾಟಕ ಪ್ರದರ್ಶಿಸಿ ರಂಗಭೂಮಿಯನ್ನು ಜೀವಂತವಾಗಿಡುವ ಪ್ರಯತ್ನ ನಡೆಸಿದೆ. ಅನೇಕ ಗಮನಾರ್ಹ ರಂಗಪ್ರಯೋಗಗಳನ್ನು ನಡೆಸಿದ ಈ ತಂಡ ಉಲ್ಲೇಖಾರ್ಹ.

## ತೀರ್ಥಹಳ್ಳಿಯಲ್ಲಿ ಈಗಲೂ ಅಸ್ತಿತ್ವ ಉಳಿಸಿಕೊಂಡು
### ರಂಗ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುವ ತಂಡಗಳು

**1. ಕುಣಿಯೋಣು ಬಾರಾ**

1984ರಲ್ಲಿ ತೀರ್ಥಹಳ್ಳಿಯ ತುಂಗಾ ಮಹಾವಿದ್ಯಾಲಯದ ಉತ್ಸಾಹೀ ಉಪನ್ಯಾಸಕರಿಂದ ಪ್ರಾರಂಭವಾದ ಈ ಸಂಸ್ಥೆ "ದೊರೆ ಈಡಿಪಸ್", ಒಥೆಲೋ, ತಪಸ್ವಿ ತರಂಗಿಣಿ, ಕನಸಿನವರು, ದಾಕ್ಷಿಣ್ಯ, ಮ್ಯಾಕ್‌ಬೆತ್, ಒಂದು ಲೋಕಕತೆ "ಎಲ್ಲಾರು ಮಾಡುವುದು ಏತಕ್ಕಾಗಿ", "ಫೀನಿಕ್ಸ್", "ಜೈಸಿದ್ದನಾಯಕ", "ಬಂಡವಾಳವಿಲ್ಲದ ಬಡಾಯಿ" ಮುಂತಾದ ನಾಟಕಗಳನ್ನು ತೀರ್ಥಹಳ್ಳಿಯ ರಂಗಾಸಕ್ತರಿಗೆ ನೀಡಿದೆ. ಪಶ್ಚಿಮಘಟ್ಟ ಉಳಿಸಿ ಅಭಿಯಾನದಲ್ಲಿ ಬೀದಿ ನಾಟಕಗಳನ್ನು ಪ್ರದರ್ಶಿಸಿದೆ. ಶ್ರೀ ಲಕ್ಷ್ಮೀನಾರಾಯಣ್, ಡಿ. ಸೋಮಶೇಖರ್, ಕೃಷ್ಣ ಎಂ. ಜಾಧವ್ ಮುಂತಾದ ಪ್ರತಿಭಾವಂತ ನಟ ನಿರ್ದೇಶಕರಿರುವ ಈ ತಂಡದಿಂದ ತೀರ್ಥಹಳ್ಳಿ ಹೆಚ್ಚಿನದನ್ನು ನಿರೀಕ್ಷಿಸುತ್ತಿದೆ. ಕಾರ್ಯಭಾರದ ಒತ್ತಡವೋ, ಹೊಂದಾಣಿಕೆಯ ಕೊರತೆಯೋ ಇತ್ತೀಚೆಗೆ ಈ ಸಂಸ್ಥೆಯ ಚಟುವಟಿಕೆಗಳು ಅಷ್ಟಾಗಿ ಕಾಣುತ್ತಿಲ್ಲ. ಹಾಗಾಗಬಾರದಂದೇ ತೀರ್ಥಹಳ್ಳಿಯ ರಂಗಾಸಕ್ತರ ಹಾರೈಕೆ.

**ಶ್ರೀ ಕಲಾವಿದರು, ತೀರ್ಥಹಳ್ಳಿ**

1969ರಲ್ಲಿ ಅಸ್ತಿತ್ವಕ್ಕೆ ಬಂದ ಈ ಸಂಸ್ಥೆ ಪ್ರಾರಂಭದಲ್ಲಿ ತುಳು ನಾಟಕಗಳನ್ನು ಪ್ರದರ್ಶಿಸುವ ಸಂಸ್ಥೆಯಾಗಿ ಗುರುತಿಸಲ್ಪಟ್ಟಿತ್ತು. ಆದರೂ ಸಾಕಷ್ಟು ಕನ್ನಡ ನಾಟಕಗಳೂ ಈ ಸಂಸ್ಥೆಯಿಂದ ಮೂಡಿ ಬಂದಿತ್ತು. ಮನವಿಲ್ಲದ ಬಾಳು, ಬಡತನದ ಭೂತ, ತೆರೆಯ ಮರೆಯಲ್ಲಿ, ತೆರೆದ ಹೃದಯ, ಗಂಡನ ಮಾನ, ಬಯ್ಯಮಲ್ಲಿಗೆ, ಸಂಶಯದ ಸಂಕಲೆ, ರಂಗಣ್ಣನ ರಾದ್ಧಾಂತ, ಏರ್ ಮಲ್ತಿನ ತಪ್ಪು, ದೇವರ್ ಕೊರ್ಪೆರ್, ಊರು ಪೂರಾ ಸುದ್ದಿ ಮುಂತಾದ ನಾಟಕಗಳನ್ನು ಪ್ರದರ್ಶಿಸಿತ್ತು. ಇತ್ತೀಚೆಗೆ ಮಕ್ಕಳ ರಂಗ ತರಬೇತಿ ಶಿಬಿರಗಳನ್ನು ಪ್ರತಿವರ್ಷವು ನಡೆಸುತ್ತಾ ಬರುತ್ತಿದೆ. "ಪುಸ್ತಕ ಪಾಂಡಿತ್ಯ" "ಸೂರ್ಯಬಂದ" "ಸಂಗಳ್ಳಿ ರಾಯಣ್ಣ" "ಯಾರಿಗೂ ಹೇಳ್ಬೇಡಿ" "ಅರಸನ ಅರಿವೆ" ನಾಟಕಗಳನ್ನು ಪ್ರದರ್ಶಿಸಿದೆ.

ಈ ಸಂಸ್ಥೆಯ ಕಲಾವಿದರಾದ 'ಶ್ರೀ ಉದಯಕುಮಾರ್ ಶೆಟ್ಟಿ' ದೇಶದ ಪ್ರಖ್ಯಾತ ಒಡಿಸ್ಸಿ ಕಲಾವಿದರಾಗಿ ಗುರುತಿಸಲ್ಪಟ್ಟಿದ್ದಾರೆ. ತಮ್ಮ "ಕಲಾತೀರ" ಸಂಸ್ಥೆಯ ಮೂಲಕ ಹೆಸರುವಾಸಿಯಾಗಿದ್ದಾರೆ. ಸ್ಥಾಪನೆಯಿಂದ ಇಂದಿನವರೆಗೂ ಶ್ರೀ ಆನಂದ ಟೈಲರ್ ಮತ್ತು ಡಾನ್ ರಾಮಣ್ಣ ಶೆಟ್ಟಿ ಸಕ್ರೀಯರಾಗಿದ್ದು, ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ತಂಡ ಈಗಲೂ ಸಕ್ರೀಯವಾಗಿ ರಂಗ ಚಟುವಟಿಕೆಯಲ್ಲಿ ತೊಡಗಿಕೊಂಡಿದೆ. ಕುಪ್ಪಳಿ, ಶಿವಮೊಗ್ಗ, ಹಾಸನ ನಾಟಕೋತ್ಸವದಲ್ಲಿ ಪ್ರದರ್ಶನ ನೀಡಿದೆ.

## ನಟ ಮಿತ್ರರು, ತೀರ್ಥಹಳ್ಳಿ

1987ರಲ್ಲಿ ನಟ ಸಂಕುಲ ಮತ್ತು ಕನ್ನಡ ಮಿತ್ರರು ಎರಡೂ ಸಂಸ್ಥೆಗಳ ಸಮ್ಮಿಲನದಿಂದ ರೂಪುಗೊಂಡ ಈ ಸಂಸ್ಥೆ ತೀರ್ಥಹಳ್ಳಿಯ ಹೆಮ್ಮೆಯ ರಂಗಕರ್ಮಿ ಶ್ರೀ ಯು. ಸೀತಾರಾಮಾಚಾರ್ ರವರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದೆ. ಅವರ ನಿರ್ದೇಶನದಲ್ಲಿ "ಸುಲ್ತಾನ್ ಸಂಸ್ತಾನ್", "ಬನಗರವಾಡಿ ಜಾತ್ರೆ", "ಚಾಣಕ್ಯ", "ಜಾತ್ರೆ", "ಲಂಕೇಶನೊಮಿಸಿದನ್ ಮಾರೀಚನಂ", ಕೋಳಿ ಜಗಳ", "ದೆವ್ವದ ಮನೆ" ಮುಂತಾದ ನಾಟಕಗಳನ್ನು ಪ್ರದರ್ಶಿಸಿತ್ತು.

ದಿವಂಗತ ಶ್ರೀಧರಮೂರ್ತಿಯವರ ನಿರ್ದೇಶನದಲ್ಲಿ "ಮಾನಿಷಾದ", "ನನ್ನ ಗೋಪಾಲ" ಮುಂತಾದ ನಾಟಕಗಳು ಶ್ರೀ ನಾಗರಾಜ್‌ರವರ ನಿರ್ದೇಶನದಲ್ಲಿ "ದೆವ್ವದ ಕಾಟ', "ರಥಮತ್ಸಲ", "ಸಂಜೀವಿನಿ", "ಮೃಗತುಷ್ಣಾ" ಲಕ್ಷ್ಮೀನಾರಾಯಣ್‌ರವರ ನಿರ್ದೇಶನದಲ್ಲಿ ತದ್ರೂಪಿ, ನಾಗಮಂಡಲ, ಎಸ್. ಮಾಲತಿಯವರ ನಿರ್ದೇಶನದಲ್ಲಿ "ಜನನಾಯಕ" ಭೀಮ ಕಥಾನಕ, ಬುದ್ಧ ಹೇಳಿದ ಕತೆ ಗಿಳಿಯಾದ ಮಂತ್ರವಾದಿ, ಮರದತಾಯಿ ಮುಂತಾದ ಅನೇಕ ನಾಟಕಗಳನ್ನು ತೀರ್ಥಹಳ್ಳಿಯ ಜನತೆಗೆ ನೀಡಿದೆ.

ಈ ತಂಡ ರವೀಂದ್ರ ಕಲಾಕ್ಷೇತ್ರ, ಬೆಂಗಳೂರು, ದಸರಾ ಉತ್ಸವ, ಮೈಸೂರು, ದೂರದರ್ಶನ, ಸಾಗರ, ಶಿವಮೊಗ್ಗ ನಾಟಕೋತ್ಸವ, ಕೋಣಂದೂರು ಕುಪ್ಪಳ್ಳಿ ಹೇರಂಭಾಪುರದಲ್ಲಿ ಪ್ರದರ್ಶನ ನೀಡಿದೆ. ನಿಯಮಿತವಾಗಿ ರಂಗ ತರಬೇತಿ ಶಿಬಿರಗಳನ್ನು ನಡೆಸುತ್ತಿದೆ.

1992ರಲ್ಲಿ ನಡೆದ ಭಾರತೀಯ ಜ್ಞಾನ ವಿಜ್ಞಾನ ಜಾಥಾದಲ್ಲಿ ಸಕ್ರಿಯವಾಗಿ ಭಾಗವಹಿಸಿದೆ. ತೀರ್ಥಹಳ್ಳಿಯ ಎಲ್ಲಾ ಸಾಮಾಜಿಕ ಚಳುವಳಿಗಳಲ್ಲಿ ತೊಡಗಿಸಿಕೊಂಡಿದೆ.

1994 ಮತ್ತು 1996ರಲ್ಲಿ ಸಾಂಸ್ಕೃತಿಕ ಸಪ್ತಾಹದ ಮೂಲಕ ಜಿಲ್ಲೆಯ ಅನೇಕ ನಾಟಕ ಮತ್ತು ಕಲಾ ತಂಡಗಳನ್ನು ತೀರ್ಥಹಳ್ಳಿಗೆ ಪರಿಚಯಿಸಿದೆ. ಹೀಗೆ ತೀರ್ಥಹಳ್ಳಿಯಲ್ಲಿ ರಂಗಭೂಮಿ ಚಟುವಟಿಕೆಯನ್ನು ಕಟ್ಟಿ ಬೆಳೆಸುವಲ್ಲಿ ಪ್ರಮುಖ ಪಾತ್ರನಿರ್ವಹಿಸಿದೆ. ಸಂಸ್ಥೆಯ ಗೌರವ ಅಧ್ಯಕ್ಷರಾದ ಯು. ಸೀತಾರಾಮಾಚಾರ್, ತನ್ನ ರಾಜಕೀಯ ಚಟುವಟಿಕೆಯ ಮಧ್ಯೆಯೂ ರಂಗಭೂಮಿಯನ್ನು ವ್ರತದಂತೆ ಹಿಡಿದು ಮುನ್ನೆಡೆಸುತ್ತಿರುವ

ಸಂದೇಶ್ ಜವಳಿ, ರಂಗ ಸಂಘಟಕ ಮ್ಯಾಥ್ಯೂಸ್ ಸುರಾನಿ ಶ್ರೀಪತಿ ಮತ್ತು ಗೆಳೆಯರು ಸಂಸ್ಥೆಯ ಪ್ರಾರಂಭದಿಂದ ಇಂದಿನವರೆಗೂ ಸಂಸ್ಥೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ.

## ಸ್ಪಂದನ ಸಂಸ್ಥೆ ತೀರ್ಥಹಳ್ಳಿ

ಹೊಸ ಯುವಕರನ್ನೊಳಗೊಂಡ ಈ ಸಂಸ್ಥೆ, ಸಮಾಜ ಸೇವಾ ಚಟುವಟಿಕೆಗಳನ್ನು ನಡೆಸುತ್ತಿದೆ. ಇತ್ತೀಚೆಗೆ ರಂಗಭೂಮಿಗೂ ಪ್ರವೇಶಿಸಿರುವ ಈ ಸಂಸ್ಥೆ ಮ್ಯಾಥ್ಯೂ ಸುರಾನಿಯವರ ನಿರ್ದೇಶನದಲ್ಲಿ 'ತಂತಿ' ನಾಟಕ ಪ್ರದರ್ಶಿಸಿದೆ. ಮಕ್ಕಳ ರಂಗ ತರಬೇತಿ ಶಿಬಿರಗಳನ್ನೂ ಆಯೋಜಿಸುತ್ತಾ ತೀರ್ಥಹಳ್ಳಿಯ ರಂಗಭೂಮಿಯಲ್ಲಿ ತನ್ನ ಹೆಸರನ್ನು ಸ್ಥಾಪಿಸಿದೆ.

## ರಂಗಭೂಮಿ ತೇರನ್ನು ಎಳೆದ, ಈಗಲೂ ಎಳೆಯುತ್ತಿರುವ ಹಿರಿಯರು

ಯು. ಸೀತಾರಾಮಾಚಾರ್, ಹೊ. ನಾ. ರಾಘವೇಂದ್ರರಾಯರು, ಹಾದಿಗಲ್ಲು ರಾಮಣ್ಣ, ಶಾಂತ್‌ಕುಮಾರ್ ಮುಂತಾದ ಹಿರಿಯರು ರಂಗಭೂಮಿಗೆ ತಮ್ಮದೇ ಆದ ಕೊಡುಗೆ ನೀಡುತ್ತಾ ಬಂದಿದ್ದಾರೆ. ಕೆಲವರು ಕಾಲದ ಓಟದಲ್ಲಿ ಅನೇಕ ಹಿರಿಯರು ಕಣ್ಮರೆಯಾದರು. ಇರುವ ಹಿರಿಯರನ್ನು ಗುರುತಿಸುವವರಿಲ್ಲ. ಹೊಸ ಪೀಳಿಗೆಯವರಿಗೆ ರಂಗಭೂಮಿಯ ಆಸಕ್ತಿ ಒಲಿಯುತ್ತಿಲ್ಲ. ಪ್ರದರ್ಶನಕ್ಕೆ ಸಿದ್ಧಪಡಿಸಿದ ನಾಟಕಗಳ ಪ್ರದರ್ಶನಕ್ಕೂ ಸರ್ಕಾರದ ಸಹಾಯ ಹಸ್ತಕ್ಕಾಗಿ ಕಾಯುವ ಪರಿಸ್ಥಿತಿ. ಹೀಗೆ ತೀರ್ಥಹಳ್ಳಿಯಲ್ಲಿ ರಂಗಭೂಮಿ ಸೊರಗುತ್ತಿರುವಂತೆ ಕಾಣುತ್ತಿದೆ. ಹಾಗಾಗದಂತೆ ತಡೆಯುವುದು ನಮ್ಮೆಲ್ಲರ ಜವಾಬ್ದಾರಿ.

## ತೀರ್ಥಹಳ್ಳಿಯಲ್ಲಿ ಮಕ್ಕಳ ರಂಗಭೂಮಿ

1960ರ ದಶಕದಲ್ಲಿ ಆಗಿನ ಹೈಸ್ಕೂಲ್ ಮುಖ್ಯೋಪಾಧ್ಯಾಯರಾಗಿದ್ದ ದಿ॥ ಕೆ.ಕೃಷ್ಣಸ್ವಾಮಿ ಐಯ್ಯಾಂಗಾರ್ ರವರು ಮಕ್ಕಳನ್ನು ಕಲೆಹಾಕಿ "ಭಕ್ತ ಪ್ರಹ್ಲಾದ", "ದ ಬಿಶಪ್ಸ್ ಕ್ಯಾಂಡ್ಲ್ ಸ್ಟಿಕ್" ಮುಂತಾದ ನಾಟಕಗಳನ್ನು ನಿರ್ದೇಶಿಸಿ, ಸಾರ್ವಜನಿಕ ಪ್ರದರ್ಶನ ಏರ್ಪಡಿಸಿದ್ದರು.

1993ರಲ್ಲಿ "ನಟಮಿತ್ರರು" ಸಂಸ್ಥೆಯು ಕುವೆಂಪುರವರ "ನನ್ನ ಗೋಪಾಲ" ಮಕ್ಕಳ ನಾಟಕವನ್ನು ರಂಗದಮೇಲೆ ತಂದಿತ್ತು ಮತ್ತು ಈ ನಾಟಕ ಅಪಾರ ಜನಮನ್ನಣೆ ಗಳಿಸಿತ್ತು.

ಈ ಎರಡು ದಾಖಲೆಗಳನ್ನು ಬಿಟ್ಟರೆ, ತೀರ್ಥಹಳ್ಳಿಯಲ್ಲಿ ಮಕ್ಕಳ ರಂಗಭೂಮಿ ಗುರುತಿಸುವಂತೆ ಬೆಳೆದದ್ದು 2002ನೇ ಇಸವಿಯ ನಂತರ ಎನ್ನಬಹುದು. ಅಲ್ಲಿಯವರೆಗೆ ಶಾಲೆಗಳಲ್ಲಿ ವಾರ್ಷಿಕೋತ್ಸವ ಮತ್ತಿತರ ಸಮಾರಂಭಗಳಲ್ಲಿ ಮಕ್ಕಳಿಂದ ಆಡಿಸುತ್ತಿದ್ದ ಅಥವಾ ಅವರೇ ತಯಾರಿಸಿಕೊಂಡು ಪ್ರದರ್ಶಿಸುತ್ತಿದ್ದ ನಾಟಕಗಳಷ್ಟೇ ಮಕ್ಕಳ ರಂಗಭೂಮಿ ಎನಿಸಿಕೊಂಡಿತ್ತು.



ರಾಷ್ಟ್ರಕವಿ ಕುವೆಂಪುರವರ 'ಮಹಾಮನೆ', ಕುಪ್ಪಳಿ

2002ರಲ್ಲಿ ಪ್ರತಿಭಾ ವೇದಿಕೆ, ಗಣಪತಿಕಟ್ಟೆ ಆಶ್ರಯದಲ್ಲಿ ಮಕ್ಕಳ ರಂಗತರಬೇತಿ ಶಿಬಿರ ನಡೆಸಿ, "ಮೃಗ ಮತ್ತು ಸುಂದರಿ" ನಾಟಕ ಯಶಸ್ವಿ ಪ್ರದರ್ಶನ ಕಂಡಿತ್ತು.

"ಶ್ರೀ ಕಲಾವಿದರು" ಸಂಸ್ಥೆಯು ಪ್ರತೀವರ್ಷವೂ "ಮಕ್ಕಳ ರಂಗ ತರಬೇತಿ ಶಿಬಿರ"ವನ್ನು 2004ರಲ್ಲಿ "ಜುಗ್ಗಪ್ಪಯ್ಯನ ತಿಪ್ಪರಲಾಗ", 2006ರಲ್ಲಿ "ಪುಸ್ತಕ ಪಾಂಡಿತ್ಯ", 2009ರಲ್ಲಿ "ವೈದೇಹಿ"ಯವರ "ಸೂರ್ಯಬಂದ", 2010ರಲ್ಲಿ ಪ್ರಭುಶಂಕರರ "ಪರಿವರ್ತನೆ" ನಾಟಕಗಳು ಪ್ರದರ್ಶನಗೊಂಡಿದೆ.

ನಟಮಿತ್ರರು ಸಂಸ್ಥೆಯು ಇತ್ತೀಚೆಗಿನ ವರ್ಷಗಳಲ್ಲಿ ಮಕ್ಕಳ ನಾಟಕಗಳನ್ನು ಆಯೋಜಿಸುತ್ತಿದೆ. 2005 "ಬುದ್ಧ ಹೇಳಿದ ಕಥೆ", 2007ರಲ್ಲಿ "ಮರದ ತಾಯಿ", 2008ರಲ್ಲಿ "ಗಿಳಿಯಾದ ಮಂತ್ರವಾದಿ" ನಾಟಕಗಳನ್ನು ಪ್ರದರ್ಶಿಸಿದೆ.

ಹೀಗೆ ವರ್ಷದಲ್ಲಿ ಒಮ್ಮೆ "ಶ್ರೀ ಕಲಾವಿದರು" ಅಥವಾ ನಟಮಿತ್ರರು ಸಂಸ್ಥೆಯಿಂದ ಮಕ್ಕಳ ನಾಟಕ ಪ್ರದರ್ಶನ ಯಶಸ್ವಿಯಾಗಿ ನಡೆಯುತ್ತಿದೆ.

– **ಮ್ಯಾಥ್ಯೂ ಸುರಾನಿ**

## ಶ್ರೀ ಕಲಾವಿದರು, ತೀರ್ಥಹಳ್ಳಿ

**ಸಂಪರ್ಕ: ಆನಂದ್ ಟೈಲರ್ಸ್, ದೂ: 94491 58540**

"ಶ್ರೀ ಕಲಾವಿದರು" ಕಲಾ ತಂಡ 1968ರಲ್ಲಿ ತೀರ್ಥಹಳ್ಳಿಯ ಉತ್ಸಾಹಿ ಕಲಾವಿದರ ಸಂಘಟನೆಯಾಗಿ ಪ್ರಾರಂಭವಾಯಿತು. ಕನ್ನಡದ ಜೊತೆಗೆ ತುಳು ನಾಟಕಗಳನ್ನು ಅಭಿನಯಿಸುತ್ತಿದ್ದ ತಂಡ "ಎಲ್ಲಾ ಹಣಕ್ಕಾಗಿ", "ಏರ್ ಮಲ್ತಿನ ತಪ್ಪು", "ದೇವರ್ ಕೊರ್ಪೆರ್", ಯಾರಿಂದ ಬಂದ ಪತ್ರ", "ಬೈಯ್ಯ ಮಲ್ಲಿಗೆ", "ಬಡತನದ ಭೂತ" ಮುಂತಾದ ಜನಪ್ರಿಯ ನಾಟಕಗಳನ್ನು ತೀರ್ಥಹಳ್ಳಿಯಲ್ಲಿ ಮತ್ತು ಹೊರಗೆ ಪ್ರದರ್ಶಿಸಿದೆ. ತಂಡದ ನಾಟಕಗಳಲ್ಲಿ ಅಭಿನಯಿಸುತ್ತಿದ್ದ "ಶ್ರೀ ಉದಯಕುಮಾರ್ ಶೆಟ್ಟಿ" ಯವರು ಇಂದು ದೇಶವೇ ಗುರುತಿಸಿದ ನೃತ್ಯ ಪಟುವಾಗಿ ಕಲಾ ಸಂಘಟಕನಾಗಿ ಬೆಳೆದು ನಿಂತಿರುವುದು, ಹಾಗೆಯೇ ಹಿರಿಯ ಕಲಾವಿದ ಶ್ರೀ ಆನಂದ್ ಟೈಲರ್ ರವರ ಕಲಾ ಸೇವೆಗಾಗಿ ಕರ್ನಾಟಕ ನಾಟಕ ಅಕಾಡೆಮಿಯು ಮಾಶಾಸನ ನೀಡಿ ಗುರುತಿಸಿ ಗೌರವಿಸಿರುವುದು ಹೆಮ್ಮೆಯ ವಿಷಯವಾಗಿದೆ. ಇತ್ತೀಚೆಗೆ ತೀರ್ಥಹಳ್ಳಿಯಲ್ಲಿ ನಡೆಯುತ್ತಿರುವ ಅನೇಕ ಕಿರುತೆರೆ, ಸಿನಿಮಾ ಚಿತ್ರೀಕರಣಗಳಲ್ಲಿ ಸಂಘದ ಅನೇಕ ಕಲಾವಿದರು ಅಭಿನಯಿಸಿದ್ದಾರೆ.



ಪ್ರಸ್ತುತ ಮಕ್ಕಳ ಪ್ರತಿಭೆಯನ್ನು ಎಳೆಯ ವಯಸ್ಸಿನಲ್ಲಿಯೇ ಗುರುತಿಸಿ ಹೊರಹೊಮ್ಮಿಸಿ ಉತ್ತೇಜಿಸುವ ಸಲುವಾಗಿ ಈ "ಮಕ್ಕಳ ರಂಗ ತರಬೇತಿ ಶಿಬಿರ"ವನ್ನು ಆಯೋಜಿಸಲಾಗಿದೆ.

**ಕಲಾವಿದರ ವಿವರ**

| | |
|---|---|
| ಆನಂದ ಟೈಲರ್ | ಡಾನ್ ರಾಮಣ್ಣ |
| ಮ್ಯಾಥ್ಯು ಸುರಾನಿ | ಅನಂತಭಟ್ |
| ಗುರುರಾಜ್ ಪಿ. ವಿ. | ಮಹೇಂದ್ರಪ್ರಸಾದ್ |
| ಕನಕ ಶಶಿಧರ್ | ನವನೀತ್ ಶೆಣೈ |
| ರೋಶನ್, ಕಿರಣ್ ಫೆರ್ನಾಂಡಿಸ್ | ಅಚ್ಯುತ ಐ. ಆರ್. |
| ಲಕ್ಷ್ಮೀ ರವಿಶಂಕರ್ | ಕುಮಾರಿ ರಮ್ಯಾ |
| ಹಾದಿಗಲ್ಲು ವೆಂಕಟರಮಣ | ನಾಗಭೂಷಣ್ |
| ಕು॥ ಅನುಪ್ ನಾಗಭೂಷಣ್ | ಗೋಪಾಲನಾಯಕ್ ಹಾರೋಗದ್ದೆ |
| ರಾಮಪ್ಪ ಮೇಸ್ತ್ರಿ | ಶ್ರೀಪತಿ |
| ಆಡಿನಸರ ಸತೀಶ್ | ಲತ ರಾಜ್‌ಕುಮಾರ್ |
| ಟಿ. ಎನ್. ಮಂಜುನಾಥ | ಸುಧಾಕರ್ ಎ. ಸಿ. |
| ರಾಘವೇಂದ್ರ ಟಿ. ಎನ್. | ಯೋಗೇಂದ್ರ ಹೆಚ್. ಎನ್. |
| ಶ್ರೀನಿವಾಸ ಟಿ. ಎನ್. | ಹೇಮಾ ಭಾಸ್ಕರ್ |

# ನಟ ಮಿತ್ರರು

**ಸಂಪರ್ಕ: ಸಂದೇಶ್ ಜವಳಿ, ದೂ: 94481 20959**

1980ರಲ್ಲಿ ಪ್ರಾರಂಭವಾದ ನಮ್ಮ ಸಂಸ್ಥೆ ತೀರ್ಥಹಳ್ಳಿಯ ರಂಗಭೂಮಿ ಚಟುವಟಿಕೆಯಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ.


ಯು. ಸೀತಾರಾಮಾಚಾರ್ ನಿರ್ದೇಶನದಲ್ಲಿ "ಬನಗರವಾಡಿ", "ಟಿಪ್ಪು ಸುಲ್ತಾನ್", "ಚಾಣಕ್ಯ", "ಜಾತ್ರೆ", "ದೆವ್ವದ ಮನೆ", "ಸಾಯೋ ಆಟ", "ಲಂಕೇಶ ನೆಲಿಸಿದನುಂ ಮಾರಿಚನಂ" ಮುಂತಾದ ನಾಟಕಗಳನ್ನು ಲಕ್ಷ್ಮೀನಾರಾಯಣ್ ನಿರ್ದೇಶನದಲ್ಲಿ, ತದ್ರೂಪಿ, ಬುದ್ಧಿ ಮಾರಾಟಕ್ಕಿದೆ, ಪೋಲೀಸರು ಬರುತ್ತಿದ್ದಾರೆ, ಲಕ್ಕೀಜಾನನ ಗಲ್ಲು ಪ್ರಸಂಗ, ನಾಗಮಂಡಲನಾಟಕಗಳನ್ನು ಶ್ರೀ ನಾಗರಾಜ್ ನಿರ್ದೇಶನದಲ್ಲಿ ಕರುಳರಿಯಲಿಲ್ಲ, ಮೃಗತೃಷ್ಣ, ದೆವ್ವದಕಾಟ, ಸಂಜೀವಿನಿ, ಎನಗೂ ಆಣೆ ನಿನಗೂ ಆಣೆ. ಶ್ರೀ ಮಾಲತಿ ಸಾಗರ ನಿರ್ದೇಶನದಲ್ಲಿ ಜನನಾಯಕ, ಗೋಪಿನಹಾಡು, ಬುದ್ಧ ಹೇಳಿದ ಕತೆ, ಮರದ ತಾಯಿ, ಭೀಮಕಥಾನಕ, ಗಿಳಿಯಾದ ಮಂತ್ರವಾದಿ ಮುಂತಾದ ಅನೇಕ ನಾಟಕಗಳನ್ನು ರಂಗಭೂಮಿಗೆ ತರುವಲ್ಲಿ ಶ್ರಮಿಸಿದೆ.



## ಕಲಾವಿದರ ವಿವರ

| | |
|---|---|
| ಯು. ಸೀತಾರಾಮಾಚಾರ್ | ಹಿರಿಯ ನಟರು, ನಿರ್ದೇಶಕರು |
| ರಜನಿ ಐತಾಳ್ | ನಂದಕಿಶೋರ್ ಕಾಮತ್ |
| ವಾಸುದೇವ್ ಕುರುವಳ್ಳಿ | ನವನೀತ್ |
| ಗುರುಪ್ರಸಾದ್ | ಶ್ರೀಪತಿ |
| ಕೃಷ್ಣ | ಸತೀಶ್ ಹೊರಣಿ |
| ಸಂದೇಶ್ ಜವಳಿ | ನೀಲೇಶ್ ಜವಳಿ |
| ರವಿರಾಜ್ ಹೆಗಡೆ | ಕಂಚರಾಜ್ |
| ಸಂಜಯ | ದಿನಕರ ಕಿಣಿ |
| ವಿಭಾ ಪಿ. ರಾವ್ | ಶಿಲ್ಪಾ |
| ಆಶಾ ಡೇನಿಯಲ್ | ಅರವಿಂದ್ ಟಿ. ಎನ್. |
| ಸುಬ್ರಮಣ್ಯ ಜಿ. ಆರ್. | ಹರೀಂದ್ರ ಮಕ್ಕಿಮನೆ |
| ಗುರುಪ್ರಸಾದ್ ಪ್ರಭು | |

## ಹೊಸನಗರ ತಾಲೂಕು ರಂಗಭೂಮಿ



# ಪ್ರೇಕ್ಷಣೀಯ ಸ್ಥಳಗಳು

**ವನ್ಯಜೀವಿ ತಾಣಗಳು:**

1. ಕುಕ್ಕನಗುಡ್ಡ

**ಚಾರಣ ತಾಣಗಳು:**

1. ಕೊಡಚಾದ್ರಿ
2. ತರುವೆಗುಡ್ಡ
3. ಬರೇಕಲ್ ಬತೇರಿ
4. ಜೋಗಿಗುಡ್ಡ



ಹಿಡ್ಲುಮನೆ ಫಾಲ್ಸ್

**ಶಿಲಾರೋಹಣಕ್ಕೆ ಸೂಕ್ತ ಸ್ಥಳಗಳು:**

1. ಬರೇಕಲ್ ಬತೇರಿ

**ಜಲಾಶಯಗಳು:**

1. ವರಾಹಿ
2. ಚಕ್ರಾ ಪ್ರಾಜೆಕ್ಟ್

**ದೇವಸ್ಥಾನ ಹಾಗೂ ಐತಿಹಾಸಿಕ ಸ್ಥಳಗಳು:**

1. ನಗರ ಕೋಟೆ 2. ಅಮ್ಮನಗುಡ್ಡ

3. ಶ್ರೀರಾಮಚಂದ್ರಾಪುರಮಠ 4. ಹುಂಚಾ

**ಜಲಪಾತಗಳು:**


1. ಹಿಡ್ಲುಮನೆ ಜಲಪಾತ 2. ಅಚ್ಚಕನ್ಯಾ ಜಲಪಾತ

**ಪ್ರಕೃತಿ ಅಧ್ಯಯನ ಸ್ಥಳಗಳು:**

1. ಮುಪ್ಪಾನೆ 2. ಸಾವೆಹಕ್ಲು 3. ಹುಕ್ಲು 4. ನಿಟ್ಟೂರು

**ದೋಣಿವಿಹಾರಗಳು:**

1. ಕಲ್ಯಾಣಿಚೌಕ 2. ಕಾರಣಗಿರಿ 3. ಹುಕ್ಲು



ಶಿವಪ್ಪನಾಯಕನ ಕೋಟೆ – ನಗರ

## ಹೊಸನಗರ ತಾಲ್ಲೂಕು ರಂಗಭೂಮಿ ಕ್ಷೇತ್ರದಲ್ಲಿನ ಸಾಧಕರ ವಿವರ
### ನಾಟಕ ನಿರ್ದೇಶಕರುಗಳು

1. ಶ್ರೀ ಗರ್ತಿಕೆರೆ ರಾಘವೇಂದ್ರರಾವ್ – ನಿ/ರಂಗ ಸಂಗೀತ, 94490 78787
2. ಶ್ರೀ ವಿ.ಶಾಂತಾರಾಮ್ – ನಿ/ನಟ, 94836 41045
3. ಶ್ರೀ ರಾಚಪ್ಪ ಆರ್ – ನಿ/ನಟ,
4. ಮಂಜುನಾಥ್ ಬೇಂದ್ – ನಿ/ನಟ, 92417 70966

### ರಂಗಮಂದಿರ

1. ರಂಗಮಂದಿರ ಮುಕ್ತಾಯ ಹಂತದಲ್ಲಿದೆ, ಆಸನ ವ್ಯವಸ್ಥೆ: 800.



ಕೊಡಚಾದ್ರಿಯ ವಿಹಂಗಮ ನೋಟ

# ಹೊಸನಗರ ರಂಗಭೂಮಿಯ ಪಕ್ಷಿನೋಟ

ಮಲೆನಾಡ ನಡುಮನೆ ಮತ್ತು ರಂಗಭೂಮಿ ಹೊಸನಗರದ ಹೊಸತನ ಮಲೆನಾಡ ನಡುಮನೆಯಂತಿರುವ ಹೊಸನಗರ ತಾಲ್ಲೂಕಿನಲ್ಲಿ ಸುರಿದ ಬಿರುಮಳೆಯಂತೆ ರಂಗಭೂಮಿ ಚಟುವಟಿಕೆಗಳು ಕೂಡ ಜೋರಾಗಿಯೇ ಇತ್ತು. 1930ರ ಆಸುಪಾಸಿನಲ್ಲಿ ರಂಗ ಚಟುವಟಿಕೆಗಳು ಪ್ರವೃತ್ತಿಯ ರೂಪದಲ್ಲಿ ಕಾಣಿಸಿಕೊಂಡಿತ್ತು. ಅದೇ ವೃತ್ತಿಯಾಗಿ ಸಾಕಾರಗೊಂಡಿದ್ದು 1945ರ ನಂತರದ ದಿನಗಳಲ್ಲಿ. ಹೆಸರಾಂತ ಗುಬ್ಬಿ, ವರದಾಚಾರ್ ಸೇರಿದಂತೆ ಹಲವು ನಾಟಕ ಕಂಪನಿಗಳು ತಿಂಗಳುಗಟ್ಟಲೇ ಕ್ಯಾಂಪ್ ಹಾಕಿ ರಂಗಾಸಕ್ತರಿಗೆ ನಾಟಕಗಳನ್ನು ಪ್ರದರ್ಶಿಸುವುದರಲ್ಲಿ ನಿರತವಾಗಿದ್ದವು.

ನಾಡಿನ ಸಾಕಷ್ಟು ಹೆಸರು ಮಾಡಿದ್ದ ವರದಾಚಾರ್ ನಾಟಕ ಕಂಪನಿ ಇಲ್ಲಿ ಕ್ಯಾಂಪ್ ಹಾಕಿದ ಸಂದರ್ಭ. ನಾಟಕಗಳ ಪ್ರದರ್ಶನಕ್ಕೆ ನಿರೀಕ್ಷೆಗೂ ಮೀರಿ ಜನಸಾಗರ ಹರಿದುಬಂದಿತ್ತು. ರಂಗ ಚಟುವಟಿಕೆಗಳಿಕೆ ಜನ ಕೊಟ್ಟ ಸ್ಪಂದನೆ ಕಂಡು ದಂಗಾದ ಕಂಪನಿಯ ತಬಲ ಮಾಸ್ತರ್ ರಂಗಾಚಾರ್ ಇಲ್ಲಿಯ ನೆಲಸಲು ಮನಮಾಡಿದ್ದರು. ಅವರ ಈ ಮಹತ್ವದ ನಿರ್ಧಾರಕ್ಕೆ ಇಲ್ಲಿಯ ತಣ್ಣನೆ ಪರಿಸರ ಕೂಡ ಕಾಣಿಕೆ ನೀಡಿತ್ತು.

### ಅಮೆಚೂರ್ ನಾಟಕ ಕಂಪನಿ

ಜನರ ನಾಡಿಮಿಡಿತ ಅರಿತ ರಂಗಾಚಾರ್ ಸಕ್ರಿಯವಾದ ರಂಗವೇದಿಕೆಯೊಂದನ್ನು ಸ್ಥಾಪಿಸಲು ಮನಮಾಡಿದ್ದರು. ತಮ್ಮ ಘನವಾದ ಉದ್ದೇಶ ಅನುಷ್ಠಾನಗೊಳಿಸಲು ಹೆಚ್ಚು ಸಮಯ ತೆಗೆದುಕೊಳ್ಳದೇ ನಾಟಕ ಮಂಡಳಿಯನ್ನು ತೆರದೇ ಬಿಟ್ಟರು. ಅದೇ "ಅಮೆಚೂರ್ ನಾಟಕ ಕಂಪನಿ" ವೃತ್ತಿಪರ ನಾಟಕ ಮಂಡಳಿಯ ಅನುಭವ ಹೊಂದಿದ್ದ ಅವರು ಅಲ್ಪಕಾಲದಲ್ಲೇ ಸ್ಥಳೀಯ ಕಲಾವಿದರನ್ನು ತರಬೇತುಗೊಳಿಸಿ ರಂಗಪ್ರವೇಶ ಮಾಡಿಸುವಲ್ಲಿ ಯಶಸ್ವಿಯಾಗಿದ್ದರು.

ಈ ಕಂಪನಿಯ ಅಧ್ಯಕ್ಷರಾಗಿ ಸ್ಥಳೀಯ ವರ್ತಕ ಸೀನಪ್ಪ ಅಲಂಕರಿಸಿದರೆ.... ಕಾರಗಡಿ ಶೇಷಗಿರಿರಾಯರು, ನಗರದ ವೆಂಕಟರಮಣ ಉಡುಪ, ಸೀತರಾಮ ಉಡುಪ, ಗೋವಿಂದಸ್ವಾಮಿ ಶೆಟ್ಟರು, ರಾಮಸ್ವಾಮಿ ಶೆಟ್ಟರು ಮತ್ತಿತರ ಉತ್ಸಾಹಿಗಳು ಕಂಪನಿಗೆ ಹೆಗಲುಕೊಟ್ಟರು.

ರಂಗಕಲೆಯನ್ನು ಸಾಕ್ಷೀಕರಿಸುವ ಕಲಾವಿದರಾಗಿ ನಗರ ಸೀತರಾಮ ಉಡುಪ

(ನಾಯಕ) ಹೊಸನಗರದ ನಾರಾಯಣರಾವ್ (ನಾಯಕಿ) ರಂಗಾಚಾರ್ (ಖಳನಾಯಕ) ರಂಗನಾಥ (ಹಾಸ್ಯ) ಮೆರೆದಿದ್ದರು. ಬೆಂಗಳೂರಿನ ನರಸಿಂಹಶಾಸ್ತ್ರಿಗಳ ನಿರ್ದೇಶನ, ರಾಮಾಚಾರ್, ಕಿಟ್ಟಾಚಾರ್ ಸಂಗೀತ ನಿರ್ದೇಶನದಲ್ಲಿ ಪೌರಾಣಿಕ ನಾಟಕಗಳ ಜೊತೆಗೆ ಸಧಾರಮೆ, ಬಡವನ ಸಂಸಾರ, ದೇವದಾಸ ಹೀಗೆ ಅಲ್ಲೊಂದು ಇಲ್ಲೊಂದು ಸಾಮಾಜಿಕ ನಾಟಕಗಳು ಕಂಪನಿಯಿಂದ ಹೊರಹೊಮ್ಮುತ್ತಿದ್ದವು.

## ಆರ್ಥಿಕ ಸಂಕಷ್ಟ

ರೂ. 1, ರೂ. 0.50 ಪೈಸೆ, ನೆಲಕ್ಕೆ 0.25 ಪೈಸೆ ನಾಟಕ ಪ್ರದರ್ಶನದ ಟಿಕೇಟ್ ದರ. ಕಲಾವಿದರಿಗೆ ಹೆಚ್ಚೆಂದರೆ ರೂ. 1.5 ಒಂದು ದಿನದ ಭತ್ಯೆ ಸರಿಸುಮಾರು 2000ಕ್ಕೂ ಹೆಚ್ಚು ಪ್ರೇಕ್ಷಕರು ಕುಳಿತುಕೊಳ್ಳುವ ಬೃಹತ್ ಪೆಂಡಾಲ್ ಹಾಕಿ ತಿಂಗಳುಗಟ್ಟಲೆ ನಾಟಕಗಳು ಪ್ರದರ್ಶನ ಕಾಣುತ್ತಿದ್ದವು. ಈಗಿನ ಬಸ್ಟಾಂಡ್ ಆವರಣ, ಪು.ಪಂ. ಎದುರಿನ ಜಾಗದಲ್ಲಿ ಹೆಚ್ಚಾಗಿ ನಾಟಕದ ಟೆಂಟ್‌ಗಳು ಬೀಳುತ್ತಿದ್ದವು. ಬಟ್ಟೆಯ ಟಾರ್ಪಲ್ ಹೊದಿಕೆ, ಸುತ್ತಲೂ ಅಡಿಕೆ ಸೋಗೆ, ಬಿದಿರುತಡಿಕೆಯ ಮರೆಯಲ್ಲಿ ನಾಟಕ ಪ್ರಚುರವಾಗುತ್ತಿತ್ತು. ಹೊಸನಗರದಲ್ಲಿ ಪ್ರಾರಂಭವಾದ ಪ್ರಥಮ ನಾಟಕ ಮಂಡಳಿ ಆರಂಭದಲ್ಲಿ ಅಬ್ಬರದ ಪ್ರವೇಶ ಪಡೆದಿತ್ತು. ಸ್ಥಳೀಯವಾಗಿ ಮಾತ್ರವಲ್ಲ ಹೊರಗಡೆಯೂ ಕ್ಯಾಂಪ್ ಹಾಕುವಲ್ಲಿ ಯಶಸ್ವಿಯಾಗಿತ್ತು. ಮೊದಲ ಆರೆಂಟು ವರ್ಷಗಳ ಕಾಲ ಕಂಪನಿಯ ಚೈತ್ರಯಾತ್ರೆ ಯಶಸ್ವಿ ಮುನ್ನೆಡೆದಿತ್ತು. ಆದರೆ ರಾಜ್ಯದ ಪ್ರತಿಷ್ಠಿತ ನಾಟಕ ಮಂಡಳಿಗಳ ಪೈಪೋಟಿಯಲ್ಲಿ ಆರ್ಥಿಕ ಸಂಕಷ್ಟದಲ್ಲಿ ಸಿಲುಕಿದ ಅಮೆಚೂರ್ ನಾಟಕ ಮಂಡಳಿ ದಿನದಿಂದ ದಿನಕ್ಕೆ ಕುಸಿದು ನಿಂತು ಹೋಯಿತು. ಕಲಾವಿದರು ಮರೆಗೆ ಸರಿದರು, ಟೆಂಟ್‌ಗಳು ಮಾಯವಾದವು. ಆದರೆ ತನ್ನ ಅವಧಿಯಲ್ಲಿ ಇವತ್ತಿಗೂ ನೆನಪಿಡುವಂತ ಕೆಲಸವನ್ನು ಕಂಪನಿ ಮಾಡಿದೆ. ತಾಲ್ಲೂಕಿನ ಯಡೂರಿನಲ್ಲಿ ಗ್ರಾಮ ಪಂಚಾಯ್ತಿ ಕಟ್ಟಡ ಮತ್ತು ಆಸ್ಪತ್ರೆ ನಿರ್ಮಾಣಕ್ಕೆ ನಾಟಕ ಪ್ರದರ್ಶನ ಸೇರಿದಂತೆ ಸಾಮಾಜಿಕ ಕಳಕಳಿಯನ್ನು ಬಿಂಬಿಸುವಂತಹ ಅನೇಕ ಕೆಲಸಗಳು ಕಂಪನಿಯಿಂದಾಗಿದ್ದು ಈಗ ಇತಿಹಾಸ.

## ಕಲಾವಿದರ ಹುಟ್ಟು

ಕಂಪನಿ ಮುಳುಗಿತು ನಿಜ ಆದರೆ ತನ್ನ ಅವಧಿಯಲ್ಲಿ ಸ್ಥಳೀಯವಾಗಿ ಅನೇಕ ಉದಯೋನ್ಮುಖ ಕಲಾವಿದರನ್ನು ಹುಟ್ಟು ಹಾಕಿದ್ದು ಸತ್ಯ. ಹೆಸರಾಂತ ಗಾಯಕ ಗರ್ತಿಕೆರೆ ರಾಘಣ್ಣ, ಚಂದ್ರಬಾಬು ಸೇರಿದಂತೆ ಹಲವರು ಅಂದಿನಿಂದ ಕಲೆಯನ್ನೇ ತಮ್ಮ ವೃತ್ತಿ ಮಾಡಿಕೊಂಡರು. ಕಂಪನಿ ಹೋದರೇನು ನಾಟಕವನ್ನು ಬಿಡಲೊಲ್ಲದ ಉತ್ಸಾಹಿ ತರುಣರು ಹವ್ಯಾಸಿ ಸಂಸ್ಥೆಗಳನ್ನು ರಚಿಸಿಕೊಂಡು ವಿಶೇಷ ದಿನಗಳಲ್ಲಿ ನಾಟಕ ಪ್ರದರ್ಶಿಸುತ್ತ ಬಂದರು. ಈ ಪ್ರಕ್ರಿಯೆ 80–90ರ ದಶಕದವರೆಗೂ ಮುನ್ನೆಡೆಯಿತು. ಶ್ರೀ ನಾಟ್ಯದೇವಿ ಕಲಾ ಸಂಘ, ಬಿದನೂರು ಮಿತ್ರ ಕಲಾ ಮಂಡಳಿ, ಕೂಲಿಕಾರ್ಮಿಕರ

ಸಂಘ, ಶ್ರೀ ವಿದ್ಯಾ ಸಂಘ, ಅರಸಾಳು ಗಜಾನನ ಯುವಕ ನಾಟಕ ಮಂಡಳಿ, ನಿಟ್ಟೂರಿನ ಶ್ರೀ ಸಮಾಜ ವಿಕಾಸ ನಾಟಕ ಮಂಡಳಿ, ಹನ್ನಾರ ಶ್ರೀ ಸಮಾಜ ವಿಕಾಸ ನಾಟಕ ಮಿತ್ರ ಮಂಡಳಿ ಸೇರಿದಂತೆ ಹತ್ತಾರು ಹವ್ಯಾಸಿ ನಾಟಕ ಸಂಸ್ಥೆಗಳು ಜನತೆಗೆ ಅನಿವಾರ್ಯ ವಾಗಿದ್ದ ರಂಗಭೂಮಿಯ ದಾಹವನ್ನು ನೀಗಿಸುವಲ್ಲಿ ಮಹತ್ತರ ನೀಡಿದವು. ವಿದ್ಯಾ ಸಂಘ ರಂಗಮಂದಿರ ನಿರ್ಮಾಣಕ್ಕಾಗಿ ಸಹಾಯಾರ್ಥ ನಾಟಕಗಳು ಪ್ರದರ್ಶಿತವಾದವು. ಜಿಲ್ಲಾ, ರಾಜ್ಯಮಟ್ಟದ ಸ್ಪರ್ಧೆಯಲ್ಲೂ ನಾಟಕಗಳನ್ನು ಹೊತ್ತೊಯ್ಯುತ್ತಿದ್ದರು. 1967ರಲ್ಲಿ ಪ್ರಾರಂಭಗೊಂಡ ಕನ್ನಡ ಸಂಘದಿಂದ 25 ವರ್ಷ ನಿರಂತರವಾಗಿ ರಾಜ್ಯಮಟ್ಟದ ನಾಟಕ ಸ್ಪರ್ಧೆಗಳು ನಡೆದಿತ್ತು. ನಂತರ ಅಸಂಗತ ನಾಟಕಗಳ ಪ್ರಯೋಗಗಳು ಇಲ್ಲಿ ನಡೆದಿದೆ. ಚಿದಂಬರರಾವ್ ನಿರ್ದೇಶನದಲ್ಲಿ ಗೀತರೂಪಕಗಳು ರಾಜ್ಯಾದ್ಯಂತ ಪ್ರದರ್ಶಿತವಾದ ಸಾಧನೆ ಇಲ್ಲಿಯದು. ಇವರದೇ ರಂಗಭೂಮಿ ಇಂಪ್ಯಾಕ್ಟ್‌ನಿಂದ ಹೊರಬಂದ "ರಾಮನಿಂದ ರಾಜೀವ" ವಿಶೇಷ ಛದ್ಮವೇಷದಲ್ಲಿ ಈಗಿನ ಪ್ರತಿಷ್ಠಿತರು ಸೇರಿದಂತೆ 400ಕ್ಕೂ ಹೆಚ್ಚು ಜನ ಭಾಗವಹಿಸಿದ್ದು ವಿಶೇಷ. 1960 ರಿಂದ 1990ರ ವರೆಗೆ ಮದುವೆ ಮಾರ್ಕೆಟ್, ತ್ಯಾಗಿ, ಮಂಗಳ, ರಕ್ತಾಕ್ಷಿ, ತೆರೆಮರೆಯಲ್ಲಿ, ಅಸಲಿ ನಕಲಿ, ಆಶಾಪಾಶ, ನೂರಾರು ನಾಟಕಗಳು ಅದ್ದೂರಿ ಸೆಟ್‌ನಲ್ಲಿ ಪ್ರದರ್ಶನಗೊಂಡ ದಾಖಲೆಯೂ ಇಲ್ಲಿದೆ. ಜಿ. ವಿ. ವೇಣುಗೋಪಾಲ್, ಕೆ. ನಾರಾಯಣರಾವ್ (ಸಂಗೀತ ಮಾಸ್ತು), ಚಿದಂಬರ್‌ರಾವ್, ಅಂತೋಣಿಬಾಂಜ್, ದಿ. ಬಾಬಣ್ಣ, ಪ್ರಭಾಕರ ಕಂಚುಗಾರ್, ದಿ. ಟೈಲರ್ ಸುಂದರ, ಕುಮಾರಸ್ವಾಮಿ, ಕಾರಗಡಿ ಶಾಂತರಾಮ, ಸುರೇಶಕುಮಾರ್, ಪಂಚಾಕ್ಷರಿ ಮಾತ್ರವಲ್ಲ ಕನ್ನಡಪ್ರಭ ಪತ್ರಿಕೆಯ ಪಟ್ಟಾಭಿ ಕೂಡ ಇಲ್ಲಿಯ ರಂಗಭೂಮಿಯಲ್ಲಿ ಗುರುತಿಸಿಕೊಂಡಿದ್ದರು.

## 95ರ ನಂತರ

ಅಲ್ಲೊಂದು ಇಲ್ಲೊಂದು ನಾಟಕಗಳು ಬಿಟ್ಟರೆ ಇಡೀ ತಾಲ್ಲೂಕು ರಂಗಭೂಮಿಯಿಂದ ಬಹುದೂರ ಸರಿಯಿತು ಎಂದರೂ ತಪ್ಪಿಲ್ಲ. ಹೆಗ್ಗೋಡಿನ ನೀನಾಸಂ ತಾಗಿಕೊಂಡಂತಿದ್ದರೂ ಅದರ ಉಪಯೋಗ ಹೊಸನಗರ ಪಡೆದದ್ದು ಕಡಿಮೆಯೇ. ಇತ್ತೀಚಿನ ಸಂತಸವೆಂದರೆ ಕೊಡಚಾದ್ರಿ ಪ್ರಥಮದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಪ್ರೊ. ಕೇಶವಶರ್ಮರವರ "ಕಾಳಿದಾಸನಿಗೊಬ್ಬ ಕಾಳಿದಾಸ" ನಾಟಕಕ್ಕೆ ಮಂಜುನಾಥ ಬೇಣದ್ ನಿರ್ದೇಶನದಲ್ಲಿ ರಂಗಪ್ರವೇಶ ಮಾಡಿರುವುದು. ರಂಗಭೂಮಿಯ ಗತ ಇತಿಹಾಸವನ್ನು ಮೆಲುಕು ಹಾಕುವ ಸಲುವಾಗಿಯಾದರೂ ರಂಗಭೂಮಿಯ ಜೀವಂತಿಕೆ ಅಗತ್ಯ. ಈ ನಿಟ್ಟಿನಲ್ಲಿ ರಂಗಾಸಕ್ತರು ಮುನ್ನಡೆಯಲಿ ಅಲ್ಲವೇ...?

– ರವಿ ಬಿದನೂರು, ಪತ್ರಕರ್ತರು

## ಶ್ರೀ ವೀರಭದ್ರೇಶ್ವರ ಕಲಾ ಮತ್ತು ನಾಟಕ ತಂಡ

**ಸಂಪರ್ಕ: ಪೂಜಾರ್‌ಗೊಪ್ಪ, ದೂ: 08185-242170**

ಗ್ರಾಮೀಣ ಜನರಲ್ಲಿ ರಂಗ ಚಟುವಟಿಕೆಗಳ ಬಗ್ಗೆ ಅರಿವು ಕಾರ್ಯಕ್ರಮ ಹಾಗೂ ಪೌರಾಣಿ/ಸಾಮಾಜಿಕ ನಾಟಕಗಳ ಪ್ರದರ್ಶನ.

**ನಾಟಕಗಳು :** ಕುರುಕ್ಷೇತ್ರ ತಂದೆಗೆ ತಕ್ಕ ಮಗ, ಹೆಣ್ಣು ಬಾಳಿನ ಕಣ್ಣು, ಸೊಸೆ ತಂದ ಸೌಭಾಗ್ಯ ಇತ್ಯಾದಿ.

**ಪದಾಧಿಕಾರಿಗಳು – ಕಲಾವಿದರ ವಿವರ**

| | | |
|---|---|---|
| ರಾಚಪ್ಪ ಆರ್ | ಗಂಗಾಧರ | ಸರೋಜಮ್ಮ |
| ಸುಶೀಲಮ್ಮ | ಮುರಿಗೆಪ್ಪ ಗೌಡ | ಗಣೇಶ್ |
| ಸವಿತ | ಶಾರದಮ್ಮ | ಶ್ಯಾಮಲ |
| ಗಣೇಶ್ ಜಿ. | ಶಿವಾನಂದಪ್ಪ | ಮಹೇಶಸ್ವಾಮಿ |
| ಮಲ್ಲಿಕಾರ್ಜುನ | ವಿರೇಶ್ | ಹರೀಶ್‌ಕುಮಾರ್ |

## ಗ್ರಾಮ ಭಾರತಿ ಟ್ರಸ್ಟ್ (ರಿ.), ಕಾರಗಡಿ

**ಸಂಪರ್ಕ: ವಿ. ಶಾಂತರಾಮ, ದೂ: 94836 41045**

ಕಲಾ ಭಾರತಿ ಸಂಸ್ಥೆಯು 1976 ರಿಂದಲೂ ರಂಗಕ್ರಿಯೆಯಲ್ಲಿ ತೊಡಗಿದ್ದು ಬೆಳಗಾಂ, ಬೈಂದೂರು, ಬೆಂಗಳೂರು, ಜೈಪುರ, ಹೇರಂಭಾಪುರ, ಯಲ್ಲಾಪುರ, ಜೋಗಗಳಲ್ಲಿ ನಡೆದ ಕರ್ನಾಟಕ ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿರುತ್ತಾರೆ.

ಸತತ ಮೂರು ವರ್ಷಗಳಲ್ಲಿ ಮತ್ತೊಮ್ಮೆ 2 ವರ್ಷ ಕಾರಗಡಿಯಲ್ಲಿ ನಾಟಕೋತ್ಸವವನ್ನು ನಡೆಸಿ ಸುಮಾರು 25ಕ್ಕಿಂತ ಹೆಚ್ಚು ನಾಟಕಗಳನ್ನು ಪ್ರದರ್ಶನ ನೀಡಿದ್ದಾರೆ.

1991ರಲ್ಲಿ ಸಾಕ್ಷರತಾ ಆಂದೋಲನದಲ್ಲಿ ಭಾಗಬಹಿಸಿ 4 ನಾಟಕಗಳ ಮೂಲಕ ಹೊಸನಗರ ತಾಲ್ಲೂಕಿನ 100 ಹಳ್ಳಿಗಳಲ್ಲಿ ಪ್ರದರ್ಶಿಸಿ ಪ್ರೇರಣೆ ನೀಡಿದ್ದಾರೆ.

1994ರಲ್ಲಿ ಪರಿಸರ ಆಂದೋಲನದಲ್ಲಿ ಬೀದಿನಾಟಕಗಳನ್ನು ಆಡಿ ಪರಿಸರ ರಕ್ಷಣೆ ಬಗ್ಗೆ ಅರಿವು ಮೂಡಿಸಿರುವುದು. ಏಡ್ಸ್ ರೋಗದ ಬಗ್ಗೆ ಆರೋಗ್ಯ ಇಲಾಖೆ ಸಹಯೋಗದೊಂದಿಗೆ ಬೀದಿ ನಾಟಕ ಅಭಿನಯ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಯೋಜನೆಯಲ್ಲಿ ಸೇರಿ ಸ್ವಚ್ಛತೆಯಿಂದಲೇ ಆರೋಗ್ಯ ರಕ್ಷಣೆ ಸಾಧ್ಯ, ಮಾನಸಿಕ, ದೈಹಿಕ, ಸಾಮಾಜಿಕ ನೆಮ್ಮದಿಯ ಸ್ಥಿತಿಯೇ ಆರೋಗ್ಯ ಎಂಬ ಬಗ್ಗೆ ಬೀದಿ ನಾಟಕ ಮಾಡಿ ಶಿವಮೊಗ್ಗ ಜಿಲ್ಲಾದ್ಯಂತ 101 ಪ್ರಯೋಗ.

ಅಪರಾಧವನ್ನು ತಡೆಯುವುದು ನಮ್ಮಿಂದಲೇ ಸಾಧ್ಯ ಎಂಬ ಬಗ್ಗೆ ಜಾಗರೂಕತೆಯನ್ನು ಮೂಡಿಸುವ ಬೀದಿನಾಟಕವಾಡಿ ತೀರ್ಥಹಳ್ಳಿ, ಹೊಸನಗರ ತಾಲ್ಲೂಕುಗಳಲ್ಲಿ ಅರಿವು ಮೂಡಿಬರುವುದು

ರಾಮಚಂದ್ರಾಪುರ, ಕಾರಗಡಿ, ರಿಪನ್‌ಪೇಟೆ, ಹೊಸನಗರಗಳಲ್ಲಿ ನಾಗಾನಂದ ನಾಟಕವಾಡಿ ಜನ ಮೆಚ್ಚುಗೆ. 'ಮಹಾಭಾರತ' ನಾಟಕವನ್ನು 45 ಬೇರೆ ಬೇರೆ ಊರುಗಳಲ್ಲಿ ಪ್ರದರ್ಶನ.

'ಕನಸಿನವರು' ನಾಟಕ 60ಕ್ಕಿಂತ ಹೆಚ್ಚು ಪ್ರದರ್ಶನ.

'ಹುಡುಕಾಟ' ನಾಟಕ 20ಕ್ಕಿಂತ ಹೆಚ್ಚು ಪ್ರದರ್ಶನ.

ಕ.ಸ.ಪ. ಸಹಯೋಗದೊಂದಿಗೆ ನಾಟಕ ಮತ್ತು ಕಲೆ ಬಗ್ಗೆ ಶಿಬಿರ ನಡೆಸಿರುವುದು.

'ನಾಗಾನಂದ', 'ಜೋಕುಮಾರಸ್ವಾಮಿ', 'ಸಿರಿಸಂಪಿಗೆ', 'ಭಾರತಾಂಬೆ', 'ಅಳಿಯ ದೇವರು', ಕಲಿತ ಕಳ್ಳ', 'ಬಾವಿ ಕಳೆದಿದೆ', 'ದಫನ್', 'ಬೇಲಿ ಹಣ್ಣು', 'ಮೃತ್ಯು' ನಾಟಕಗಳು ನಮ್ಮ ಸಂಸ್ಥೆಯ ಜನಪ್ರಿಯ ಪ್ರದರ್ಶನ ಕಂಡಿವೆ.



## ಕಲಾವಿದರ ವಿವರ

ವಿ. ಶಾಂತರಾಮ, ಕಾರಗಡಿ

ವರದರಾಜ ಕೆ., ಕಾರಗಡಿ

ಗಣೇಶ, ನೆಲ್ಲುಂಡೆ

ನಂದಿನಿ, ಕಾರಗಡಿ

ನಾಗಶ್ರೀ, ರಾಮಚಂದ್ರಾಪುರ

ನವೀನ, ಕಾರಗಡಿ

ನಾರಾಯಣ ಎಸ್. ಜಿ., ಕಾರಗಡಿ

ಚಂದ್ರಶೇಖರ ಕೆ. ಪಿ., ಕುಕ್ಕೋಡು ಅಗಸರ ಮನೆ

ಹನಿಯಾ ಗುರುಮೂರ್ತಿ

ಶ್ರೀಧರ್ ಜೋಯ್ಸ್, ನೆಲ್ಲುಂಡೆ

ಪ್ರಿಯಾ, ಕಾರಗಡಿ

ಜಯಶ್ರೀ, ಕಾರಗಡಿ

ಗುರುರಾಜ ಹನಿಯ

ಕಾರ್ತಿಕ, ಕಾರಗಡಿ

ಗುರು, ಜಯನಗರ

## ಸಂಕಲನ ಹೊಸನಗರ

**ಸಂಪರ್ಕ: 94836 41045**

ಈ ಸಂಸ್ಥೆಯು ಸಂಗೀತ, ಕಲೆ, ಲಲಿತಕಲೆ, ನಟನಾ ಕೌಶಲ್ಯಗಳಿಗೆ ಮೀಸಲಾದ ಸಂಸ್ಥೆಯಾಗಿದು ಹಲವಾರು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿದ್ದು ಕಲಾವಿದರುಗಳನ್ನು ಗೌರವಿಸುವುದು ಕಾರ್ಯಕ್ರಮಗಳನ್ನು ನಡೆಸಿ ಕಲೆಗೆ ಪ್ರೋತ್ಸಾಹಿಸುವುದು ಸಾಂಸ್ಕೃತಿಕ ಹಬ್ಬಗಳನ್ನು ಆಚರಿಸುತ್ತಾ ಬಂದಿದೆ.


ವಿದ್ಯಾ ಸಂಘದ ಸಹಯೋಗದೊಂದಿಗೆ ನಾಟಕೋತ್ಸವಗಳನ್ನು ನಡೆಸಿ ಹೊಸನಗರದಲ್ಲಿ 10–15 ಹೊಸ ರೀತಿಯ ನಾಟಕಗಳನ್ನು ಪರಿಚಹಿಸಿದೆ.

ಈ ಸಂಸ್ಥೆಯು ಮಂಗಳೂರಿನಲ್ಲಿ ಕುವೆಂಪುರವರ ಸ್ಮಶಾನ, ಕುರುಕ್ಷೇತ್ರ ನಾಟಕ ಮಾಡಿ ರಾಜ್ಯಮಟ್ಟದ ಬಹುಮಾನ ಪಡೆದಿದೆ. ನಮ್ಮ ಸಂಸ್ಥೆಯು 'ನಾಗಾನಂದ', 'ಸ್ಮಶಾನ', 'ಕುರುಕ್ಷೇತ್ರ', 'ಮಹಾಭಾರತ', 'ಕನಸಿನವರು' ನಾಟಕಗಳನ್ನು ಪ್ರದರ್ಶಿಸಿ ಜನ ಮನ್ನಣೆ ಪಡೆದಿದೆ.

### ಕಲಾವಿದರ ವಿವರ

ಬಿ. ಎಸ್. ಸುರೇಶ್ — ಶ್ರೀಮತಿ ಲಲಿತ ಎನ್. ವಿ.
ಸೊನಲೆ ಶ್ರೀನಿವಾಸ್ — ಬಸವರಾಜ್
ರಮೇಶ್ ಹೆಚ್. ಕೆ. — ಸತೀಶ್
ಸಿಸ್ಮಿತಾ — ಪ್ರಿಯ
ನವೀನ — ನಂದಿನಿ
ವೆಂಕಟೇಶಮೂರ್ತಿ

# ಸಾಗರ ತಾಲೂಕು ರಂಗಭೂಮಿ


ಸೈದೂರು
NH-206
ಉಳವಿ
ಕೆಳದಿ
ತಾಳಗುಪ್ಪ
ವರದಹಳ್ಳಿ
ವರದಮೂಲ
ಜೋಗ
ಹೊನ್ನೆ ಮರಡು
ಲಿಂಗನಮಕ್ಕಿ
ಸಾಗರ
ಇಕ್ಕೇರಿ
ಹೆಗ್ಗೋಡು
ಕಾನೂರು ಕೋಟೆ
ಮುಪ್ಪಾನೆ
ಅವಿನಹಳ್ಳಿ
ತುಮರಿ
ಕೋಗಾರು
ಸಿಗಂದೂರು
ಬ್ಯಾಕೋಡು
ಕೊಡಚಾದ್ರಿ

## ಪ್ರೇಕ್ಷಣೀಯ ಸ್ಥಳಗಳು

**ಸಾಂಸ್ಕೃತಿಕ ತಾಣಗಳು:**

1. ಹೆಗ್ಗೋಡು

**ಆರೋಗ್ಯಧಾಮಗಳು:**

1. ನರಸೀಪುರ (ಆನಂದಪುರ) 2. ಬ್ರಹ್ಮನ ಮುಂಜಾಲೆ

**ಚಾರಣ ತಾಣಗಳು:**

1. ತುಪ್ಪೂರು 2. ಹೆದ್ದಾರಿಖಾನ್ 3. ಮೊಳಕಾಲ್ಮೂರಿ

**ಜಲಾಶಯಗಳು:**

1. ಲಿಂಗನಮಕ್ಕಿ 2. ತಲಕಳಲೆ

**ದೇವಸ್ಥಾನ ಹಾಗೂ ಐತಿಹಾಸಿಕ ಸ್ಥಳಗಳು:**


1. ಮುರುಘಾರಾಜೇಂದ್ರಮಠ, ಆನಂದಪುರಂ 2. ಸಿಗಂದೂರು
3. ಮಾರಿಕಾಂಬ ದೇವಸ್ಥಾನ, ಸಾಗರ. 4. ಕೆಳದಿ 5. ಇಕ್ಕೇರಿ
6. ವರದಳ್ಳಿ 7. ವರದಾಮೂಲ 8. ವೀರಾಪುರಮಠ

**ಜಲಪಾತಗಳು:**

1. ಜೋಗ 2. ಬೆಳ್ಳಿಗುಂಡಿ 3. ದಬ್ಬೆ

**ಪ್ರಕೃತಿ ಅಧ್ಯಯನ ಸ್ಥಳಗಳು–ದೋಣಿ ವಿಹಾರಗಳು :**

1. ಹೊನ್ನೇಮರಡು 2. ಜೋಗ



## ಸಾಗರ ತಾಲ್ಲೂಕು ರಂಗಭೂಮಿ ಕ್ಷೇತ್ರದಲ್ಲಿನ ಸಾಧಕರ ವಿವರ___

### ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು

| | | |
|---|---|---|
| 1. | ದಿ॥ ಕೆ.ವಿ.ಸುಬ್ಬಣ್ಣ | 1984 |
| 2. | ಶ್ರೀ ಪ್ರಸನ್ನ ಹೆಗ್ಗೋಡು | 1989 |
| 3. | ಶ್ರೀ ಚಿದಂಬರರಾವ್ ಜಂಬೆ (ಸ್ವೀಕರಿಸಿರುವುದಿಲ್ಲ) | 1994 |
| 4. | ಶ್ರೀ ಜಿ.ಆರ್.ಗುರುರಾಜ್, ನಗರ | 1998 |
| 5. | ಶ್ರೀ ಪುರುಷೋತ್ತಮ ತಲವಾಟ – ನಟ/ನಿ/ರಂ.ಸ/ಪ್ರ. | 1999 |
| 6. | ಶ್ರೀ ಗುರುಮೂರ್ತಿ ವರದಾಮೂಲ–(ಪದ್ದಣ್ಣ ಪ್ರಶಸ್ತಿ ಪುರಸ್ಕೃತರು) | 1999 |
| 7. | ಡಾ. ಗುರುರಾವ್ ಬಾಪಟ್ | 2000 |
| 8. | ಶ್ರೀ ಕೆ.ವಿ.ಅಕ್ಷರಾ (ಫೆಲೋಷಿಪ್ ಸ್ವೀಕರಿಸಿರುವುದಿಲ್ಲ) | 2000 |
| 9. | ಶ್ರೀ ಬಿ.ಆರ್.ವೆಂಕಟರಮಣ ಐತಾಳ್ | 2002 |
| 10. | ಶ್ರೀ ಕೆ.ಜಿ.ಕೃಷ್ಣಮೂರ್ತಿ | 2003 |
| 11. | ಶ್ರೀಮತಿ ಎಸ್.ಮಾಲತಿ – ಎನ್‌ಎಸ್‌ಡಿ ಪದವಿ, ನಟಿ/ನಿ. | 2004 |
| 12. | ನೀನಾಸಂ (ಸುವರ್ಣ ಕರ್ನಾಟಕ ಗೌರವ ಪುರಸ್ಕಾರ) | 2006 |
| 13. | ಶ್ರೀ ಎಂ.ಎಂ.ಕೃಷ್ಣಮೂರ್ತಿ | 2010 |
| 14. | ಶ್ರೀ ಸಿ.ಟಿ. ಬ್ರಹ್ಮಾಚಾರ್ ಲೇ/ನ/ನಿ/ಪ್ರ/ಬೆ.ಸಂ. | 2011 |

### ರಾಜ್ಯೋತ್ಸವ ಪ್ರಶಸ್ತಿ ಪಡೆದವರು

1. ಶ್ರೀಮತಿ ಅನ್ನಪೂರ್ಣ ಸಾಗರ್– ವೃತ್ತಿ ರಂಗಭೂಮಿ ಕಲಾವಿದರು 2005

### ಪಿಹೆಚ್‌ಡಿ ಪದವಿ ಪಡೆದವರು

1. ಡಾ. ಗುರುರಾವ್ ಬಾಪಟ್, ಯಕ್ಷಗಾನ ಕಲೆ ಮತ್ತು ರಂಗ ಪ್ರದರ್ಶನಗಳು – 2005

## ಎನ್.ಎಸ್.ಡಿ. ಪದವಿ ಪಡೆದವರು

| | | |
|---|---|---|
| 1. ಶ್ರೀ ಪ್ರಸನ್ನ ಹೆಗ್ಗೋಡು– | 1975 | 08183–265713 |
| 2. ಶ್ರೀ ಚಿದಂಬರರಾವ್ ಜಂಬೆ–1982 | | 94482 53488 |
| 3. ಶ್ರೀಮತಿ ಎಸ್.ಮಾಲತಿ– | 1983 | 94484 28435 |
| 4. ಶ್ರೀ ಕೆ.ವಿ.ಅಕ್ಷರ– | 1983 | 94496 23526 |
| 5. ಶ್ರೀ ಕೆ.ಜಿ.ಕೃಷ್ಣಮೂರ್ತಿ– | 1984 | 94486 86353 |
| 6. ಶ್ರೀ ಪ್ರಸನ್ನ, ಸಾಗರ– | 2008 | 80958 73273 |
| 7. ಕು॥ ಮೇಧಿನಿ ಕೆಳಮನೆ– | 2014 | 08447551489 |

## ರಂಗ ನಿರ್ದೇಶಕರುಗಳು

| | |
|---|---|
| 1. ಡಾ.ಗುರುರಾವ್ ಬಾಪಟ್ – ಲೇ/ನ/ನಿ. | 99011 85955 |
| 2. ಶ್ರೀ ಎಂ.ಗಣೇಶ್ ಹೆಗ್ಗೋಡು – ಲೇ/ನ/ನಿ. | 99002 57750 |
| 3. ಶ್ರೀಮತಿ ಪ್ರತಿಭಾ ರಾಘವೇಂದ್ರ – ಲೇ/ನ/ನಿ. | 99451 78792 |
| 4. ಶ್ರೀ ಸಿ.ಟಿ.ಬ್ರಹ್ಮಾಚಾರ್–ಲೇ/ನ/ನಿ/ಪ್ರ/ಬೆ.ಸಂ. | 90357 71016 |
| 5. ಶ್ರೀ ಡಿ.ಎಂ.ರಾಜಕುಮಾರ್ – ನ/ನಿ. | 98441 79202 |
| 6. ಶ್ರೀ ಮಂಜುನಾಥ ಜೇಡಿಕುಣಿ – ನ/ನಿ. | |
| 7. ಶ್ರೀ ಸಿದ್ದರಾಜು ಜೋಗ – ನ/ನಿ. | 94483 19445 |

## ಬೆಳಕು ವಿನ್ಯಾಸ/ ರಂಗಸಜ್ಜಿಕೆ

| | |
|---|---|
| 1. ಶ್ರೀ ಸತೀಶ್ ಶೆಣೈ – ಬೆಳಕು ವಿನ್ಯಾಸ | 98808 09230 |

## ರಂಗ ಸಂಗೀತ ನಿರ್ದೇಶಕರು

| | |
|---|---|
| 2. ಶ್ರೀ ನಾಗೇಂದ್ರ ಕುಮಟಾ – | 98454 90560 |
| 3. ಶ್ರೀ ಅರುಣ್ ಜೆ.ಘಾಟೆ – | 98449 59190 |
| 4. ಶ್ರೀ ಶೀಕಾಂತ್ ಕಾಳಮಂಜೆ – | 94805 12846 |

## ರಂಗಮಂದಿರಗಳು

**1. ಕಾಗೋಡು ರಂಗಮಂದಿರ: ದೂ. 98440 60958**

ರಂಗಮಂಚ ಅಳತೆ: 37'X27', ಆಸನ ವ್ಯವಸ್ಥೆ: 400 ಹೊರಗನಿಂದ ತರಬೇಕು. ಬೆಳಕಿನ ವ್ಯವಸ್ಥೆ, ಧ್ವನಿವರ್ಧಕ, ಪರದೆಗಳು ಎಲ್ಲವೂ ಲಭ್ಯ.

2. **ಸಂತ ಜೋಸೆಫರ್ ಬಯಲು ರಂಗಮಂದಿರ:**
   ರಂಗಮಂಚ ಅಳತೆ: 40'X30', ಆಸನ, ಬೆಳಕಿನ ವ್ಯವಸ್ಥೆ, ಧ್ವನಿವರ್ಧಕ, ಪರದೆಗಳು ಎಲ್ಲವನ್ನೂ ಹೊರಗಿನಿಂದ ಹೊಂದಿಸಬೇಕು.
3. **ಸಂಗೊಳ್ಳಿ ರಾಯಣ್ಣ ಬಯಲು ರಂಗಮಂದಿರ, ಗಾಂಧಿನಗರ: ದೂ: 93438 73406 (ಮಂಜುನಾಥ್)**
   ರಂಗಮಂಚ ಅಳತೆ: 40' ಘಿ 30', ಆಸನ, ಬೆಳಕಿನ ವ್ಯವಸ್ಥೆ, ಧ್ವನಿವರ್ಧಕ, ಪರದೆಗಳು ಎಲ್ಲವನ್ನೂ ಹೊರಗಿನಿಂದ ಹೊಂದಿಸಬೇಕು.
4. **ಸೇವಾ ಸಾಗರ ಅಜಿತ್ ಸಭಾಂಗಣ: ದೂ: 94812 55902 (ಮುಖ್ಯೋಪಾಧ್ಯಾಯರು)**
   ರಂಗಮಂಚ ಅಳತೆ: 25' ಘಿ 20', ಆಸನ ವ್ಯವಸ್ಥೆ:75, ಬೆಳಕಿನ ವ್ಯವಸ್ಥೆ, ಧ್ವನಿವರ್ಧಕ, ಪರದೆಗಳು ಎಲ್ಲವನ್ನೂ ಹೊರಗಿನಿಂದ ಹೊಂದಿಸಬೇಕು.
5. **ಲಾಲ್‌ಬಹದ್ದೂರ್ ಶಾಸ್ತ್ರಿ ಕಾಲೇಜು ಸಭಾಂಗಣ:**
   ರಂಗಮಂಚ ಅಳತೆ: 30' ಘಿ 25', ಆಸನ ಸಾಮರ್ಥ್ಯ: 800, ಆಸನ, ಬೆಳಕಿನ ವ್ಯವಸ್ಥೆ, ಧ್ವನಿವರ್ಧಕ, ಪರದೆಗಳು ಎಲ್ಲವನ್ನೂ ಹೊರಗಿನಿಂದ ಹೊಂದಿಸಬೇಕು.

## ಸಾಗರ ತಾಲೂಕು ರಂಗಭೂಮಿಯ ಪಕ್ಷಿನೋಟ

ಶರಾವತಿ ಮತ್ತು ವರದಾ ನದಿಗಳು ಪ್ರವಹಿಸುವ ಸಾಗರ ತಾಲ್ಲೂಕು ಸಾಂಸ್ಕೃತಿಕವಾಗಿ ಕೂಡ ತನ್ನನ್ನು ಗುರುತಿಸಿಕೊಂಡಿದೆ. ಅದರಲ್ಲೂ ಇಲ್ಲಿಯ ವಿವಿಧ ರಂಗತಂಡಗಳು, ಕಲಾವಿದರು, ತಾಂತ್ರಿಕ ಪರಿಣತರು ರಾಜ್ಯದೆಲ್ಲೆಡೆ ಹೆಸರು ಮಾಡಿದ್ದಾರೆ. ಇಲ್ಲಿಯ ವಿವಿಧ ರಂಗತಂಡಗಳ ಸ್ಥೂಲ ಪರಿಚಯ ಇಲ್ಲಿ ನೀಡಿದ್ದೇನೆ.

### ಉದಯ ಕಲಾವಿದರು, ಸಾಗರ

ಕರ್ನಾಟಕದಲ್ಲಿಯೇ ಬಹು ಅಪರೂಪದ ರಂಗತಂಡ ಎಂದೆನಿಸಿಕೊಂಡಿರುವ ಉದಯ ಕಲಾವಿದರು ಈಗ ತನ್ನ ಅರವತ್ತನೆಯ ವರ್ಷದ ಸನಿಹದಲ್ಲಿದೆ. ಮೂಲ ಈ ತಂಡ "ಕಿರಿಯರ ತಂಡ" ಎಂಬ ಹೆಸರಿನಿಂದ 1938ನೇ ಇಸವಿಯಲ್ಲಿ ಸ್ಥಾಪನೆಯಾಗಿದ್ದರೂ ಅದು 1947ರಲ್ಲಿ "ಉದಯ ಕಲಾವಿದರು" ಎಂಬ ಹೆಸರಿನಿಂದ ಹೊಸರೂಪ ಪಡೆಯಿತು. ಸ್ವಾತಂತ್ರ್ಯ ಕಾಲದ ಸಾಮಾಜಿಕ ಹಾಗೂ ರಾಜಕೀಯ ಬೇಡಿಕೆಗಳಿಗೂ ಈ ಸಂಸ್ಥೆ ತನ್ನದೇ ಆದ ರೀತಿಯಲ್ಲಿ ಸ್ಪಂದಿಸಿದೆ. ಅಪ್ಪಟ ರಂಗ ಕಾಳಜಿಯೇ ಈ ತಂಡದ ಜೀವ ದ್ರವ್ಯ. ರಂಗತಂಡ ಪ್ರಾರಂಭವಾದ ಲಾಗಾಯ್ತಿನ ತನ್ನ ರಂಗ ಚೈತನ್ಯವನ್ನು ನಾಡಿನ ಉದ್ದಗಲಕ್ಕೆ ಹರಡಿದ ಕೀರ್ತಿ ನಾಡಿನ ಹವ್ಯಾಸಿ ರಂಗಭೂಮಿ ಇತಿಹಾಸಕ್ಕೆ ಸೇರಿಕೊಂಡಿದೆ. ಆಧುನಿಕ ರಂಗಭೂಮಿ ಸಂಗಡವೇ ಬೆಳೆದು ಬಂದ ಈ ರಂಗತಂಡ, ಹೊಸ ಹೊಸ ರಂಗಪ್ರಯೋಗಗಳಿಗೆಲ್ಲಾ ತನ್ನನ್ನು ತಾನು ಮುಕ್ತವಾಗಿ ತೊಡಗಿಸಿಕೊಂಡಿದ್ದು ಬಹುಮುಖ್ಯ. ಗ್ರಾಮಾಂತರ ಹಾಗೂ ನಗರ ಪಟ್ಟಣಗಳ ರಂಗಾಭಿರುಚಿಯನ್ನು ಬೆಳೆಸುವುದರಲ್ಲಿ 'ಉದಯ ಕಲಾವಿದರು' ಮಾಡಿದ ಸಾಧನೆ ಗಮನಾರ್ಹ. ಈ ಸಂಸ್ಥೆ ಕೇವಲ ರಂಗಾಸಕ್ತರ ಒಂದು ತಂಡ. ಶಾಲೆ, ಕಾಲೇಜು, ವಿವಿಧ ಸರಕಾರಿ ಹಾಗೂ ಖಾಸಗಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಅಲ್ಲದೇ ಕೃಷಿ ಮತ್ತು ಸಮಾಜದ ಎಲ್ಲಾ ವೃತ್ತಿಗಳ ಹಾಗೂ ಜಾತಿ ವರ್ಗಗಳನ್ನು ಪ್ರತಿನಿಧಿಸುವಂತಹ ಒಂದು ಆರೋಗ್ಯಕರವಾದ ಮನೋಸ್ಥಿತಿಯನ್ನು ಮೊದಲಿನಿಂದಲೂ ಮೈಗೂಡಿಸಿಕೊಂಡಿದೆ.

ನಾಡಿನ ಖ್ಯಾತ ನಿರ್ದೇಶಕ ಪ್ರಸನ್ನ ಅವರ ನೇತೃತ್ವದಲ್ಲಿ ಅರೆವೃತ್ತಿ ತಂಡವೊಂದನ್ನು ಪ್ರಾರಂಭಿಸಿ, ಅವರ ನಿರ್ದೇಶನದಲ್ಲಿ "ಮನ್ಮಥ ವಿಜಯ" ನಾಟಕವನ್ನು ವಿವಿಧ ಪ್ರದೇಶಗಳಲ್ಲಿ

ಸುಮಾರು 15 ಪ್ರದರ್ಶನಗಳನ್ನು ನೀಡಿರುವುದು ಈ ತಂಡದ ಇತ್ತೀಚಿನ ಚಟುವಟಿಕೆ. ಹಾಗೆಯೇ ಏಪ್ರಿಲ್ 5ರಲ್ಲಿ ಒಂದು ತಿಂಗಳ ಕಾಲ ಮಕ್ಕಳ ಬೇಸಿಗೆ ಶಿಬಿರ ನಡೆಸಿ, ಶ್ರೀಮತಿ ಪ್ರೇಮಾ ಕಾರಂತ ಅವರ ನಿರ್ದೇಶನದಲ್ಲಿ "ಇಸ್ಪೀಟ್ ರಾಜ" ನಾಟಕದ ಪ್ರದರ್ಶನ ನೀಡಿದರು.

## ಕಿನ್ನರ ಮೇಳ, ತುಮರಿ

ಶರಾವತಿ ಹಿನ್ನೀರಿನ ಒಂದು ಪುಟ್ಟ ಹಳ್ಳಿ ತುಮರಿ. 1990ರಲ್ಲಿ ಕೆ.ಜಿ.ಕೃಷ್ಣಮೂರ್ತಿ ಇವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದ ಕಿನ್ನರ ಮೇಳ, ಮಕ್ಕಳ ರಂಗಭೂಮಿಯಲ್ಲಿ ತೊಡಗಿಸಿಕೊಂಡು ಗಮನಾರ್ಹವಾದ ಸಾಧನೆಗೈದಿದೆ. ಮಕ್ಕಳಿಗೆ "ಆರೋಗ್ಯಕರ ರಂಜನೆ ಕೊಡುವುದರ ಜೊತೆಗೆ ಅವರಲ್ಲಿ ಸಾಂಸ್ಕೃತಿಕ ಎಚ್ಚರವನ್ನು ಮೂಡಿಸುವುದು, ರಂಗ ಮಾಧ್ಯಮದ ಮೂಲಕ ಮಕ್ಕಳಲ್ಲಿ ಸಾಮಾಜಿಕ ಅರಿವು, ಜವಾಬ್ದಾರಿನ್ನು ಬೆಳೆಸಿ ಅವರ ವ್ಯಕ್ತಿತ್ವ ಹಾಗೂ ಕಲ್ಪನಾ ಶಕ್ತಿಯನ್ನು ವಿಸ್ತಾರಗೊಳಿಸುವುದು ನಾಟಕದ ಪಠ್ಯ ಶಿಕ್ಷಣ ನೀಡುವುದು" ಮುಂತಾದವು ಅವರ ಧ್ಯೇಯ.

ಈ ಉದ್ದೇಶಕ್ಕಾಗಿ ಕಿನ್ನರ ಮೇಳ ರಿಪರ್ಟರಿಯನ್ನು ಪ್ರಾರಂಭಿಸಿ ಯಶಸ್ವಿಯಾಗಿ ನಡೆಸಿಕೊಂಡು ಬಂದಿದೆ. 12 ಜನ ಪೂರ್ಣಾವಧಿ ವೇತನ ಪಡೆಯುವ ನಟರನ್ನೊಳಗೊಂಡ ಈ ರಿಪರ್ಟರಿ ಪ್ರತಿವರ್ಷ ಎರಡು ನಾಟಕಗಳನ್ನು ಸಿದ್ಧಪಡಿಸಿ, ಶಾಲಾ ಕಾಲೇಜುಗಳಲ್ಲಿ ಪ್ರದರ್ಶನ ನೀಡುತ್ತಿದೆ. ಹಗಲಿನಲ್ಲಿ, ಶಾಲಾ ಆವರಣದಲ್ಲಿಯೇ ಪ್ರದರ್ಶನ ನೀಡುವುದಕ್ಕಾಗಿ ಅತ್ಯಂತ ಸರಳ ರಂಗ ಪರಿಕರಗಳೊಡನೆ ನಾಟಕಗಳನ್ನು ಸಿದ್ಧಪಡಿಸಿ, ಒಂದೊಂದು ನಾಟಕದ ನೂರಾರು ಪ್ರದರ್ಶನಗಳನ್ನು ನೀಡಿದೆ. ಪ್ರಖ್ಯಾತ ನಾಟಕಗಳ ರೂಪಾಂತರಗಳಲ್ಲದೆ, ರೇಖಾಗಣಿತವನ್ನು ಆಧರಿಸಿದ "ಮಿಸ್ ಪಾಯಿಂಟ್"ನಂತಹ ನಾಟಕಗಳನ್ನು ಪ್ರದರ್ಶಿಸಿದೆ.

ರಿಪರ್ಟರಿ ಕಾರ್ಯಗಳಲ್ಲದೆ, ಪ್ರತಿವರ್ಷ ತುಮರಿಯಲ್ಲಿ ಮಕ್ಕಳ ನಾಟಕೋತ್ಸವ, ಶಾಲಾ ಮಕ್ಕಳಿಗಾಗಿ ರಂಗ ತರಬೇತಿ ಶಿಬಿರ, ಅಧ್ಯಾಪಕರು ಹಾಗೂ ಆಸಕ್ತರಿಗೆ ತರಬೇತಿ ಶಿಬಿರ, ಬಿ. ವಿ. ಕಾರಂತರ ಹೆಸರಿನಲ್ಲಿ ಸಾಂಸ್ಕೃತಿಕ ಮೇಳ, ನಟನೆಯನ್ನೆ ಕೇಂದ್ರೀಕರಿಸಿ 45 ದಿನಗಳ ನಟನಾ ಶಿಬಿರ ಮುಂತಾದವುಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ.

## ಭಾರತಿ ಕಲಾವಿದರು, ಕೆಳದಿ

ಕೆಳದಿ ಗ್ರಾಮದ ಸುತ್ತಲ ರಂಗಾಸಕ್ತರು, ನಾಟಕ ಚಟುವಟಿಕೆಗಳಿಗಾಗಿ 1973 ರಲ್ಲಿ ಸ್ಥಾಪಿಸಿದ ತಂಡ ಭಾರತಿ ಕಲಾವಿದರು. "ಸಂಗ್ಯಾ ಬಾಳ್ಯಾ" ಇವರ ಮೊದಲ ಪ್ರಯೋಗ. ಈ ನಾಟಕದ ನೂರಕ್ಕೂ ಹೆಚ್ಚು ಪ್ರದರ್ಶನಗಳು ಕರ್ನಾಟಕ ರಾಜ್ಯಾದ್ಯಂತ ನಡೆದಿರುವುದು ವಿಶೇಷ. 'ಅಶ್ವತ್ಥಾಮನ್', 'ಜೋಕುಮಾರಸ್ವಾಮಿ', 'ಮೌನಿ', 'ಸಿರಿ ಸಂಪಿಗೆ' ಮುಂತಾದ

ಹಲವಾರು ನಾಟಕಗಳನ್ನು ಈವರೆಗೆ ಪ್ರದರ್ಶಿಸಿದ್ದಾರೆ. 1993 ರಿಂದ ಮಕ್ಕಳ ನಾಟಕೋತ್ಸವವನ್ನು ಪ್ರತಿವರ್ಷ ನಡಸುತ್ತಾ ಬಂದಿದ್ದಾರೆ. ಈ ನಾಟಕೋತ್ಸವಗಳಲ್ಲಿ 5 ರಿಂದ 6 ನಾಟಕಗಳು ಪ್ರದರ್ಶನಗೊಂಡು ಸುಮಾರು 150 ಮಕ್ಕಳು ರಂಗದ ಮೇಲೆ ಅಭಿನಯಿಸಿದ್ದಾರೆ. 'ಗೊಂಬೆ ರಾವಣ', 'ಬಾಲದ ಕಥೆ', 'ಮೋಡಣ್ಣನ ತಮ್ಮ' ಮುಂತಾದ ಹಲವಾರು ಮಕ್ಕಳ ನಾಟಕಗಳು ಪ್ರದರ್ಶನಗೊಂಡಿದೆ. ವಿವಿಧ ತಂಡಗಳ ನಾಟಕ ಪ್ರದರ್ಶನಗಳು, ಸಂವಾದ, ಸಿನಿಮಾ ಪ್ರದರ್ಶನ, ಕವಿಗೋಷ್ಠಿ ಮುಂತಾದ ಹಲವು ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಸಾಂಸ್ಕೃತಿಕ ಚಟುವಟಿಕೆ ನಡೆಸುತ್ತಾ ಸ್ವಂತಿಕೆಯನ್ನು ಉಳಿಸಿಕೊಳ್ಳುತ್ತಲೇ ಹೊರ ಜಗತ್ತಿಗೂ ತೆರೆದುಕೊಂಡು ಅಲ್ಲಿಯ ಕಲೆ, ಸಂಸ್ಕೃತಿ ಇವುಗಳ ಅರಿವು ಪಡೆಯುವುದು ಈ ಸಂಸ್ಥೆಯ ಉದ್ದೇಶ.

## ಸ್ಪಂದನ, ಸಾಗರ

2004 ನೇ ಇಸವಿಯಲ್ಲಿ ಅಸ್ತಿತ್ವಕ್ಕೆ ಬಂದ ಈ ತಂಡ ಈವರೆಗೆ ಐದು ನಾಟಕಗಳನ್ನು ಪ್ರದರ್ಶಿಸಿದೆ. ಪ್ರತಿಭಾ ರಾಘವೇಂದ್ರ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಈ ತಂಡ ಹಲವಾರು ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿವಿಧ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಈಗ ವಾರ್ಷಿಕ ಸದಸ್ಯತ್ವವನ್ನು ಮಾಡಿ ವರ್ಷಕ್ಕೆ ನಾಲ್ಕು ನಾಟಕಗಳನ್ನು ನೀಡುವ ಪ್ರಯತ್ನದಲ್ಲಿದ್ದಾರೆ.

## ಮಿತ್ರ ಮಂಡಳಿ, ಜೋಗ

ವಿದ್ಯುಚ್ಛಕ್ತಿ ಮಂಡಳಿಯ ಕೆಲಸಗಾರರು, ಇಂಜಿನಿಯರ್‌ಗಳು ಮುಂತಾದವರೇ ಹೆಚ್ಚಾಗಿ ನೆಲೆಸಿರುವ ಪ್ರದೇಶ ಜೋಗ. ಇಲ್ಲಿ ಸುಮಾರು 35 ವರ್ಷ ಸತತವಾಗಿ ರಂಗ ಚಟುವಟಿಕೆ ನಡೆಸಿದ ಸಂಸ್ಥೆ ಮಿತ್ರ ಮಂಡಳಿ, ಜೋಗ. ಕರಘಟಗಿ, ಪ್ರಹ್ಲಾದ್‌ರಾವ್ ಮುಂತಾದ ಇಂಜಿನಿಯರ್‌ಗಳು, ಶೇಕ್, ಬಾಪಟ್ ಮುಂತಾದವರು ಸಕ್ರಿಯವಾಗಿ ದುಡಿದು ಇಲ್ಲಿ ಉತ್ತಮವಾದ ರಂಗ ವಾತಾವರಣ ನಿರ್ಮಿಸುವುದರಲ್ಲಿ ಯಶಸ್ವಿಯಾಗಿದ್ದರು. ಉತ್ತಮವಾದ ಪ್ರೇಕ್ಷಕ ವರ್ಗ ಸೃಷ್ಟಿಯಾಗಿತ್ತು.

ಇವರು ಅತ್ಯಂತ ವಿಜೃಂಭಣೆಯಿಂದ ನಡೆಸುತ್ತಿದ್ದ ಕಾರ್ಯಕ್ರಮ ರಾಜ್ಯ ಮಟ್ಟದ ನಾಟಕ ಸ್ಪರ್ಧೆ, ಈ ಸ್ಪರ್ಧೆಗೆ ವಿವಿಧ ಪ್ರದೇಶದಿಂದ ನಾಟಕ ತಂಡಗಳು ಬರುತ್ತಿದ್ದವು. ಈ ಸ್ಪರ್ಧೆ ಎಷ್ಟು ಜನಮನ್ನಣೆ ಗಳಿಸಿತ್ತೆಂದರೆ 1948 ರಲ್ಲಿ 70 ತಂಡಗಳು ಪ್ರವೇಶ ಕೋರಿ ಅವುಗಳಲ್ಲಿ 30 ತಂಡಗಳನ್ನು ಆಯ್ಕೆ ಮಾಡಬೇಕಾಯಿತು. ಪ್ರತಿದಿನ ಎರಡು ನಾಟಕ ಪ್ರದರ್ಶನ ನಡೆದರೂ ಅಪಾರ ಜನ ಸಂದಣಿ ಇರುತ್ತಿತ್ತು. ಈ ಕಾರ್ಯಕ್ರಮಗಳನ್ನು ನಡೆಸಲು ಬೇಕಾದ ಧನ ಸಹಾಯ ಸಾರ್ವಜನಿಕರಿಂದ ದೊರಕುತ್ತಿತ್ತು. ಮುಖ್ಯವಾಗಿ ಕೆ.ಪಿ.ಸಿ. ಮುಕ್ತವಾಗಿ ಧನ ಸಹಾಯ ಮಾಡುತ್ತಿತ್ತು. ಇಂಜಿನಿಯರ್‌ಗಳಿಂದ ಹಿಡಿದು

ಕೆಲಸಗಾರರವರೆಗೆ ಎಲ್ಲರೂ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಈ ರೀತಿಯ ಪಾಲ್ಗೊಳ್ಳುವಿಕೆ ಯಾವ ಸ್ವರೂಪದಲ್ಲಿತ್ತು ಎಂದರೆ, ನಾಟಕ ಪ್ರದರ್ಶನಗಳನ್ನು ಪ್ರತಿ ವರ್ಷ ನವೆಂಬರ್ 1 ರಂದು ನಡೆಸುತ್ತಿದ್ದರು ಎಂದು ಹಳಬರು ನೆನೆಸಿಕೊಳ್ಳುತ್ತಾರೆ.

ನಾಟಕೋತ್ಸವ ಅಲ್ಲದೇ ಮಿತ್ರ ಮಂಡಳಿ, ತಾನೇ ನಾಟಕಗಳನ್ನು ಆಡುತ್ತಿತ್ತು ಹಾಗೂ ವಿವಿಧೆಡೆ ಪ್ರದರ್ಶನ ನೀಡುತ್ತಿತ್ತು. ಶ್ರೀ ಲಕ್ಷ್ಮಿನಾರಾಯಣ ಅವರು 'ಮಾನಿಷಾದ' ಮುಂತಾದ ಹಲವು ನಾಟಕಗಳನ್ನು ನಿರ್ದೇಶಿಸುತ್ತಿದ್ದರು. ನಂತರ ಮಕ್ಕಳ ನಾಟಕ ಸ್ಪರ್ಧೆ, ಮಹಿಳಾ ನಾಟಕ ಸ್ಪರ್ಧೆ ಮುಂತಾದವುಗಳನ್ನು ಏರ್ಪಡಿಸಿದ್ದರು.

1995ರ ನಂತರ ಸ್ಪರ್ಧೆಗೆ ತಂಡಗಳ ಭಾಗವಹಿಸುವಿಕೆ ಕಡಿಮೆ ಆಗಿ, ಈಗ ಕೆಲವು ವರ್ಷಗಳಿಂದ ಹೆಚ್ಚಿನ ಚಟುವಟಿಕೆ ನಡೆಯುತ್ತಿಲ್ಲ.

## ರಂಗಮಂಚ, ಕಾಗೋಡು

ಇತ್ತೀಚೆಗೆ ಬೆಳ್ಳಿಹಬ್ಬವನ್ನು ಆಚರಿಸುವ ರಂಗಮಂಚ, ಸಾಗರದ ಪ್ರಮುಖ ರಂಗ ತಂಡಗಳಲ್ಲಿ ಒಂದು. ಜಾನಪದ ಶೈಲಿಯ ನಾಟಕಗಳು, ಪ್ರಮುಖವಾಗಿ ಚಂದ್ರಶೇಖರ ಕಂಬಾರರ ನಾಟಕಗಳನ್ನು ಆಡುವುದರಲ್ಲಿ ಹೆಸರು ಮಾಡಿದವರು. ನಾ.ಡಿಸೋಜ ಅವರ 'ಬೆತ್ತಲೆ ಸೇವೆ' ಮುಂತಾದ ನಾಟಕಗಳನ್ನು ರಾಜ್ಯದ ವಿವಿಧೆಡೆ ಅಷ್ಟೇ ಅಲ್ಲದೆ ದಿಲ್ಲಿಯಲ್ಲಿ ಕೂಡ ಆಡಿದ್ದಾರೆ. ಈ ನಾಟಕ 150ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದೆ. 'ಸಂಗ್ಯಾ ಬಾಳ್ಯಾ', 'ಜೋಕುಮಾರಸ್ವಾಮಿ', 'ನಾಯಿಕತೆ' ಇವರ ಇತರ ಪ್ರಮುಖ ಪ್ರಯೋಗಗಳು.

ಇವರ ಮಹತ್ತರವಾದ ಸಾಧನೆ ಅಂದರೆ, ಕಾಗೋಡು ತಿಮ್ಮಪ್ಪ ರಂಗಮಂದಿರದ ನಿರ್ಮಾಣ. ಸಾಗರದಲ್ಲಿ ಇಷ್ಟೆಲ್ಲ ರಂಗ ಚಟುವಟಿಕೆಗಳು ಇದ್ದರೂ ಸುಸಜ್ಜಿತವಾದ ರಂಗಮಂದಿರದ ಕೊರತೆ ಇಲ್ಲಿಯ ಎಲ್ಲ ರಂಗಾಸಕ್ತರನ್ನು ಕಾಡುತ್ತಿತ್ತು. ಈ ರಂಗ ಮಂದಿರದ ನಿರ್ಮಾಣದಿಂದ ಈ ಕೊರತೆ ಬಹುಮಟ್ಟಿಗೆ ನಿವಾರಣೆ ಆದಂತಾಗಿದೆ.

## ಇಷ್ಟಲ್ಲದೇ...

ಈ ತಂಡಗಳಲ್ಲದೇ ಇನ್ನೂ ಹಲವಾರು ತಂಡಗಳು ಆಗೀಗ ನಾಟಕಗಳನ್ನು ಆಡುತ್ತಿರುತ್ತವೆ. ನಾಟಕವೊಂದೇ ಅಲ್ಲದೆ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸಾಗರದ ಸಾಂಸ್ಕೃತಿಕ ಪರಂಪರೆಯನ್ನು ಜೀವಂತವಾಗಿಟ್ಟಿವೆ. 'ಪ್ರಜ್ಞಾ ರಂಗ' ತಂಡ ಹಲವಾರು ನಾಟಕಗಳನ್ನು ಪ್ರದರ್ಶಿಸಿದೆ. ಇನ್ನಿತರ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಿದೆ.

ಇಷ್ಟೆಲ್ಲ ರಂಗ ಚಟುವಟಿಕೆ ನಡೆಯುತ್ತಿರುವುದರಿಂದ, ಉತ್ತಮ ನಟ ನಟಿಯರ, ತಾಂತ್ರಿಕ ಪರಿಣತರ ದೊಡ್ಡ ತಂಡ ಸಾಗರದಲ್ಲಿದೆ. ಎಸ್.ಮಾಲತಿ ಹಲವು ನಾಟಕಗಳನ್ನು ವಿವಿಧ ತಂಡಗಳಿಗೆ ನಿರ್ದೇಶಿಸಿದ್ದಾರೆ. ರಂಗಸಜ್ಜಿಕೆ ಹಾಗೂ ಬೆಳಕಿನ ವ್ಯವಸ್ಥೆಯಲ್ಲಿ

ಪುರುಷೋತ್ತಮ ತಲವಾಟ ರಾಜ್ಯ ಮಟ್ಟದಲ್ಲಿಯೆ ಪ್ರಸಿದ್ಧರಾಗಿದ್ದಾರೆ. ಶ್ರೀಕಾಂತ ಕಾಳಮಂಜಿ ಮುಂತಾದ ಸಂಗೀತಗಾರರು ರಂಗ ಸಂಗೀತದಲ್ಲಿ ಒಳ್ಳೆಯ ಸಾಧನೆಗೈದಿದ್ದಾರೆ.

**ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾಗಿದ್ದವರು...**

ದಿ|| ಕೆ.ವಿ.ಸುಬ್ಬಣ್ಣ, ಶ್ರೀ ಪ್ರಸನ್ನ ಹೆಗ್ಗೋಡು, ಶ್ರೀ ಚಿದಂಬರರಾವ್ ಜಂಬೆ, ಶ್ರೀಮತಿ ಮಾಲತಿ ಎಸ್., ಶ್ರೀ ಕಾಗೋಡು ಅಣ್ಣಪ್ಪ ಇವರುಗಳು ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾಗಿ ರಂಗಭೂಮಿಗೆ ತಮ್ಮದೇ ಆದ ಕೊಡುಗೆ ನೀಡಿ ತಾಲೂಕಿನ ಕೀರ್ತಿ ಹೆಚ್ಚಿಸಿರುತ್ತಾರೆ.

## ಸಾಗರದಲ್ಲಿ ಮಕ್ಕಳ ರಂಗಭೂಮಿ

ಕನ್ನಡ ರಂಗಭೂಮಿಯ ಮಹಾಕಾರ್ಯವೊಂದು ನಡೆಯಬೇಕಾದರೆ, ಮಕ್ಕಳ ರಂಗಭೂಮಿಯ ವೈಭವದಲ್ಲಿ ಕಾಣಬಹುದು. ಈ ಹಿಂದೆ ಮಕ್ಕಳ ರಂಗಭೂಮಿ ಹಾಗೂ ಮಕ್ಕಳ ನಾಟಕಗಳು ಎಂದು ಬೇರೆ ಬೇರೆಯಾಗಿ ಕಾಣುತ್ತಿರಲಿಲ್ಲ. ವೃತ್ತಿ ರಂಗಭೂಮಿಯಲ್ಲಿ ಅಂದರೆ ಕಂಪನ ನಾಟಕಗಳಲ್ಲಿ ದೊಡ್ಡವರ ಜೊತೆಯಲ್ಲಿಯೇ ಮಕ್ಕಳ ಪಾತ್ರಗಳನ್ನು ಹೆಚ್ಚಾಗಿ ಕಲಾವಿದರ ಮಕ್ಕಳೇ ನಿರ್ವಹಿಸುತ್ತಿದ್ದರು. ಮಕ್ಕಳಿಗೆ ಪ್ರತಿಭೆಯನ್ನು ಪ್ರದರ್ಶಿಸಲು ಪ್ರಾಚೀನ ರಂಗಭೂಮಿಯಿಂದ ಹಿಡಿದು ಇಂದಿಗೂ ರಂಗಭೂಮಿಯಲ್ಲಿ ಅವಕಾಶವಿದೆ. ಆದರೆ ಮಕ್ಕಳ ರಂಗಭೂಮಿ ಎಂದು ಪ್ರತ್ಯೇಕತೆ ಇರಲಿಲ್ಲ.

ಹಾಗೆ ನೋಡಿದರೆ ಕಲೆಗಳ ತವರೂರಾದ ಸಾಗರ ಸುತ್ತಮುತ್ತ ನೋಡಿದಾಗ ಅಂದರೆ, ಹೆಗ್ಗೋಡು, ತಲವಾಟ, ಕೆಳದಿ, ತುಮರಿ ಹೀಗೆ ಕೆಲವು ರಂಗ ಚಟುವಟಿಕೆಗಳಲ್ಲಿ ಹೆಸರು ಮಾಡಿರುವ ಗ್ರಾಮಗಳಲ್ಲಿ ಇಂದಿಗೂ ಮಕ್ಕಳ ರಂಗ ಚಟುವಟಿಕೆ ನಿರಂತರವಾಗಿದೆ. ಹಾಗೆಯೇ ಸಾಗರ ಪಟ್ಟಣದಲ್ಲಿಯೂ ಉದಯ ಕಲಾವಿದರು ಮೊದಲಾದ ಕೆಲವು ರಂಗ ಸಂಸ್ಥೆಗಳು ಹಿಂದಿನಿಂದಲೂ ಮಕ್ಕಳಿಗಾಗಿಯೆ ರಂಗ ಚಟುವಟಿಕೆ ನಡೆಸಿಕೊಂಡು ಬರುತ್ತಿವೆ.

ವಿಶ್ವ ರಂಗಭೂಮಿಯಲ್ಲಿಯೇ ಮೈಲಿಗಲ್ಲು ಸ್ಥಾಪಿಸಿರುವ ಹೆಗ್ಗೋಡು ಗ್ರಾಮ ಸಾಗರ ತಾಲ್ಲೂಕಿನಲ್ಲಿಯೇ ಇದೆ ಎಂಬುದು ಹೆಮ್ಮೆಯ ಸಂಗತಿ. ಹೆಗ್ಗೋಡು ಗ್ರಾಮದಲ್ಲಿ ಕೆ.ವಿ. ಸುಬ್ಬಣ್ಣನವರ ಕಾಲದಲ್ಲಿ ನೀನಾಸಮ್ ಸಂಸ್ಥೆಯ ಮೂಲಕ ಮಕ್ಕಳ ಯಕ್ಷಗಾನ, ಮಕ್ಕಳ ನಾಟಕಗಳನ್ನು ತಾವೇ ಬರೆದು ಮಕ್ಕಳ ನಾಟಕಗಳನ್ನು ತಾವೇ ನಿರ್ದೇಶಿಸುತ್ತಾ ರಂಗಭೂಮಿಯನ್ನು ಬೆಳೆಸಿದರು.

ಬಿ.ವಿ. ಕಾರಂತರ ಪ್ರವೇಶ, ಮಕ್ಕಳ ರಂಗ ಶಿಬಿರಗಳನ್ನು ನಾಟಕಗಳನ್ನು ಬರೆದು ಮಕ್ಕಳಿಗಾಗಿ ಹೊಸ ಕಲ್ಪನೆಯ ರಂಗ ಚಟುವಟಿಕೆ ಪ್ರಯೋಗಗಳ ಮೂಲಕ ಮಕ್ಕಳ ರಂಗಭೂಮಿ ಎಂದು ಗುರುತಿಸುವ ಕೆಲಸ ಮಾಡಿದ ಕೀರ್ತಿ ಬಿ.ವಿ. ಕಾರಂತರಿಗೆ ಸಲ್ಲುವುದು. ನೀನಾಸಮ್ ಶಾಲಾ ರಂಗ ಯೋಜನೆಯನ್ನು ರಾಜ್ಯಾದ್ಯಂತ ನಡೆಸಿ ಶಾಲಾ ಮಕ್ಕಳಲ್ಲಿ ರಂಗಭೂಮಿಯ ಛೀಳು ಹತ್ತಿಸಿದ ಕೀರ್ತಿ ನೀನಾಸಮ್‌ಗೆ ಸೇರಿದ್ದು. ನಂತರದಲ್ಲಿ ನಿನಾಸಮ್ ತಿರುಗಾಟದ ಮೂಲಕ ಕರ್ನಾಟಕದಾದ್ಯಂತ ದೊಡ್ಡವರು

ಮಕ್ಕಳಿಗಾಗಿಯೇ ನಾಟಕ ಪ್ರದರ್ಶನ ಮಾಡಿ ಮಕ್ಕಳ ರಂಗಭೂಮಿಯನ್ನು ಬೆಳೆಸುತ್ತಾ ಬಂದರು.

ಗ್ರಾಮಾಂತರ ರಂಗಭೂಮಿ ಕಡೆ ನೋಡಿದಾಗ 1950ರ ದಶಕದಲ್ಲಿಯೇ ಶ್ರೀ ಗಜಾನನ ನಾಟಕ ಮಂಡಳಿ ಎಂಬ ಹೆಸರಿನಲ್ಲಿ ನಾಟಕ ಕಂಪನಿಯೊಂದು ನಾಟಕ ಪ್ರದರ್ಶನಗಳನ್ನು ನೀಡುತ್ತಿದ್ದುದು ಉಲ್ಲೇಖನೀಯ. ಸದ್ರಿ ನಾಟಕ ಕಂಪನಿಯ ನಂತರ ಸ್ಥಳೀಯ ಯುವಜನತೆ ತಮ್ಮದೇ ಆದ ಸಂಘಗಳನ್ನು ಕಟ್ಟಿ ಹವ್ಯಾಸಕ್ಕಾಗಿ ನಾಟಕ ಆಡುವುದು, ಸ್ಥಳೀಯ ಶಾಲಾ ಮಕ್ಕಳಿಗೆ ವಾರ್ಷಿಕೋತ್ಸವ ಸಂದರ್ಭಗಳಲ್ಲಿ ಗುಣ್ಡಣ್ಣ, ಎ.ಎಸ್. ಮೂರ್ತಿ, ಬೇಳೂರು ಕೃಷ್ಣಮೂರ್ತಿ ಇವರುಗಳ ನಾಟಕ ಕಲಿಸಿ ಆಡಿಸುವ ಪರಿಪಾಠ ನಡೆದು ಬಂತು. ಹೀಗಿರುವಾಗ ಮೈಸೂರಿನಲ್ಲಿ ಚಿತ್ರಕಲಾ ಪದವಿ ಪೂರೈಸಿ ತಮ್ಮ ಗೆಳೆಯರೊಡನೆ ಕೂಡಿ ನಾಟಕ ಆಡಿದ ಅನುಭವಗಳೊಂದಿಗೆ ಆಗತಾನೆ ಊರಿಗೆ ಮರಳಿದ್ದ ಪುರುಷೋತ್ತಮ ತಲವಾಟ ಅವರು, ಬೆರಳ್ಗೆ ಕೊರಳ್, ಕೊಡೆಗಳು, ಕುಂಟಾಕುಂಟ ಕುರ್ವತ್ತಿ, ಟಿ. ಪ್ರಸನ್ನನ ಗೃಹಸ್ಥಾಶ್ರಮ, ಮುಂತಾದ ಹೊಸ ಅಲೆಯ ನಾಟಕಗಳನ್ನು ಯುವ ಜನರಿಗೂ, ಶಾಲಾ ಮಕ್ಕಳಿಗೆ ಪಂಜರ ಶಾಲೆ, ಟಿಂಗರ ಬುಡ್ಡಣ್ಣ, ಕಾಡಿನಲ್ಲಿ ಕಥೆ ಮುಂತಾದ ನಾಟಕಗಳನ್ನು ನಿರ್ದೇಶಿಸುವ ಮೂಲಕ ಊರಿನಲ್ಲೊಂದು ನಾಟಕದ ಬಗ್ಗೆ ಹೊಸ ಸಂಚಲನ ಉಂಟುಮಾಡಿದರು. ಜೊತೆಗೆ ಪ್ರತಿ ವರ್ಷ ನಿರ್ದೇಶನಕ್ಕೂ ಸೇರಿದಂತೆ, ಅಭಿನಯ, ರಂಗ ಸಂಗೀತ, ವರ್ಣಾಲಂಕಾರ, ವಸ್ತ್ರಾಲಂಕಾರ, ರಂಗಸಜ್ಜಿಕೆ, ದೀಪಾಲಂಕಾರ, ಪರಿಕರ ತಯಾರಿಕೆ ಹೀಗೆ ರಂಗಭೂಮಿಯ ವಿವಿಧ ಕ್ಷೇತ್ರಗಳಿಗೆ ಸ್ಥಳೀಯರನ್ನೇ ಬಳಸಿಕೊಳ್ಳುವ ಮೂಲಕ ರಂಗಪರಿಸರವನ್ನೇ ಬೆಳೆಸಿಕೊಂಡು ಅಂದಿನಿಂದ ಇಂದಿಗೂ ಪ್ರತಿವರ್ಷ ಊರಿನಲ್ಲಿ ಮಕ್ಕಳ ಮೂಲಕ ರಂಗ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಹೀಗೆ ಇದುವರೆಗೆ ಅವರು ಸುತ್ತಮುತ್ತ ರಂಗಭೂಮಿಗೊಂದು ಗಟ್ಟಿ ನೆಲೆಯನ್ನು ರಕ್ಷಿಸಿಕೊಂಡು ಬಂದಿದ್ದಾರೆ. ಹಾಗಾಗಿ ವಿವಿಧ ಸಂಘಟನೆಗಳು ಇಲ್ಲಿ ಇಂದಿಗೂ ಸಾಂಸ್ಕೃತಿಕವಾಗಿ ತಮ್ಮ ಗಟ್ಟಿತನವನ್ನು ಉಳಿಸಿಕೊಂಡು ಬಂದಿವೆ.

ಕೆಳದಿ ಗ್ರಾಮವನ್ನು ಗಮನಿಸಿದಾಗ ಭಾರತಿ ಕಲಾವಿದರು ನಮ್ಮ ಕಣ್ಣೆದುರಿಗೆ ಬರುತ್ತಾರೆ. ಹೆಚ್.ಜಿ. ಸೀತಾರಾಂ, ಬೆಳೆಯೂರು ದೇವೇಂದ್ರ, ಬಂದಗದ್ದೆ ರಾಧಾಕೃಷ್ಣ, ಹೀಗೆ ಹಲವಾರು ಕಲಾವಿದರು ಮಕ್ಕಳಿಗಾಗಿಗೆ ಹಲವು ನಾಟಕ ಬರೆದು ನಿರ್ದೇಶಿಸುವ ಮೂಲಕ ಗ್ರಾಮದಲ್ಲಿ ಮಕ್ಕಳ ರಂಗಭೂಮಿಯನ್ನು ಪ್ರಯೋಗಾತ್ಮಕವಾಗಿ ಬೆಳೆಸಿಕೊಂಡು ಬಂದಿದ್ದಾರೆ.

ತುಮರಿ ಲಿಂಗನಮಕ್ಕಿ ಜಲಾಶಯದ ಹಿನ್ನೀರಿನಿಂದಾಗಿ ಕುಗ್ರಾಮವಾಗಿ ಪರಿಣಮಿಸಿದರೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿಯೇ ಇರಿಸಿಕೊಂಡ ಗ್ರಾಮ. ಈ ಗ್ರಾಮದಲ್ಲಿ ಹ. ಮ. ಭಟ್ಟ ಮತ್ತಿತರರ ಪ್ರಯತ್ನದಿಂದ "ಅಭಿವ್ಯಕ್ತಿ ಕಲಾಬಳಗ" ಹುಟ್ಟಿಕೊಂಡಿದ್ದು ತನ್ನದೇ ಆದ ಸುಸಜ್ಜಿತ ರಂಗಮಂದಿರವನ್ನೂ ಹೊಂದಿದೆ. ಇದರ

ಉಪಯೋಗ ಪಡೆದುಕೊಂಡ ಕೆ.ಜಿ. ಕೃಷ್ಣಮೂರ್ತಿಯವರು ಅಲ್ಲಿಯೇ ಕಿನ್ನರ ಮೇಳ ಎಂಬ ಹೆಸರಿನಲ್ಲಿ ಮಕ್ಕಳ ನಾಟಕಕ್ಕಾಗಿಯೇ ಒಂದು ತಂಡಕಟ್ಟಿ ನಾಡಿನಾದ್ಯಂತ ಪ್ರದರ್ಶನ ನೀಡುತ್ತಿದ್ದಾರೆ. ಇದು ದೊಡ್ಡವರೇ ಮಕ್ಕಳಿಗಾಗಿ ನಾಟಕವನ್ನು ಪ್ರದರ್ಶಿಸುವ ತಂಡವಾಗಿದೆ. ಕಿನ್ನರ ಮೇಳವು 'ರಂಗ ಮುಖೇನ ಶಿಕ್ಷಣ' ಎಂಬ ಧ್ಯೇಯದೊಂದಿಗೆ ಶಿಬಿರಗಳನ್ನು ನಡೆಸಿ ನಾಟಕಗಳನ್ನು ಪ್ರಯೋಗಿಸಿದೆ.

ಜಲಪಾತದಿಂದಾಗಿ ವಿಶ್ವ ಪ್ರಸಿದ್ಧವಾದ ಜೋಗದಲ್ಲೂ ಸಹ ಕೆ.ಇ.ಬಿ. ನೌಕರರು "ಮಿತ್ರಮಂಡಳಿ" ಎಂಬ ಸಾಂಸ್ಕೃತಿಕ ಸಂಘವೊಂದನ್ನು ನಿರ್ಮಿಸಿಕೊಂಡು ಕಳೆದು ಸುಮಾರು 50 ವರ್ಷಗಳಿಂದ ರಾಜ್ಯಮಟ್ಟದ ನಾಟಕೋತ್ಸವ, ಮಕ್ಕಳ ರಂಗ ಶಿಬಿರ ನಡೆಸುತ್ತಾ ಬಂದಿವೆ. ಹಾಗೆಯೇ ಇಲ್ಲಿನ ಕೆ.ಪಿ.ಸಿ. ನೌಕರರು ಒಗ್ಗೂಡಿ ರಚಿಸಿಕೊಂಡ "ಶರಾವತಿ ಕಲಾ ಬಳಗ" ದವರೂ ಸಹ ಸಂಸ್ಥೆಯ ಅಂತರ ನಾಟಕೋತ್ಸವ ನಡೆಸುವ ಜೊತೆ ಜೊತೆಗೆ ಮಕ್ಕಳಿಗಾಗಿಯೇ ಸಿದ್ದರಾಜು ರವರ ಮುಂದಾಳತ್ವದಲ್ಲಿ ರಂಗಶಿಬಿರಗಳನ್ನು ವಿವಿಧ ನಿರ್ದೇಶಕರುಗಳನ್ನು ಕರೆಸಿಕೊಂಡು ಪ್ರತಿವರ್ಷ ನಡೆಸಿಕೊಂಡು ಬರುತ್ತಿದೆ.

ಸಿರಿವಂತೆ ಗ್ರಾಮದಲ್ಲಿ ಸುಮಾರು 15ವರ್ಷಗಳ ಹಿಂದೆ ನೀನಾಸಮ್ ಪದವೀಧರ ಇಕ್ಬಾಲ್ ಅಹ್ಮದ್ "ಚಿಣ್ಣ – ಬಣ್ಣ" ಎಂಬ ಮಕ್ಕಳ ನಾಟಕದ ತಂಡವನ್ನು ಕಟ್ಟಿ ಪರಿಸರ – ಪ್ರಾಣಿ ಪ್ರಪಂಚ – ವಿದ್ಯಾಭ್ಯಾಸ ಹೀಗೆ ಮಕ್ಕಳಿಗೆ ಮುದ ನೀಡುವ ಕುತೂಹಲ ಕೆರಳಿಸುವ ವಿಷಯಗಳನ್ನು ಆಯ್ದುಕೊಂಡು ಫ್ಯಾಂಟಸಿ ನಾಟಕಗಳನ್ನು ನಿರ್ದೇಶಿಸಿ ಕರ್ನಾಟಕದಾದ್ಯಂತ ಎರಡು ವರ್ಷಗಳ ಕಾಲ ಪ್ರದರ್ಶನ ನೀಡಿ ಮನೆಮಾತಾದರು.

**ಸಾಗರ ನಗರ:**

ಸಾಗರ ನಗರದಲ್ಲಿ ಸುಮಾರು ಕಳೆದ 70ವರ್ಷಗಳಿಂದ ಉದಯ ಕಲಾವಿದರು ಎಂಬ ಸಂಸ್ಥೆಯ ಮೂಲಕ ರಂಗಭೂಮಿ ಚಟುವಟಿಕೆಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಎನ್.ಆರ್. ಮಾಸೂರರ ಕಾಲದಲ್ಲೂ ಮಕ್ಕಳಿಗಾಗಿ ಅನೇಕ ರಂಗ ಶಿಬಿರಗಳು, ನಾಟಕಗಳ ಪ್ರದರ್ಶನಗಳನ್ನು ನಡೆಸಿದ್ದು ಕಂಡುಬರುತ್ತದೆ. ಮಾಸೂರರ ನಂತರ ಡಾ॥ ಗುರುರಾವ್ ಬಾಪಟ್, ಸಿ.ಟಿ. ಬ್ರಹ್ಮಾಚಾರ್, ವಿಜಯ ವಾಮನ್ ಇವರು ಈ ಮಕ್ಕಳ ರಂಗಶಿಬಿರ – ನಾಟಕ ಪ್ರದರ್ಶನ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. "ರಂಗಮುಖೇನ ಶಿಕ್ಷಣ" ಯೋಜನೆ ಅಡಿಯಲ್ಲಿ ಸಾಗರ ತಾಲ್ಲೂಕು ಮಕ್ಕಳ ನಾಟಕೋತ್ಸವ, ವಿಚಾರ ಸಂಕಿರಣಗಳನ್ನು ಸತತ ನಾಲ್ಕು ವರ್ಷಗಳ ಕಾಲ ನಡೆಸಿಕೊಂಡುಬರಲಾಯಿತು. ಪ್ರಸ್ತುತ ಮಕ್ಕಳಲ್ಲಿ ಆರೋಗ್ಯ ಪೂರ್ಣ ರಂಗ ಅಭಿರುಚಿ ಬೆಳೆಸುವಲ್ಲಿ ಸಾಗರದ "ಉದಯ ಕಲಾವಿದರು" ಸಂಸ್ಥೆಯ ಪ್ರಯತ್ನ ಶ್ಲಾಘನೀಯ.

ಸುಮಾರು 15 ವರ್ಷಗಳ ಹಿಂದೆ ಸಿ.ಟಿ. ಬ್ರಹ್ಮಾಚಾರ್ ಮುಂದಾಳತ್ವದಲ್ಲಿ "ಬೆಳೆಸಿರಿ" ಎಂಬ ಸಂಘಟನೆಯ ಮೂಲಕ ಒಂದು ತಿಂಗಳ ಕಾಲ ರಂಗ ತರಬೇತಿ ಶಿಬಿರ ನಡೆಸಿ, ಆ ಮನ ನಾಟಕವನ್ನು ನಿರ್ದೇಶಿಸಲಾಗಿತ್ತು. ಇದರ ಮುಂಚೂಣಿಯಲ್ಲಿ

ಅ.ರಾ. ಶ್ರೀನಿವಾಸ, ಸಿಗರೇಟ್ ನಾಗರಾಜ, ನಾಗರಾಜ ರಾಯ್ಕರ್ ಮತ್ತಿತರ ಸದಸ್ಯರೊಂದಿಗೆ ನಂತು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಎನ್‌ಎಸ್‌ಡಿ ಪದವೀಧರೆ ಶ್ರೀಮತಿ ಎಸ್ ಮಾಲತಿ ಇವರು ಸಾಗರದ ಸುತ್ತ ಮುತ್ತಲಿನ ವನಶ್ರೀ, ಸರ್ಕಾರಿ ಶಾಲೆ, ಪ್ರಗತಿ ಶಾಲೆ ಹೀಗೆ ಹತ್ತು ಹಲವು ಶಾಲೆಗಳಿಗೆ ತಾವೇ ನಾಟಕಗಳನ್ನು ಬರೆದು ಮಕ್ಕಳಿಗೆ ನಿರ್ದೇಶಿಸಿ ಪ್ರಸ್ತುತ ಪಡಿಸುವ ಮೂಲಕ ಸಾಗರದಲ್ಲಿ ಮಕ್ಕಳ ರಂಗಭೂಮಿಗೆ ಸೇವೆ ಸಲ್ಲಿಸುತ್ತಿದ್ದಾರೆ. ವಕೀಲಿ ವೃತ್ತಿಯೊಂದಿಗೆ ರಂಗಭೂಮಿಯ ನಂಟು ಹೊಂದಿರುವ ಪ್ರತಿಭಾ ರಾಘವೇಂದ್ರ ಅವರೂ ಸಹ ತಮ್ಮದೇ ಆದ "ಸ್ಪಂದನ" ತಂಡದ ಆಶ್ರಯದಲ್ಲಿ ಇತ್ತೀಚಿನ ದಿನಗಳಲ್ಲಿ ಬೇಸಿಗೆ ಶಿಬಿರಗಳನ್ನು ನಡೆಸುವ ಮೂಲಕ ಮಕ್ಕಳ ರಂಗಭೂಮಿಗೆ ತಮ್ಮ ಕೊಡುಗೆಯನ್ನು ನೀಡುತಿದ್ದಾರೆ.

ಶಾಲಾ ರಂಗದಲ್ಲಿ 1985ರಲ್ಲಿ ಸೇವಾ ಸಾಗರ ವಿದ್ಯಾಸಂಸ್ಥೆಯಲ್ಲಿ ಪ್ರಥಮವಾಗಿ ನಾ.ಡಿಸೋಜಾ ಅವರ ಅಕ್ಷರ ಕಲಹ ನಾಟಕವು ಸಿ.ಟಿ. ಬ್ರಹ್ಮಾಚಾರ್ ನಿರ್ದೇಶನದಲ್ಲಿ ಪ್ರದರ್ಶನಗೊಂಡು ಸತತವಾಗಿ ಕಾಲ ನಡೆಸಿಕೊಂಡು ಬರಲಾಗಿದೆ. ಹಾಗೆಯೇ ಶ್ರೀ ರಾಮಕೃಷ್ಣ ವಸತಿ ಶಾಲೆ ಸಾಗರ ಇದರಲ್ಲಿಯೂ ಮಕ್ಕಳಿಗಾಗಿ ಬೇಸಿಗೆ ಶಿಬಿರ ಹಾಗೂ ಪ್ರತಿ ಶನಿವಾರ ಭಾನುವಾರಗಳಂದು ರಂಗ ತರಬೇತಿ ನಡೆಸಿ ಪುಟ್ಟ ಪುಟ್ಟ ಪ್ರಹಸನಗಳನ್ನು ಪ್ರಯೋಗಿಸಲಾಗುತ್ತಿದೆ. ಸಾಗರದ ಶಿವಶ್ರೀ ಶಾಲಾ ಮಕ್ಕಳಿಗೆ ಡಿ.ಎಂ. ರಾಜಕುಮಾರ್ ರವರು ವಾರದ ರಂಗ ತರಗತಿಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ತಾಲ್ಲೂಕಿನಲ್ಲಿ ಮಕ್ಕಳ ನಾಟಕಗಳ ರಚನೆಯಲ್ಲಿಯೂ ಅನೇಕ ನಿರ್ದೇಶಕರು, ಬರಹಗಾರರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕೆ.ವಿ. ಸುಬ್ಬಣ್ಣ, ಡಾ। ಗಜಾನನ ಶರ್ಮ, ಡಾ। ನಾ.ಡಿ.ಸೋಜ, ನೀನಾ ಮಧ್ಯಸ್ಥ, ಡಾ। ಗುರುರಾವ್ ಬಾಪಟ್, ಡಾ। ಜಿ.ಎಸ್. ಭಟ್, ವಿಜಯವಾಮನ್, ಎಸ್. ಮಾಲತಿ, ಹೆಚ್.ಜಿ. ಸೀತಾರಾಮ, ಸಿ.ಟಿ. ಬ್ರಹ್ಮಾಚಾರ್, ಪಿ.ಎಸ್. ರಾಮಪ್ಪನವರು, ಬಂದಗದ್ದೆ ರಾಧಾಕೃಷ್ಣ ಮುಂತಾದವರು ಅನೇಕ ನಾಟಕಗಳನ್ನು ಅರ್ಪಿಸಿದ್ದಾರೆ. ನಿರ್ದೇಶಕರಾಗಿ ಕೆ.ವಿ.ಸುಬ್ಬಣ್ಣ, ಚಿದಂಬರರಾವ್ ಜಂಬೆ, ಕೆ.ಜಿ.ಕೃಷ್ಣಮೂರ್ತಿ, ಕೆ.ವಿ.ಅಕ್ಷರ, ಬಿ.ಆರ್.ವೆಂಕಟರಮಣ ಐತಾಳ್, ಪುರುಷೋತ್ತಮ ತಲವಾಟ, ಎಸ್. ಮಾಲತಿ, ನೀನಾ ಮಧ್ಯಸ್ಥ, ಗುರುರಾವ್ ಬಾಪಟ್ ವಿಜಯ ವಾಮನ್, ರಾಧಾಕೃಷ್ಣ ಬಂದಗದ್ದೆ, ದೇವೇಂದ್ರ ಬೆಳಿಯೂರು, ಪ್ರತಿಭಾ ರಾಘವೇಂದ್ರ, ಸಿ.ಟಿ. ಬ್ರಹ್ಮಾಚಾರ್ ಮುಂತಾದವರು ಕಂಡುಬರುತ್ತಾರೆ.

2014ರಲ್ಲಿ 'ರಂಗ ಸಾಗರಿ' ಒಂದು ಹೊಸ ಸಂಸ್ಥೆಯು ಮಕ್ಕಳ ರಂಗ ಚುಟವಟಿಕೆ ಹಾಗೂ ಯುವ ರಂಗ ಚಟುವಟಿಕೆಗಳ ಬಗ್ಗೆ ಖ್ಯಾತ ರಂಗಕರ್ಮಿ ಸಿ.ಟಿ. ಬ್ರಹ್ಮಾಚಾರ್ ಅವರ ನಿರ್ದೇಶನದಲ್ಲಿ ಸಂಜೆ ರಂಗ ಶಾಲೆ 6 ತಿಂಗಳ ಕಾಲ ನಡೆಸಿಕೊಂಡು ಬಂದಿದೆ. ಹಾಗೆ, ಸಾಗರದ ಶ್ರೀಧರ ನಗರದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲೂ 2010ರಿಂದ ಇಲ್ಲಿಯವರೆಗೆ 8 ಮಕ್ಕಳ ನಾಟಕ ಪ್ರದರ್ಶನಗೊಂಡು ಚಂದನ ದೂರದರ್ಶನ ಕೇಂದ್ರ ಬೆಂಗಳೂರು ಮೂಲಕ ಪ್ರಸಾರಗೊಂಡಿತ್ತು. ನಂತರ ತಾಲ್ಲೂಕು ಮಟ್ಟದ

ಸ್ಪರ್ಧೆಗಳಲ್ಲಿ ಶಾಲಾ ನಾಟಕಗಳು ಪ್ರಥಮ ಸ್ಥಾನದಲ್ಲಿ ಪ್ರದರ್ಶನ ಮಾಡಿ ಮಕ್ಕಳ ರಂಗಭೂಮಿಯನ್ನು ಬೆಳೆಸುತ್ತಾ ಬಂದಿದ್ದಾರೆ.

ಹೀಗೆ ನೋಡುತ್ತಾ ಬಂದಾಗ ಮಕ್ಕಳ ರಂಗಭೂಮಿಯನ್ನು ಒಂದು ವಿಶಿಷ್ಟ ಮಾಧ್ಯಮವನ್ನಾಗಿ ಗುರುತಿಸಲಾಗಿದೆ. ಇಲ್ಲಿ ಮಕ್ಕಳಿಗಾಗಿ ಮಕ್ಕಳೇ ಅಭಿನಯಿಸುವ ನಾಟಕ ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ದೊಡ್ಡವರು ಆಡುವ ನಾಟಕಗಳೇ ಆಗಿರಬಹುದು ಹೀಗೆ ಸಾಗರ ತಾಲ್ಲೂಕಿನಲ್ಲಿ ಒಟ್ಟಾರೆ ಮಕ್ಕಳ ರಂಗಭೂಮಿ ಬೆಳೆದುಬರುತ್ತಿದೆ.

ಸಮಗ್ರ ತಾಲ್ಲೂಕನ್ನು ಗಮನದಲ್ಲಿಟ್ಟಾಗ ತಾಲ್ಲೂಕಿನಲ್ಲಿ ಮಕ್ಕಳ ರಂಗಭೂಮಿ ಗಟ್ಟಿಗೊಂಡು  ಚಟುವಟಿಕೆಯಿಂದ ಕೂಡಿದೆ ಎಂದೇ ಹೇಳಬಹುದು.

– ಸಿ.ಟಿ.ಬ್ರಹ್ಮಾಚಾರ್

## ಉದಯ ಕಲಾವಿದರು

ಸಂಪರ್ಕ: ಡಾ.ಗುರುರಾವ್ ಬಾಪಟ್, ದೂ: 99021 84379

ಕರ್ನಾಟಕದಲ್ಲಿಯೇ ಬಹು ಅಪರೂಪದ ರಂಗ ತಂಡವೆಂದೆನಿಸಿಕೊಂಡಿರುವ "ಉದಯ ಕಲಾವಿದರು (ರಿ.)" ಈಗ ತನ್ನ ಅರವತ್ತನೆಯ ವರ್ಷದ ಸನಿಹದಲ್ಲಿದೆ. ಮೂಲ ಈ ತಂಡ "ಕಿರಿಯರ ತಂಡ" ಎಂಬ ಹೆಸರಿನಿಂದ 1938ನೇ ಸ್ಥಾಪನೆಯಾಗಿದ್ದರೂ ಅದು 1947ರಲ್ಲಿ "ಉದಯ ಕಲಾವಿದರು" ಎಂಬ ಹೆಸರಿನಿಂದ ಹೊಸರೂಪ ಪಡೆಯಿತು. ಸ್ವಾತಂತ್ರ್ಯ ಕಾಲದ ಸಾಮಾಜಿಕ ಹಾಗೂ ರಾಜಕೀಯ ಬೇಡಿಕೆಗಳಿಗೂ ಈ ಸಂಸ್ಥೆ ತನ್ನದೇ ಆದ ರೀತಿಯಲ್ಲಿ ಸ್ಪಂದಿಸಿದೆ. ಅಪ್ಪಟ ರಂಗ ಕಾಳಜಿಯೇ ಈ ತಂಡದ ಜೀವ ದ್ರವ್ಯ. ಲಾಗಾಯ್ತಿನ ತನ್ನ ರಂಗ ಚೈತನ್ಯವನ್ನು ನಾಡಿನ ಉದ್ದಗಲಕ್ಕೆ ಹರಡಿದ ಕೀರ್ತಿ ನಾಡಿನ ಹವ್ಯಾಸಿ ರಂಗಭೂಮಿ ಇತಿಹಾಸಕ್ಕೆ ಸೇರಿಕೊಂಡಿದೆ. ಆಧುನಿಕ ರಂಗಭೂಮಿ ಸಂಗಡವೇ ಬೆಳೆದು ಬಂದ ಈ ರಂಗತಂಡ, ಹೊಸ ಹೊಸ ರಂಗ ಪ್ರಯೋಗಳಿಗೆಲ್ಲಾ ತನ್ನನ್ನು ತಾನು ಮುಕ್ತವಾಗಿ ತೊಡಗಿಸಿಕೊಂಡಿದ್ದು ಬಹುಮುಖ್ಯ. ಗ್ರಾಮಾಂತರ ಹಾಗೂ ನಗರ ಪಟ್ಟಣಗಳ ರಂಗಾಭಿರುಚಿಯನ್ನು ಬೆಳೆಸುವುದರಲ್ಲಿ 'ಉದಯ ಕಲಾವಿದರು' ಮಾಡಿದ ಸಾಧನೆ ಗಮನಾರ್ಹ. ಈ ಸಂಸ್ಥೆ ಕೇವಲ ರಂಗಾಸಕ್ತರ ಒಂದು ತಂಡ, ಶಾಲೆ, ಕಾಲೇಜು, ವಿವಿಧ ಸರಕಾರಿ ಹಾಗೂ ಖಾಸಗಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಅಲ್ಲದೆ ಕೃಷಿ ಮತ್ತು ಸಮಾಜದ ಎಲ್ಲಾ ವೃತ್ತಿಗಳ ಹಾಗೂ ಜಾತಿ ವರ್ಗಗಳನ್ನು ಪ್ರತಿನಿಧಿಸುವ ಈ ಒಂದು ಆರೋಗ್ಯಕರವಾದ ಮನೋಸ್ಥಿತಿಯನ್ನು ಮೊದಲಿನಿಂದಲೂ ಮೈಗೂಡಿಸಿಕೊಂಡಿದೆ.

ಖ್ಯಾತ ನಿರ್ದೇಶಕ ದಿವಂಗತ ಎನ್. ಆರ್. ಮಾಸೂರ್ ಹಾಗೂ ಅವರ ಸಂಗಡಿಗರ ಕಲ್ಪನೆಯ ಕೂಸು ಈ ರಂಗಸಂಸ್ಥೆ, ರಾಜಧಾನಿಯ ರಂಗ ತಂಡಗಳಿಗಿರುವ ಯಾವ ಸೌಲಭ್ಯ, ಸಂದರ್ಭಗಳು ಉದಯ ಕಲಾವಿದರು ಸಂಸ್ಥೆಗೆ ಇಲ್ಲದಿದ್ದರೂ ಅಪ್ಪಟ ರಂಗಾಭಿರುಚಿಯೇ ಈ ತಂಡಕ್ಕೆ ಜೀವಾಳ. ಈ ತಂಡ ಈವರೆಗೆ ಮಾಡಿರುವ ರಂಗಾಯಣದ ಗುಟ್ಟು, ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಈಗಿನ ರಿಪರ್ಟರಿ ತಂಡಗಳ ಕಲ್ಪನೆಗಳು ಇಲ್ಲದಿರುವಾಗಲೇ ಉದಯ ಕಲಾವಿದರು "ಸಾಂಗ್ ಎಂಡ್ ಡ್ರಾಮಾ ಡಿವಿಷನ್" ಮೂಲಕ ನಾಡಿನ ಮೂಲೆ ಮೂಲೆಗೆ ಹೋಗಿ ಕುಟುಂಬ

ಯೋಜನೆಯ ಪ್ರಚಾರ ನಾಟಕವನ್ನು ಆಡಿದ್ದಾರೆವೆನ್ನುವುದು ಚಿಕ್ಕ ಸಂಗತಿಯಲ್ಲ. ಶ್ರೀರಂಗರ 'ಸೌಭಾಗ್ಯವತಿ ಭವ' ಎಂಬ ಪ್ರಚಾರ ನಾಟಕದ ಸುಮಾರು 2000 ಪ್ರಯೋಗಗಳಾಗಿದೆಯೆನ್ನುವುದು ಬಹು ಮಹತ್ತರ ರಂಗ ಘಟನೆ. ದೇಶದ ಪ್ರಮುಖ ನಾಟಕಕಾರ ಶ್ರೀರಂಗ ಅವರ ಎಲ್ಲಾ ಪ್ರಮುಖ ನಾಟಕಗಳನ್ನು ರಂಗಪ್ರಯೋಗ ಮಾಡಿರುವ ಗೌರವ ಉದಯ ಕಲಾವಿದರಿಗೆ ಇದೆ. ಕಾಲ ಕಾಲಕ್ಕೆ ಶ್ರೀರಂಗರ ನಾಟಕಗಳನ್ನು ಮತ್ತೆ ಮತ್ತೆ ಆಡುತ್ತಾ ಬಂದಿದ್ದಾರೆ. 1957 ರಲ್ಲಿ ಆಡಿದ 'ಪ್ರಪಂಚ ಪಾಣಿಪಟ್ಟು' ನಾಟಕದಿಂದ ಹಿಡಿದು ಶ್ರೀರಂಗರು ತಮ್ಮ ಬದುಕಿನುದ್ದಕ್ಕೂ ತಮ್ಮ ನಾಟಕಗಳ ಹಸ್ತಪ್ರತಿಯನ್ನು ಪ್ರಯೋಗಕ್ಕಾಗಿ 'ಉದಯ ಕಲಾವಿದರು' ಸಂಸ್ಥೆಗೆ ಕಳಿಸುತ್ತಿದ್ದರು. 'ಉದಯ ಕಲಾವಿದರು' ಆಡಿರುವ "ರಂಗಭಾರತ"ದಲ್ಲಿ ಸ್ವತಃ ಶ್ರೀರಂಗರೇ ಪಾತ್ರವಹಿಸಿದ್ದು ನಮ್ಮ ಪ್ರಮುಖ ಸಂಭ್ರಮದ ಸಂದರ್ಭಗಳಲ್ಲಿ ಒಂದು. ಉದಯ ಕಲಾವಿದರು, ಶ್ರೀರಂಗ ಮತ್ತು ಮಾಸೂರ್ ಈ ಮೂವರ ಪರಸ್ಪರ ರಂಗ ಸಂಬಂಧದ ಸೂಕ್ಷ್ಮತೆಗಳು ಅಧ್ಯಯನಕ್ಕೆ ಒಳ್ಳೆಯ ವಸ್ತು. ರಾಜ್ಯಮಟ್ಟದ ನಾಟಕ ಸ್ಪರ್ಧೆ, ಕಾಲಕಾಲಕ್ಕೆ ರಂಗ ವಿಚಾರ ಸಂಕಿರಣ, ರಂಗ ತರಬೇತಿ ಶಿಬಿರಗಳು, ಕನ್ನಡ ಕಾವ್ಯ ವಾಚನ ಶಿಬಿರ, ಮಕ್ಕಳ ರಂಗಮೇಳ – ಹೀಗೆ ಅನೇಕ ರಂಗ ಕಾರ್ಯಗಳಲ್ಲಿ ಈ ತಂಡ ತನ್ನನ್ನು ತಾನು ತೀವ್ರವಾಗಿ ತೊಡಗಿಸಿಕೊಂಡಿದೆ. ಕಳೆದ ಸಾರಿ ಮಾಡಿದ ಮಕ್ಕಳ ರಂಗಮೇಳದಲ್ಲಿ ಸುಮಾರು ನೂರೈವತ್ತಕ್ಕಿಂತಲೂ ಹೆಚ್ಚು ಮಕ್ಕಳು ನಾಟಕವಾಡಿದ್ದನ್ನು ಹಾಗೂ ಸುಮಾರು ಹದಿನೈದು ಸಾವಿರ ಮಕ್ಕಳು ಟಿಕೇಟು ಪಡೆದು ನಾಟಕಗಳನ್ನು ನೋಡಿದ್ದಾರೆ ಎನ್ನುವುದು ಸಂತಸದ ಸಂಗತಿ.

'ಉದಯ ಕಲಾವಿದರು' "ಅಟ್ಟ" ಇಡೀ ಕರ್ನಾಟಕದಲ್ಲಿ ಹೆಸರು ಮಾಡಿರುವ ರಂಗ ಚಟುವಟಿಕೆಯ ಕೇಂದ್ರವಾಗಿದ್ದು ದಿನನಿತ್ಯದ ಕಾರ್ಯಚಟುವಟಿಕೆಯ ಸಂಗಡ ನಾಡಿನಲ್ಲಿ ಆಗಾಗ್ಗೆ ಭುಗಿಲೇಳುವ ಜ್ವಲಂತ ಸಮಸ್ಯೆಗಳನ್ನು ಕುರಿತು ಚರ್ಚೆ, ಸಂವಾದ, ನಂತರ ಬೀದಿ ನಾಟಕ, ಹೀಗೆ "ಅಟ್ಟ" ಸದಾ ಕ್ರಿಯಾಶಾಲಿಯಾಗಿ ಸುತ್ತಲಿನ ಸಮಾಜದೊಡನೆ ನಂಟು ಬೆಳೆಸಿಕೊಂಡಿದೆ.

ಇತ್ತೀಚಿಗಿನ ದಿನಗಳಲ್ಲಿ ಜನರಲ್ಲಿ ಕಡಿಮೆಯಾಗುತ್ತಿರುವ ರಂಗಾಸಕ್ತಿಯನ್ನು ಮನಗಂಡು ಅದನ್ನು ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ 'ವಾರಾಂತ್ಯ ರಂಗಪ್ರಯೋಗ' ಯೋಜನೆಯನ್ನು ಕೈಗೆತ್ತಿಕೊಂಡಿದೆ. ಇದರ ಸಂಗಡವೇ ಉದಯ ಕಲಾವಿದರು ತಮ್ಮದೇ ಆದ ಒಂದು ರಂಗಮಂದಿರ ವನ್ನು ಕಟ್ಟುವ ಮೂಲಕ ಸಾಗರ ಪ್ರಾಂತ್ಯದ ಹತ್ತು ಹಲವು ರಂಗ ತಂಡಗಳಿಗೆ ಹಾಗೂ ಪರವೂರಿನ ಹವ್ಯಾಸಿ ರಂಗ ತಂಡಗಳಿಗೆ ಅನುಕೂಲವಾಗುವಂತೆ ಸುಸಜ್ಜಿತ ರಂಗಮಂದಿರವನ್ನು ಕಟ್ಟುವ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಈ ದಿಸೆಯಲ್ಲಿ ದೇಶದ ಪ್ರಮುಖ ರಂಗಕರ್ಮಿಗಳಲ್ಲಿ ಒಬ್ಬರಾದ ಶ್ರೀ ಪ್ರಸನ್ನ ಹಾಗೂ ನಾಡಿನ ಖ್ಯಾತ ಸಾಹಿತಿ ಶ್ರೀ ನಾ. ಡಿಸೋಜ ಅವರು ಸೇರಿದಂತೆ ಪ್ರತ್ಯೇಕವಾದ ಒಂದು ರಂಗಾಸಕ್ತರ ತಂಡವೇ ಈ ಯೋಜನೆಯ ಹಿಂದೆ ಕೆಲಸ ಮಾಡುತ್ತಿದೆ. ರಂಗಭೂಮಿಯ ಚಟುವಟಿಕೆ

ಕಾಳಜಿಗಳನ್ನು ಜೀವಂತವಾಗಿ ಇಟ್ಟುಕೊಂಡು "ಜನರತ್ತ ರಂಗಭೂಮಿಯತ್ತ" ಉದಯ ಕಲಾವಿದರು ದಾಪುಕಾಲು ಹಾಕುತ್ತಿದ್ದಾರೆ.

ತಂಡವು ಇದುವರೆಗೆ ಜೈಸಿದ ನಾಯಕ, ರಂಗ ಭಾರತ, ಮ್ಯಾಕ್‌ಬೆಥ್, ಶೋಕಚಕ್ರ, ನನಗ್ಯಾಕೋ ಡೌಟ್ ಮುಂತಾದ ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದೆ.



ನಾಟಕ: ಈಸಬೇಕು ಇದ್ದು ಜಯಿಸಬೇಕು, ನಿರ್ದೇಶನ: ಎನ್.ಆರ್.ಮಾಸೂರು

## ಕಲಾವಿದರ ವಿವರ


| | |
|---|---|
| ಡಾ॥ ಗುರುರಾವ್ ಬಾಪಟ್ | ಡಾ॥ ಟಿ.ಎಸ್.ರಾಘವೇಂದ್ರ |
| ಜಿ. ಹಾಲಪ್ಪ | ಎಂ.ಪಿ.ಲಕ್ಷ್ಮಿನಾರಾಯಣ |
| ಸಿ.ಟಿ.ಬ್ರಹ್ಮಚಾರ್ | ಸಿ.ಜಿ.ಶ್ರೀಧರ |
| ಪುಷ್ಪಾ ರಾಘವೇಂದ್ರ | ಮಂಜುನಾಥ ಚೇಡಿಕುಣಿ |
| ರವಿಶಂಕರ ಕೋಳಿವಾಡ | ಸುದರ್ಶನ ಕೋಳಿವಾಡ |
| ಜಿ.ಆರ್.ಪಂಡಿತ್ | ಎಲ್.ಟಿ.ಸರಸ್ವತಿ |
| ಕು॥ ದೀಪಿಕಾ | ಡಿ.ಎಂ.ರಾಜಕುಮಾರ್ |
| ಎಸ್.ವಿ.ಅನಿಲಕುಮಾರ | ಎಲ್.ಮೃತ್ಯುಂಜಯ |

## ವಿನೋಬಾ ಕಲಾವಿದರು (ರಿ.)

1963ರಲ್ಲಿ ವಿನೋಬಾ ಯುವಕ ಸಂಘವನ್ನು ಸ್ಥಾಪಿಸಲಾಯಿತು. ನಂತರ ರಂಗಭೂಮಿಯಲ್ಲಿ ತನ್ನದೇ ಛಾಪನ್ನು ಮೂಡಿಸಿದ್ದ "ವಿನೋಬ ಕಲಾವಿದರು" 1969ರಲ್ಲಿ ಸ್ಥಾಪನೆಗೊಂಡಿತು. 'ವೀಣಾ' ಎಂಬ ಕುಟುಂಬ ಯೋಜನೆಗಾಗಿ ಬರೆದ ಸಾಮಾಜಿಕ ನಾಟಕದ ಮೂಲಕ ತೆರೆಯ ಮೇಲೆ ವಿನೋಬ ಕಲಾವಿದರ ಪ್ರತಿಭೆ ಅರಳಲಾರಂಭವಾಯಿತು.

ಗಾಂಧಿ ಶತಾಬ್ಧಿ ಸಂದರ್ಭದಲ್ಲಿ ನಡೆದ ರಾಷ್ಟ್ರ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಈ ಕೃತಿಗೆ ತೃತೀಯ ಬಹುಮಾನ ಲಭ್ಯವಾಯಿತು. ಈ ನಾಟಕವನ್ನು ಎನ್.ಜಿ.ಹೋಂನಲ್ಲಿ ಪ್ರಥಮ ಪ್ರದರ್ಶನವಾಗಿ ಅಭಿನಯಿಸಲಾಯಿತು.

ನಂತರ ಸಾಗರ ಪುರಸಭಾ ಶತಮಾನೋತ್ಸವದ ಅಂಗವಾಗಿ ನಡೆದ ನಾಟಕ ಸ್ಪರ್ಧೆಯಲ್ಲಿ 'ಯಾರಾದರೇನಂತೆ' ಎಂಬ ಎರಡನೇ ನಾಟಕ ಪ್ರದರ್ಶನಗೊಂಡಿತು.



ನಾಟಕ: ಚಿರಂಜೀವಿ ಕಳ್ಳಭಟ್ಟ, ನಿರ್ದೇಶನ: ಯೋಗಾನರಸಿಂಹಮೂರ್ತಿ

ದೀಪಾವಳಿಯ ವಿಶೇಷಾಂಕವೊಂದರಲ್ಲಿ ಪ್ರಕಟವಾದ ನಾಟಕವನ್ನು ಅಭಿನಯಿಸಲಾಯಿತು. ವಿನೋಬ ಕಲಾವಿದರು (ರಿ.), ಸಾಗರ ಇವರು 1975ರಲ್ಲಿ ನಗರಸಭೆಯಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ನಡೆದ ನಾಟಕ ಸ್ಪರ್ಧೆಯಲ್ಲಿ 'ಕಲಿ ಕಂಠೀರವ' ನಾಟಕಕ್ಕೆ ಬಹುಮಾನ, ವಿದ್ಯಾಸಂಘ (ರಿ.), ಹೊಸನಗರ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ 'ಮಂಗಳಾ' ನಾಟಕಕ್ಕೆ ಪ್ರಥಮ ಬಹುಮಾನ, 'ತಾನೊಂದು ನೆನೆದರೆ' ನಾಟಕಕ್ಕೆ ಪ್ರಥಮ ಬಹುಮಾನ, ಮಾವಿನಕುಳಿ ಚನ್ನಕೇಶವ ಭಟ್ಟರ ಸ್ಮಾರಕ ನಿರಂತರ ಪಾರಿತೋಷಕ, 1975ರಲ್ಲಿ ಸಾಗರದ ಶ್ರೀ ಮಾರಿಕಾಂಬ ಜಾತ್ರಾ ಸಮಿತಿಯ ಏರ್ಪಡಿಸಿದ ಅಖಿಲ ಕರ್ನಾಟಕ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದರು.

ನಂತರ 'ಬಲಿದಾನ', 'ಮಂಗಳ', 'ತ್ಯಾಗಿ', 'ಗುಂಡು ಬಳಗ', 'ತಾನೊಂದು ನೆನೆದರೆ', 'ಪಾಪ ಕಳೆದಾತ್ಮ' (ಜಾನಪದ ನಾಟಕ), 'ಮರಳಿ ಮುತ್ತೈದೆ', 'ಶುದ್ಧ ಸೋಂಬೇರಿ', 'ಪ್ರಾರಬ್ಧಕರ್ಮ', 'ದಾರಿ ಯಾವುದಯ್ಯ ಮುಂದೆ', 'ತಾಯಿ ಕರುಳು', 'ಅತ್ತಿಗೆ', 'ಮೀನಿನ ಹೆಜ್ಜೆ', 'ಚಿರಂಜೀವಿ' 'ಕಳ್ಳಭಟ್ಟಿ', 'ಜ್ವಾಲೆ', 'ಕಲಿ ಕಂಠೀರವ', 'ದೇವರ ಗೊಂಬೆ', ಶ್ರೀರಂಗರ 'ಹರಿಜನ್ವಾರ', 'ಪಂಚಭೂತ' ಇನ್ನೂ ಮುಂತಾದ ಸಾಮಾಜಿಕ ನಾಟಕಗಳನ್ನು ವಿನೋಬ ಕಲಾವಿದರುಅಭಿನಯಿಸಿದ್ದಾರೆ. ಕೆ.ಗುಂಡಣ್ಣ ವಿರಚಿತ 'ಶಂಖವಾದ್ಯ' ನಾಟಕವನ್ನು ಸಂಘದ ಸಹಾಯಾರ್ಥ 1974ರಲ್ಲಿ ಅಭಿನಯಿಸಲಾಗಿತ್ತು.

ಲೇಖಕ ಎಸ್.ಜಿ.ಶಿವಶಂಕರ್ ರಚಿಸಿದ್ದ 'ಬೀಳ್ಕೊಡುಗೆ' ನಾಟಕವನ್ನು ಪ್ರಥಮವಾಗಿ ರಂಗದ ಮೇಲೆ ತಂದವರೂ ಸಹ ವಿನೋಬ ಕಲಾವಿದರೇ ದಿನಾಂಕ 10-01-1982 ರಂದು ಸಾಗರದ ಪುರಸಭಾ ಬಯಲು ರಂಗಮಂಟಪದಲ್ಲಿ ಈ ನಾಟಕ ಅಭಿನಯಿಸಲ್ಪಟ್ಟಿತು.

## ಕಲಾವಿದರ ವಿವರ

| | | |
|---|---|---|
| ಸೋಮಸುಂದರ್ | ಅರುಣ್‌ಕುಮಾರ್ ಕೆ. | ಹೆಚ್.ಎಂ.ವೆಂಕಟೇಶ್ |
| ಭಾಸ್ಕರ್ ಕೆ.ಕುಂದರ್ | ಎಸ್.ಬಸವರಾಜ್ | ಎ.ಶಾಂತರಾಮ |
| ಗಣಪತಿ | ಹೆಚ್.ಕುಮಾರ್ | ಎಂ.ಸುಂದರ್‌ಭಟ್ |
| ಎಸ್.ಬಿ.ರಘುನಾಥ್ | ಶ್ರೀನಿವಾಸಮೂರ್ತಿ ಬಿ. | ಸದಾನಂದ ಪೈ |
| ಬಿ.ಪಿ.ಅನಂತ | ಅನ್ನಪೂರ್ಣ ಸಾಗರ್ | ಜಿ.ಹೆಚ್.ಉಮೇಶ್ |
| ಎನ್.ನರಸಿಂಹರೆಡ್ಡಿ | ಕೆ.ಸುಭಾಷ್ | ಹೆಚ್.ಸತೀಶ |
| ರಮೇಶ್ | ಲಕ್ಷ್ಮೀನಾರಾಯಣ | ಅಶೋಕ್‌ಕುಮಾರ್ |
| ಎಸ್.ಪಿ.ಬೀರಪ್ಪ | ದತ್ತಾತ್ರೇಯ ಶೇಟ್ | ಎಸ್.ಬಿ.ಗುರುರಾಜ |
| ಅನುಸೂಯ | ಹೇಮಾ ಬಿ.ಆಚಾರ್ಯ | ರೋಹಿಣಿ ಬಿ.ಆಚಾರ್ಯ |
| ಮಂಗಳಾ ಅರ್. | ಉಷಾ ಆರ್. | ಸತ್ಯನಾರಾಯಣ ಆರ್. |
| ಮಾಧವಿ ಆರ್. | ಪ್ರಭಾವತಿ ಎಸ್. | ಕೆ.ಸರಸ್ವತಿ |
| ಆರ್.ನಾಗರತ್ನ | ಡಿ.ಅರವಿಂದಕುಮಾರ | ಹೆಚ್.ಕೆ.ರೆಡ್ಡಿ |
| ಛಾಯಾದೇವಿ | ಪಿ.ಸಯ್ಯದ್‌ಪೀರ್‌ಸಾಬ್ | ಅಮೃತ್‌ರಾಸ್ |
| ರಾಜು | ಅರುಣ್ ಸಾಗರ್ | ಕೆ.ಎಸ್.ಶ್ರೀಧರ ಗುಡಿಗಾರ್ |
| ಜಗದೀಶ್ ಗುಡಿಗಾರ್ | ಸುರೇಶ್ ಎಸ್.ಐ. | ಟಿ.ಡಿ.ದುರ್ಗಪ್ಪ |
| ಕೆ.ಬಾಷಾ | | |

## ವಿನೋಬಾ ಯುವತಿ ಮಂಡಳಿ

**ಸಂಪರ್ಕ: ಶ್ರೀಮತಿ ಜಿ.ಹೇಮಾವತಿ ಶಂಕರ್, ದೂ: 94801 37796**

2008ರಲ್ಲಿ ವಿನೋಬಾ ಯುವತಿ ಮಂಡಳಿ ಸ್ಥಾಪನೆಯಾಗಿದೆ. 'ಭೋಪಯ್ಯನ ಭೂತ', 'ಕೊರಳೊಂದು ಮೂರು ತಾಳಿ' ನಾಟಕಗಳನ್ನು ಅಭಿನಯಿಸಿದ್ದಾರೆ. ಮಹಿಳಾ ಸದಸ್ಯರ ನಾಟಕ ತಂಡ, ಸಾಗರ ನಗರದಲ್ಲಿ ಜಾತ್ರೆ, ರಥೋತ್ಸವ, ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮಗಳಲ್ಲಿ ಇವರು ನಾಟಕ ಅಭಿನಯಿಸಿದ್ದಾರೆ. ಸುಮಾರು 10 ಪ್ರದರ್ಶನ ನೀಡಿರುತ್ತಾರೆ. ನಾಟಕದ ಜೊತೆಗೆ ಹಾಡು ಜಾನಪದ ನೃತ್ಯ, ಕೋಲಾಟ, ರಂಗಗೀತೆ, ಲಾವಣಿ, ಏಕಪಾತ್ರಾಭಿನಯ, ಬೀಸೋಕಲ್ಲು ಪದ, ಸೋಬಾನೆ ಪದ ಮೊದಲಾದ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಯುವಜನ ಮೇಳಗಳಲ್ಲಿ ಭಾಗವಹಿಸಿ ಸಾಕಷ್ಟು ಬಹುಮಾನಗಳನ್ನು ಪಡೆದಿರುತ್ತಾರೆ.



ನಾಟಕ: ಭೂಪಯ್ಯನ ಭೂತ, ನಿರ್ದೇಶನ: ಟರ್ನರ್ ರಾಜಣ್ಣ

### ಕಲಾವಿದರ ವಿವರ

ಚಂದ್ರಮ್ಮ, ಆಶಾ, ಜಿ.ಹೇಮಾವತಿ, ರೇಣುಕಾ, ಶಾಲಿನಿ, ಪೂಜಾ ಡಿ., ವಿನುತಾ, ಲಲಿತಾ, ಶರಾವತಿ ವೈ., ಶ್ರೀದೇವಿ ನಗರ್.

## ಭೂಮಿಕಾ ಕಲಾವಿದರು

**ಸಂಪರ್ಕ: ಬಸವರಾಜ್, ದೂ: 87682 88342**

ತಂಡವು 1983ರಲ್ಲಿ ಸ್ಥಾಪನೆಗೊಂಡು ನಿರಂತರವಾಗಿ ರಂಗಚಟುವಟಿಕೆಗಳನ್ನು ನಡೆಸಿಕೊಂಡು ಬಂದಿರುತ್ತದೆ. ಸಾಗರದಲ್ಲಿ ನಾಟಕ ಪ್ರದರ್ಶನಗಳನ್ನು ನೀಡಿದ್ದಲ್ಲದೇ ಇತರ ಸ್ಥಳಗಳಲ್ಲೂ ಪ್ರದರ್ಶನವನ್ನು ನೀಡಿರುತ್ತದೆ. ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಪಡೆದ ಹೆಮ್ಮೆ ತಂಡಕ್ಕಿದೆ.



ನಾಟಕ: ಸಮಯಕ್ಕೊಂದು ಸುಳ್ಳು. ನಿರ್ದೇಶನ: ಬಸವರಾಜ್

### ತಂಡವು ಪ್ರದರ್ಶಿಸಿದ ನಾಟಕಗಳು

ಚಿರಂಜೀವಿ ಕಳ್ಳಭಟ್ಟ, ಮರಳಿ ಮುತ್ತೈದೆ, ಮೀನಿನ ಹೆಜ್ಜೆ, ಜಾಣ ಜಾರಿಬಿದ್ದ, ಸಮಾಜಕ್ಕೆ ಸವಾಲ್ ಸಿಂಧೂರ ಲಕ್ಷ್ಮಣ, ಸಮಯಕ್ಕೊಂದು ಸುಳ್ಳು ಇನ್ನೂ ಹಲವಾರು ನಾಟಕಗಳನ್ನು ಪ್ರದರ್ಶಿಸಿರುತ್ತದೆ.

### ಕಲಾವಿದರ ವಿವರ

ಬಸವರಾಜ್ (ಟರ್ನರ್ ರಾಜಣ್ಣ), ರಜಾಕ್ ಸಾಬ್, ಯುವರಾಜ್ ಕೆ., ವಿ.ಶಂಕರ್, ಎನ್.ಶ್ರೀಧರ್, ನಾರಾಯಣ ಬಿ.ಶೇಟ್, ಆರ್.ಎನ್.ನಾಗರಾಜ್, ರುದ್ರಪ್ಪ, ವೈ.ಕೆ.ಸಾಯಿಬಾಬಾ, ರಜನಿಕಾಂತ್, ವೀರೇಂದ್ರಶಾನಭಾಗ್.

## ಸ್ಪಂದನ – ಒಂದು ಪರಿಚಯ

ಸಂಪರ್ಕ: ಶ್ರೀಮತಿ ಪ್ರತಿಭಾ ರಾಘವೇಂದ್ರ, ದೂ: 99451 78792

ಕಲೆ, ಸಾಹಿತ್ಯ, ಸಂಸ್ಕೃತಿಗಳ ಬೀಡಾದ, ಹೋರಾಟ, ಚಳುವಳಿಗಳಿಗೆ ನಾಯಕತ್ವ ನೀಡಿದ ಸಾಗರದಲ್ಲಿ ರಂಗ ಚಟುವಟಿಕೆಗಳ ಮೂಲಕ 'ಸ್ಪಂದನ' ಸಾಂಸ್ಕೃತಿಕ ಒಡನಾಡಿಯಾಗಿ ಜನಮಾನಸದಲ್ಲಿ ಗುರುತಿಸಿಕೊಂಡಿದೆ. ಒಂದು ತಂಡವಾಗಿ ಮುಂದುವರೆಯಬೇಕು ಎಂಬ ಯಾವ ನಿರ್ದಿಷ್ಟ ಆಲೋಚನೆಯೂ ಇಲ್ಲದೆ ಅಸ್ತಿತ್ವ ಪಡೆದದ್ದು ಸ್ಪಂದನ. 2004ರ ಮೇ ತಿಂಗಳಲ್ಲಿ ಸಾಗರದ ಸ್ನೇಹ ಸಾಗರ ಸ್ವ ಸಹಾಯ ಮಂಡಳಿ ಆಯೋಜಿಸಿದ್ದ ಮಹಿಳಾ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಬೇಕೆಂಬ ಆಯೋಜಕರ ಒತ್ತಾಸೆ ಮತ್ತು ಸಾಗರದ ಹಿರಿಯ ರಂಗಕರ್ಮಿಗಳ ಹಾರೈಕೆಯೊಂದಿಗೆ ಅಸ್ತಿತ್ವಕ್ಕೆ ಬಂದ 'ಸ್ಪಂದನ' ಈ 6 ವರ್ಷಗಳಲ್ಲಿ ಒಟ್ಟು 15 ನಾಟಕಗಳ 46 ಪ್ರಯೋಗಗಳನ್ನು ನಾಡಿನ ಎಲ್ಲೆಡೆ ಪ್ರದರ್ಶಿಸಿ ತನ್ನ ರಂಗಾಸಕ್ತಿಯನ್ನು, ಬದ್ಧತೆಯನ್ನು ಪ್ರಕಟಿಸಿದೆ. ಸಮಾಜದ ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಲೇ ರಂಗಭೂಮಿಯಲ್ಲಿ ತೊಡಗಿಸಿಕೊಂಡಿರುವ ಈ ರಂಗಾಸಕ್ತರ ವೇದಿಕೆ ರಾಜ್ಯ ಮತ್ತು ರಾಷ್ಟ್ರಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪುರಸ್ಕಾರಗಳನ್ನು ತನ್ನದಾಗಿಸಿಕೊಂಡಿದೆ. ನಾಡಿನ ಖ್ಯಾತ ನಾಟಕಕಾರರು, ಸಾಹಿತಿಗಳ ಕೃತಿಗಳನ್ನು ರಂಗದ ಮೇಲೆ ತರಲಾಗಿದೆ.

ಇತ್ತೀಚಿನ ದಿನಗಳಲ್ಲಿ ಮಕ್ಕಳ ರಂಗಭೂಮಿಯ ಹೊಸ ಸಾಧ್ಯತೆಗಳತ್ತ ಸ್ಪಂದನ ಆಸಕ್ತಿ ವಹಿಸಿದೆ. ಮಕ್ಕಳ ರಂಗಭೂಮಿಯ ಮೂಲಕ ಮಕ್ಕಳ ಮನೋವಿಕಾಸದತ್ತ ಗಮನ ಕೇಂದ್ರೀಕರಿಸಿ ಮತ್ತಷ್ಟು ಕ್ರಿಯಾಶೀಲವಾಗುವ ಪ್ರಯತ್ನದಲ್ಲಿದೆ.

ಆಧುನಿಕ ಸಮಾಜ ವ್ಯವಸ್ಥೆ ಈ ನೆಲದ ಮಕ್ಕಳನ್ನು ಪರಕೀಯಗಳಿಸುತ್ತಿರುವ ಸಂದರ್ಭದಲ್ಲಿ ರಂಗಭೂಮಿ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸುವ ಮೂಲಕ ಮಕ್ಕಳ ಮನೋವಿಕಾಸಕ್ಕೆ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳುವುದು ಅಗತ್ಯವೆಂದು ಭಾವಿಸಿರುವ ಸ್ಪಂದನ ಅದಕ್ಕೆ ಪೂರಕವಾದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಬಾಲ್ಯ ಪ್ರತಿಯೊಂದು ಮಗುವಿನ ಅಮೂಲ್ಯ ಸಮಯ. ಈ ಸಂದರ್ಭದಲ್ಲಿ ಮಗುವಿನ ಮನೋವಿಕಾಸಕ್ಕೆ ಸುತ್ತಲಿನ ಪರಿಸರ, ಸಾಮೂಹಿಕ ಒಡನಾಟ ಪ್ರಧಾನ ಪಾತ್ರ ವಹಿಸುತ್ತದೆ. ಅಂತಹ ಒಡನಾಟಕ್ಕೆ ವೇದಿಕೆ ಒದಗಿಸಲು ಮಕ್ಕಳನ್ನು ರಂಗ ಚಟುವಟಿಕೆಯಲ್ಲಿ ತೊಡಗಿಸುವುದು, ಮಕ್ಕಳಿಗೆ ರಂಗ ಶಿಬಿರಗಳನ್ನು

ಏರ್ಪಡಿಸುವುದು ಸ್ಪಂದನ ಹಮ್ಮಿಕೊಂಡಿರುವ ಆದ್ಯತೆಯ ಕೆಲಸಗಳಾಗಿವೆ.

## 'ಸ್ಪಂದನ'ದ ಇದುವರೆಗಿನ ಸ್ವಂತ ಪ್ರಯೋಗಗಳು

ಸಮುದ್ರಕ್ಕೆ ಸವಾರರು, ನನ್ನ ದೇವರು, ಕುದುರೆ ಮೊಟ್ಟೆ, ಜಂಗಮದ ಬದುಕು, ಸೂರ್ಯನ ಕುದುರೆ, ಸಾಹೀರಾ, ಋಣ, ಅಲೆಗಳಲ್ಲಿ ರಾಜಹಂಸಗಳು, ಸಂಸಾರದಲ್ಲಿ ಸನಿದಪ, ಮೊಲದ ಜಾಣ್ಮೆ, ಪ್ರೀತಿಯ ಕಾಳು, ನಾನು ಗಾಂಧಿಯಾಗ್ತೇನೆ, ಕಿಚನ್ ಪ್ಯಾರಡೈಸ್. ಒಬ್ಬನೇ ಚಂದಿರ, ಮುದುಕನು ಮತ್ತು ಹುಲಿಯು, ಗೋವಿನ ಹಾಡು, ಪೋಲಿಕಿಟ್ಟಿ, ಕೊಂದವರ್‍ಯಾರು, ಕಾಬೂಲಿವಾಲ, ಕರಿಭಂಟ, ಟ್ಯಾಗೊರರ ಹಾಸ್ಯ ಕೌತುಕ, ಹಕ್ಕಿಗೊಂದು ಗೂಡು ಕೊಡಿ, ಆನೆಬಂತೊಂದಾನೆ.



ನಾಟಕ: ಮುದುಕನೂ ಮತ್ತು ಹುಲಿಯೂ, ನಿರ್ದೇಶನ: ಪ್ರತಿಭಾ ರಾಘವೇಂದ್ರ

### ಕಲಾವಿದರ ವಿವರ

| | |
|---|---|
| ಪ್ರತಿಭಾ ರಾಘವೇಂದ್ರ | ಸತೀಶ್ ಶೆಣೈ |
| ನಾಗೇಂದ್ರ ಕುಮಟ | ರಿಯಾಜ್ |
| ಸಾವಿತ್ರಿ ಮೂರ್ತಿ | ಶಾಂತಾ ಭಾಸ್ಕರ್ |
| ಗುರುಮೂರ್ತಿ ವರದಾಮೂಲ | ಮಟ್ಟು ಸಾಗರ್ |
| ನೂತನ್ ಹಂದೀಗೋಡು | ಜಿ. ಪಂಡಿತ್ |
| ಅರುಣ್ | ನವೀನ್ |
| ಮಂಜುನಾಥ್ | ನಾಗವೇಣಿ |
| ಸವಿತ | ರಾಧಾಕೃಷ್ಣ |
| ನವನೀತ | ರಾಘವೇಂದ್ರ |

## ಎಸ್.ವಿ.ಪಿ. ಕಲಾ ಬಳಗ – ಜೋಗ್‌ಫಾಲ್ಸ್

**ಸಂಪರ್ಕ: ಎಸ್.ವೆಂಕಟೇಶ್, ದೂ: 94482 00050**

ಕರ್ನಾಟಕದ ಸಾಹಿತ್ಯ–ಸಂಸ್ಕೃತಿ–ಕಲೆಗಳ ಬಗ್ಗೆ ನೈಜ ಕಳಕಳಿಯಿದ್ದು ಅನೇಕ ಹಿರಿಯ ಅಧಿಕಾರಿಗಳು, ಕಾರ್ಮಿಕ ಬಂಧುಗಳೂ ಸೇರಿ ಈ ಸಂಸ್ಥೆಯನ್ನು 1964ನೇ ಇಸವಿಯಲ್ಲಿ ಸ್ಥಾಪಿಸಿದರು. ಅಂದಿನಿಂದ ಇಂದಿನವರೆವಿಗೂ ಕಲಾ ಬಳಗ ಅನೇಕ ಏಳು–ಬೀಳುಗಳನ್ನು ಕಂಡಿದೆಯಾದರೂ, ತನ್ನದೇ ಆದ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಬಂದು, ಹವ್ಯಾಸಿ ರಂಗ ಸಂಸ್ಥೆಗಳಲ್ಲಿ ಒಂದು ವಿಶಿಷ್ಟವಾದ ಸ್ಥಾನವನ್ನು ಗಳಿಸಿದೆ. ಕಲೆಗೆ ತನ್ನದೇ ಆದ ರೀತಿಯಲ್ಲಿ ಮಹತ್ತರ ಕೊಡುಗೆಯನ್ನು ನೀಡಿದೆ ಎಂಬುದು ಕೇವಲ ಉತ್ಪ್ರೇಕ್ಷೆಯ ಮಾತಲ್ಲ.

ಈ ಸಂಸ್ಥೆಯ ಸ್ಥಾಪನೆಯ ಹಿನ್ನೆಲೆಯಲ್ಲಿ ಅನೇಕರ ಬೃಹತ್ ಕೊಡುಗೆಯಿದೆ. ಆ ಸಮಯದಲ್ಲಿ ಸಂಸ್ಥೆಯನ್ನು ಕಟ್ಟಿ, ನಿರ್ದೇಶಿಸಿದ ಕೆಲವು ಹಿರಿಯರನ್ನು ನೆನೆಯುವುದು ಉಚಿತವೆನಿಸು ತ್ತದೆ. ಸರ್ವಶ್ರೀ ಬಿ.ಮುಕುಂದರಾವ್, ಹೆಚ್.ಹನುಮಂತಪ್ಪ, ಸದಾನಂದರಾವ್, ಪಾರ್ಶ್ವಶೀಶ್, ಕೆ.ಆರ್.ಕೃಷ್ಣರಾವ್, ಬಿ.ಸಿ.ಆಳ್ವ, ಸುಕುಮಾರನ್ ಮುಂತಾದವರು.

1991ರಲ್ಲಿ ಕಲಾ ಬಳಗವು ಶಂತರ ಕೆ.ಪಿ.ಸಿ. ನಾಟಕ ಸ್ಪರ್ಧೆಯನ್ನು ಹುಟ್ಟು ಹಾಕಿ ವಿವಿಧ ಯೋಜನಾ ಪ್ರದೇಶದಿಂದ ನಾಟಕಗಳನ್ನು ಆಹ್ವಾನಿಸಿ, ಈ ಸ್ಪರ್ಧೆಯನ್ನು ಯಶಸ್ವಿಯಾಗಿ ನಡೆಸಿತಲ್ಲದೆ ಈ ನಾಟಕ ಸ್ಪರ್ಧೆಯನ್ನು ಮುಂದುವರೆಸಿಕೊಂಡು ಹೋಗಬೇಕೆಂಬ ಸದುದ್ದೇಶದಿಂದ ಸರ್ವ ಪ್ರಯತ್ನ ನಡೆಸಿ ಕೆ.ಪಿ.ಸಿ.ಯ ವ್ಯವಸ್ಥಾಪಕರಲ್ಲಿ ಮನವಿ ಸಲ್ಲಿಸಿ, ಈ ನಾಟಕ ಸ್ಪರ್ಧೆಯು ಈ ಎರಡು ವರ್ಷಗಳಿಂದ ಸತತವಾಗಿ ನಡೆಯುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ. ಕಳೆದ ವರ್ಷ ಈ ನಾಟಕ ಸ್ಪರ್ಧೆಯಲ್ಲಿ 'ಸುಯೋಧನ' ನಾಟಕವನ್ನು ಪ್ರದರ್ಶಿಸಿ ಬಹುಮಾನ ಪಡೆದಿರುತ್ತದೆ. ಇದಾದ ನಂತರ 'ಶ್ರೀ ಕೃಷ್ಣಸಂಧಾನ' ಎಂಬ ಹಾಸ್ಯ ನಾಟಕವನ್ನು ಕೈಗೆತ್ತಿಕೊಂಡು ಜೋಗ, ಲಿಂಗನಮಕ್ಕಿ, ಕಾರ್ಗಲ್ ಹಾಗೂ ಭದ್ರಾ ಯೋಜನಾ ಪ್ರದೇಶಗಳಲ್ಲಿ ಪ್ರದರ್ಶಿಸಿ ಅತ್ಯಂತ ಜನಮೆಚ್ಚಿಕೆಗಳಿಸುವಲ್ಲಿ ಯಶಸ್ವಿಯಾಗಿದೆ.

ಕಳೆದ ತಿಂಗಳು ಶಕ್ತಿನಗರ (ರಾಯಚೂರು)ದಲ್ಲಿ ನಡೆದ ಅಂತರ ಕೆ.ಪಿ.ಸಿ. ನಾಟಕ ಸ್ಪರ್ಧೆಯಲ್ಲಿ 'ಬಸ್ಸನ್‌ಚೆಲ್ವಿ' ನಾಟಕಕ್ಕೆ ಪ್ರಥಮ ಬಹುಮಾನ ಬಂದಿದ್ದು ಎಸ್.ವಿ.ಸಿ. ಕಲಾ ಬಳಗದ ಹಿರಿಮೆಯನ್ನು ಇನ್ನೂ ಹೆಚ್ಚಿಸಿದಂತಾಗಿದೆ. ಈ ನಾಟಕವನ್ನು ನಿರ್ದೇಶಿಸಿದ ಎಸ್. ಎ. ವೀರಾಚಾರಿ ಇವರಿಗೆ ಉತ್ತಮ ನಿರ್ದೇಶನಕ್ಕಾಗಿ ವೈಯುಕ್ತಿಕ ಪ್ರಶಸ್ತಿಯು, ಶ್ರೀ ಎಸ್. ಪಿ. ಕೃಷ್ಣಮೂರ್ತಿ ಇವರಿಗೆ ಉತ್ತಮ ಪೋಷಕ ನಟ ಪ್ರಥಮ ಸ್ಥಾನವನ್ನು ಗಳಿಸಿರುತ್ತಾರೆಂದು ತಿಳಿಸಲು ಹರ್ಷಿಸುತ್ತೇನೆ.



**ಎಸ್.ವಿ.ಪಿ. ಕಲಾವಿದರ ವಿವರ**

| | |
|---|---|
| ಎಸ್. ವೆಂಕಟೇಶ್ | ಬಿ. ತಿಪ್ಪೇಸ್ವಾಮಿ |
| ಪೂರ್ಣಿಮ ಹೆಚ್. ವಿ. | ವಿಜಯಕುಮಾರ್ |
| ಸತ್ಯನ್ ಎನ್. | ಥಾಮಸ್ ಫರ್ನಾಂಡೀಸ್ |
| ಡಾ|| ಎಸ್. ಜಗದೀಶ್ | ನಿಂಗರಾಜು ಆರ್. |
| ನರಸಿಂಹಯ್ಯ | ರಾಮು / ಶೆಟ್ಟಿ |
| ಎಂ.ಎಸ್.ಸತೀಶ್ | ಜಯಂತಿ ಇ. ಎಂ. |
| ಬಾಲಚಂದ್ರ ಬೆನ್ನೂರು | ಗುತ್ಯಪ್ಪ ಎನ್. |
| ಕಾಳಪ್ಪ | ಡಿ.ಪಿ.ನಟರಾಜ್ |
| ಎಸ್.ಪಿ.ಕೃಷ್ಣಮೂರ್ತಿ | ಮರಿಲಿಂಗಯ್ಯ |
| ಶಾಂತಕುಮಾರ್ ಹೆಚ್. ಎಸ್. | ಭರತ್ ಬಿ. |
| ಕೆ.ಸಿ.ಕೃಷ್ಣಕುಮಾರ್ | ಎ.ರಾಡ್ರಿಗಸ್ |
| ಬಿ.ಶೈಲಜಾಕುಮಾರಿ | ನರೇಂದ್ರ ನಾಯಕ್ |

| | | |
|---|---|---|
| ಸಿದ್ದರಾಜು | ಹೆಚ್. ಕೆ. ಪರಮಾತ್ಮ | ಪಿ.ಎಸ್.ಭಾರತಿ |
| ಕೆ.ಎಸ್.ನಾಗಪ್ಪ | ಮುರಳೀಧರ್ | ಕೃಷ್ಣ |
| ಎಸ್.ಉಮೇಶ್ | ಉದಯ್ ಎಂ. ನಾಯಕ್ | ಕೆ.ಟಿ.ಮಂಜುನಾಥ್ |

## ಮಿತ್ರ ಮಂಡಳಿ – ಜೋಗ್‌ಫಾಲ್ಸ್

ಮಲೆನಾಡಿನ ಮಡಿಲಲ್ಲಿರುವ ಜೋಗ್ ಕಾಲೋನಿಯ ಅಂದಿನ 3000ಕ್ಕೂ ಹೆಚ್ಚು ಜನಸಂಖ್ಯೆಗೆ ಶುದ್ಧ ಮನರಂಜನೆ ನೀಡುವ ಕಲಾಭಿವೃದ್ಧಿಗೆ ಸಂಗೀತ, ನೃತ್ಯ, ನಾಟಕ ಇತ್ಯಾದಿ ಲಲಿತ ಕಲೆಗಳ ಅಭಿವೃದ್ಧಿಗೆ ಕೆಲಸ ಮಾಡುವ ಮತ್ತು ಕಲಾ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವ ಸದುದ್ದೇಶದಿಂದ ಮಿತ್ರ ಮಂಡಳಿಯ ಸ್ಥಾಪನೆ 1961 ರಲ್ಲಿ ಆಯಿತು. ಕ.ವಿ. ಮಂಡಳಿ ಪ್ರೌಢಶಾಲೆಯ ಅಂದಿನ ಮುಖ್ಯೋಪಾಧ್ಯಾಯರಾಗಿದ್ದ ದಿ॥ ಹೆಚ್. ನರಸಿಂಹ ಮೂರ್ತಿಯವರು, ಸದಸ್ಯರ ನಿಸ್ವಾರ್ಥ ದುಡಿಮೆ, ಚಟುವಟಿಕೆಗಳಲ್ಲಿ ಕಾಲೋನಿಯ ಜನತೆಯ ಪೂರ್ಣ ಪ್ರೋತ್ಸಾಹ ಮತ್ತು ಭಾಗವಹಿಸುವಿಕೆಗಳಿಂದ ಹಾಗೂ ಕರ್ನಾಟಕ ವಿದ್ಯುತ್ ಮಂಡಳಿಯವರ ನಿರಂತರ ಸಹಾಯದಿಂದಾಗಿ ಈ 41 ವರ್ಷಗಳಲ್ಲಿ ಮಿತ್ರ ಮಂಡಳಿಯು ತನ್ನ ಸ್ಥಾಪನೆಯ ಉದ್ದೇಶಗಳನ್ನು ಈಡೇರಿಸುವಲ್ಲಿ ಯಶಸ್ವಿಯಾಗಿ ಒಂದು ಶಕ್ತಿಯಾಗಿ ಮತ್ತು ಇಲ್ಲಿನ ಎಲ್ಲಾ ಶಾಲಾ, ಕಾಲೇಜುಗಳ, ಸಾರ್ವಜನಿಕ ಸಂಘ ಸಂಸ್ಥೆಗಳ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಕೇಂದ್ರವಾಗಿದೆ ಎಂದರೆ ತಪ್ಪಾಗಲಾರದು.

ಹವ್ಯಾಸಿ ನಾಟಕಗಳಿಂದ ಪ್ರಾರಂಭಿತವಾದ ಸಂಸ್ಥೆ ನಾಟಕ ಕಲೆಗೆ ಆದ್ಯತೆ ನೀಡಿದೆ. ಪ್ರತಿವರ್ಷ ಹಲವಾರು ನಾಟಕಗಳನ್ನು ತನ್ನ ಸದಸ್ಯರಿಂದ ಆಡಿಸುತ್ತಿದ್ದ ಸಂಸ್ಥೆ 1968ರಲ್ಲಿ ಹವ್ಯಾಸಿ ತಂಡಗಳಿಗಾಗಿ ನಾಟಕ ಸ್ಪರ್ಧೆಯನ್ನು ಮೊದಲಬಾರಿಗೆ ಏರ್ಪಡಿಸಿತು. ನಂತರ ನಿರಂತರವಾಗಿ 33 ವರ್ಷಗಳಿಂದ ರಾಜ್ಯಮಟ್ಟದ ನಾಟಕ ಸ್ಪರ್ಧೆಗಳನ್ನು ನಡೆಸಿಕೊಂಡು ಬಂದಿದೆ. ರಾಜ್ಯದ ವಿವಿಧ ಭಾಗಗಳ ಪ್ರತಿಷ್ಠಿತ ಸಂಘ–ಸಂಸ್ಥೆಗಳು ಹಾಗೂ ಗ್ರಾಮಾಂತರ ಪ್ರದೇಶಗಳ ರಂಗತಂಡಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿ ಇದುವರೆಗೂ 750ಕ್ಕೂ ಹೆಚ್ಚು ನಾಟಕಗಳು ಪ್ರದರ್ಶಿತವಾಗಿವೆ. ಭಾಗವಹಿಸುವ ಎಲ್ಲಾ ಕಲಾವಿದರಿಗೆ ಉಚಿತ, ಊಟ, ವಸತಿ ಏರ್ಪಡಿಸುವುದಲ್ಲದೆ ನಿಗದಿತ ಪ್ರಯಾಣ ಭತ್ಯೆಯನ್ನೂ ಕೊಡಲಾಗುತ್ತಿದೆ.

ರಾಷ್ಟ್ರೀಯ ಹಬ್ಬಗಳು, ಶಿಕ್ಷಕರ ದಿನಾಚರಣೆ, ಕನ್ನಡ ರಾಜ್ಯೋತ್ಸವಗಳ ಸಂದರ್ಭಗಳಲ್ಲಿ ಸಂಗೀತ, ನೃತ್ಯ, ನಾಟಕ, ಚಿತ್ರಕಲೆ, ಜಾನಪದ ಕಲೆಗಳ ಪ್ರದರ್ಶನಗಳಲ್ಲದೆ ನಾಡಿನ ವಿವಿಧ ಪ್ರಕಾರಗಳ ಲಲಿತ ಕಲೆಗಳ, ಸಾಹಿತ್ಯ ರಂಗಗಳಲ್ಲಿ ಸೇವೆ ಸಲ್ಲಿಸಿರುವ, ಸಲ್ಲಿಸುತ್ತಿರುವ ಹಿರಿಯರಿಗೆ ಸನ್ಮಾನ ಮಾಡಿ ಗೌರವಿಸುವ ಸಂಪ್ರದಾಯವನ್ನು ಮಿತ್ರ ಮಂಡಳಿ ಬೆಳೆಸಿಕೊಂಡು ಬಂದಿದೆ. ಮಿತ್ರ ಮಂಡಳಿಯ ಕಲಾವಿದರು ಇದುವರೆಗೂ 400ಕ್ಕೂ

ನಾಟಕಗಳನ್ನು ಸಾಮಾಜಿಕ, ಚಾರಿತ್ರಿಕ, ಜಾನಪದ, ಅಸಂಗತ ಇತ್ಯಾದಿ ಪ್ರದರ್ಶಿಸಿರುವುದಲ್ಲದೇ ವಿವಿಧ ಕಡೆಗಳಲ್ಲಿ ನಡೆದ ಸ್ಪರ್ಧೆಗಳಲ್ಲಿಯೂ ಭಾಗವಹಿಸಿ ಅನೇಕ ಬಹುಮಾನಗಳನ್ನು ಗಳಿಸಿದ್ದಾರೆ. ಅಲ್ಲದೆ ಮಿತ್ರ ಮಂಡಳಿಯು ಶಾಲಾ ಮಕ್ಕಳಿಗಾಗಿ ರಂಗ ತರಬೇತಿಯ ಕಾರ್ಯಗಳನ್ನು ನಡೆಸುವುದಲ್ಲದೆ ಮಕ್ಕಳ ನಾಟಕಗಳ ನಿರ್ಮಾಣ, ಪ್ರದರ್ಶನಗಳನ್ನು ಕೈಗೊಂಡು ರಾಜ್ಯಮಟ್ಟದ ಮಕ್ಕಳ ನಾಟಕ ಸ್ಪರ್ಧೆಯನ್ನು ನಡೆಸಿದೆ. ಎಲ್ಲಾ ರಂಗಗಳಲ್ಲಿ ಸೇವೆ ಸಲ್ಲಿಸಿದ ಅನೇಕ ಕಲಾವಿದರನ್ನು ಗೌರವಿಸುವುದು ಸಂಸ್ಥೆಗೆ ಹೆಗ್ಗಳಿಕೆಯಾಗಿದೆ.

## ಕವಿ ಕಾವ್ಯ ಟ್ರಸ್ಟ್, ಹೆಗ್ಗೋಡು

**ಸಂಪರ್ಕ: ಭಾಗೀರಥಿ ಕೆ.ಬಿ., ದೂ: 08183–265602**

ಸಾಹಿತ್ಯ ಚಟುವಟಿಕೆಗಳ ಉದ್ದೇಶದಿಂದ 1992 ರಲ್ಲಿ ಕವಿ ಕಾವ್ಯ ಟ್ರಸ್ಟ್ ಜನ್ಮತಾಳಿತು. ನಾಟಕಕಾರ ಪ್ರಸನ್ನ ಇದರ ಮುಖ್ಯ ಟ್ರಸ್ಟಿ. ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದ 'ರುಜುವಾತು' ತ್ರೈಮಾಸಿಕ ಪತ್ರಿಕೆಯನ್ನು ಕವಿ ಕಾವ್ಯದಿಂದ ಪ್ರಕಟಿಸಲಾಗುತ್ತಿತ್ತು. ಯು.ಆರ್. ಅನಂತಮೂರ್ತಿ ಇದರ ಸಂಪಾದಕರಾಗಿದ್ದರು. ಜೊತೆಗೆ ಮೌಖಿಕ ಕಲಾ ಸಂಪ್ರದಾಯಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಗಮಕ, ಯಕ್ಷಗಾನ, ತಾಳಮದ್ದಲೆ ಮೊದಲಾದ ಕಲಾಪ್ರಕಾರಗಳಿಗೆ ವೇದಿಕೆಯನ್ನು ಒದಗಿಸಿಕೊಟ್ಟಿತು. ತೋಂಡಿ ಸಂಪ್ರದಾಯದ ಕುರಿತು ಬೃಹತ್ ವಿಚಾರ ಸಂಕಿರಣವೊಂದನ್ನು 1993 ರಲ್ಲಿ ಹೆಗ್ಗೋಡಿನಲ್ಲಿ ಆಯೋಜಿಸಿತ್ತು. ಶಿವಮೊಗ್ಗ ಜಿಲ್ಲೆಯ ಎಲ್ಲ ಅಂಗನವಾಡಿ ಕಾರ್ಯಕರ್ತೆಯರಿಗೆ ರಂಗಭೂಮಿಯ ಮೂಲಕ ಸಾಂಸ್ಕೃತಿಕ ತರಬೇತಿ ನೀಡುವ ಯೋಜನೆ ಯೊಂದನ್ನು ರೂಪಿಸಿ ಎರಡು ವರ್ಷಗಳ ಕಾಲ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿತು.

ಈ ಸಂದರ್ಭದಲ್ಲಿ ಅನೇಕ ರಂಗಭೂಮಿ ನಟರು, ಚಿತ್ರ ಕಲಾವಿದರು ಕಾರ್ಯಕರ್ತರಾಗಿ ಕೆಲಸ ಮಾಡಿದರು. ಅವರೆಲ್ಲರಿಗೆ ಸ್ಫೂರ್ತಿಯಾಗಿ, ಮಾರ್ಗದರ್ಶಕರಾಗಿ ಶ್ರೀ ಪ್ರಸನ್ನ ಇದ್ದರು. ಪ್ರಮೋದ್ ಶಿಗ್ಗಾಂವ್, ಭಾನುಮತಿ, ಸುನಂದ, ಉದಯ, ಉಮಾಮಹೇಶ್ವರ ಹೆಗಡೆ, ಗೌರಮ್ಮ ಹೊನ್ನೇಸರ, ಭಾಗೀರಥಿ ಕೆ.ಬಿ., ಮೋಹನ್, ಪ್ರಭಾಕರ ಸಾಂಶಿ, ಪೂರ್ಣಿಮಾ ಎಲ್.ಕೆ., ಈಶ್ವರ್ ನಾಯಕ್ ಹಸುವಂತೆ, ಲಕ್ಷ್ಮಿ ಹಸುವಂತೆ, ಎನ್.ಸಿ. ಗಂಗಾಧರ ಮತ್ತು ರಜನಿ (ಗರುಡ) ಅವರುಗಳು ಕಾರ್ಯಕರ್ತರಾಗಿ ಕೆಲಸ ಮಾಡಿದರು.

ಅಂಗನವಾಡಿ ಕಾರ್ಯಕರ್ತೆಯರ ತರಬೇತಿ ಯೋಜನೆಯಿಂದ ಗ್ರಾಮೀಣ ಮಹಿಳೆಯರ ಪ್ರತಿಭೆ, ಅಂತಃಸತ್ವಗಳು ಹೊರಹೊಮ್ಮಿದವು. ಅವರನ್ನು ಅಡುಗೆಮನೆಯ ಗೋಡೆಗಳಿಂದ ಹೊರತರುವ ಪ್ರಯೋಗವೊಂದು ಸಾಕಾರಗೊಂಡು ಚರಕ ಸಂಸ್ಥೆ ಜನ್ಮತಾಳಿತು. ಕೈಮಗ್ಗ ಮತ್ತು ಹೊಲಿಗೆಯಂತ್ರಗಳ ಮೂಲಕ ಗ್ರಾಮೀಣಾ ಮಹಿಳೆಯರನ್ನು ಸ್ವಾವಲಂಭಿಯಾಗಿಸುವ ಮೂಲಕ ಅವರ ಸಮಗ್ರ ವ್ಯಕ್ತಿತ್ವ ರೂಪುಗೊಳ್ಳಬೇಕೆಂಬ ಉದ್ದೇಶದಿಂದ ಕವಿಕಾವ್ಯ ಟ್ರಸ್ಟ್ 'ಚರಕ' ವನ್ನು ಒಂದು ಗ್ರಾಮೀಣ ಚಳುವಳಿಯಾಗಿ ಸ್ವೀಕರಿಸಿತು. ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ನೀಡಿದ ನಟರು,

ಕಲಾವಿದರುಗಳೇ ಇಲ್ಲಿಯೂ ಕಾರ್ಯಕರ್ತರಾಗಿ ದುಡಿದರು. ಚರಕದ ಮಹಿಳೆಯರು ಉತ್ಪಾದಿಸಿದ ಕೈಮಗ್ಗದ ಸಿದ್ಧಉಡುಪುಗಳನ್ನು ನಾಟಕೋತ್ಸವ, ವಿಚಾರ ಸಂಕಿರಣ, ಸಾಹಿತ್ಯ ಸಮ್ಮೇಳನದಂತಹ ಕಾರ್ಯಕ್ರಮಗಳಲ್ಲಿ ಹೊತ್ತೊಯ್ದು ಮಾರಾಟ ಮಾಡುವ ಮೂಲಕ ಹೆಗ್ಗೋಡಿನಲ್ಲಿ ಚರಕ ಸಂಸ್ಥೆ ನೆಲೆಗೊಳ್ಳಲು ಕಾರಣರಾದರು. ಕವಿ ಕಾವ್ಯದ ಅಂಗಸಂಸ್ಥೆಯಾಗಿದ್ದ 'ಚರಕ ಮಹಿಳಾ ಸಹಕಾರಿ ಸಂಘ'ವಾಗಿ ರೂಪುಗೊಂಡಿತು.

## ಚರಕ ಉತ್ಸವ:

ಚರಕ ಒಂದು ಮಹಿಳಾ ಸಂಘಟನೆಯಾಗಿ ನೆಲೆಯೂರಿ ಅದಕ್ಕೆ ಆರ್ಥಿಕ ಭದ್ರತೆಯೂ ದೊರೆತ ಮೇಲೆ ಅದು ಕೇವಲ ಕಾರ್ಖಾನೆಯಾಗದಂತೆ ಅದಕ್ಕೊಂದು ಸಾಂಸ್ಕೃತಿಕ ಆಯಾಮವನ್ನು ಒದಗಿಸುವ ನಟ್ಟಿನಲ್ಲಿ ಕವಿ ಕಾವ್ಯ ಟ್ರಸ್ಟ್ ಕಾರ್ಯನಿರ್ವಹಿಸತೊಡಗಿತು. ಪ್ರತಿವರ್ಷ ಜನವರಿಯಲ್ಲಿ 'ಚರಕ ಉತ್ಸವ' ಎಂಬ ಮೂರು ದಿನಗಳ ಗ್ರಾಮೀಣಾ ಉತ್ಸವವನ್ನು ನಡೆಸತೊಡಗಿತು. ಮೂಲತಃ ಹೆಗ್ಗೋಡು ಸುತ್ತಮುತ್ತಲಿನ ಹಳ್ಳಿಗಳಲ್ಲಿ ನಾಟಕ, ಯಕ್ಷಗಾನ ಸುಗಮ ಸಂಗೀತ, ಜಾನಪದ ಕಲಾ ಪ್ರದರ್ಶನಗಳನ್ನು ಪ್ರತಿವರ್ಷ ಹಮ್ಮಿಕೊಳ್ಳಲಾಗುತ್ತಿದೆ. ನಾಡಿನ ಹೆಸರಾಂತ ಜಾನಪದ ಕಲಾಪ್ರಕಾರಗಳಾದ ಕಂಸಾಳೆ ಕುಣಿತ, ಶ್ರೀ ಕೃಷ್ಣ ಪಾರಿಜಾತ, ಕರಡಿ ಮಜಲು, ಎಲ್ಲಮ್ಮನ ಕುಣಿತ, ಬೀದಿ ನಾಟಕ, ವೀರಗಾಸೆ ಮೊದಲಾದವುಗಳನ್ನು ಮಲೆನಾಡಿಗರು ತಮ್ಮ ತಮ್ಮ ಊರುಗಳಲ್ಲಿ ಪ್ರತ್ಯಕ್ಷ ನೋಡುವಂತಾಗಿದೆ.



ನಾಟಕ: ಆಚಾರ್ಯ ಪ್ರಹಸನ, ನಿರ್ದೇಶನ: ಪ್ರಸನ್ನ ಹೆಗ್ಗೋಡು

ಉತ್ಸವದ ಸಂದರ್ಭದಲ್ಲಿ ನಾಡಿನ ಹೆಸರಾಂತ ರಂಗತಂಡಗಳು ಅಭಿನಯಿಸುವ ನಾಟಕಗಳನ್ನು ಪ್ರದರ್ಶಿಸಲಾಗುತ್ತಿತ್ತು. ಇದರಿಂದ ಸ್ಫೂರ್ತಿಗೊಂಡು ಚರಕದ ಹವ್ಯಾಸಿ ಕಲಾವಿದರುಗಳು ಕವಿ ಕಾವ್ಯ ಟ್ರಸ್ಟ್‌ನ ಪೋಷಣೆಯಲ್ಲಿ ಪ್ರತಿವರ್ಷ ನಾಟಕವೊಂದನ್ನು ಅಭಿನಯಿಸಿ ಪ್ರದರ್ಶಿಸತೊಡಗಿದರು. ಎಂ. ಗಣೇಶ್ ಅವರ ನಿರ್ದೇಶನದ **'ಚೋರ ಚರಣದಾಸ್', 'ಕತ್ತಲೆನಗರಿ ತಲೆಕೆಟ್ಟರಾಜ್'** ಮತ್ತು ಪ್ರಸನ್ನ ಅವರ ನಿರ್ದೇಶನದ **'ಆಚಾರ್ಯ ಪ್ರಹಸನ'** ಇವು ತಂಡದ ಪ್ರಮುಖ ನಾಟಕಗಳು. ಆಚಾರ್ಯ ಪ್ರಹಸನ ನಾಟಕವು ಬೆಂಗಳೂರು, ಮೈಸೂರು, ಧಾರವಾಡ, ಮುದ್ರಾಡಿ ಮೊದಲಾದ ಸ್ಥಳಗಳಲ್ಲಿ ಪ್ರದರ್ಶನ ನೀಡಿ ಅಪಾರ ಮನ್ನಣೆ ಪಡೆದಿದೆ.

### 'ಚರಕ'ದ ಕಲಾವಿದರು:

| | | |
|---|---|---|
| ಸತೀಶ್ ಎಂ.ಬಿ. | ಭಾಗೀರಥಿ ಕೆ.ಬಿ. | ಎನ್.ಎಂ. ಕುಲಕರ್ಣಿ |
| ಪ್ರಭಾಕರ ಸಾಂತಿ | ದಾಕ್ಷಾಯಿಣಿ | ಕುಮಾರ |
| ಡಿ.ಬಿ. ರುದ್ರಪ್ಪ | ಶೈಲಜಾ | ಅರವಿಂದ |
| ಬಿ.ಎಸ್. ಸುಂದರ್ | ವಿಜಯಲಕ್ಷ್ಮಿ ಸುಂದರ್ | ಪದ್ಮಶ್ರೀ |
| ಎಂ. ಗಣೇಶ್ | ಮಧುರಾ | ಜಯಶ್ರೀ |
| ಪ್ರಶಾಂತ ಸಿದ್ದಿ | ಸುಜಾತ ಬಿ. | ಆರ್.ವೈಜಯಂತಿ |
| ಸಂದೇಶ್ | ಸುಜಾತ | ಚಂದ್ರಕಲಾ |
| ಎಂ.ಪಿ. ಹೆಗಡೆ | ಸುನೀತಾ | |

### ಜನಪದ ಕಾವ್ಯ ಮಂಡಲ:

ಸಾಂಸ್ಕೃತಿಕ ಚಟುವಟಿಕೆಗಳ ಮತ್ತೊಂದು ವೇದಿಕೆಯಾಗಿ ಹುಟ್ಟಿಕೊಂಡ ಜನಪದ ಕಾವ್ಯ ಮಂಡಲ, ಕವಿ ಕಾವ್ಯ ಟ್ರಸ್ಟ್‌ನ ಅಂಗ ಸಂಸ್ಥೆ. ಈ ಭಾಗದ ಗ್ರಾಮೀಣ ಜನರಿಂದಲೇ ಕಾರ್ಯನಿರ್ವಹಿಸುತ್ತಿದ್ದು ಗ್ರಾಮೀಣ ಪ್ರದೇಶದಲ್ಲೇ ಇದರ ಕಾರ್ಯಚಟುವಟಿಕೆಗಳ ವ್ಯಾಪ್ತಿ ಕೂಡ. ಕವಿಗೋಷ್ಠಿ, ಯಕ್ಷಗಾನ, ತಾಳಮದ್ದಲೆ, ಬೀದಿ ನಾಟಕ, ಕೋಲಾಟ, ಸಂಪ್ರದಾಯದ ಹಾಡುಗಳು ಮೊದಲಾದ ಕಾರ್ಯಕ್ರಮಗಳನ್ನು ವರ್ಷದುದ್ದಕ್ಕೂ ನಡೆಸುವ ಮೂಲಕ ಗ್ರಾಮೀಣ ಪ್ರತಿಭೆಗಳ ವಿಕಾಸಕ್ಕೆ ನೆರವಾಗಿದೆ. ಕಳೆದ 15 ವರ್ಷಗಳಿಂದ ನಿರಂತರವಾಗಿ ಕ್ರಿಯಾಶೀಲವಾಗಿದೆ.

– ಎನ್.ಎಮ್.ಕುಲಕರ್ಣಿ

# ನೀಲಕಂಠೇಶ್ವರ ನಾಟ್ಯ ಸಂಘ (ನೀನಾಸಂ) ಹೆಗ್ಗೋಡು

ಸಂಪರ್ಕ: ಶ್ರೀ ಬಿ.ಆರ್. ವೆಂಕಟರಮಣ ಐತಾಳ, ದೂ: 08183–265646



ನೀನಾಸಂನ ರಂಗಶಾಲೆ

ಭಾರತ ದೇಶ ಬ್ರಿಟಿಷರ ಕಪಿಮುಷ್ಠಿಯಿಂದ ಬಿಡಿಸಿಕೊಂಡ ಅದೇ ದಶಕದಲ್ಲಿ (1949) ನೀಲಕಂಠೇಶ್ವರ ನಾಟ್ಯ ಸೇವಾ ಸಂಘ ಎಂಬ ಸಂಸ್ಥೆ ಹೆಗ್ಗೋಡಿನಲ್ಲಿ ಕೆ.ವಿ.ಸುಬ್ಬಣ್ಣನವರ ನೇತೃತ್ವದಲ್ಲಿ ಸ್ಥಳೀಯ ರಂಗಸಾಕ್ತರು ಮತ್ತು ಗ್ರಾಮಸ್ಥರ ನೆರವಿನೊಂದಿಗೆ ಆರಂಭವಾಯಿತು. ಇಂದು ನೀನಾಸಮ್ ಎಂಬ ತನ್ನ ಕಿರು ಹೆಸರಿನಿಂದಲೇ ವಿಶ್ವದ ರಂಗ ಭೂಪಟದಲ್ಲಿ ಸ್ಥಾನ ಪಡೆದುಕೊಂಡಿದೆ. ನೀನಾಸಮ್ ಸಂಸ್ಥೆ, ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿದೆ. ಸಾಗರದಿಂದ ಒಂಭತ್ತು ಕಿಲೋ ಮೀಟರಗಳ ದೂರದಲ್ಲಿ ಹೆಗ್ಗೋಡು ಎಂಬ ಪುಟ್ಟ ಊರಿದೆ. ಆ ಊರಿನಲ್ಲಿ ಜಗತ್‌ಪ್ರಸಿದ್ಧವಾದ ನೀನಾಸಮ್ ಎಂಬ ಸಂಸ್ಥೆ ಡಾ॥ ಶಿವರಾಮ ನಲವತ್ತರ ದಶಕದಲ್ಲಿ ಸಂಸ್ಥೆ ಆರಂಭವಾದಗ ಸೋಗೆಯಲ್ಲಿ ಒಂದು ಶೆಡ್ ನಿರ್ಮಿಸಿ ನಾಟಕ ಅಭ್ಯಾಸ ಮತ್ತು

ಪ್ರಯೋಗ ಮಾಡುತ್ತಿದ್ದರು. ಸಿನಿಮಾ, ಸಂಸ್ಕೃತಿ ಕುರಿತಾದ ಚರ್ಚೆಗಳು ಅಲ್ಲೇ ಆರಂಭವಾಗಿದ್ದವು. ನಲವತ್ತು ಐವತ್ತರ ಭಾರತಕ್ಕೆ ತನ್ನ ಮುಂದೆ ಅನೇಕ ಸವಾಲುಗಳಿದ್ದವು, ಅಂಥ ಸವಾಲುಗಳನ್ನು ಆತ್ಮವಿಶ್ವಾಸದಿಂದ ಸ್ವೀಕರಿಸಿ ಸರಿಪಡಿಸಿಕೊಳ್ಳುವುದು ಅಂದಿನ ತುರ್ತು ಆಗಿತ್ತು. ಈ ನಿಟ್ಟಿನಲ್ಲಿ ಹಲವು ರೀತಿಯ ಹುಡುಕಾಟಗಳು ಪ್ರಯೋಗಗಳು ಹಲವು ಕ್ಷೇತ್ರಗಳಲ್ಲಿ ಕಾಣಿಸಿಕೊಂಡವು. ಇಂಥ ತವಕ ತಲ್ಲಣಗಳ ಕಾಲಘಟ್ಟದಲ್ಲಿ ಶ್ರೀ ಕೆ.ವಿ.ಸುಬ್ಬಣ್ಣ ಎಂಬ ವಾಮನಮೂರ್ತಿ ಮೈಸೂರಿನಲ್ಲಿ ಬಿ.ಎ.ಆನರ್ಸ್ ಅಭ್ಯಾಸ ಮಾಡಿ ಹಳ್ಳಿಗೆ ಹಿಂತಿರುಗಿದರು. ತಮ್ಮ ಸ್ವಂತ ಊರಾದ ಮುಂಡಿಗೆಸರದಲ್ಲಿ ಅಡಿಕೆ ಕೃಷಿ ಮುನ್ನೆಡೆಸುತ್ತ ಹೆಗ್ಗೋಡನ್ನು ಸಾಂಸ್ಕೃತಿಕ ಕಾರ್ಯಕ್ಷೇತ್ರ ಮಾಡಿಕೊಂಡು ತಮ್ಮ ಸೃಷ್ಟಿ ಮತ್ತು ದೃಷ್ಟಿಗಳನ್ನು ಲೋಕದೊಂದಿಗೆ ಹಂಚಿಕೊಂಡರು.

ನೀನಾಸಮ್ ಸಂಸ್ಥೆ ತೀರಾ ಖಾಸಗಿ ಸಾಮರ್ಥ್ಯದಲ್ಲಿ ಬೆಳೆದದ್ದಲ್ಲ. ಅದು ಸಮಾಜದ ಒಂದು ಭಾಗವಾಗಿ ಸಮುದಾಯದ ಕೊಡುಕೊಳ್ಳುವಿಕೆಯಲ್ಲಿ ಬೆಳೆದದ್ದನ್ನು ಕಾಣಬಹುದು. ಇಂದು ನೀನಾಸಮ್ ಎಂಬ ಸಂಸ್ಥೆಯಲ್ಲಿ ಹಲವು ರೀತಿಯಲ್ಲಿ ಶಾಖೆಗಳು ಹುಟ್ಟಿಕೊಂಡಿವೆ ಮತ್ತು ಕ್ರಿಯಾಶೀಲವಾಗಿ ತಮ್ಮನ್ನು ತೊಡಗಿಸಿಕೊಂಡಿವೆ.

### ನೀನಾಸಂ ಬಳಗ:

ಸ್ಥಳೀಯ ಆಸಕ್ತರನ್ನು ಕಲೆ ಹಾಕಿ ನೀನಾಸಮ್ ಬಳಗವೆಂಬ ರಂಗಕಲಾವಿದರ ತಂಡ ಕಟ್ಟಿಕೊಂಡು ವರ್ಷಕ್ಕೆ ಒಂದು ನಾಟಕ ತಯಾರಿ ಮಾಡಿ ಪ್ರತಿವರ್ಷ ಪ್ರದರ್ಶಿಸುತ್ತಾ ಬಂದಿದೆ. ನೀನಾಸಮ್ ಬಳಗದ ಕಲಾವಿದರೆ ನೀನಾಸಮ್ ಕಾರ್ಯಕ್ರಮಗಳಲ್ಲಿ ಸೇವಾ ಮನೋಭಾವದಿಂದ ಕೆಲಸ ಮಾಡುವ ಮೂಲಕ ದೊಡ್ಡ ಶಕ್ತಿಯಾಗಿದ್ದಾರೆ.

### ನೀನಾಸಂ ಚಿತ್ರ ಸಮಾಜ:

ಚಲನಚಿತ್ರಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಿಸುವುದು. ಕರ್ನಾಟಕದ ಹಲವು ಊರುಗಳಲ್ಲಿ ವಿಶ್ವದ ಶ್ರೇಷ್ಠ ಚಲನಚಿತ್ರಗಳನ್ನು ಪ್ರದರ್ಶಿಸುವುದು. ಸಹೃದಯತಾ ಶಿಬಿರದ ಮೂಲಕ  ಹೊಸ ಅಭಿರುಚಿ ಬೆಳೆಸುವುದು.

### ನೀನಾಸಂ ರಂಗಶಿಕ್ಷಣ ಕೇಂದ್ರ:

ಕನ್ನಡದ ಉತ್ಸಾಹೀ ಯುವಕ ಯುವತಿಯರಿಗೆ ರಂಗಕಲೆಗಳಲ್ಲಿ ಶಾಸ್ತ್ರೀಯವಾದ ತರಬೇತಿ ಕೊಡಬೇಕು ಎಂಬ ಕಾರಣದಿಂದ ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ಮಾದರಿಯಲ್ಲಿ ಹೆಗ್ಗೋಡಿನಲ್ಲಿ 1980ರಲ್ಲಿ ಪ್ರಾರಂಭವಾದ ರಂಗಶಾಲೆ ರಂಗಭೂಮಿಯಂತಹ ಶಕ್ತಿಯುತ ಮಾಧ್ಯಮವನ್ನು ಪ್ರಸ್ತುತ ಭಾರತೀಯ ಸಂದರ್ಭಕ್ಕೆ ಹೊಂದುವಂತೆ ಒಗ್ಗಿಸಿಕೊಂಡು ಸಮೂಹ ಸಂಪರ್ಕವನ್ನು ಸಾಧ್ಯಗೊಳಿಸಿಕೊಳ್ಳಬೇಕು, ಕರ್ನಾಟಕದಾದ್ಯಂತ ರಂಗ ಭಾಷೆಯನ್ನು ಪರಿಚಯಿಸಿ ಕೊಂಡ ಹಾಗೂ ಅದರಲ್ಲಿ

ತಮ್ಮನ್ನು ತೊಡಗಿಸಿಕೊಳ್ಳುವ ಒಂದು ತರುಣ ತರುಣಿಯರ ಪಡೆ ನಿರ್ಮಾಣವಾಗಬೇಕು – ಎಂಬಂತಹ ಕನಸುಗಳು ಈ ರಂಗಶಿಕ್ಷಣ ಕೇಂದ್ರದ ಸ್ಥಾಪನೆಗೆ ಪ್ರೇರಕ ವಾಗಿದ್ದವು. ಕಳೆದ ಮೂವತ್ತು ವರ್ಷಗಳಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಆಯ್ಕೆಯಾಗಿದ್ದ ನಾಲ್ಕು ನೂರಕ್ಕೂ ಹೆಚ್ಚಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ರಂಗಶಿಕ್ಷಣ ಪಡೆದಿದ್ದಾರೆ ಮತ್ತು ನೀನಾಸಮ್ ರಂಗಶಿಕ್ಷಣ ಕೇಂದ್ರದಲ್ಲಿ ತಯಾರಾದ ಒಟ್ಟು ವಿದ್ಯಾರ್ಥಿಗಳಲ್ಲಿ ಮುಕ್ಕಾಲು ಭಾಗದಷ್ಟು ಜನರು ಈವರೆಗೂ ರಂಗಭೂಮಿಯಲ್ಲಿ ಕ್ರಿಯಾತ್ಮಕವಾಗಿ ತೊಡಗಿದ್ದಾರೆಂಬುದು ಗಮನಾರ್ಹ ಸಂಗತಿ. ಒಟ್ಟು ಸಂಖ್ಯೆಯ ಅರ್ಧದಷ್ಟು ಜನ ರಂಗಭೂಮಿಯನ್ನು ಪೂರ್ಣಾವಧಿ ವೃತ್ತಿಯಾಗಿ ಸ್ವೀಕರಿಸಿದ್ದಾರೆ. ಇನ್ನೂ ಹಲವರು ಬೇರೆ ವೃತ್ತಿಯ ಜೊತೆ ರಂಗಭೂಮಿಯಲ್ಲಿ ಸಂಪರ್ಕ ಸತತವಾಗಿ ಬಳಸಿಕೊಂಡಿದ್ದಾರೆ.–

ಕರ್ನಾಟಕದ ಮೂಲೆಮೂಲೆಯ ಹಲವು ಸ್ಥಳಗಳಲ್ಲಿ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ತಮ್ಮ ಚಟುವಟಿಕೆಗಳನ್ನು ಹರಡಿಕೊಂಡಿದ್ದಾರೆ. ತಿರುಗಾಟ, ಜನಮನದಾಟ, ರಂಗಾಯಣ ಕಿನ್ನರಗೋಳ ಆಟಮಾಟ, ಪಯಾಣ ಇನ್ನೂ ಮುಂತಾದ ರಂಗತಂಡಗಳಲ್ಲಿ ಹಲವು ವೃತ್ತಿ ರಂಗತಂಡಗಳಲ್ಲಿ ಗಣನೀಯ ಪ್ರಮಾಣದಲ್ಲಿ ಈ ಕೇಂದ್ರದ ವಿದ್ಯಾರ್ಥಿಗಳಿದ್ದಾರೆ. ಕಳೆದ ಮೂವತ್ತು ವರ್ಷಗಳಲ್ಲಿ ನೀನಾಸಮ್ ರಂಗಶಿಕ್ಷಣ ಕೇಂದ್ರ 122 ಮುಖ್ಯನಾಟಕಗಳನ್ನು ಹಾಗೂ 191 ಅಭ್ಯಾಸ ಪ್ರಯೋಗಗಳನ್ನು ರಂಗದಮೇಲೆ ತಂದಿದೆ. ತಾತ್ವಿಕ ಮತ್ತು ಪ್ರಯೋಗಿಕ ತರಗತಿಗಳಲ್ಲಿ ವಿಶ್ವದ ವಿವಿಧ ದೇಶ ಕಾಲಗಳ ಮುಖ್ಯ ರಂಗಭೂಮಿಗಳನ್ನು ಅಭ್ಯಾಸ ಪಠ್ಯವಾಗಿ ಕಲಿಸಲಾಗುತ್ತದೆ. ಪಾಶ್ಚಾತ್ಯ, ಪೌರತ್ಯ ದೇಶಗಳ ರಂಗಭೂಮಿಗಳನ್ನು ಸ್ಥೂಲವಾಗಿ ಕಲಿಸಲಾಗುತ್ತದೆ. ರಂಗಶಿಕ್ಷಣ ಕೇಂದ್ರದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು "ಡಿಪ್ಲೋಮೊ ಇನ್ ಥಿಯೇಟರ್ ಆರ್ಟ್ಸ್" ಪದವಿ ನೀಡುತ್ತದೆ.

## ನೀನಾಸಂ ರಂಗಶಿಕ್ಷಣ ಕೇಂದ್ರದ ಪ್ರಯೋಗಗಳು

**ಪಾಶ್ಚಾತ್ಯ :**

ಈಡಿಪಸ್, ಅಂತಿಗೊನೆ, ಮ್ಯಾಕ್‌ಬೆತ್, ಟೆಂಪೆಸ್ಟ್, ಏ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್, ಮರ್ಚಂಟ್ ಆಫ್ ವೆನಿಸ್, ಬೂರ್ಜ್ವಾ ಜಂಟಲ್‌ಮನ್, ಎನಿಮಿ ಆಫ್ ದಿ ಪೀಪಲ್, ಲೋಯರ್ ಡೆಪ್ತ್ಸ್, ಚೆರ‍್ರಿ ಆರ್ಚರ್ಡ್, ಗುಡ್ ವುಮನ್ ಆಫ್ ಸೆಜುವಾನ್, ವೊಯ್‌ಜೆಕ್, ದಿ ಬಂಡಲ್ ಕಿಂಗ್ ಲಯರ್, ಥ್ರೀ ಸಿಸ್ಟರ್ಸ್, ಶೂ ಮೇಕರ್ಸ್ ಪ್ರಾಡಿಜಿಯಸ್, ದಿ ರಾಯಲ್ ಹಂಟ್ ಆಫ್ ದಿ ಸನ್, ಅಗ ದಿ ರಾಯಲ್ ಹಂಟ್ ಆಫ್ ದಿ ಸನ್, ಅಗಮೇಮ್ನಾನ್, ತ್ರೀ ಪೆನ್ನಿ ಅಪೇರಾ.

**ಸಂಸ್ಕೃತ :**

ಊರುಭಂಗ, ಸೂಳೆ ಸನ್ಯಾಸಿ, ವಾಲಿವಧಾಂಕಂ, ದೂತ, ಘಟೋತ್ಕಚ, ಯಜ್ಞಫಲ, ಮಣ್ಣಿನ ಬಂಡಿ, ವಿದಿಶೆಯ ವಿದೂಷಕ ಅಭಿಜ್ಞಾನ ಶಾಕುಂತಲ.



ನಾಟಕ: ಸ್ಮಶಾನ ಕುರುಕ್ಷೇತ್ರ, ನಿರ್ದೇಶನ: ಕೆ.ವಿ.ಅಕ್ಷರ

**ಕನ್ನಡ:**

ಬಿರುದಂತೆಂಬರ ಗಂಡ, ಯಾರೋ ಅಂದರು, ಪೋಲಿಕಿಟ್ಟಿ, ಶ್ಮಶಾನ ಕುರುಕ್ಷೇತ್ರಂ, ಸಂಧ್ಯಾಕಾಲ, ಹೊಸ ಸಂಸಾರ, ಅಹಲ್ಯೆ, ಅಶ್ವತ್ಥಾಮನ್ ಮಂಜುಳಾ, ಕತ್ತಲೆ ಬೆಳಕು, ಕದಡಿದ ನೀರು, ಮೂಕಬಲಿ, ತುಘಲಕ್, ದಂಗೆಯ ಮುಂಚಿನ ದಿನಗಳು, ಗುಣಮುಖ, ಸಿಂಗರಪ್ಪ ಮತ್ತು ಅರಮನೆ, ಪ್ರಮೀಳಾರ್ಜುನಿಯಮ್, ಆಮನಿ, ಮಿಸ್‌ಸದಾರಮೆ, ಜಿ. ಕೆ. ಮಾಸ್ತರರ ಪ್ರಣಯ ಪ್ರಸಂಗ, ಚಂದ್ರಗುಪ್ತ, ಮಹಾರಾತ್ರಿ, ಯಶೋಧರಾ, ಭಟ್ಟರ ಮಗಳು, ಬೆಟ್ಟದ ಅರಸು, ಹಂಸ ದಮಯಂತಿ, ಕಂತು ಇತ್ಯಾದಿ.

**ಭಾರತೀಯ:**

ಆಷಾಢದ ಒಂದು ದಿನ, ಅಂಧಯುಗ, ಅಧೇ ಅಧೂರೆ, ಸದ್ದು! ವಿಚಾರಣೆ ನಡೆಯುತ್ತಿದೆ, ಅಂಧೇರ್ ನಗರಿ ಚೌಪಟ್ ರಾಜ, ಮಹಾನಿರ್ಮಾಣ.

**ನೀನಾಸಂ ಜನ ಸ್ಪಂದನ:**

ಅಮೇರಿಕದ ಫೋರ್ಡ್ ಫೌಂಡೇಷನ್ ನೆರವಿನೊಂದಿಗೆ ನೀನಾಸಮ್ ಕರ್ನಾಟಕದ

ಹಲವು ಸಣ್ಣಪುಟ್ಟ ಊರು-ಪಟ್ಟಣಗಳಲ್ಲಿ ನಡೆಸಿದ ಎರಡು ವರ್ಷಗಳ ರಂಗ - ಚಲನಚಿತ್ರ ಪ್ರಸಾರ ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ ಹಲವಾರು ಜನ ಆದಿವಾಸಿಗಳು ಮತ್ತು ದಲಿತರು ಪಾಲ್ಗೊಂಡಿದ್ದರು. ಇಂದು ಅವರ ಮಕ್ಕಳು ನೀನಾಸಮ್ ರಂಗಶಿಕ್ಷಣ ಕೇಂದ್ರದಲ್ಲಿ ಪದವಿ ಪಡೆದು ರಂಗಕಾಯಕ ಮುಂದುವರಿಸುತ್ತಿದ್ದಾರೆ.

**ನೀನಾಸಂ ತಿರುಗಾಟ:**

ನೀನಾಸಮ್ ರಂಗಶಿಕ್ಷಣ ಕೇಂದ್ರದಲ್ಲಿ ಕಲಿತ ವಿದ್ಯಾರ್ಥಿಗಳಿಗಾಗಿ ಕಟ್ಟಿದ ಸಂಚಾರಿ ರಂಗತಂಡ. ರಂಗಶಿಕ್ಷಣ ಕೇಂದ್ರ ಪ್ರಾರಂಭವಾಗಿ ಐದು ವರ್ಷಗಳ ನಂತರ ತಿರುಗಾಟ (1985) ಪ್ರಾರಂಭವಾಯಿತು. ಅಂದಿನಿಂದ ಕರ್ನಾಟಕದಾದ್ಯಂತ ನೂರಾರು ಊರುಗಳಲ್ಲಿ ಪ್ರದರ್ಶನ ಕೊಡುತ್ತ ಸಾಗಿಬಂದಿರುವ ತಿರುಗಾಟ ನಾಟಕಾಭಿರುಚಿಯನ್ನು ನಾಡಿನಾದ್ಯಂತ ಹುಟ್ಟುಹಾಕಿದೆ. ಕಳೆದ 26 ವರ್ಷಗಳಲ್ಲಿ 28 ಕನ್ನಡ ನಾಟಕಗಳು 28 ಪಾಶ್ಚಾತ್ಯ ಅನುವಾದ - ರೂಪಾಂತರಗಳು, 18 ಭಾರತೀಯ ನಾಟಕಗಳು, 8 ಕನ್ನಡದ ಕೃತಿಗಳ ರೂಪಾಂತರಗಳು ಪ್ರದರ್ಶನಗೊಂಡಿದೆ. ಸುಮಾರು 285 ಜನ ನಟ-ನಟಿ-ತಂತ್ರಜ್ಞರು ತಿರುಗಾಟದಲ್ಲಿ ಕಾರ್ಯನಿರ್ವಹಿಸಿದ್ದಾರೆ. ಹೊರ ರಾಜ್ಯಗಳು ಸೇರಿದಂತೆ ಮುಖ್ಯವಾಗಿ ಕರ್ನಾಟಕದಲ್ಲಿ 3250 ಪ್ರದರ್ಶನಗಳು ನಡೆದು ಹತ್ತಿರತ್ತಿರ 20 ಲಕ್ಷ ಪ್ರೇಕ್ಷಕರು ನಾಟಕಗಳನ್ನು ನೋಡಿ ಆನಂದಿಸಿದ್ದಾರೆ.

**ನೀನಾಸಂ ಮರು ತಿರುಗಾಟ:**

ಇದೊಂದು ಕಿರು ಅವಧಿಯ ಸಂಚಾರಿ ರಂಗತಂಡ. ನಾಟಕ ಮಾಧ್ಯಮವನ್ನು ಆತ್ಮೀಯವಾಗಿಸುವ, ಆಪ್ತವಾಗಿಸುವ ಉದ್ದೇಶ ಇದರ ಹಿಂದಿದೆ. ಆದ್ದರಿಂದಲೇ ಈ ಮರು ತಿರುಗಾಟದ ನಾಟಕಗಳು ಆಪ್ತ ರಂಗಸಜ್ಜಿಕೆಯಲ್ಲಿ ಪ್ರದರ್ಶಿಸಲ್ಪಡುತ್ತವೆ. ಕನ್ನಡದ ಸಂದರ್ಭದಲ್ಲಿ ಹೊಸ ರೀತಿಯ ಹುಡುಕಾಟಗಳನ್ನು ಕಟ್ಟುವ ಹಂಬಲದಲ್ಲಿ ಮರುತಿರುಗಾಟ ಕಾರ್ಯ ನಿರ್ವಹಿಸುತ್ತದೆ. ಹೊಸ ರಂಗಭಾಷೆಗಳ ಹುಡುಕಾಟ ಈ ಪ್ರಯೋಗಗಳಲ್ಲಿರುತ್ತದೆ.

**ನೀನಾಸಂ ಸಂಸ್ಕೃತಿ ಶಿಬಿರ:**

ಸಂಸ್ಕೃತಿ ಕಲೆಗಳು ಮತ್ತು ಸಮಾಜ ಕುರಿತು ಕರ್ನಾಟಕದ ವಿವಿಧ ಭಾಗಗಳ ಸಾಂಸ್ಕೃತಿಕ ಕ್ರಿಯಾಶೀಲರಾಗಿ ಪ್ರತಿವರ್ಷ ಅಕ್ಟೋಬರ್‌ನಲ್ಲಿ ಏರ್ಪಡಿಸಲಾಗುವ ಏಳು ದಿನಗಳ ಶಿಬಿರ ಮತ್ತು ಸಂಸ್ಕೃತಿ ಉತ್ಸವ.

**ನೀನಾಸಂ ಪ್ರತಿಷ್ಠಾನ:**

ಕರ್ನಾಟಕದ ಬೇರೆ ಬೇರೆ ಊರುಗಳಲ್ಲಿ ರಂಗಭೂಮಿ ಸಾಹಿತ್ಯ, ಚಲನಚಿತ್ರ ಮೊದಲಾದ ಮಾಧ್ಯಮಗಳಿಗೆ ಸಂಬಂಧಿಸಿ ಅಧ್ಯಯನ ಶಿಬಿರಗಳನ್ನು ನಡೆಸುತ್ತಿರುವ

ಘಕ. ಮ್ಯಾಗ್‌ಸೇಸೆ ಪ್ರಶಸ್ತಿಯ ಹಣವನ್ನು ಇಡು ಗಂಟಾಗಿ ಇಟ್ಟು ನಡೆಸಲಾಗುತ್ತಿರುವ ಕಾರ್ಯಕ್ರಮ ಇದು.

**ಅಕ್ಷರ ಪ್ರಕಾಶನ:**

ಕೆ. ವಿ. ಸುಬ್ಬಣ್ಣನವರು 1958ರಲ್ಲಿ ಪ್ರಾರಂಭಿಸಿದ ಪ್ರಕಾಶನ ಸಂಸ್ಥೆ. ರಂಗಭೂಮಿಯನ್ನು ಉಸಿರಾಗಿಸಿಕೊಂಡಿದ್ದ ಸುಬ್ಬಣ್ಣನವರಿಗೆ ಕೇವಲ ನಾಟಕ ಚಲನಚಿತ್ರ ಪ್ರದರ್ಶನ ಮಾಡುವುದೆ ಮುಖ್ಯವಾಗಿರಲಿಲ್ಲ. ಅದಕ್ಕೆ ಸಂಬಂಧಿಸಿದ ಮಾಹಿತಿ, ಪ್ರಜ್ಞೆ, ಮೀಮಾಂಸೆ, ಕನ್ನಡದಲ್ಲೆ ಸಿಗಬೇಕೆಂಬ ಆಶಯವಿತ್ತು. ವಿಶ್ವದ ಶ್ರೇಷ್ಠ ತಾತ್ವಿಕ ವಿಚಾರಗಳು ಕನ್ನಡ ಅಕ್ಷರಗಳಲ್ಲಿ ಮೂಡಿ ಸಹೃದಯ ಓದುಗರು–ಕಲಾವಿದರು ಪ್ರಕಾಶಿತರಾಗಬೇಕು ಎಂಬ ಅದಮ್ಯ ಹಂಬಲ ಇಂಥ ನುಡಿ ಜೋಡಣೆಯಲ್ಲಿತ್ತು.

**ಊರು ಮನೆ ಉತ್ಸವ:**

ಹೆಗ್ಗೋಡಿನ ಸುತ್ತಮುತ್ತಲ ಗ್ರಾಮಗಳ ಕಲಾವಿದರಿಗಾಗಿ ನಡೆಸುವ ಕಾರ್ಯಕ್ರಮ. ಸ್ಥಳೀಯರು ಪಾರಂಪರಿಕವಾಗಿ ನಡೆಸಿಕೊಂಡು ಬರುತ್ತಿರುವ ಸಾಂಪ್ರದಾಯಿಕ ಮತ್ತು ಜಾನಪದ ಕಲೆಗಳು ಪ್ರದರ್ಶಿಸಲ್ಪಡುತ್ತವೆ. ಕರಕುಶಲ ಕಲೆಗಳು, ರಂಗೋಲಿ, ಚಿತ್ರ ಬಿಡಿಸುವುದು ಮುಂತಾದವು ಪ್ರದರ್ಶಿಸಲ್ಪಡುವುದರ ಜೊತೆಗೆ ಕಳೆದ ವರ್ಷದಿಂದ ಸುತ್ತಮುತ್ತಲ ಹಳ್ಳಿಗಳಲ್ಲಿ ವಿವಿಧ ತಂಡಗಳಿಗೆ ನಾಟಕ ಕಲಿಸಿ ಉತ್ಸವದಲ್ಲಿ ನಾಟಕ ಪ್ರದರ್ಶನಗಳನ್ನು ಏರ್ಪಡಿಸಲಾಗುತ್ತಿದೆ.

**ಎಂ. ಗಣೇಶ**
**ಹೆಗ್ಗೋಡು**

## ತಿರುಗಾಟದ ನಾಟಕಗಳು/ಮರು ತಿರುಗಾಟದ ನಾಟಕಗಳು

| | | |
|---|---|---|
| ಆಲಿಬಾಬಾ (1986) | – | ಕೆ. ಜಿ. ಕೃಷ್ಣಮೂರ್ತಿ |
| ಮಣ್ಣಿನ ಬಂಡಿ (1986) | – | ಅತುಲ್ ತಿವಾರಿ |
| ಬೆಪ್ಪ ತಕ್ಕಡಿ ಭೋಳ ಶಂಕರ (1988) | – | ಬಹುರುಲ್ ಇಸ್ಲಾಂ |
| ಲಿಯರ್ ಮಹಾರಾಜ (1988) | – | ರಘುನಂದನ |
| ಧೂಂ ಧೂಂ ಸುಂಟರಗಾಳಿ (1989) | – | ಬಹುರುಲ್ ಇಸ್ಲಾಂ |
| ಪಂಜರ ಶಾಲೆ (1990) | – | ಇಕ್ಬಾಲ್ ಅಹಮದ್ |
| ನಾಯಿಮರಿ ನಾಟಕ (1991) | – | ಕೆ. ಜಿ. ಕೃಷ್ಣಮೂರ್ತಿ |
| ಹೂ ಹುಡುಗಿ (1992) | – | ಕನ್ನಯ್ಯ ಲಾಲ್ |
| ಕನಕಾಗಮನ (1994) | – | ಜಯತೀರ್ಥ ಜೋಷಿ |
| ಜುಬುಬಿ ದೇವರ ಜುಗಾರಿ ಜುಗಾರಿಯಾಟ (1994) | – | ಸುರೇಶ ಆನಗಳ್ಳಿ |
| ಪ್ರತಿಮಾ ನಾಟಕ (1995) | – | ರಘುನಂದನ |
| ಮಾಮಾಮೊಷಿ (1995) | – | ಇಕ್ಬಾಲ್ ಅಹಮದ್ |
| ಷಾಜಹಾನ್ (1996) | – | ಕೆ. ಜಿ. ಕೃಷ್ಣಮೂರ್ತಿ |
| ಅಂತಿ ಗೊನೆ (1998) | – | ನಾಗ್ತೋಂಬೊಮ್ ಪ್ರೇಮ್‌ಚಂದ್ |
| ಉದಿರೆಯ ವಿದೂಷಕ (2001) | – | ಇಕ್ಬಾಲ್ ಅಹಮದ್ |
| ಚೋರ ಚರಣದಾಸ (2002) | – | ಸುರೇಶ ಆನಗಳ್ಳಿ |
| ಅವಸ್ಥೆ (2002) | – | ಪ್ರಕಾಶ ಬೆಳವಾಡಿ |
| ಶಾಕುಂತಲ (2002) | – | ರುಸ್ತೂಂ ಭರೂಚ |
| ಮೊದಲಗಿತ್ತಿ (2003) | – | ಬಹುರುಲ್ ಇಸ್ಲಾಂ |
| ದ್ಯಾವನೂರು (2004) | – | ಸಿ. ಬಸವಲಿಂಗಯ್ಯ |
| ಕಾಲ ದಿವ್ಯ (2004) | – | ಕನ್ನಯ್ಯ ಲಾಲ್ |
| ರೋಮಿಯೋ ಜೂಲಿಯೆಟ್ (2005) | – | ಕನ್ನಯ್ಯ ಲಾಲ್ |
| ಉಂಡಾಡಿ ಗುಂಡ (2006) | – | ಇಕ್ಬಾಲ್ ಅಹಮದ್ |
| ಈ ನರಕ ಈ ಪುಲಕ (2007) | – | ರಘುನಂದನ |
| ನಟ ನಾರಾಯಣಿ (2008) | – | ನಟರಾಜ ಹೊನ್ನವಳ್ಳಿ |

## ತಿರುಗಾಟದ ನಾಟಕಗಳು

| | | |
|---|---|---|
| ತದ್ರೂಪಿ (1985) | – | ಪ್ರಸನ್ನ |
| ಲೋಕ ಶಾಕುಂತಲ (1985) | – | ಚಿದಂಬರರಾವ್ ಜಂಬೆ |
| ವಿಗಡ ವಿಕ್ರಮ ಚರಿತ (1986) | – | ಚಿದಂಬರರಾವ್ ಜಂಬೆ |
| ಮಿಸ್ ಸದಾರಮೆ (1987) | – | ಬಿ. ವಿ. ಕಾರಂತ |
| ಈ ಕೆಳಗಿನವರು (1987) | – | ಚಿದಂಬರರಾವ್ ಜಂಬೆ |
| ಚಾಣಕ್ಯ ಪ್ರಪಂಚ (1988) | – | ಚಿದಂಬರರಾವ್ ಜಂಬೆ |
| ತುಘಲಕ್ (1989) | – | ಚಿದಂಬರರಾವ್ ಜಂಬೆ |
| ಸೆಜುವಾನ್ ನಗರದ ಸಾಧ್ವಿ (1989) | – | ಫಿಟ್ಸ್ ಬೆನ್ನ ವಿಟ್ಸ್ |
| ಪುಂಟಿಲಾ (1990) | – | ಚಿದಂಬರರಾವ್ ಜಂಬೆ |
| ಹದ್ದು ಮೀರಿದ ಹಾದಿ (1990) | – | ಪ್ರಸನ್ನ |
| ಭಾಸ ಭಾರತ (1991) | – | ಚಿದಂಬರರಾವ್ ಜಂಬೆ |
| ಹಬ್ಬದ ಹನ್ನೆರಡನೆಯ ದಿನ (1991) | – | ಫಿಟ್ಸ್ ಬೆನ್ನ ವಿಟ್ಸ್ |
| ತಲೆದಂಡ (1992) | – | ಚಿದಂಬರರಾವ್ ಜಂಬೆ |
| ಗೋಕುಲ ನಿರ್ಗಮನ (1993) | – | ಬಿ. ವಿ. ಕಾರಂತ |
| ಅಥೆನ್ಸಿನ ಅರ್ಥವಂತ (1993) | – | ಚಿದಂಬರರಾವ್ ಜಂಬೆ |
| ಆ ಊರು ಈ ಊರು (1994) | – | ಚಿದಂಬರರಾವ್ ಜಂಬೆ |
| ಅಗ್ನಿ ಮತ್ತು ಮಳೆ (1995) | – | ವೆಂಕಟರಮಣ ಐತಾಳ |
| ಮೀಡಿಯಾ (1996) | – | ಬಿ. ವಿ. ಕಾರಂತ |
| ಜತೆಗಿರುವನು ಚಂದಿರ (1997) | – | ಭಾಸ್ಕರ್ ಚಂದಾವರ್‌ಕರ್ |
| ಮಹಾತ್ಮ (1997) | – | ಚಿದಂಬರರಾವ್ ಜಂಬೆ |
| ಚಿರೆ ಬಂದೀವಾಡೆ (1998) | – | ಚಿದಂಬರರಾವ್ ಜಂಬೆ |
| ಅಹಲ್ಯೆ (1998) | – | ಬಿ. ವಿ. ಕಾರಂತ |
| ಕೆಂಪು ಕಣಗಿಲೆ (1999) | – | ಚಿದಂಬರರಾವ್ ಜಂಬೆ |
| ಮೂವರು ಅಕ್ಕತಂಗಿಯರು (2000) | – | ಚಿದಂಬರರಾವ್ ಜಂಬೆ |
| ಭಗವದಜ್ಜುಕೀಯಮ್ (2000) | – | ಕೆ. ಎನ್. ಫಣಿಕ್ಕರ್ |

| | | |
|---|---|---|
| ಕತ್ತಲೆಗೆ ಹತ್ತು ತಲೆ (2001) | – | ಚಿದಂಬರರಾವ್ ಜಂಬೆ |
| ಪ್ರಮೀಳಾ ಜುನಿಯಂ (2001) | – | ವೆಂಕಟರಮಣ ಐತಾಳ |
| ಮಂತ್ರಶಕ್ತಿ (2002) | – | ಚನ್ನಕೇಶವ |
| ರಾಜ ಮತ್ತು ರಾಣಿ (2005) | – | ವೆಂಕಟರಮಣ ಐತಾಳ |
| ಕೇಶಪಾಶ ಪ್ರಪಂಚ (2005) | – | ಕೆ. ಜಿ. ಮಹಾಬಲೇಶ್ವರ |
| ಬಿರುಗಾಳಿ (2006) | – | ಅಭಿಲಾಷ ಪಿಳ್ಳೆ |
| ಕನ್ನಡ ರಾಮಾಯಣ (2006) | – | ವೆಂಕಟರಮಣ ಐತಾಳ |
| ಲೋಕೋತ್ತಮೆ (2007) | – | ಚನ್ನಕೇಶವ |
| ಶರವಣ ಸರ್ವಿಸಸ್ (2008) | – | ಮಂಜು ಕೊಡಗು |
| ಯುಗಾದಿ (2008) | – | ಗಣೇಶ ಎಂ. |
| ವೆನಿಸ್ಸಿನ ವ್ಯಾಪಾರ (2009) | – | ಅಕ್ಷರ ಕೆ. ವಿ. |
| ಆಕಾಶಭೇರಿ (2009) | – | ಸಂಜಯ ಉಪಾಧ್ಯಾಯ |
| ಒಥೆಲೋ (2010) | – | ಚೆಹಾನ್ ಮಣಿಕ್ ಷಾ |
| ಶೂದ್ರ ತಪಸ್ವಿ (2010) | – | ಮಂಜುನಾಥ ಬಡಿಗೇರ |

## ನೀನಾಸಂ ರಂಗಶಿಕ್ಷಣ ಪಡೆದವರು

**1980–1981**

1. ಕೆ.ಜಿ.ಕೃಷ್ಣಮೂರ್ತಿ, ಹೆಗ್ಗೋಡು.
2. ಕೆ.ಜಿ.ಮಹಾಬಲೇಶ್ವರ, ಹೊಸಕೊಪ್ಪ, ಸಾಗರ ತಾಲೂಕು.
3. ಮೋಹನಚಂದ್ರ ಯು., ಉರ್ವಾ, ಮಂಗಳೂರು.
4. ನಟರಾಜ್ ಏಣಗಿ, ಸವದತ್ತಿ, ಬೆಳಗಾಂ.
5. ಬಿ.ಎನ್.ಶಾಂತಾರಾಮ ಜೋಯಿಸ, ಬಾಣಿಗ, ಹೊಸನಗರ ತಾಲೂಕು.
6. ಶರತ್‌ಚಂದ್ರ ಶೆಟ್ಟಿ ಕೆ., ಅನಂತಪುರ, ಆಂಧ್ರಪ್ರದೇಶ.
7. ಸಿ.ಆರ್.ವಿಶ್ವನಾಥಭಟ್, ಹೆಗ್ಗೋಡು, ಸಾಗರ ತಾಲೂಕು.

**1981–1982**

1. ಆಶಾ ಬಿ. ಸಾಗರ.
2. ಹಾಲಪ್ಪ ವಿ., ಭದ್ರಾವತಿ.
3. ಇಕ್ಬಾಲ್ ಅಹಮದ್, ಶಿಕಾರಿಪುರ.
4. ಮಮತಾ ಬಿ., ಭೀಮನಕೋಣೆ, ಸಾಗರ ತಾಲೂಕು.
5. ಎಂ.ಸಿ.ರಾಮು, ಕೋಲಾರ.
6. ಸುಧಾನಂದ ಬಿ., ಮಂಗಳೂರು.
7. ಶಂಕರ ಪಿ.ವಿ., ಹಿತ್ಲಕೊಪ್ಪ, ಸಿದ್ಧಾಪುರ ತಾಲೂಕು.
8. ಸುರೇಶ ಆನಗಳ್ಳಿ, ಕುಂದಾಪುರ.
9. ಸಾಂಬಶಿವ ಡಿ., ಭೀಷ್ಮಹಳ್ಳಿ, ಬಳ್ಳಾರಿ ಜಿಲ್ಲೆ.

**1982–1983**

1. ಅಚ್ಯುತ ಕೆ. ಮಂಜೇಶ್ವರ, ವ್ರೋಕಾರ್ಡಿ, ಕೇರಳ ರಾಜ್ಯ.
2. ಸಿ.ಟಿ.ಬ್ರಹ್ಮಚಾರಿ, ಸಾಗರ.
3. ಎಂ.ಬಿ.ಬಂಗಾರಪ್ಪ, ಮಾಲ್ವೆ, ಸೊರಬ ತಾಲೂಕು.
4. ಹೆಚ್.ಸಿ. ಚಿದಾನಂದಮೂರ್ತಿ, ಆರಾಧ್ಯ ಔಷಧಾಶ್ರಮ, ಹೊನ್ನಾಳಿ.

5. ಗಣರಾಜ, ಹೆಗ್ಗಟ್ಟು, ಸಾಗರ ತಾಲೂಕು.
6. ಎ.ಎಸ್.ಮಹಾಬಲೇಶ್ವರ, ತುಮರಿ ಅಂಚೆ, ಸಾಗರ ತಾಲೂಕು.
7. ಹೆಚ್.ವಿ.ಪುಷ್ಪಾವತಿ, ಹಾಲ್ಕೆರೆ, ಸಾಗರ ತಾಲೂಕು.
8. ರಾಮಕೃಷ್ಣಶಾಸ್ತ್ರಿ, ಕೊಡಗಿ, ಗೋಕರ್ಣ.
9. ಹೆಚ್.ಎಸ್.ಸಿದ್ಧರಾಜು, ಹೊನ್ನಾಳಿ.
10. ಬಿ.ಆರ್. ವೆಂಕಟರಮಣ ಐತಾಳ, ಶಂಕರನಾರಾಯಣ, ಉಡುಪಿ ಜಿಲ್ಲೆ.

## 1983–1984

1. ಅಶೋಕ ಎ.ವಿ., ಅಂಬ್ಲಾಡಿ, ಹೊಸನಗರ ತಾಲೂಕು.
2. ಭಾರತಿ ಜಂಬೆ, ಹೆಗ್ಗೋಡು.
3. ಬಸವರಾಜ ಕೊಡಗೆ, ಬೀದರ್.
4. ಜಯರಾಮ ನೀಲಾವರ, ಬ್ರಹ್ಮಾವರ, ಉಡುಪಿ.
5. ಕೃಷ್ಣಮೂರ್ತಿ ಕಾವ್ರಾಡಿ, ಕಾವ್ರಾಡಿ, ಉಡುಪಿ ಜಿಲ್ಲೆ.
6. ಎ.ಟಿ.ಕೃಷ್ಣಮೂರ್ತಿ, ಪುರಪ್ಪೆಮನೆ, ಹೊಸನಗರ ತಾಲೂಕು.
7. ಸುಮತಿ ಕೆ.ಆರ್., ತಲವಾಡಿ, ಸಾಗರ ತಾಲೂಕು.
8. ಸ್ವಯಂಪ್ರಭಾ, ಮುಂಡಿಗೇಸರ, ಸಾಗರ ತಾಲೂಕು.
9. ಸರಸ್ವತಿ ಬಿ., ಸುಳ್ಯ, ದ.ಕ.ಜಿಲ್ಲೆ.
10. ಶಶಿಕಲಾ ಬಿ.ಎನ್., ದಾವಣಗೆರೆ.
11. ಶೈಲೇಂದ್ರ ಬಂದಗದ್ದೆ, ಕೆಳದಿ ಅಂಚೆ, ಸಾಗರ ತಾಲೂಕು.
12. ವೀಣಾ ಕೆ.ಎನ್., ಕಲಗಾರು, ಉ.ಕ.ಜಿಲ್ಲೆ.
13. ವಿಶ್ವನಾಥ ಕುಲಕರ್ಣಿ, ಹಳೇ ಹುಬ್ಬಳ್ಳಿ, ಧಾರವಾಡ ಜಿಲ್ಲೆ.

## 1984–1985

1. ಬಸವರಾಜಪ್ಪ ಎಸ್.ಬಿ., ಭರಮಸಾಗರ, ಚಿತ್ರದುರ್ಗ ಜಿಲ್ಲೆ.
2. ಚನ್ನಬಸಪ್ಪ ಎ.ಡಿ., ಮುಂಗೋಟಿ, ಭದ್ರಾವತಿ ತಾಲೂಕು.
3. ಕೃಷ್ಣಕುಮಾರ್ ಬಿ., ಬಾಳೇಕುಡಿಮನೆ, ಬಂಟ್ವಾಳ.
4. ಮಹೇಶ್ ಪಾಟೀಲ್, ಬೀದರ್.
5. ಮಂಜುನಾಥ ಹರಿಹರ, ಹರಿಹರ.
6. ನಾಗರಾಜ ಆರ್. ಜೋಷಿ, ಸೋಂದಾ, ಸಿರ್ಸಿ ತಾಲೂಕು.
7. ಫಣಿಯಮ್ಮ ಹೆಚ್.ಎಸ್., ಹೊನ್ನೇಸರ, ಸಾಗರ ತಾಲೂಕು.
8. ಪ್ರದೀಪ್ ಕುಮಾರ್ ಕೆ.ಎಂ., ಕಾಸರಗೋಡು, ಕೇರಳ ರಾಜ್ಯ.
9. ಕೆ.ಎಸ್.ರಮೇಶ್, ಮಂಡ್ಯ.

10. ರಮಾನಂದ ಹೆಗಡೆ ಆರ್., ಐನಕೈ, ಸಿದ್ಧಾಪುರ ತಾಲೂಕು.
11. ಕೆ.ಎಸ್.ಶರತ್, ಮೈಸೂರು.
12. ಸುಶೀಲಾ ಕೆಳಮನೆ, ಹೆಗ್ಗೋಡು, ಸಾಗರ ತಾಲೂಕು.
13. ವನಜಾಕ್ಷಿ ಹೆಗಡೆ, ಕೊಳಗಿ, ಸಿದ್ಧಾಪುರ ತಾಲೂಕು.
14. ವಿಶ್ವೇಶ್ವರ ಹಳ್ಳಿಕೇರಿಮಠ, ಗದಗ.
15. ವಿಶ್ವೇಶ್ವರಿ ಆರ್.ಕಲ್ಮಠ, ಕಿತ್ತೂರು, ಬೆಳಗಾಂ ಜಿಲ್ಲೆ.

## 1985–1986

1. ಭಾಗೀರಥಿಬಾಯಿ ಕದಂ, ಬೆಂಗಳೂರು.
2. ಚಿದಾನಂದಗೌಡ ಎ., ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ.
3. ದೊರೆಸ್ವಾಮಿ ಪಿ., ಉಪ್ಪಾರಹಳ್ಳಿ, ತುಮಕೂರು ಜಿಲ್ಲೆ.
4. ಗಜಾನನ ಹೆಚ್.ಸಿ., ಹಂದಿಗೋಡು, ಸಾಗರ ತಾಲೂಕು.
5. ಹುಲುಗಪ್ಪ ಕಟ್ಟೀಮನಿ, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ.
6. ಜಗದೀಶ್ ಎಂ., ಮತ್ತಿಕೆರೆ, ಬೆಂಗಳೂರು.
7. ಎ.ಸಿ.ಕಾರಿಯಪ್ಪ, ಕೊಡಗು.
8. ಮಂಜುನಾಥ ಪಟೇಲ್ ಜಿ.ಪಿ., ಚೀಲೂರು, ಹೊನ್ನಾಳಿ ತಾಲೂಕು.
9. ಪ್ರಭಾಕರ ಜೋಶಿ, ಸೇಡಂ, ಗುಲ್ಬರ್ಗಾ ಜಿಲ್ಲೆ.
10. ಪುಷ್ಪಾ ಎಸ್.ಆರ್., ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.
11. ರೇಣುಕಾ ಸಿ.ಎಸ್., ಮಡಿಕೇರಿ ತಾಲೂಕು, ಕೊಡಗು ಜಿಲ್ಲೆ.
12. ಯಶವಂತ ಸರ್‌ದೇಶಪಾಂಡೆ, ಹುಬ್ಬಳ್ಳಿ.

## 1986–1987

1. ಧ್ರುವರಾಜ ದೇಶಪಾಂಡೆ, ಹುನಗುಂದ, ಬಾಗಲಕೋಟೆ ಜಿಲ್ಲೆ.
2. ಈಶ್ವರ ಸಿ.ನಾಯಕ್, ನೆಜ್ಜೂರು, ಸಿದ್ಧಾಪುರ ತಾಲೂಕು.
3. ಇಸ್ಮಾಯಿಲ್, ಅಂಬಲಗೋಲ, ಶಿಕಾರಿಪುರ ತಾಲೂಕು.
4. ಕವಿತಾ ಎ.ಎನ್., ಈಚಲಕೊಪ್ಪ, ಹೊಸನಗರ ತಾಲೂಕು.
5. ಮಂಜುನಾಥಶೆಟ್ಟಿ ಆರ್., ಕಟಪಾಡಿ, ಉಡುಪಿ ಜಿಲ್ಲೆ.
6. ಮಹಲಿಂಗಯ್ಯ ಎಂ., ದಾವಣಗೆರೆ.
7. ಪ್ರಭು ಅಂಗಡಿ, ಹಿರೇಬೊಮ್ಮನಾಲ್, ಕೊಪ್ಪಳ ಜಿಲ್ಲೆ.
8. ಪ್ರಮೋದ ಶಿಗ್ಗಾಂವ್, ಹಳೇಹುಬ್ಬಳ್ಳಿ, ಧಾರವಾಡ ಜಿಲ್ಲೆ.
9. ರಮೇಶ್ ಕೆ.ಎಸ್., ತುರುವೇಕೆರೆ, ತುಮಕೂರು ಜಿಲ್ಲೆ.
10. ರಮೇಶ್ ಆರ್., ಶ್ರೀನಿವಾಸಪುರ, ಕೋಲಾರ ಜಿಲ್ಲೆ.

11. **ಶಿವರಾಮಯ್ಯ,** ಸಾತನೂರು, ಬೆಂಗಳೂರು ಗ್ರಾಮಾಂತರ.
12. **ಸರೋಜ ಮಂಜುನಾಥ ಹೆಗಡೆ,** ಹಳೇಕಾನಗೋಡು, ಉ.ಕ.ಜಿಲ್ಲೆ.
13. **ತಿಪ್ಪೇಸ್ವಾಮಿ ಡಿ.,** ದಂಡಿನಕುರುಬರ ಹಟ್ಟಿ, ಚಿತ್ರದುರ್ಗ ಜಿಲ್ಲೆ.
14. **ವಿನೋದ್‌ಕುಮಾರ್ ಅಂಬೇಕರ್,** ಬಾದಾಮಿ, ಬಾಗಲಕೋಟೆ ಜಿಲ್ಲೆ.
15. **ವಿನಾಯಕ ಭಟ್,** ಕಡೇಮನೆ, ಯಲ್ಲಾಪುರ, ಉ.ಕ.ಜಿಲ್ಲೆ.

## 1987–1988

1. **ಗೋಪಾಲರಾವ್,** ಮಾನ್ವಿ, ರಾಯಚೂರು ಜಿಲ್ಲೆ.
2. **ಕಮಲಾಕ್ಷಿ,** ಬಲೆಗಲ್ಲು ಸಾಗರ ತಾ. ಶಿವಮೊಗ್ಗ ಜಿಲ್ಲೆ.
3. **ಕೃಷ್ಣಮೂರ್ತಿ ಕವತ್ತೂರು,** ಬಾಳಕುಂಜೆ, ಮೂಲ್ಕಿ, ಮಂಗಳೂರು ಜಿಲ್ಲೆ.
4. **ಮಾಧವ ದೇಶಪಾಂಡೆ,** ಅನಸೂರ್‌ಕರ್‌ಗಲ್ಲಿ, ಬೆಳಗಾಂ.
5. **ಪದ್ಮಾವತಿ ಎಂ.ವಿ.,** ಬ್ರಾಹ್ಮಣಕೆಪ್ಪಿಗೆ, ಸಾಗರ ತಾ. ಶಿವಮೊಗ್ಗ ಜಿಲ್ಲೆ.
6. **ಶ್ವೇತಕುಮಾರ್ ಕೆ.,** ಬಸವಾನಿ, ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ.
7. **ಎ.ಎಂ.ಶಿವಕುಮಾರ್,** ಬಸವಾಪಟ್ಟಣ, ಶಿವಮೊಗ್ಗ ಜಿಲ್ಲೆ.
8. **ಸುಬ್ಬಯ್ಯ ಹೆಚ್.ಕೆ.,** ಹೆತ್ತೂರು, ಸಕಲೇಶಪುರ ತಾ. ಹಾಸನ ಜಿಲ್ಲೆ.
9. **ಸಿದ್ದರಾಜು ಸೊನ್ನದ,** ಡಾ.ಅಂಬೇಡ್ಕರ್ ರಸ್ತೆ, ಬಾಗಲಕೋಟೆ.
10. **ಶೋಭಾ ಹೆಗಡೆ,** ಸಿರ್ಸಿ ತಾ. ಉತ್ತರ ಕನ್ನಡ ಜಿಲ್ಲೆ.
11. **ಶ್ರೀಕಾಂತ ಕಾಂಬ್ಳಿ,** ನಾಗರಮುನೋಲಿ, ಚಿಕ್ಕೋಡಿ, ಬೆಳಗಾಂ ಜಿಲ್ಲೆ.
12. **ಉಮಾ ನಟರಾಜ್** ಏಣಗಿ, ಸವದತ್ತಿ, ಬೆಳಗಾಂ ಜಿಲ್ಲೆ.
13. **ಉಮೇಶ್ ಟಂಕಸಾಲಿ,** ಸಲಪೇಟೆ, ಬಾಗಲಕೋಟೆ ಜಿಲ್ಲೆ.
14. **ವಿದ್ಯಾರಣ್ಯ ಬಿ.ಎಸ್.,** ಬನಶಂಕರಿ 2ನೇ ಹಂತ, ಬೆಂಗಳೂರು.

## 1988–1989

1. **ಬಂಡು ಕುಲಕರ್ಣಿ,** ಕೆರೂರು, ಬಾಗಲಕೋಟೆ ಜಿಲ್ಲೆ.
2. **ಗಣೇಶ್ ಪ್ರಸಾದ್ ಹೆಚ್.ಕೆ.,** ಚಿಕ್ಕಮಗಳೂರು.
3. **ಜಯರಾಮಯ್ಯ,** ಅಶೋಕನಗರ, ಮಂಗಳೂರು.
4. **ಮಹಾಬಲ ಕಲ್ಮಡ್ಕ,** ಕೆರೋಡಿಮನೆ, ಸುಳ್ಯ ತಾ. ದ.ಕ. ಜಿಲ್ಲೆ.
5. **ಪ್ರಕಾಶ್ ಎನ್.ಗರೂಡ್,** ಕೆ.ಪಿ.ರಾಣಿ ರಸ್ತೆ, ಗದಗ.
6. **ಪದ್ಮಿನಿ ಗುರುದಾಸ್,** ಶಹಾಬಾದ್, ಗುಲ್ಬರ್ಗಾ.
7. **ಟಿ.ರಂಗನಾಥ್,** ಹರಿಹರ, ದಾವಣಗೆರೆ.
8. **ರಜನಿಭಟ್ ಕೆರೆಕೈ,** ಸಿರ್ಸಿ, ಉ.ಕ.ಜಿಲ್ಲೆ.

9. ರಮೇಶ್ ಡಿ.ಸಂಗೊಳ್ಳಿ, ಸವದತ್ತಿ, ಬೆಳಗಾಂ ಜಿಲ್ಲೆ.
10. ಎ.ಕೆ.ರಾಮಪ್ಪ, ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ.
11. ಸುಶೀಲಾ ಎಂ.ಎ., ತುಮರಿ, ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ.
12. ಸಿದ್ಧರಾಜ ಕಲ್ಯಾಣಕರ್, ನವನಗರ, ಹುಬ್ಬಳ್ಳಿ.
13. ಉಷಾ ಯು.ಭಂಡಾರಿ, ತೊಕ್ಕೋಡು, ಉಳ್ಳಾಲ, ದ.ಕ.ಜಿಲ್ಲೆ.
14. ವಿಕ್ರಮ ಸೇಕರ ಪಿ., ಬೆಂಗೇರಿ ಬಡಾವಣೆ, ಹುಬ್ಬಳ್ಳಿ.

**1989–1990**

1. ಭರಮಣ್ಣ ಬೆಟಗೇರಿ, ಕರಮುಡಿ, ಕೊಪ್ಪಳ ಜಿಲ್ಲೆ.
2. ಬೆಳ್ಳಿಯಪ್ಪ ಎಂ.ಪಿ., ಬಟ್ಟಳ್ಳ ಅಂಚೆ, ಮಡಿಕೇರಿ.
3. ಗಣಪತಿ ಬಿ.ಹೆಗಡೆ, ಹಿತ್ಲಕೈ, ಉ.ಕ.ಜಿಲ್ಲೆ.
4. ಇಸ್ಮಾಯಿಲ್ ಬ್ಯಾರಿ, ವಿಟ್ಲ, ದ.ಕ.ಜಿಲ್ಲೆ.
5. ಕೆ.ಕೃಷ್ಣಭಟ್, ಗುತ್ತಿಗಾರು, ಸುಳ್ಯ ತಾಲೂಕು, ದ.ಕ.ಜಿಲ್ಲೆ.
6. ಲಕ್ಷ್ಮೀ ಕಬ್ಬೇರಳ್ಳಿ, ಅತ್ತಿಕೊಳ್ಳ, ಧಾರವಾಡ ಜಿಲ್ಲೆ.
7. ಮಹಾಬಲೇಶ್ವರ ಧೀರನ್, ಕಡೆಗೋಡಿ ಧಾರೇಶ್ವರ, ಕುಮಟಾ ತಾ.

ಉ.ಕ.ಜಿಲ್ಲೆ.

8. ಹೆಚ್.ಎಸ್.ನಂದಕುಮಾರ್, ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ.
9. ನಾಗೇಂದ್ರಪ್ರಭು.ಎಸ್., ಕೊಳ್ಳೇಗಾಲ, ಮೈಸೂರು ಜಿಲ್ಲೆ.
10. ಪ್ರತೀಶ್ ಕೊಟ್ಯಾನ್, ಬ್ರಹ್ಮಾವರ, ಉಡುಪಿ ಜಿಲ್ಲೆ.
11. ರಾಜೇಶ್ವರಿ ಪಿ.ಆರ್., ತಿಪಟೂರು, ತುಮಕೂರು ಜಿಲ್ಲೆ.
12. ಟಿ.ಆರ್.ಶ್ರೀನಿವಾಸಮೂರ್ತಿ, ತಿಪಟೂರು, ತುಮಕೂರು ಜಿಲ್ಲೆ.
13. ಶ್ರೀಧರಾಚಾರಿ, ಹೊನ್ನಾಳಿ, ದಾವಣಗೆರೆ ಜಿಲ್ಲೆ.
14. ಎಂ.ಶ್ರೀನಿವಾಸ, ಟಿ.ದಾಸರಹಳ್ಳಿ, ಬೆಂಗಳೂರು.
15. ವೀಣಾ, ಕಡಗದಾಳು, ಬೆಟ್ಟಳ್ಳಿ, ಮಡಿಕೇರಿ.
16. ವಿಜಯ ಕುಲಕರ್ಣಿ, ಬಸವೇಶ್ವರನಗರ, ಗುಲ್ಬರ್ಗಾ.
17. ವಿವೇಕಾನಂದ ಎಲಿಗಾರ್, ಮಸ್ಕಿ, ರಾಯಚೂರು ಜಿಲ್ಲೆ.

1990–1991

1. ವೈ.ಡಿ.ಬಾದಾಮಿ, ಅಸಾರಗಲ್ಲಿ, ಬಿಜಾಪುರ.
2. ಧರ್ಮೇಂದ್ರ ಕುಮಾರ್, ತಿಪಟೂರು, ತುಮಕೂರು ಜಿಲ್ಲೆ.
3. ಗಜಾನನ ವಿ.ಹೆಗಡೆ, ಬೆಣ್ಣೆಮನೆ, ಹೊನ್ನಾವರ, ಉ.ಕ.ಜಿಲ್ಲೆ.

4. ಬಿ.ಆರ್. ಗೋಪಿನಾಥ್, ಉಪ್ಪಾರಹಳ್ಳಿ, ಬೆಂಗಳೂರು.
5. ಕಲಮಾಲಕ್ಷ್ಮಿ ಹೆಚ್.ಪಿ., ಮೂಡಿಗೆರೆ ತಾಲೂಕು, ಚಿಕ್ಕಮಗಳೂರು ಜಿಲ್ಲೆ.
6. ಮುರಹರಿ ಪಿ., ಕಾಸರಗೋಡು, ಕೇರಳ.
7. ಪಾಂಡುರಂಗಭಟ್ ಕೆ., ಹೊನ್ನಾವರ, ಉ.ಕ.ಜಿಲ್ಲೆ.]
8. ಎಸ್.ಡಿ.ಶೈಲಶ್ರೀ, ಜಗಳೂರು, ದಾವಣಗೆರೆ ಜಿಲ್ಲೆ.
9. ಹೆಚ್.ಜಿ.ಶಿವಾನಂದ, ಹಾಲ್ಮತ್ತೂರು, ಚಿಕ್ಕಮಗಳೂರು ಜಿಲ್ಲೆ.
10. ಉಮಾಮಹೇಶ್ವರ ಹೆಗಡೆ, ಯಲ್ಲಾಪುರ, ಉ.ಕ.ಜಿಲ್ಲೆ.
11. ಉದಯ ಕಶ್ಯಪ, ಪುತ್ತೂರು, ದ.ಕ.ಜಿಲ್ಲೆ.

**1991–1992**

1. ಅಚ್ಯುತ ಕುಮಾರ್ ಹೆಚ್.ಕೆ., ತಿಪಟೂರು, ತುಮಕೂರು ಜಿಲ್ಲೆ.
2. ಆನಂದ, ಅಂತರಸನಹಳ್ಳಿ, ತುಮಕೂರು ಜಿಲ್ಲೆ.
3. ಚಂದ್ರಶೇಖರಾಚಾರ್, ಹೆಗ್ಗೋಠಾರ, ಚಾಮರಾಜನಗರ ಜಿಲ್ಲೆ.
4. ಗೋಪಾಲಕೃಷ್ಣ ಎನ್., ಗೌರಿಬಿದನೂರು, ಕೋಲಾರ ಜಿಲ್ಲೆ.
5. ಜೀವನರಾಮ್ ಸುಳ್ಯ, ಸುಳ್ಯ, ದ.ಕ.ಜಿಲ್ಲೆ.
6. ಕಲ್ಲೇಶ್ವರ ಹೆಚ್.ಬಿ., ಚನ್ನಗಿರಿ, ದಾವಣಗೆರೆ ಜಿಲ್ಲೆ.
7. ಮಧುಮತಿ ಜಂಗಮಶೆಟ್ಟಿ, ಗುಲ್ಬರ್ಗಾ.
8. ಮಧುಸೂದನ ಬಿ.ಆರ್., ಸೋಮವಾರಪೇಟೆ, ಕೊಡಗು ಜಿಲ್ಲೆ.
9. ಮಹಾಲಕ್ಷ್ಮೀ ಎಸ್.ಎ., ಹೊಸಕೊಪ್ಪ, ಚಿಕ್ಕಮಗಳೂರು ಜಿಲ್ಲೆ.
10. ಮಂಜುಳಾ ಎನ್., ಸಾಣೇಹಳ್ಳಿ, ಚಿತ್ರದುರ್ಗ ಜಿಲ್ಲೆ.
11. ಮಕ್ತಾರ್ ಅಹ್ಮದ್ ಹೆಚ್. ಪಠಾಣ, ಯಲ್ಲಾಪುರ, ಉ.ಕ.ಜಿಲ್ಲೆ.
12. ನಟರಾಜ್ ಹೊನ್ನವಳ್ಳಿ, ತಿಪಟೂರು, ತುಮಕೂರು ಜಿಲ್ಲೆ.
13. ಬಿ.ಎಂ.ಎಸ್.ಪ್ರಭು, ಮರಿಯಮ್ಮನಹಳ್ಳಿ, ಹೊಸಪೇಟೆ.
14. ರಾಮಕೃಷ್ಣಯ್ಯ ಕೆ., ಗೌರಿಬಿದನೂರು, ಕೋಲಾರ ಜಿಲ್ಲೆ.
15. ವಿಜಯಾ ವೈ., ಮುಳವಾಡ, ಬಿಜಾಪುರ ಜಿಲ್ಲೆ.

**1992–1993**

1. ಬಾಲಸುಬ್ರಹ್ಮಣ್ಯ ಕೆ.ಆರ್., ಬಾಲಂಬಿ, ಕೊಡಗು ಜಿಲ್ಲೆ.
2. ಚನ್ನಪ್ಪಯ್ಯ ಬಿ.ಸಿ., ಬೆಳಲಕಟ್ಟೆ ಗ್ರಾಮ, ಶಿವಮೊಗ್ಗ ತಾಲೂಕು.
3. ಗೋಣೆ ಬಸವೇಶ್ವರ ಹೊಸಮನಿ, ಹರಪ್ಪನಹಳ್ಳಿ, ಬಳ್ಳಾರಿ ಜಿಲ್ಲೆ.
4. ಹನುಮಂತಪ್ಪ ಹೆಚ್., ಕಾಗಿನೆಲ್ಲಿ, ಶಿಕಾರಿಪುರ, ಶಿವಮೊಗ್ಗ.
5. ಎಸ್.ಬಿ.ಹೇಮಂತ್‌ಕುಮಾರ್, ಸೊಲ್ಲಾಪುರ, ಮಹಾರಾಷ್ಟ್ರ.

6. **ಕೆ.ಸಿ.ಕುಮಾರ್**, ಸಕಲೇಶಪುರ, ಹಾಸನ ಜಿಲ್ಲೆ.
7. **ಮುನಿ ಚೌಡಪ್ಪ**, ಮದ್ದೂರು, ಮಂಡ್ಯ ಜಿಲ್ಲೆ.
8. **ನಾಗರಾಜ್ ಎಂ.ಸಿ.**, ಕನಕಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
9. **ಶಿವಲಿಂಗ ಬಾದಾಮಿ**, ಕರ್ಚೇಡು, ಬಳ್ಳಾರಿ ಜಿಲ್ಲೆ.
10. **ಸೆಲ್ವರಾಜ್ ಪಿ.**, ಕಾಸರಗೋಡು, ಕೇರಳ.
11. **ಸುನಂದಾ ಗುರುವಾ**, ಹೊಸತಿಪ್ಪಸಂದ್ರ, ಬೆಂಗಳೂರು.
12. **ಸೌಮ್ಯಾ ವರ್ಮಾ**, ಬಸವನಗುಡಿ, ಬೆಂಗಳೂರು.
13. **ಶಾಂತಾ ದೇ.ನಾಯಕ್**, ಧಾರವಾಡ.
14. **ತಾಜೂಮಾ ಎ.**, ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ.
15. **ವೆಂಕಟೇಶ ಎಂ.**, ರಾಯಚೂರು.
16. **ವೈ.ಕೆ.ಯಶೋಧಾ**, ಹೊಸಜೋಗ, ತೀರ್ಥಹಳ್ಳಿ ತಾಲೂಕು.

## 1993–1994

1. **ಭುವನೇಶ್ವರಿ ಎಸ್.ಡಿ.**, ಜಗಳೂರು, ದಾವಣಗೆರೆ ಜಿಲ್ಲೆ.
2. **ಗಣೇಶಯ್ಯ ಕೆ.ಪಿ.ಎಂ.**, ಚನ್ನಗಿರಿ, ದಾವಣಗೆರೆ ಜಿಲ್ಲೆ.
3. **ಮಧುಸೂದನ ಶೆಟ್ಟಿ**, ಲಿಂಗಸೂಗೂರು, ರಾಯಚೂರು ಜಿಲ್ಲೆ.
4. **ಹೆಚ್.ಜಿ.ಸದಾಫ್**, ಕನಮುಡಿ, ಬಿಜಾಪುರ ಜಿಲ್ಲೆ.
5. **ಕೆ.ನಾಗರಾಜ್**, ಗಂಗಾವತಿ, ಕೊಪ್ಪಳ ಜಿಲ್ಲೆ.
6. **ಪದ್ಮಾವತಿ ಕೆ.ಆರ್.**, ಬಾಳಂಬಿ, ಮಡಿಕೇರಿ, ಕೊಡಗು ಜಿಲ್ಲೆ.
7. **ಪ್ರಕಾಶ್ ಮೇಹು**, ಮೈಸೂರು.
8. **ರವೀಂದ್ರ ಬಿ.ಎನ್.**, ಬೆಳವಾಡಿ, ಚಿಕ್ಕಮಗಳೂರು ಜಿಲ್ಲೆ.
9. **ರೇಣುಕಾ ಎಸ್.ಎನ್.**, ಕೊಣಾಜೆ, ಸುಳ್ಯ, ದ.ಕ. ಜಿಲ್ಲೆ.
10. **ಶಶಿಧರ ಅರಿಶಿಣಗೋಡಿ**, ಹುನಗುಂದಾ, ಬಾಗಲಕೋಟೆ ಜಿಲ್ಲೆ.
11. **ಸಂದೀಪ್ ಪಿ.ಎಸ್.**, ಇಂದಿರಾನಗರ, ಬೆಂಗಳೂರು.
12. **ಸಿದ್ದರಾಜು ಎಸ್.ಎಸ್.**, ದಾವಣಗೆರೆ.
13. **ಸುಬ್ರಹ್ಮಣ್ಯ ಎಸ್.**, ಜಗಜೀವನರಾಮ್ ನಗರ (ದಕ್ಷಿಣ), ಬೆಂಗಳೂರು.
14. **ಸುಷ್ಮಾ ಜಿ.ಕೆ.**, ಗುಬ್ಬಿ, ತುಮಕೂರು ಜಿಲ್ಲೆ.
15. **ಎಂ.ಎ. ಸೌಮ್ಯಾ ಯಾಜಿ**, ಜೆ.ಪಿ.ನಗರ, ಬೆಂಗಳೂರು.

## 1994–1995

1. **ಚಿತ್ರಮ್ಮ ಎ.ಕೆ.(ಅನಿತಾ ಎಸ್.)**, ಚನ್ನಗಿರಿ, ದಾವಣಗೆರೆ ಜಿಲ್ಲೆ.
2. **ಗಜಾನನ ಟಿ.ನಾಯ್ಕ**, ಹೊನ್ನಾವರ, ಉ.ಕ.ಜಿಲ್ಲೆ.

3. ಹನುಮಕ್ಕ ಡಿ., ಮರಿಯಮ್ಮನಹಳ್ಳಿ, ಹೊಸಪೇಟೆ, ಬಳ್ಳಾರಿ ಜಿಲ್ಲೆ.
4. ಕೃಷ್ಣಕುಮಾರ್ ಯಾದವ್ ಕೆ.ಎಂ., ಆರ್.ಟಿ.ನಗರ, ಬೆಂಗಳೂರು.
5. ಕುಬೇರಪ್ಪ ಡಿ.ಬಿ., ಹಿರೇಜಂಬೂರು, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ.
6. ಮಹಾಂತೇಶ್ ಎಂ., ಸವದತ್ತಿ, ಬೆಳಗಾಂ ಜಿಲ್ಲೆ.
7. ಮಾಲತೇಶ ಆರ್.ಬಡಿಗೇರ, ಶಿರಹಟ್ಟಿ, ಗದಗ ಜಿಲ್ಲೆ.
8. ಮಲ್ಲಿಕಾರ್ಜುನ ಎಸ್., ಬನಹಟ್ಟಿ, ಬಾಗಲಕೋಟೆ, ಜಿಲ್ಲೆ.
9. ಮಂಜಪ್ಪ ಪಿ.ಎ., ವಿರಾಜಪೇಟೆ, ಕೊಡಗು ಜಿಲ್ಲೆ.
10. ಎನ್.ಆರ್.ಮುಖೇಶ್, ನಾಗಮಂಗಲ, ಮಂಡ್ಯ ಜಿಲ್ಲೆ.
11. ನರಸಿಂಹಯ್ಯ ಎಂ.ಜಿ., ಗುಬ್ಬಿ, ತುಮಕೂರು ಜಿಲ್ಲೆ.
12. ಪರಶುರಾಮಪ್ರಿಯ ಎಂ., ಗಂಗಾವತಿ, ಕೊಪ್ಪಳ ಜಿಲ್ಲೆ.
13. ಸತ್ಯನಾರಾಯಣ ಕೊಡೇರಿ, ಕುಂದಾಪುರ, ಉಡುಪಿ ಜಿಲ್ಲೆ.
14. ಶೀನಾ ಎನ್.ಕೆ., ಹೊಸಮಠ, ಪುತ್ತೂರು, ದ.ಕ.ಜಿಲ್ಲೆ.
15. ಸುರೇಶ್ ಬಾಬು ಎಸ್., ಮುದ್ದೇಬಿಹಾಳ, ಬಿಜಾಪುರ ಜಿಲ್ಲೆ.

**1995–1996**

1. ಅನಿಲ್‌ಕುಮಾರ್ ಬಿ.ಆರ್., ತಿಪಟೂರು, ತುಮಕೂರು ಜಿಲ್ಲೆ.
2. ಬಸವನಗೌಡ ಹನುಮಗೌಡ ಹಿರೇಗೌಡ, ಹುನಗುಂದಾ, ಬಾಗಲಕೋಟೆ ಜಿಲ್ಲೆ.
3. ದರ್ಶನ್ ಎಸ್., ಮೈಸೂರು.
4. ಕೆ.ಜಗುಚಂದ್ರ, ಧಾರವಾಡ.
5. ಜಯಶೇಖರ ಎಂ.ಬಿ., ದೇವಚಳ್ಳ, ಸುಳ್ಯ, ದ.ಕ.ಜಿಲ್ಲೆ.
6. ಕೋಲಾರ ಡೋಂಗ್ರಿ ಹುಸೇನ್ ಸಾಬ್, ಬಿಜಾಪುರ.
7. ಮಂಜುಳಾ ಜಿ.ಎಸ್., ಚಿತ್ರದುರ್ಗ.
8. ಸಿ.ಪ್ರಶಾಂತ್ ಕುಮಾರ್, ಕೆ.ಸಿ.ನಗರ, ಬೆಂಗಳೂರು.
9. ರಾಜೇಶ್ವರಿ ಎನ್., ಸುಳ್ಯ, ದ.ಕ.ಜಿಲ್ಲೆ.
10. ರಾಮೇಶ್ವರಾನಂದ ಸ್ವಾಮಿ ಎಸ್.ಡಿ., ಜಗಳೂರು, ದಾವಣಗೆರೆ ಜಿಲ್ಲೆ.
11. ರತ್ನಾ ಎಸ್., ಸಕಲೇಶಪುರ, ಹಾಸನ ಜಿಲ್ಲೆ.
12. ಶಕುಂತಲಾ ನರಸಿಂಹ ಹೆಗಡೆ, ಶಿರಸಿ, ಉ.ಕ.ಜಿಲ್ಲೆ.
13. ಟಿ.ಎ.ಉಮಾ, ನಾಪೋಕ್ಲು, ಕೊಡಗು ಜಿಲ್ಲೆ.
14. ವಿಶ್ವನಾಥ ಬಕರೆ, ಆಳಂದ, ಗುಲ್ಬರ್ಗಾ ಜಿಲ್ಲೆ.
15. ಯೋಗೇಶ್ ಎಸ್., ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ.

**1996–1997**

1. **ಚನ್ನಕೇಶವ ಜಿ.,** ಕಲ್ಲಹಳ್ಳಿ, ಮಂಡ್ಯ.
2. **ಚಂದ್ರಮಾಲಿನಿ ಬಿ.ಆರ್.,** ಗಾಯತ್ರಿ ಉದ್ಯಾನವನ ಬಡಾವಣೆ, ಬೆಂಗಳೂರು.
3. **ದೀಪಕ್,** ಮೈಸೂರು.
4. **ಜಂಪಯ್ಯ ಜಿ.,** ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ.
5. **ಜಹಾಂಗೀರ್ ಎಂ.ಎಸ್.,** ಮರಿಯಮ್ಮನಹಳ್ಳಿ, ಹೊಸಪೇಟೆ, ಬಳ್ಳಾರಿ ಜಿಲ್ಲೆ.
6. **ಮಂಜುಳಾ ಪಿ.ಎ.,** ಹೊಸಪೇಟೆ, ಬಳ್ಳಾರಿ ಜಿಲ್ಲೆ.
7. **ಎಂ.ಜಿ.ನಾಗರಾಜ,** ಅತ್ತಿಗೆರೆ, ದಾವಣಗೆರೆ ಜಿಲ್ಲೆ.
8. **ನರೇಶ ಮಯ್ಯಾ ಅರ್.,** ಕನಕಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
9. **ಶೇಖರಪ್ಪ ಜಿ.,** ಸೊರಬ, ಶಿವಮೊಗ್ಗ ಜಿಲ್ಲೆ.
10. **ಸುರೇಶ್ ಅಂದಾಡಿ,** ಬ್ರಹ್ಮಾವರ, ಉಡುಪಿ ಜಿಲ್ಲೆ.
11. **ಸುರೇಶ್ ಶೆಟ್ಟಿ ಹೆಚ್.,** ಕಾಡಬೆಟ್ಟು, ಬಂಟ್ವಾಳ, ದ.ಕ.ಜಿಲ್ಲೆ.
12. **ಕೆ.ಎಸ್.ಶ್ರೀವತ್ಸ,** ಜಯನಗರ, ಬೆಂಗಳೂರು.
13. **ಶ್ರೀಧರ ಎನ್.ಶಾನಭಾಗ್,** ಕಾಪು, ಉಡುಪಿ ಜಿಲ್ಲೆ.
14. **ವಿ.ಶ್ರೀರಾಮಯ್ಯ,** ಹುತ್ತೂರು, ಕೋಲಾರ ಜಿಲ್ಲೆ.
15. **ಸವಿತಾ ಹಾಣೆಗೌಡ,** ಹೊನ್ನಾವರ, ಉ.ಕ.ಜಿಲ್ಲೆ.
16. **ಶಶಿಕಲಾ ಆರ್.,** ಸೊರಬ, ಶಿವಮೊಗ್ಗ ಜಿಲ್ಲೆ.
17. **ಶಾಮಲಾ ಕೆ.ಎಸ್.,** ಹೊಸನಗರ, ಶಿವಮೊಗ್ಗ ಜಿಲ್ಲೆ.

**1997–1998**

1. **ವೈ.ಕೆ.ಅಶ್ವತ್ಥ್,** ಟಿ.ನರಸೀಪುರ, ಮೈಸೂರು ಜಿಲ್ಲೆ.
2. **ಕೆ.ಪಿ.ಅಶ್ವತ್ಥನಾರಾಯಣ,** ಮಧುಗಿರಿ, ತುಮಕೂರು ಜಿಲ್ಲೆ.
3. **ಕೊಟ್ರಪ್ಪ ಜಿ.ಹಿರೇಮಾಗಡಿ,** ಕುಂಸಿ, ಶಿವಮೊಗ್ಗ ಜಿಲ್ಲೆ.
4. **ಮಲ್ಲಿಕಾರ್ಜುನ ಸ್ವಾಮಿ ಎನ್.,** ಚಿಕ್ಕನಾಯಕನ ಹಳ್ಳಿ, ತುಮಕೂರು ಜಿಲ್ಲೆ.
5. **ಪಿ.ಮಂಜುನಾಥ,** ಶಿರಾ, ತುಮಕೂರು ಜಿಲ್ಲೆ.
6. **ಮೃತ್ಯುಂಜಯ ಕೆ.ಹಿರೇಮಠ,** ಹಾನಗಲ್, ಧಾರವಾಡ ಜಿಲ್ಲೆ.
7. **ನಾರಾಯಣ ಜಿ.ಶೇರುಗಾರ್,** ಮಂಚಿಕೇರಿ, ಯಲ್ಲಾಪುರ, ಉ.ಕ.ಜಿಲ್ಲೆ.
8. **ಪದ್ಮಾವತಿ ವಿ.,** ಸಾಗರ, ಶಿವಮೊಗ್ಗ ಜಿಲ್ಲೆ.
9. **ಪ್ರವೀಣ್‌ಕುಮಾರ್ ಸಿ.,** ಜಮಖಂಡಿ, ಬಾಗಲಕೋಟೆ ಜಿಲ್ಲೆ.
10. **ಪ್ರೇಮಾ ಎಂ.,** ಹೊನ್ನೇಸರ, ಸಾಗರ, ಶಿವಮೊಗ್ಗ ಜಿಲ್ಲೆ.

11. ರುದ್ರಪ್ಪ ಎಸ್.ಬಿ., ಹೊನ್ನಾಳಿ, ದಾವಣಗೆರೆ ಜಿಲ್ಲೆ.
12. ಸಿ.ಆರ್.ಶ್ರೀಧರ ಭಾಗವತ್, ಹೊನ್ನೇಸರ, ಸಾಗರ, ಶಿವಮೊಗ್ಗ ಜಿಲ್ಲೆ.
13. ಕೆ.ಶೇಷಪ್ಪ ಅಡಿಗ, ಕೋಟಾ, ಉಡುಪಿ ಜಿಲ್ಲೆ.
14. ವೆಂಕಟೇಶ್ ಎನ್., ತೊಂಡೇಬಾವಿ, ಕೋಲಾರ ಜಿಲ್ಲೆ.
15. ವೀಣಾ ಎಂ.ಭೂಸನೂರುಮಠ, ಹುಬ್ಬಳ್ಳಿ.

## 1998–1999

1. ಬೈಜು ಎಂ., ತಿರುವನಂತಪುರಂ. ಕೇರಳ.
2. ಬಸವರಾಜಪ್ಪ ಆರ್., ರೋಣಾ, ಗದಗ ಜಿಲ್ಲೆ.
3. ದಾಕ್ಷಾಯಿಣಿ ಭಟ್ ಎ., ಶಿಕಾರಿಪುರ, ಶಿವಮೊಗ್ಗ ಜಿಲ್ಲೆ.
4. ಗಿರಿಧರ್‌ಮೂರ್ತಿ ಬಿ.ಹೆಚ್., ಭದ್ರಾವತಿ, ಶಿವಮೊಗ್ಗ ಜಿಲ್ಲೆ.
5. ಜೋಸೆಫ್ ಜಾನ್, ತಿರುವನಂತಪುರಂ, ಕೇರಳ.
6. ಕಸ್ತೂರಿ ಹ.ದಳವಾಯಿ, ಗೋಕಾಕ, ಬೆಳಗಾಂ ಜಿಲ್ಲೆ.
7. ಮಹೇಶ್ ವಿ.ಶಿಂಥೆ, ಇಂಡಿ, ಬಿಜಾಪುರ ಜಿಲ್ಲೆ.
8. ನಾಗೇಶ್‌ನಾಯ್ಕ ಡಿ., ಹಿರೇಕೆರೂರು, ಹಾವೇರಿ ಜಿಲ್ಲೆ.
9. ನಾಗರಾಜ ಸಿ.ವಿ., ಚೌಡಿಮನೆ, ಸಾಗರ, ಶಿವಮೊಗ್ಗ ಜಿಲ್ಲೆ.
10. ರತ್ನಾ ಹೆಗ್ಗಡೆ, ಭೀಮನಕೋಣೆ, ಸಾಗರ, ಶಿವಮೊಗ್ಗ ಜಿಲ್ಲೆ.
11. ಪ್ರಭುಲಿಂಗ, ಅಷ್ಟಗ, ಗುಲ್ಬರ್ಗಾ ಜಿಲ್ಲೆ.
12. ಸದಾನಂದ, ಗುಜ್ಜಾಡಿ, ಕುಂದಾಪುರ, ಉಡುಪಿ ಜಿಲ್ಲೆ.
13. ಸಮತಾ ಪಿ.ಜಿ., ಮೈಸೂರು.
14. ಸತೀಶ ಟಿ.ಹೆಚ್., ತಿಪಟೂರು, ತುಮಕೂರು ಜಿಲ್ಲೆ.
15. ಶಿವಕುಮಾರ್ ಎನ್., ತುಮಕೂರು.
16. ವಾಣಿ ಬಿ.ಎಸ್., ಸೋಮವಾರಪೇಟೆ, ಕೊಡಗು ಜಿಲ್ಲೆ.

## 1999–2000

1. ಭಾನುಪ್ರಕಾಶ್ ಎಸ್.ವಿ., ಕಡಗತ್ತೂರು, ಮಧುಗಿರಿ, ತುಮಕೂರು ಜಿಲ್ಲೆ.
2. ದಿಗ್ವಿಜಯ, ಕೆರೆಮನೆ, ಸಾಗರ, ಶಿವಮೊಗ್ಗ ಜಿಲ್ಲೆ.
3. ಗಣೇಶ್ ಎಂ., ಸೂಲಿಬೆಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
4. ಗೀತಾಕುಮಾರಿ ಎಂ, ಅಜ್ಜಾವರ, ಸುಳ್ಯ, ದ.ಕ.ಜಿಲ್ಲೆ.
5. ಹುಲುಗಪ್ಪ ಜಿ.ವೀರಾಪುರ, ಮುಂಡರಗಿ, ಗದಗ ಜಿಲ್ಲೆ.
6. ಕೇಶವಮೂರ್ತಿ ಎ., ನಂದಿನಿ ಬಡಾವಣೆ, ಬೆಂಗಳೂರು.
7. ಕಿರಣ ನಾಯಕ, ಹೊನ್ನಾವರ, ಉ.ಕ.ಜಿಲ್ಲೆ.

8. ಕುಮಾರಪ್ಪ ಹೆಚ್., ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ.
9. ಲಲಿತಾ ವಿ.ಎಸ್., ಸೊರಬ, ಶಿವಮೊಗ್ಗ ಜಿಲ್ಲೆ.
10. ಲೋಕೇಶ್ ಕೆ.ಪಿ., ಕಾಮಸಮುದ್ರ, ಚಾಮರಾಜನಗರ ಜಿಲ್ಲೆ.
11. ಪ್ರವೀಣ್ ಕುಮಾರ್ ರೆಡ್ಡಿ ಪಿ., ಗುಂಜಹಳ್ಳಿ, ರಾಯಚೂರು ಜಿಲ್ಲೆ.
12. ಸಹನಾ ಪಿ., ಹೊಸಪೇಟೆ, ಬಳ್ಳಾರಿ ಜಿಲ್ಲೆ.
13. ಶಿವನಾಯಕ, ಹುಲಿಹೈದರ, ಗಂಗಾವತಿ, ಕೊಪ್ಪಳ ಜಿಲ್ಲೆ.
14. ಉಷಾಮಣಿ ಎನ್., ಕುಪ್ಪಗಡ್ಡೆ, ಸೊರಬ, ಶಿವಮೊಗ್ಗ.
15. ವಿನಯಾ ಬಿ.ವಿ., ಬನಶಂಕರಿ, 2ನೇ ಹಂತ, ಬೆಂಗಳೂರು.

**2000–2001**

1. ಬಸವರಾಜ ಬಿ.ವಾಸನದ, ಸಪ್ತಾಪುರ, ಧಾರವಾಡ ಜಿಲ್ಲೆ.
2. ಗಿರಿಜಾ ಪರಶುರಾಮ್ ಸಿದ್ದಿ, ಯಲ್ಲಾಪುರ, ಉ.ಕ.ಜಿಲ್ಲೆ.
3. ಎನ್.ಜಗದೀಶ್, ಐಟಿಐ ಬಡಾವಣೆ, ಬೆಂಗಳೂರು.
4. ಜಯಶ್ರೀ ಗಾಢದ ಜಿ., ಹುಬ್ಬಳ್ಳಿ
5. ಲವಕುಮಾರ್ ಟಿ.ಹೆಚ್., ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾ.ಜಿಲ್ಲೆ.
6. ಮಲ್ಲಪ್ಪ ಆರ್.ಹೊಂಗಲ, ದೇವರ ಹುಬ್ಬಳ್ಳಿ, ಧಾರವಾಡ ಜಿಲ್ಲೆ.
7. ನಂದೀಶ್‌ಕುಮಾರ್ ಎಸ್.ಎಂ., ಸಕಲೇಶಪುರ, ಹಾಸನ ಜಿಲ್ಲೆ.
8. ಪ್ರಕಾಶ್ ಎಸ್., ಮೈಸೂರು.
9. ರಾಧಾ ಟಿ.ವಿ., ಮೈಸೂರು.
10. ರಾಜೇಶ್ ಎಸ್. ಶ್ರೀಪಾದಭಟ್, ಯಲ್ಲಾಪುರ, ಉ.ಕ.ಜಿಲ್ಲೆ.
11. ರಂಜಾನ್ ಸಾಬ್, ಕವಿತಾಳ, ರಾಯಚೂರು ಜಿಲ್ಲೆ.
12. ಸಿದ್ದರಾಮ ವಿ.ರಾಜಮಾನೆ, ಅಫ್ಜಲ್‌ಪುರ, ಗುಲ್ಬರ್ಗಾ ಜಿಲ್ಲೆ.
13. ಶಿವಶಂಕರಯ್ಯ ಹೆಚ್.ಇ., ಹಾಲ್ಕುರಿಕೆ, ತಿಪಟೂರು, ತುಮಕೂರು ಜಿಲ್ಲೆ.
14. ಶೀಲಾ ಬಿ., ಶುಂಠಿಕೊಪ್ಪ, ಕೊಡಗು ಜಿಲ್ಲೆ.
15. ಶೋಭಾ ಎನ್., ಸೊರಬ, ಶಿವಮೊಗ್ಗ ಜಿಲ್ಲೆ.
16. ಸುಧಾಮಣಿ ಜಿ., ಎನ್.ಆರ್.ಕಾಲೋನಿ, ಬೆಂಗಳೂರು.
17. ವೆಂಕಟೇಶ್ ಕೆ.ಕೆ., ಹೊಳಲು, ಮಂಡ್ಯ ಜಿಲ್ಲೆ.

**2001–2002**

1. ಅರುಣ್‌ಕುಮಾರ್ ಎಂ., ಸೊರಬ, ಶಿವಮೊಗ್ಗ ಜಿಲ್ಲೆ.
2. ಅಶ್ವತ್ಥಪ್ಪ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆ.
3. ಗಿರೀಶ್ ಜಿ.ಎಸ್., ಹೆಚ್.ಬಿ.ಆರ್., 1ನೇ ಹಂತ, ಬೆಂಗಳೂರು.

4. ಗಣಪತಿ ಹೋಬಳಿದಾರ್, ಬೈಂದೂರು, ಉಡುಪಿ ಜಿಲ್ಲೆ.
5. ಹನುಮಂತಪ್ಪ ಡಿ.ಸಿ., ಅಣ್ಣಾಪುರ, ದಾವಣಗೆರೆ ಜಿಲ್ಲೆ.
6. ಮಧುಕರ ಎಂ.ಎಲ್., ಮಳವಳ್ಳಿ, ಮಂಡ್ಯ ಜಿಲ್ಲೆ.
7. ಮಂಜುನಾಥ ಪಿ.ಎಂ., ಯಲಹಂಕ ಬೆಂಗಳೂರು.
8. ನಿತಾ ಮಿಶ್ರಾ, ಜಯನಗರ, ಬೆಂಗಳೂರು.
9. ಸದಾಫ್ ಯಾಸೀನಾ, ಧಾರವಾಡ.
10. ಸಂದೀಪ ಎಸ್.ಆರ್., ಮಲೇಬೆನ್ನೂರು, ದಾವಣಗೆರೆ ಜಿಲ್ಲೆ.
11. ಸಿಜಿ, ಅರೆಹಳ್ಳಿ, ಬೇಲೂರು, ಹಾಸನ ಜಿಲ್ಲೆ.
12. ಶ್ರೀಕಾಂತ್ ಎನ್.ವಿ., ದಾವಣಗೆರೆ.
13. ಸುಬ್ರಹ್ಮಣಿ ಬಿ., ಬಂಗಾರಪೇಟೆ, ಕೋಲಾರ ಜಿಲ್ಲೆ.
14. ಸುಮಿತ್ರಾ ರಮೇಶ್‌ನಾಯ್ಕ, ಅವರ್ಸಾ, ಅಂಕೋಲಾ, ಉ.ಕ.ಜಿಲ್ಲೆ.
15. ತಾಜುದ್ದೀನ್, ಹೊಸಪೇಟೆ, ಬಳ್ಳಾರಿ ಜಿಲ್ಲೆ.
16. ಅನಿತಾ ಅಣ್ಣಯ್ಯ ಯಾಜಿ, ಹೊನ್ನಾವರ, ಉ.ಕ.ಜಿಲ್ಲೆ.

**2002–2003**

1. ಅಂಜನಪ್ಪ ಕೆ., ಸಿದ್ದಾಪುರ, ಚಿತ್ರದುರ್ಗ ಜಿಲ್ಲೆ.
2. ಚಿನ್ನ ಬಿ.ಹೆಚ್., ಭದ್ರಾವತಿ, ಶಿವಮೊಗ್ಗ ಜಿಲ್ಲೆ.
3. ಗಣಪತಿ ಗೌಡ, ಹೊನ್ನಾವರ, ಉ.ಕ.ಜಿಲ್ಲೆ.
4. ಗೀತಾ ಪಿ.ಸಿದ್ದಿ, ಯಲ್ಲಾಪುರ, ಉ.ಕ.ಜಿಲ್ಲೆ.
5. ಹ್ಯಾಟಿ ರಮೇಶ್, ಮರಿಯಮ್ಮನಹಳ್ಳಿ, ಹೊಸಪೇಟೆ, ಬಳ್ಳಾರಿ ಜಿಲ್ಲೆ.
6. ಜೀವನ್‌ಕುಮಾರ್ ಬಿ., ಹೆಗ್ಗೋಡು, ಸಾಗರ.
7. ಮಧುಸ್ಮೃತಿ ಶುಕ್ಲಾ, ಬಸವನಗರ, ಬೆಂಗಳೂರು.
8. ಮಹಾಂತೇಶ, ರಾಮದುರ್ಗ, ಬೆಳಗಾಂ ಜಿಲ್ಲೆ.
9. ಮಂಜುನಾಥ ಎಲ್.ಬಡಿಗೇರ, ತಾವರೇಕೆರೆ, ಬೆಂಗಳೂರು.
10. ನಾಗರಾಜ ವಿ., ಅಹಮದಾಬಾದ್, ಗುಜರಾತ್.
11. ನಂದಿನಿ ಜೆ., ಚಿಕ್ಕಮಗಳೂರು.
12. ಪ್ರವೀಣ್‌ಕುಮಾರ್ ಬಿ., ಸುಳ್ಯ, ದ.ಕ.ಜಿಲ್ಲೆ.
13. ಸಹರಾ, ಗಂಗಾವತಿ, ಕೊಪ್ಪಳ ಜಿಲ್ಲೆ.
14. ಸಯ್ಯದ್ ಹುಸೇನ್, ತಿಪಟೂರು, ತುಮಕೂರು ಜಿಲ್ಲೆ.
15. ಸಂತೋಷ್ ಜಿ., ಕನ್ಯಾನ, ಕುಂದಾಪುರ, ಉಡುಪಿ ಜಿಲ್ಲೆ.
16. ವಾಸುದೇವ, ನಂದಿಬೆಟ್ಟು, ಕುಂದಾಪುರ, ಉಡುಪಿ.
17. ವೀರೇಶ್ ಎಂ.ಪಿ.ಎಂ., ದಾವಣಗೆರೆ.

**2003–2004**

1. ಅಜಯಸಿಂಹ ಕೆ.ವಿ., ಶಿವಮೊಗ್ಗ.
2. ಅರುಣಮೂರ್ತಿ, ಮೈಸೂರು.
3. ಬಾಲಾಜಿರಾವ್ ಕಾಮೋಜಿ, ಹುಕ್ಕೇರಿ, ಬೆಳಗಾಂ ಜಿಲ್ಲೆ.
4. ಕೈಲಾಸ್ ಟಿ.ವಿ., ತಿಪಟೂರು, ತುಮಕೂರು ಜಿಲ್ಲೆ.
5. ಕಲಾವತಿ ಬಿ.ಹೆಚ್., ಭದ್ರಾವತಿ, ಶಿವಮೊಗ್ಗ ಜಿಲ್ಲೆ.
6. ಕಲ್ಪನಾ ಕೆ., ಶಿಕಾರಿಪುರ, ಶಿವಮೊಗ್ಗ.
7. ಮಧುಕರ ಹೆಗ್ಗಡೆ, ಹೊಸನಗರ, ಶಿವಮೊಗ್ಗ.
8. ನವೀನ್ ಕುಮಾರ ಎನ್.ಎ., ಸುಳ್ಯ, ದ.ಕ.ಜಿಲ್ಲೆ.
9. ಓಂಕಾರ ಕಿಬೆ., ಬೆಳಗಾಂ.
10. ಪ್ರಶಾಂತ್ ಬಿ., ಸಾಗರ, ಶಿವಮೊಗ್ಗ ಜಿಲ್ಲೆ.
11. ರವಿ, ಬ್ರಹ್ಮಾಪೂರ, ಗುಲ್ಬರ್ಗಾ.
12. ರೇಣುಕಾ ಸಿದ್ದಿ., ಹಾಸಣಗಿ, ಉ.ಕ.ಜಿಲ್ಲೆ.
13. ಸತೀಶ್ ಎಂ.ಎನ್., ಮಳವಳ್ಳಿ, ಮಂಡ್ಯ ಜಿಲ್ಲೆ.
14. ಉಮಾ ಜಿ., ತ್ಯಾಗರಾಜನಗರ, ಬೆಂಗಳೂರು.
15. ವೇದಾವತಿ ಕೆ.ಸಿ., ಹೆಗ್ಗೋಡು, ಸಾಗರ.

**2004–2005**

1. ಆದಿತ್ಯ ಬಿ.ಯು., ಹೊಸನಗರ, ಶಿವಮೊಗ್ಗ.
2. ಚನ್ನಬಸವಸ್ವಾಮಿ ಹಿರೇಮಠ, ದೊಡ್ಡಬಳ್ಳಾಪುರ, ಬೆಂ.ಗ್ರಾ.
3. ಚರಣ ಸಿ.ಎಸ್., ಚನ್ನರಾಯಪಟ್ಟಣ, ಹಾಸನ ಜಿಲ್ಲೆ.
4. ಚಿತ್ರಾ ವಿ., ಚಾಮರಾಜನಗರ.
5. ಧೀರೇಂದ್ರ ಆಶ್ರಿತ್, ಹೈದರಾಬಾದ್.
6. ಈಡಿಗರ ವೆಂಕಟೇಶ, ಮರಿಯಮ್ಮನಹಳ್ಳಿ, ಹೊಸಪೇಟೆ.
7. ಗುರುರಾಜ ಎಲ್., ಹೊಸಪೇಟೆ.
8. ಕೃಷ್ಣಮೂರ್ತಿ ಎಂ., ಸೊರಬ, ಶಿವಮೊಗ್ಗ ಜಿಲ್ಲೆ.
9. ಮಹದೇವ್ರು ಹಡಪದ, ರಾಮದುರ್ಗಾ, ಬೆಳಗಾಂ.
10. ಮಲ್ಲೇಶಪ್ಪ ಎಂ., ಪಾವಗಡ, ತುಮಕೂರು ಜಿಲ್ಲೆ.
11. ಪ್ರಸನ್ನ ಡಿ., ಸಾಗರ, ಶಿವಮೊಗ್ಗ.
12. ಪೂರ್ಣಿಮಾ ವಿ.ಡಿ., ಮೈಸೂರು.
13. ರಾಘವೇಂದ್ರ ಎಸ್.ಆರ್., ಶಿವಮೊಗ್ಗ.
14. ರಾಮಣ್ಣ ಚ.ಮಡಿವಾಳರ, ಕುಂದಗೋಳ, ಧಾರವಾಡ ಜಿಲ್ಲೆ.

15. ಶ್ರೀಕಾಂತ ಕಮಟಿ, ಉ.ಕ.ಜಿಲ್ಲೆ.
16. ಶಾಂತಾಮಣಿ, ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ.
17. ಸವಿತಾ ಹೆಚ್.ಎಸ್., ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ.
18. ವೆಂಕಟೇಶ್ವರ ಕೆ., ಚನ್ನಗಿರಿ, ದಾವಣಗೆರೆ ಜಿಲ್ಲೆ.

**2005–2006**

1. ಆರೋಗ್ಯಸ್ವಾಮಿ, ನಂದಿನಿ ಬಡಾವಣೆ, ಬೆಂಗಳೂರು.
2. ಭಾಗ್ಯ ಇ., ಭದ್ರಾವತಿ, ಶಿವಮೊಗ್ಗ.
3. ಎಸ್.ಎನ್.ಭಾರತಿ, ಚಿಕ್ಕನಾಯಕನಹಳ್ಳಿ, ತುಮಕೂರು.
4. ಗೋಪಾಲಕೃಷ್ಣ ದೇಶಪಾಂಡೆ, ಇಳಕಲ್, ಬಾಗಲಕೋಟೆ ಜಿಲ್ಲೆ.
5. ವೈ.ಎಂ.ಹನುಮಂತ, ಮದ್ದೂರು, ಮಂಡ್ಯ ಜಿಲ್ಲೆ.
6. ಲೋಕನಾಥ, ಹೆಚ್.ಡಿ.ಕೋಟೆ, ಮೈಸೂರು ಜಿಲ್ಲೆ.
7. ಮಧುಸೂದನ ಇ.ಡಿ., ಮೈಸೂರು.
8. ಮೌನೇಶ್ ಎಲ್.ಬಡಿಗೇರ, ತಾವರೇಕೆರೆ, ಬೆಂಗಳೂರು.
9. ರಾಘವೇಂದ್ರ ಅನಂತ ದೇಶಭಂಡಾರಿ, ಶಿರಸಿ, ಉ.ಕ.ಜಿಲ್ಲೆ.
10. ಸಮನ್ವಿತ ಜೆ.ಎಸ್., ಮೈಸೂರು.
11. ಶಂಕರಬಾಬು ಬಿ.ಪಿ., ಚಾಮರಾಜನಗರ.
12. ಎನ್.ಶೇಖರಪ್ಪ, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ.
13. ಶ್ವೇತಾ ಎಸ್., ವಿಲ್ಸನ್‌ಗಾರ್ಡನ್, ಬೆಂಗಳೂರು.
14. ತಾರಾದೇವಿ ಪಿ., ಸಾಣೇಹಳ್ಳಿ, ಚಿತ್ರದುರ್ಗ ಜಿಲ್ಲೆ.
15. ಎಸ್.ಆರ್.ಉದಯ, ಟಿ.ನರಸೀಪುರ, ಮೈಸೂರು ಜಿಲ್ಲೆ.
16. ಕೆ.ಆರ್.ಉಪೇಂದ್ರನ್, ಕೊತ್ತಪಾಕ್ಕುಂ, ತಮಿಳುನಾಡು.
17. ವಿಕಾಸ್ ಕೆ.ಪಿ., ಆಲೂರು, ಹಾಸನ ಜಿಲ್ಲೆ.
18. ನಂ.ಯತೀಶ, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ.

**2006–2007**

1. ಅಮರೇಶ ಕೆ., ಕೆ.ಆರ್.ಪುರಂ, ಬೆಂಗಳೂರು.
2. ಅನ್ನಪೂರ್ಣಮ್ಮ, ಹೊಸಪೇಟೆ.
3. ಎ.ಎಸ್.ಅಪರ್ಣಾ, ಅವಿನಹಳ್ಳಿ, ಸಾಗರ.
4. ಅಶೋಕ, ಗುಲ್ಬರ್ಗಾ.
5. ದಾನಪ್ಪ ಮುಂಡಲಗಿ, ಮಹಾಲಿಂಗಪೂರ, ಮುಧೋಳ, ಬಾಗಲಕೋಟೆ ಜಿಲ್ಲೆ.

6. ಗಜೇಂದ್ರ ಕೆ., ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ.
7. ಹರೀಶ್ ಗುಂಗೇರಾ, ರಾಣಿಬೆನ್ನೂರು, ಹಾವೇರಿ ಜಿಲ್ಲೆ.
8. ಕೃಷ್ಣಮೂರ್ತಿ ಎನ್., ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ.
9. ಕುಸುಮಾ ಕೆ., ಮೈಸೂರು.
10. ಮಂಜುಳಾ, ಮೈಸೂರು.
11. ಮಂಜುನಾಥ, ರಾಮಸಮುದ್ರ, ಚಾಮರಾಜನಗರ ಜಿಲ್ಲೆ.
12. ಮೈಟಿ ಬೆವನ್ ಗಿಬ್ಬನ್, ಮಂಗಳೂರು.
13. ನಟರಾಜ ಎಲ್., ನೊಣವಿನ ಕೆರೆ, ತಿಪಟೂರು.
14. ಪ್ರದೀಪ ಎಂ., ಮೈಸೂರು.
15. ಪ್ರೀತಿ ಜೆ.ಕೆ., ಮಧುಗಿರಿ, ತುಮಕೂರು.
16. ವಿದ್ಯಾ ಕಾಮತ್ ಬಿ.ವಿ., ಬಾಳೆಹೊನ್ನೂರು, ಚಿಕ್ಕಮಗಳೂರು ಜಿಲ್ಲೆ.
17. ವಿನಯಾ ಬಿ.ಎಸ್., ನಂಜನಗೂಡು, ಮೈಸೂರು ಜಿಲ್ಲೆ.
18. ವಿಶ್ವನಾಥ ಎ.ಜಿ., ನಾಗೋಡಿ, ಹೊಸನಗರ.

## 2007–2008

1. ಧನಂಜಯ ಡಿ.ಜಿ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.
2. ದಾಕ್ಷಾಯಿಣಿ ಹೆಚ್.ಸಿದ್ದಿ, ದೇವರಕಲ್ಲಹಳ್ಳಿ, ಯಲ್ಲಾಪುರ, ಉ.ಕ.ಜಿಲ್ಲೆ.
3. ಟಿ.ಆರ್.ಗುರುರಾಜ, ತಲಕಾಡು, ಮೈಸೂರು ಜಿಲ್ಲೆ.
4. ಹರ್ಷ ಯು., ಉಳ್ಳೂರು, ಸಾಗರ, ಶಿವಮೊಗ್ಗ ಜಿಲ್ಲೆ.
5. ಇಸ್ಮಾಯಿಲ್ ಸಾಬ್, ಐರಣಿ, ಮಡ್ಲೇರಿ, ರಾಣಿಬೆನ್ನೂರು, ಹಾವೇರಿ ಜಿಲ್ಲೆ.
6. ಜ್ಯೋತಿ ಹೆಚ್.ಪಿ., ಹೆರಗು, ಹಾಸನ ಜಿಲ್ಲೆ.
7. ಕಲ್ಲಪ್ಪ ಹನುಮಂತ ಹೂಗೇರಾ, ಸಾಲಾಪುರ, ಬೆಳಗಾಂ.
8. ನಾಗಶ್ರೀ ಎನ್., ಶಿವಮೊಗ್ಗ.
9. ನಿರ್ಮಲಾ ಬಿ., ಮರಿಯಮ್ಮನಹಳ್ಳಿ, ಹೊಸಪೇಟೆ.
10. ರಾಜಶೇಖರ ಎಂ.ಬಿ., ಮಡಿಕೆಹಳ್ಳಿ, ತುಮಕೂರು.
11. ರೋನಾ ಮರ್ಲಿನ್ ಪಿಯರ್ಸೆ, ಇಂಗ್ಲೆಂಡ್.
12. ಸಂಗಮೇಶ ಹನುಮಂತಪ್ಪ ಬಲಕುಂದಿ, ಹುನಗುಂದಾ, ಬಾಗಲಕೋಟೆ ಜಿಲ್ಲೆ.
13. ಸೂರ್ಯಕಲಾ ಎಸ್., ಹರಿದ್ರಾವತಿ, ಹೊಸನಗರ, ಶಿವಮೊಗ್ಗ ಜಿಲ್ಲೆ.
14. ಸುರಭಿ ಸಿ.ಟಿ., ಬಿಳಿಕಹಳ್ಳಿ, ಬೆಂಗಳೂರು.
15. ಕೆ.ವಿ.ಶಿವಪ್ರಸಾದ, ಕುಂಬಳಗೋಡು, ಬೆಂಗಳೂರು.
16. ವಿನಾಯಕ ಎಸ್.ಎಂ., ನವಿಲುಗೋಣ, ಹೊನ್ನಾವರ, ಉ.ಕ.ಜಿಲ್ಲೆ.

17. ವಿಶಾಲಕುಮಾರ್ ಪಾಟೀಲ್, ಗುಲ್ಬರ್ಗಾ.
18. ವಿಶ್ವರಾಜ, ಗುಲ್ಬರ್ಗಾ.

## 2008–2009

1. ಆರ್ಯ ಕೆ.ಎಸ್., ಕಮ್ಮರಡಿ, ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ.
2. ಜಾಹಿದಾ ಎಂ.ಎ., ಸೋಮವಾರಪೇಟೆ, ಕೊಡಗು.
3. ಜೀವನ ಎಸ್.ಎಸ್., ಚಿಕ್ಕನಾಯಕನಹಳ್ಳಿ, ತುಮಕೂರು ಜಿಲ್ಲೆ.
4. ಕರುಣಾ ಶ್ಯಾಮನವರ, ಗುಲ್ಬರ್ಗಾ.
5. ಲಕ್ಷ್ಮಣ ಫಕೀರಪ್ಪ ಘೀರಗಾರ, ಧಾರವಾಡ.
6. ಎ.ಮಹದೇವನ್, ಮೈಸೂರು.
7. ಮಾದೇಶ ಎಂ., ಆಲವಳ್ಳಿ, ಕೊಳ್ಳೇಗಾಲ, ಚಾಮರಾಜನಗರ.
8. ನವೀನ್ ಕುಮಾರ್ ಎಸ್.ಪಿ., ಸಾಣೇಹಳ್ಳಿ, ಚಿತ್ರದುರ್ಗ.
9. ಪ್ರಶಾಂತ್ ದುಮ್ಮಿಂಗ್ ಸಿದ್ದಿ, ಹಾಸಣಗಿ, ಯಲ್ಲಾಪುರ, ಉ.ಕ.ಜಿಲ್ಲೆ.
10. ಪ್ರೇಮಾ ಸುಂಕದ, ಹುಬ್ಬಳ್ಳಿ.
11. ರವಿ ಮಾದರ, ಮಹಾಲಿಂಗಾಪೂರ, ಮುಧೋಳ, ಬಾಗಲಕೋಟೆ ಜಿಲ್ಲೆ.
12. ರಾಘವೇಂದ್ರ ಪಿ.ಎಸ್., ಹೊಸನಗರ, ಶಿವಮೊಗ್ಗ ಜಿಲ್ಲೆ.
13. ಸತೀಶ್ ಜೆ.ಹಿರೇಮಠ, ಮಂಜುನಾಥನಗರ, ಬೆಂಗಳೂರು.
14. ಸಂತೋಷ್ ಎಂ.ಎಸ್., ಹಾಸನ.
15. ಎನ್.ಶಶಿಕಲಾ, ಬೆಳಲಕೆರೆ, ಚನ್ನಗಿರಿ, ದಾವಣಗೆರೆ ಜಿಲ್ಲೆ.
16. ಶಾಹೀರಾ, ಹೊಸಪೇಟೆ.
17. ಶ್ರವಣ ಪಿ.ಎಂ., ತಾಳಗುಪ್ಪ, ಸಾಗರ, ಶಿವಮೊಗ್ಗ ಜಿಲ್ಲೆ.
18. ಸಾಲಿಯಾನ ಉಮೇಶ ನಾರಾಯಣ, ಮುಂಬೈ.
19. ಯಶವಂತ ಹಿರಿಯಡ್ಕ, ಉಡುಪಿ.

## 2009–2010

1. ಅಕ್ಷತಾ ಎಂ., ಪಾಂಡವಪುರ, ಮಂಡ್ಯ ಜಿಲ್ಲೆ.
2. ಅರುಣ್ ಕುಮಾರ್ ಬಿ., ಮಾನ್ವಿ, ರಾಯಚೂರು ಜಿಲ್ಲೆ.
3. ಕೆ.ಚಂದ್ರಶೇಖರ, ಬಾಗೂರು, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.
4. ಚಂದ್ರಮ್ಮ ಆರ್., ಆರ್.ನೂಲೆನೂರು, ಚಿತ್ರದುರ್ಗ ಜಿಲ್ಲೆ.
5. ಗಣೇಶ್ ಎಂ., ಕೊಕ್ಕರ್ಣೆ, ಉಡುಪಿ ಜಿಲ್ಲೆ.
6. ಜಯರಾಮ್ ಕೆ.ಎನ್., ಮೈಸೂರು.
7. ಕೊಟ್ರಮ್ಮ ಹೆಚ್., ಯಲಬುರ್ಗಾ, ಕೊಪ್ಪಳ ಜಿಲ್ಲೆ.

8. **ಎನ್.ಮಂಜುನಾಥ,** ಕುಶಾಲನಗರ, ಕೊಡಗು.
9. **ನಾಗರಾಜ,** ಹರಿದ್ರಾವತಿ, ಹೊಸನಗರ, ಶಿವಮೊಗ್ಗ ಜಿಲ್ಲೆ.
10. **ನಿಶಾಂತ್ ಸಿ.,** ವಿಲ್ಸನ್ ಗಾರ್ಡನ್, ಬೆಂಗಳೂರು.
11. **ಪಾಂಡು ಆರ್.,** ವಿವೇಕನಗರ, ಬೆಂಗಳೂರು.
12. **ಪ್ರಭುರಾಜ,** ಲಿಂಗಸೂಗೂರು, ರಾಯಚೂರು ಜಿಲ್ಲೆ.
13. **ಸ್ಮಿತಾ,** ತಿರುವನಂತಪುರಂ, ಕೇರಳ.
14. **ಸೂರ್ಯ ಎಂ.,** ಮಸ್ವಾಡಿ, ಕುಂದಾಪುರ, ಉಡುಪಿ ಜಿಲ್ಲೆ.
15. **ಶಕೀಲ್ ಅಹ್ಮದ್ ಮುಲ್ಲಾ,** ಇಂಡಿ, ಬಿಜಾಪುರ ಜಿಲ್ಲೆ.
16. **ವೀಣಾ ಡಿ.ಎಸ್.,** ಮೈಸೂರು.
17. **ವಿಜಯಾ ನಾಯ್ಕ,** ಸಿದ್ದಾಪುರ, ಉ.ಕ.ಜಿಲ್ಲೆ.
18. **ವಿದ್ಯಾಕುಮಾರ್ ಶೆಟ್ಟಿ,** ಶಿವಮೊಗ್ಗ.
19. **ಯಶವಂತ,** ಬೀದರ್.
20. **ಬಿ.ಎಂ.ಯೋಗೇಶ್,** ಮರಿಯಮ್ಮನಹಳ್ಳಿ, ಹೊಸಪೇಟೆ.

**2010–2011**

1. **ಅಜಯ್ ಕುಮಾರ್ ಎಸ್.ಸಿ.,** ಶಿವಮೊಗ್ಗ.
2. **ಅಕ್ಷತಾ ಆರ್.,** ಶಿವಮೊಗ್ಗ.
3. **ಅರುಣ್ ಜಿ.,** ಚಿಕ್ಕಾನವಂಗಲ, ತರೀಕೆರೆ, ಚಿಕ್ಕಮಗಳೂರು ಜಿಲ್ಲೆ.
4. **ಭಾಸ್ಕರ ಆರ್.,** ನಾಗಮಂಗಲ, ಮಂಡ್ಯ.
5. **ಚಂದ್ರಹಾಸ ಕೃಷ್ಣ ಭಂಡಾರಿ,** ಚಿತ್ತರಗಿ, ಕುಮಟಾ, ಉ.ಕ.ಜಿಲ್ಲೆ.
6. **ಸಿ.ಎಲ್.ಚಿದಂಬರ,** ಸಿಂಧನೂರು, ರಾಯಚೂರು ಜಿಲ್ಲೆ.
7. **ಕ್ರಿಸ್ಟೋಫರ್ ಜೋನ್ಸ್ ಡಿಸೋಜಾ,** ಮಂಗಳೂರು.
8. **ಎಂ.ದಿನೇಶ್,** ಚಮ್ಮಳಗೆ, ಮೈಸೂರು.
9. **ಹರೀಶ್ ಭಟ್ಟ,** ಉಡುಪಿ.
10. **ಕೃಷ್ಣೇಗೌಡ,** ಆಲಕೆರೆ, ಮುದ್ದಂಗೆರೆ, ಮಂಡ್ಯ ಜಿಲ್ಲೆ.
11. **ಮಹೇಶ್ ಬಿ.ಬೂಜರ್‌ಕರ್,** ರಾಣಿಬೆನ್ನೂರು, ಹಾವೇರಿ ಜಿಲ್ಲೆ.
12. **ಪ್ರಮೋದ್ ಪಿ.,** ಶ್ರೀನಗರ, ಬೆಂಗಳೂರು.
13. **ಸಂತೋಷ್ ಡಿ.ಡಿ.,** ದಿಂಡಗೂರು, ಚನ್ನರಾಯಪಟ್ಟಣ, ಹಾಸನ.
14. **ಸರಸ್ವತಿ ಎಂ.ಜಿ.,** ಸೋಮವಾರಪೇಟೆ, ಕೊಡಗು.
15. **ಸತೀಶ್ ಪಿ.ಬಿ.,** ಹೊಸನಗರ, ಶಿವಮೊಗ್ಗ ಜಿಲ್ಲೆ.
16. **ಶೀಲಾ ಕೆ.ಎನ್.,** ಅವಿನಹಳ್ಳಿ, ಸಾಗರ, ಶಿವಮೊಗ್ಗ ಜಿಲ್ಲೆ.
17. **ಶಿಲ್ಪಾ ಎಸ್.,** ಮಸಗಾಪುರ, ಮದಾಪುರ, ಚಾಮರಾಜನಗರ ಜಿಲ್ಲೆ.

18. ಎಸ್.ತಿರುನವಕ್ಕರಸು, ಸೇತುನಾರಾಯಣಪುರಂ, ತಮಿಳುನಾಡು.
19. ಯಶಸ್ವಿನಿ ಎನ್. (ಸುಭಾಷಿಣಿ), ಬೆಂಗಳೂರು.
20. ಕೆ.ಆರ್.ಯೋಗಾನಂದ, ಗುಬ್ಬಿ, ತುಮಕೂರು ಜಿಲ್ಲೆ.

## 2011–12

1. ಅವಿನಾಶ್ ರೈ ಎಂ.ಕೆ., ಸಿಂಧನೂರು ತಾಲೂಕು, ಕಾಸರಗೋಡು ಜಿಲ್ಲೆ.
2. ಗಾಯತ್ರಿ ಎಂ.ಎಸ್., ರಾಮದುರ್ಗ ತಾಲೂಕು, ಬೆಳಗಾಂ ಜಿಲ್ಲೆ.
3. ಚಂದ್ರಕಲಾ ಎ.ವಿ., ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ.
4. ಡಿಂಗ್ರಿ ನರೇಶ್, ನೆರೆಹಾಳ, ರಾಯಚೂರು ಜಿಲ್ಲೆ.
5. ದೇವರಾಜ್ ಎಂ.ಆರ್., ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆ.
6. ನಾಗರಾಜ್, ಸಿಂಧನೂರು ತಾಲೂಕು, ರಾಯಚೂರು ಜಿಲ್ಲೆ.
7. ಪ್ರವೀಣ್ ಕುಮಾರ್, ಸುಳ್ಯ ತಾಲೂಕು, ದ.ಕ.ಜಿಲ್ಲೆ.
8. ಬಸವರಾಜ್ ಎಸ್., ಟಿ.ನರಸೀಪುರ, ಮೈಸೂರು ಜಿಲ್ಲೆ.
9. ಭವಾನಿ ಕೆ., ಪುತ್ತೂರು, ದ.ಕ.ಜಿಲ್ಲೆ.
10. ಮಾಲತಿ ಎ.ಆರ್., ಸುಳ್ಯ, ದ.ಕ.ಜಿಲ್ಲೆ.
11. ಮಂಜುನಾಥ್ ಸಿ.ಜಿ., ಪಾಂಡವಪುರ, ಮಂಡ್ಯ ಜಿಲ್ಲೆ.
12. ಮಂಜುಳಾ ಕೆ.ಎಂ., ಕಂಪ್ಲಿ, ಬಳ್ಳಾರಿ ಜಿಲ್ಲೆ.
13. ಲಕ್ಷ್ಮಣ ಕೆ.ಪಿ., ನೆಲಮಂಗಲ, ಬೆಂಗಳೂರು ಗ್ರಾಮಾಂತರ.
14. ವಿನೀತ ಕುಮಾರ್ ಎಂ., ಚಿಕ್ಕಮಗಳೂರು.
15. ಶಿವಶಂಕರ, ಹೊಳೆನರಸೀಪುರ, ಹಾಸನ.
16. ಶ್ರೀಧರ ಉಡುಪ, ಕೋಟೇಶ್ವರ, ಉಡುಪಿ ಜಿಲ್ಲೆ.
17. ಶ್ರೀಪದ್ಮ, ಉಜಿರೆ, ದ.ಕ.ಜಿಲ್ಲೆ.
18. ಸುನೀಲ್ ಕುಮಾರ್ ಶೆಟ್ಟಿ, ಹೊಸನಗರ, ಶಿವಮೊಗ್ಗ.
19. ಸೂರಜ್ ಬಿ.ಆರ್., ಬೀರೂರು, ಚಿಕ್ಕಮಗಳೂರು.

## 2012–13

1. ಅಮರ ಎನ್. ಬೆಂಗಳೂರು ಜಿಲ್ಲೆ
2. ಅಮರಾವತಿ ಚಿಕ್ಕಬಳ್ಳಾಪುರ ಜಿಲ್ಲೆ
3. ಅರುಣ್ ಆರ್. ಬೆಂಗಳೂರು ಜಿಲ್ಲೆ
4. ಆರೋಗ್ಯರಾಣಿ ಶಿವಮೊಗ್ಗ ಜಿಲ್ಲೆ
5. ಗ್ರಾಹಿಕಾ, ಬೀದರ್ ಜಿಲ್ಲೆ

6. ಚೇತನ್ ಎಂ.ಹೆಚ್., ತುಮಕೂರು ಜಿಲ್ಲೆ
7. ಚಂದ್ರಶೇಖರ ನಾಗಪ್ಪ ಹಾದಿಮನಿ, ಹಾವೇರಿ ಜಿಲ್ಲೆ
8. ತುಳಜರಾಮ್ ಸಿಂಗ್, ಗುಲ್ಬರ್ಗಾ ಜಿಲ್ಲೆ
9. ನಿತೇಶ್ ನಿತ್ಯಾನಂದ ಕಾಂಡೆ, ಉತ್ತರ ಕನ್ನಡ ಜಿಲ್ಲೆ
10. ನಿಸ್ಸಿಮೇಶ್ ಸಿದ್ದಪ್ಪ ಕಬ್ಬುರ, ಹಾವೇರಿ ಜಿಲ್ಲೆ
11. ಬಸವರಾಜ್ ಕವದೇನವರ, ದಾರವಾಢ ಜಿಲ್ಲೆ
12. ಮರಿದೇವ, ಬೆಂಗಳೂರು ಜಿಲ್ಲೆ
13. ಮೂರ್ತಿ, ಉತ್ತರ ಕನ್ನಡ ಜಿಲ್ಲೆ
14. ವಿನಯ್ ಎನ್.ಪಿ., ಮೈಸೂರು ಜಿಲ್ಲೆ
15. ಲಿಲ್ಲಿ, ತಮಿಳುನಾಡು
16. ಶೋಧನ್, ಉಡುಪಿ ಜಿಲ್ಲೆ
17. ಶ್ವೇತಾರಾಣಿ ಹೆಚ್.ಕೆ., ಹಾಸನ ಜಿಲ್ಲೆ
18. ಸದಾಶಿವ ಎನ್., ಉತ್ತರ ಕನ್ನಡ ಜಿಲ್ಲೆ
19. ಸರದಾರ ಬಿ., ಬಳ್ಳಾರಿ ಜಿಲ್ಲೆ
20. ಸರಸ್ವತಿ ಪಿ., ಮಂಡ್ಯ ಜಿಲ್ಲೆ

**2013–14**

1. ಜಗದೀಶ್ ಎಸ್., ತುಮಕೂರು ಜಿಲ್ಲೆ.
2. ತೇಜು ಬೆಳವಾಡಿ, ಬೆಂಗಳೂರು ಜಿಲ್ಲೆ
3. ನಿತಿನ್ ಕುಮಾರ್ ಕೆ.ವಿ., ಶಿವಮೊಗ್ಗ ಜಿಲ್ಲೆ
4. ಪ್ರದ್ಯೋತ್ ಆರ್. ಹೆಗ್ಡೆ, ಉಡುಪಿ ಜಿಲ್ಲೆ.
5. ಪ್ರಜ್ಞಾ ಎನ್.ಎಸ್., ಚಾಮರಾಜನಗರ ಜಿಲ್ಲೆ
6. ಬಸವರಾಜ್ ತೇಜಸ್ವಿ ಕೆ.ಆರ್., ಚಿಕ್ಕಬಳ್ಳಾಪುರ ಜಿಲ್ಲೆ.
7. ಬಿಂದುಶ್ರೀ ಎ.ಯು., ಹಾಸನ ಜಿಲ್ಲೆ
8. ಮನು ಹೆಗ್ಡೆ, ಬೆಂಗಳೂರು ಜಿಲ್ಲೆ
9. ಮನೋಜ್ ಕುಮಾರ್ ಎ., ಬೆಂಗಳೂರು ಜಿಲ್ಲೆ.
10. ಮೋಹನ್ ಎಸ್., ದಕ್ಷಿಣ ಕನ್ನಡ ಜಿಲ್ಲೆ
11. ಯಶವಂತ್, ದಕ್ಷಿಣ ಕನ್ನಡ ಜಿಲ್ಲೆ.
12. ಯೋಗೀಶ್ ಶೆಟ್ಟಿ, ಉತ್ತರ ಕನ್ನಡ ಜಿಲ್ಲೆ.
13. ಶಮಾ ಟಿ.ಯು., ಶಿವಮೊಗ್ಗ ಜಿಲ್ಲೆ
14. ಶಿವಾನಂದ ನಾಟಿಕಾರ, ಬಿಜಾಪುರ ಜಿಲ್ಲೆ.
15. ಸರಳಾ ದೇವಿ, ಬೆಂಗಳೂರು ಜಿಲ್ಲೆ.

16. ಸುನಿತಾ ಹೆಚ್.ಆರ್., ಮಂಡ್ಯ ಜಿಲ್ಲೆ.
17. ಸಯ್ಯದ್ ಸಾಧಿಕ್ ಎಸ್., ಶಿವಮೊಗ್ಗ ಜಿಲ್ಲೆ.
18. ಹರೀಶ್ ಕುಮಾರ್ ಎಸ್., ಬೆಳಗಾವಿ ಜಿಲ್ಲೆ.

**2014–15**

1. ಅಪೂರ್ವ, ಬೆಳಗಾವಿ ಜಿಲ್ಲೆ
2. ಉಮಾ ವೈ.ಜಿ. ಕೋಲಾರ ಜಿಲ್ಲೆ
3. ಚಂದನ್ ಎಂ., ಮೈಸೂರು ಜಿಲ್ಲೆ
4. ಚೇತನ್ ಶೇರಿ, ಬೆಳಗಾವಿ ಜಿಲ್ಲೆ
5. ದಯಾನಂದ ಪಿ.ವಿ., ಚಿತ್ರದುರ್ಗ ಜಿಲ್ಲೆ
6. ನಾಗರಾಜ ನಾಯಕ, ಉತ್ತರ ಕನ್ನಡ ಜಿಲ್ಲೆ
7. ಪದ್ಮಿನಿ ಎಂ., ಬೆಳಗಾವಿ ಜಿಲ್ಲೆ
8. ಪುರುಷೋತ್ತಮ ಡಿ., ಬಳ್ಳಾರಿ ಜಿಲ್ಲೆ
9. ಪೃಥ್ವಿನ್ ಕೆ., ಉಡುಪಿ ಜಿಲ್ಲೆ
10. ಪ್ರದೀಪ್ ಕೆ.ಪಿ., ಕೇರಳ
11. ಪ್ರವೀಣ್ ಕುಮಾರ್ ಗಸ್ತಿ, ಬೆಳಗಾವಿ ಜಿಲ್ಲೆ
12. ಮಂಜುನಾಥ್ ವೈ., ಬಳ್ಳಾರಿ ಜಿಲ್ಲೆ
13. ಮಾಯಾಕೃಷ್ಣನ್ ಟಿ., ಪಾಂಡಿಚೇರಿ
14. ರಾಘವೇಂದ್ರ ಪ್ರಸಾದ್ ಬಿ., ರಾಮನಗರ ಜಿಲ್ಲೆ
15. ರೂಪಾ ಸಿ.ಆರ್., ಹಾಸನ ಜಿಲ್ಲೆ.
16. ಶರತ್ ಎಸ್., ಮೈಸೂರು ಜಿಲ್ಲೆ
17. ಶೃತಿ ವಿ., ತುಮಕೂರು ಜಿಲ್ಲೆ
18. ಸವಿತಾ, ರಾಯಚೂರು ಜಿಲ್ಲೆ.
19. ಸುಗ್ರೀವ ಹೆಚ್.ಕೆ., ಹಾಸನ ಜಿಲ್ಲೆ.
20. ಹನುಮಪ್ಪ ಛಲವಾದಿ, ಬಾಗಲಕೋಟೆ ಜಿಲ್ಲೆ

# ಕಿನ್ನರ ಮೇಳ

ಕಿನ್ನರ ಮೇಳ ಸಾಂಸ್ಕೃತಿಕ ಸಂಘಟನೆ ಆರಂಭಗೊಂಡದ್ದು 1990ರಲ್ಲಿ. ನೀನಾಸಂ ತಿರುಗಾಟದ ಅನುಭವ ಹಾಗೂ ಸಂಪರ್ಕ ಮತ್ತು ಇಕ್ಬಾಲ್ ಅಹ್ಮದ್ ಅವರ ನೇತೃತ್ವದ 'ಚಿಣ್ಣ ಬಣ್ಣ' ಸಂಸ್ಥೆ ಇವು ಕಿನ್ನರ ಮೇಳ ತಂಡವನ್ನು ಕಟ್ಟಲು ಪ್ರೇರಣೆ ಮತ್ತು ಸ್ಫೂರ್ತಿಯನ್ನೊದಗಿಸಿದವು. ಮಕ್ಕಳಿಗಾಗಿ ದೊಡ್ಡವರು ರಂಗ ಪ್ರದರ್ಶನಗಳನ್ನು ನೀಡಬೇಕೆನ್ನುವ ಒಂದೇ ಕಾರ್ಯಕ್ರಮದೊಂದಿಗೆ ತನ್ನ ಚಟುವಟಿಕೆಯನ್ನು ಆರಂಭಿಸಿದ ಈ ತಂಡ ಕ್ರಮೇಣವಾಗಿ ಮಕ್ಕಳ ರಂಗಭೂಮಿಗೆ ಸಂಬಂಧಿಸಿ ಗಂಭೀರ ಚಿಂತನೆ ಹಾಗೂ ಪ್ರಯೋಗಗಳಲ್ಲಿ ತೊಡಗಿಸಿಕೊಂಡಿತು.

ಶಿಕ್ಷಣ ಸಂಸ್ಥೆಗಳಲ್ಲಿ ಸಾಂಸ್ಕೃತಿಕ ವಾತಾವರಣವನ್ನು ನಿರ್ಮಿಸುವುದು; ಮಕ್ಕಳಿಗೆ ಮನರಂಜನೆಯ ಜೊತೆಗೆ ಶೈಕ್ಷಣಿಕ ಹಾಗೂ ಕಲಾತ್ಮಕವಾದ ರಂಗಪ್ರಯೋಗಗಳನ್ನು ಪ್ರದರ್ಶಿಸುವುದರ ಮೂಲಕ ಅವರನ್ನು ಕಲೆಯತ್ತ ಆಕರ್ಷಿಸುವುದು, ಪಠ್ಯ ಬೋಧನೆಯಲ್ಲಿ ರಂಗಭೂಮಿಯ ಅಂಶಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಕಲಿಕೆಯನ್ನು ಅನುಭವವಾಗಿಸಲು ಹಾಗೂ ಆಕರ್ಷಕವಾಗಿಸಲು ಪ್ರಯತ್ನಿಸುವುದು, ರಂಗಭೂಮಿಯ ಸಮಾಜಮುಖಿ ಅಂಶಗಳನ್ನು ಮುಖ್ಯವಾಗಿಟ್ಟುಕೊಂಡು ಮಕ್ಕಳಲ್ಲಿ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅರಿವನ್ನು ಹೆಚ್ಚಿಸುವುದರ ಮೂಲಕ ಅವರ ವ್ಯಕ್ತಿತ್ವವನ್ನು ವಿಕಾಸಗೊಳಿಸಿ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಆಶಿಸುವುದು, ಮಕ್ಕಳ ರಂಗಭೂಮಿಯ ಸಮಸ್ಯೆ ಹಾಗೂ ಸಾಧ್ಯತೆಗಳನ್ನು ಚರ್ಚಿಸಿ ಮಕ್ಕಳ ರಂಗಚಳವಳಿಯನ್ನು ಗಟ್ಟಿಗೊಳಿಸುವುದು ಮುಂತಾದವು ಸಂಸ್ಥೆಯ ಉದ್ದೇಶಗಳು.

ಈ ಉದ್ದೇಶಗಳಿಗೆ ಪೂರಕವಾಗಿ ಸಂಸ್ಥೆಯು, ಆಯಾಕಾಲದ ಅಗತ್ಯಕ್ಕನುಗುಣವಾಗಿ ಚಟುವಟಿಕೆಗಳನ್ನು ರೂಪಿಸಿಕೊಂಡು ನಿರಂತರವಾಗಿ ಅನುಷ್ಠಾನಗೊಳಿಸುತ್ತಾ ಬಂದಿದೆ. ಕಳೆದ 20 ವರ್ಷಗಳಿಂದ ಸಂಸ್ಥೆಯು ನಡೆಸಿಕೊಂಡು ಬರುತ್ತಿರುವ ಕಾರ್ಯಕ್ರಮಗಳ ಪರಿಚಯ ಹೀಗಿದೆ...

* ಕಿನ್ನರ ಮೇಳ ನಾಟಕ ತಂಡವು ಪ್ರತಿವರ್ಷ ಎರಡು ನಾಟಕಗಳನ್ನು ತಯಾರಿಸಿಕೊಂಡು ಮುಖ್ಯವಾಗಿ ಶಾಲಾ ಕಾಲೇಜುಗಳಲ್ಲಿ ಪ್ರದರ್ಶನ ನೀಡುತ್ತದೆ.
* ಪ್ರತಿ ವರ್ಷ ಮೂರು ನಾಲ್ಕು ಬೇರೆ ಬೇರೆ ಶಾಲೆಗಳಲ್ಲಿ ಒಂದು ತಿಂಗಳ ಮಕ್ಕಳ ರಂಗತರಬೇತಿ ಶಿಬಿರಗಳನ್ನು ನಡೆಸುತ್ತದೆ.

* ತುಮರಿಯಲ್ಲಿ ಪ್ರತಿವರ್ಷ ಶಿಕ್ಷಕರುಗಳಿಗಾಗಿ ಒಂದು ವಾರಗಳ "ಸಂಸ್ಕೃತಿ ಶಿಕ್ಷಣ ಶಿಬಿರ"ವನ್ನು ನಡೆಸುತ್ತದೆ.
* ಗ್ರಾಮೀಣ ಮಕ್ಕಳಿಗಾಗಿ ಪ್ರತಿವರ್ಷ ತುಮರಿಯಲ್ಲಿ 20 ದಿನಗಳ "ಮಕ್ಕಳ ಸಂಸ್ಕೃತಿ ಶಿಬಿರ"ವನ್ನು ನಡೆಸುತ್ತಿದೆ. ಈ ಶಿಬಿರದಲ್ಲಿ 150 ಮಕ್ಕಳು ಭಾಗವಹಿಸುತ್ತಾರೆ.
* ಪ್ರತಿ ವರ್ಷ ತುಮರಿಯಲ್ಲಿ 7 ದಿನಗಳ "ಸಂಸ್ಕೃತಿ ಉತ್ಸವ"ವನ್ನು ನಡೆಸುತ್ತದೆ. ಇವುಗಳಲ್ಲದೇ, ವಿಚಾರ ಸಂಕಿರಣಗಳು, ಯಕ್ಷಗಾನ ಶಿಬಿರಗಳು, ಗ್ರಾಮೀಣ ಯುವಕರಿಗಾಗಿ ಅಭಿನಯ ಕಮ್ಮಟ ಹಾಗೂ ನಾಟಕ ಪ್ರಯೋಗ, ಮಕ್ಕಳ ನಾಟಕೋತ್ಸವ ಮುಂತಾದವು ಸಂಸ್ಥೆಯು ನಡೆಸುವ ಇತರ ಕಾರ್ಯಕ್ರಮಗಳು.

**ಸಂಸ್ಥೆಯ ವತಿಯಿಂದ ಪ್ರದರ್ಶನಗೊಂಡ ಪ್ರಮುಖ ನಾಟಕಗಳು:**

| | |
|---|---|
| 1990–91 | ಚೋರಚರಣದಾಸ, ಮಧ್ಯಮ ವ್ಯಾಯೋಗ, ಅಧಿಕಪ್ರಸಂಗಿ ಪಂಡಿತ, |
| 1991–92 | ಡಾಣಾಡಂಗೂರ, ಸೂಳೆ ಸನ್ಯಾಸಿ, |
| 1992–93 | ಜುಂಜುಂ ಆಣೆ, ಹಯವದನ, |
| 1993–94 | ಕಾಕಸಿಯನ್ ಚಾಕ್ ಸರ್ಕಲ್, ಅಂಧೇರಿನಗರಿ ಚೌಪಟ್‌ರಾಜಾ, |
| 1994–95 | ಒಂದು ಸಿಂಹದ ಕಥೆ, ಪಾಂಡಿತ್ಯ ಪ್ರಹಸನ, |
| 1995–96 | ಮಿಸ್ ಪಾಯಿಂಟ್, ಸೂರ್ಯ ಬಂದ, |
| 1996–97 | ಸಹಸ್ರಪದಿ, ಹೆಡ್ಡಾಯಣ, |
| 1997–98 | 50ನೇ ಸ್ವಾತಂತ್ರ್ಯ ದಿನಾಚರಣೆ, ದಂಡಿಯಾತ್ರೆ, ಟಿಪ್ಪುಸುಲ್ತಾನ, |
| 1998–99 | ಪುಷ್ಪಾರಾಣಿ, ಜೂಲಿಯಸ್ ಸೀಸರ್, |
| 1999–2000 | ಹಕ್ಕಿಹಾಡು, ಸಿರಿಸಂಪಿಗೆ, |
| 2000–2001 | ತುಂಟ ರಾಬಿನ್, ಮೃಚ್ಛಕಟಿಕ, |
| 2001–2002 | ನಾಯಿಮರಿ ನಾಟಕ, ಓ ಈಡಿಪಸ್, |
| 2002–2003 | ಮಕ್ಕಳ ಮಾಯಾಲೋಕ, ಗಾಸಿರಾಮ್ ಕೊತ್ವಾಲ್, |
| 2003–2004 | ನಿಧಿದ್ವೀಪ, ಮುದ್ರಾರಾಕ್ಷಸ, |
| 2004–2005 | ಕುರೂಪಿ ಶಿಶು, ಒಂದು ಪಯಣದ ಕಥೆ, |
| 2005–2006 | ಹೊನ್ನಮೀನು, ರಶೋಮನ್, |
| 2006–2007 | ಮಣ್ಣಿನ ಮನೆ, ಹುಲಿಯ ನೆರಳು, |


| | |
|---|---|
| 2007–2008 | ಧಾಂ ಧೂಂ ಸುಂಟರಗಾಳಿ, ಝುಂಜಾ ಮಾರುತ, |
| 2008–2009 | ಬೆಪ್ಪುತಕ್ಕಡಿ ಬೋಳೆಶಂಕರ, ಗುಣಮುಖ, |
| 2009–2010 | ಗೆದ್ದಲು ಪಂಡಿತರು, |
| 2010–2011 | ಪದಾಕೋ ಸಾವಿರ ಕೊಕ್ಕರೆಗಳೂ, ವಿಗಡ ವಿಕ್ರಮರಾಯ. |

* * * * *



**ಜೋಗ್‌ಫಾಲ್ಸ್**

# ಸೊರಬ ತಾಲೂಕು ರಂಗಭೂಮಿ



## ಪ್ರೇಕ್ಷಣೀಯ ಸ್ಥಳಗಳು:

**ಸಾಂಸ್ಕೃತಿಕ ತಾಣಗಳು:** ನೆಂದಳಿಕೆ, ಮುದ್ದಣ್ಣ ಸ್ಮಾರಕ, ಬನವಾಸಿ

**ದೇವಸ್ಥಾನ ಹಾಗೂ ಐತಿಹಾಸಿಕ ಸ್ಥಳಗಳು:** ಚಂದ್ರಗುತ್ತಿ

**ಪಕ್ಷಿಧಾಮಗಳು :** ಗುಡವಿ



ಗುಡವಿ ಪಕ್ಷಿಧಾಮ

## ಸೊರಬ ತಾಲೂಕು ರಂಗಭೂಮಿ ಕ್ಷೇತ್ರದಲ್ಲಿನ ಸಾಧಕರ ವಿವರ :

**ನಾಟಕ ಅಕಾಡೆಮಿ ಪುರಸ್ಕೃತರು :** ಶ್ರೀ ಬಸವನಗೌಡರು, ಬಣ್ಣಗೇರಿ– 1994
(ನಾಟಕ ಅಕಾಡೆಮಿ ಯುವ ಪುರಸ್ಕಾರ)

## ಸೊರಬ ತಾಲೂಕು ರಂಗಭೂಮಿ ಪಕ್ಷಿನೋಟ

ಸೊರಬ ಯಕ್ಷಗಾನದಷ್ಟೆ ಬಯಲಾಟಗಳಿಗೂ ಪ್ರಸಿದ್ಧಿ ಗಳಿಸಿದೆ. ಇಲ್ಲಿನ ಅರೆ ಮಲೆನಾಡು ಭಾಗದಲ್ಲಿ ಅನೇಕ ಹವ್ಯಾಸಿ ಕಲಾವಿದರು ತಮ್ಮದೇ ಆದ ನಟನೆಯ ಮೂಲಕ ಜನತೆಯಲ್ಲಿ ಮನೆ ಮಾಡಿದ್ದಾರೆ. ದೊಡ್ಡಾಟದ ಓಟೂರು ಕರಿಯಪ್ಪ, ಕುಮ್ಮೂರು ರಂಗಪ್ಪ, ವೀರಬಸಪ್ಪ ಪೂಜಾರ್, ತಂಡಿಗೆ ವೀರಭದ್ರಪ್ಪಗೌಡ, ಬಿದರಗೆರೆ ದ್ಯಾವಪ್ಪ, ತವನಂದಿ ಬಸವಣ್ಯಪ್ಪ, ಅಜಂತಾ ಕಲಾವಿದರಾದ ಬಸವರಾಜ್ ಕಟ್ಟಿಮನಿ ಅದೇ ರೀತಿ ನಾಟಕ ರಂಗಸಜ್ಜಿಕೆಗೆ ವರ್ಣಮಯ ಆಯಾಮ ನೀಡುತ್ತಿದ್ದ ಕಡಸೂರು ಡ್ರಾಮಾಸೆಟ್‌ನ ಗುರುವಯ್ಯಸ್ವಾಮಿ, ಸೈಯದ್ ಅನ್ಸರ್, ಕುಂಸಿ ಮಾರುತಿ ಡ್ರಾಮಾ ಸೆಟ್‌ನ ಬಸವರಾಜಗೌಡ, ಇವರುಗಳು ಕಲಾ ಕೌಸ್ತುಭರು ಎನ್ನುವುದು ಸಂದರ್ಭೋಚಿತ.

ಹಾಸ್ಯ ಕಲಾವಿದರಾಗಿ ಮೂಡುಗೋಡು ಶಾಂತಾರಾಂ ತಮ್ಮದೇ ಛಾಪು ಹೊಂದಿದ್ದು ನಾಡನಲ್ಲಿ ಖ್ಯಾತಿ ಗಳಿಸಿದ್ದರು.

ಅಜಂತಾ ಕಲಾವಿದರು 1989ರಲ್ಲಿ ತಮ್ಮ ರಂಗವೇದಿಕೆಯನ್ನು ಆರಂಭಿಸಿ ಹಲವು ವರ್ಷ ಕ್ರಿಯಾಶೀಲರಾಗಿದ್ದರು. ಇದರ ಸ್ಥಾಪಕ ಬಸವರಾಜ್ ಎಸ್. ಕಲಾವಿದರಾಗಿ ದೀಪಕ್ ದುರಿ, ಚಂದ್ರು, ನಾಗರಾಜ ಜೈನ್, ಸೈಯದ್ ಅನ್ಸರ್, ಈರಪ್ಪ ಎಂ. ಪಿ. ಮಲೀನಾ ಡಿ. ಸೋಜಾ, ವಾಣಿ, ಆನಂದ ಗೋಡಬೋಲೆ, ಮೋಹನ ಚಂದ್ರಗುತ್ತಿ, ನಾರಾಯಣ ಕಾನಡೆ, ಸರ್ಫ್ರರಾಜ್, ಭಾಸ್ಕರ್ ಮಸ್ತರ್.

ಕಾರ್ಯಕ್ರಮಗಳು : ಭಾರತೀಯ ಜನಜ್ಞಾನ, ವಿಜ್ಞಾನ ಜಾಥಾ, ಪವಾಡ ಬಯಲು, ಅಕ್ಷರ ತುಂಗ ಬೀದಿ ನಾಟಕ ಮೊದಲಾದವು.

ರಾಜ್ಯ ಮಟ್ಟದ ಯುವಜನ ಮೇಳದಲ್ಲಿ ಭಾಗವಹಿಸಿದ್ದೆ ಅಲ್ಲದೆ ಅನೇಕ ರಾಷ್ಟ್ರ, ರಾಜ್ಯ, ಜಿಲ್ಲಾ, ತಾಲ್ಲೂಕು ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಖ್ಯಾತಿ ಪಡೆದಿದ್ದರು. ಹತ್ತು ಹಲವಾರು ಪ್ರಶಸ್ತಿ ಪಡೆದಿದ್ದರು. ಗುಜರಾತ್ ಭೂಕಂಪದ ವೇಳೆ ಕ್ರಿಯಾಶೀಲರಾಗಿ ಸಾಮಾಜಿಕ ಕಾರ್ಯಚಟುವಟಿಕೆಗಳಲ್ಲೂ ಪಾಲ್ಗೊಂಡ ಇವರು ಶಿಕ್ಷಣ, ವರದಕ್ಷಿಣೆ ಪಿಡುಗು ಮುಂತಾದ ಸಾಮಾಜಿಕ ಕಳಕಳಿಯುಳ್ಳ ನಾಟಕಗಳನ್ನು ನಿರ್ದೇಶಿಸಿ ಅಭಿನಯಿಸಿದ್ದರು.

ಇಲ್ಲಿನ ಮಲ್ಲಪ್ಪ ಪೂಜಾರ್ (76) ಮೂಡಲಪಾಯದ (ದೊಡ್ಡಾಟ) ಅಗ್ರಗಣ್ಯರು, ಇವರು ವಿಶೇಷವಾಗಿ 50ಕ್ಕೂ ಹೆಚ್ಚು ಕೃತಿಗಳನ್ನು ನಾಟಕ ರೂಪಕ್ಕೆ ಇಳಿಸಿ, ನಿರ್ದೇಶಿಸಿದ್ದು,

ಉತ್ತರ ಕರ್ನಾಟಕದಲ್ಲಿ ಅನೇಕ ಕಡೆ ನಿರ್ದೇಶಕರಾಗಿ ಹೆಸರು ಗಳಿಸಿದ್ದಾರೆ. ಈ ಹವ್ಯಾಸದೊಂದಿಗೆ ಅವರು ಪ್ರಸಿದ್ಧ ನಾಟಿ ವೈದ್ಯರೂ ಆಗಿದ್ದು, ಜಾನುವಾರುಗಳ ಕಾಯಿಲೆಗೆ ಔಷಧ ನೀಡುವಲ್ಲಿ ಸಿದ್ಧಹಸ್ತರು.




ಸುಮಾರು 20–25 ವರ್ಷಗಳ ಹಿಂದೆ ತಾಲ್ಲೂಕಿನ ಪ್ರತಿ ಗ್ರಾಮದಲ್ಲಿಯೂ ಇಂತಹ ಕಲಾವಿದರು ಇದ್ದು, 2–3 ವರ್ಷಕ್ಕೊಮ್ಮೆ ವಿಶೇಷ ಸಂದರ್ಭದಲ್ಲಿ ನಾಟಕ ಕಟ್ಟಿ ಆಡುತ್ತಿದ್ದುದುಂಟು. ನಾಟಕ ರಂಗಕ್ಕಾಗಿಯೇ ವೇದಿಕೆ ಸಾಮಾಗ್ರಿಗಳನ್ನು ಒದಗಿಸುತ್ತಿದ್ದವರ ಸಂಖ್ಯೆಯೂ ಗುರುತರವಾಗಿತ್ತು. ಇದಕ್ಕಾಗಿಯೇ ಶಿಕಾರಿಪುರ ಹರಗಿ ಕಲ್ಲಪ್ಪ ಮಾಸ್ತರ್, ಹೆಜ್ಜೆ ಕೃಷ್ಣಶಾಸ್ತ್ರಿ, ಕಡಸೂರು ಬಸವಣ್ಯಪ್ಪ, ಬಿದರಗೆರೆ ಶಿವಪ್ಪ ಮೊದಲಾದ ಶಿಕ್ಷಕರೂ ಇದ್ದರು. ಆಗಾಗ್ಗೆ ಉತ್ತರ ಕರ್ನಾಟಕದ ಹವ್ಯಾಸಿ ಕಲಾವಿದರು, ಹಗಲು ವೇಷದವರು ಗ್ರಾಮಗಳಲ್ಲಿ ನಾಟಕವಾಡುತ್ತಿದ್ದರು.

ಪ್ರಸ್ತುತ ನಾಟಕ ರಂಗ ತಾಲ್ಲೂಕಿನಲ್ಲಿ ಕ್ಷೀಣಿಸಿದೆ, ಅನೇಕ ಕಲಾವಿದರುಗಳು ಪ್ರೋತ್ಸಾಹ ಇಲ್ಲದೆ ನೇಪಥ್ಯಕ್ಕೆ ಸರಿದಿದ್ದಾರೆ. ಅಪರೂಪಕ್ಕೆ ಸಂಗೀತ ನಾಟಕ ನಡೆಸುತ್ತಿರುವ ಉದಾಹರಣೆ ಇದೆಯೇ ಹೊರತು, ದೊಡ್ಡಾಟ, ಸಣ್ಣಾಟದಂತಹ ಬಯಲು ನಾಟಕಗಳು ಸಂಪೂರ್ಣ ಮರೆಯಾಗಿವೆ ಎಂದರೆ ತಪ್ಪಾಗಲಿಕ್ಕಿಲ್ಲ. ಆದರೆ ತಾಲ್ಲೂಕಿನ ಮಲೆನಾಡು ಭಾಗಗಳಲ್ಲಿ ವರ್ಷಕ್ಕೆ ಒಂದೆರಡು ಯಕ್ಷಗಾನ ನಡೆಸುವುದು, ವೇಷ ಕಟ್ಟುವುದು ಇಂದಿಗೂ ಉಳಿದುಕೊಂಡು ಬಂದಿದೆ. ಇಂದಿಗೂ ಯಕ್ಷಗಾನ ಕಲೆಯಲ್ಲಿ ತಮ್ಮದೇ ಛಾಪು ಮೂಡಿಸಿದ ಅನೇಕ ಕಲಾವಿದರು ಸೊರಬ ತಾಲ್ಲೂಕಿನಲ್ಲಿ ಕ್ರಿಯಾಶೀಲರಾಗಿದ್ದಾರೆ ಎಂಬುದು ಸಮಾಧಾನಕರ ಅಂಶ.

– ಶ್ರೀಪಾದ ಬಿಚ್ಚುಗತ್ತಿ

## ಶಿಕಾರಿಪುರ ತಾಲೂಕು ರಂಗಭೂಮಿ



## ಪ್ರೇಕ್ಷಣೀಯ ಸ್ಥಳಗಳು

**ಜಲಾಶಯಗಳು:**

1. ಅಂಜನಾಪುರ 2. ಅಂಬ್ಲಿಗೊಳ್ಳ

**ದೇವಸ್ಥಾನ ಹಾಗೂ ಐತಿಹಾಸಿಕ ಸ್ಥಳಗಳು:**

1. ಹುಚ್ಚರಾಯಸ್ವಾಮಿ ದೇವಸ್ಥಾನ
2. ಉಡುತಡಿ
3. ಹೊಸಗುಂದಾ
4. ಈಸೂರು
5. ಬಳ್ಳಿಗಾವಿ
6. ತೋಗರ್ಸಿ



ಅಂಜನಾಪುರ ಜಲಾಶಯ

## ಶಿಕಾರಿಪುರ ತಾಲ್ಲೂಕು ರಂಗಭೂಮಿ ಕ್ಷೇತ್ರದಲ್ಲಿನ ಸಾಧಕರ ವಿವರ

**ನಾಟಕ ಅಕಾಡೆಮಿ ಪ್ರಶಸ್ತಿ ಪಡೆದವರು :** ಮಾರ್ತಾಂಡರಾವ್ ನಾಡಿಗೇರ್ – 1993

**ರಂಗ ನಿರ್ದೇಶಕರುಗಳು:**
1. ಶ್ರೀ ಗುರುಪ್ರಸಾದ್–ನ/ನಿ/ಸಂ/ಪ್ರ–97421 64151
2. ಶ್ರೀ ಕುಬೇರಗೌಡ – ನ/ನಿ.
3. ಶ್ರೀ ರಾಘವೇಂದ್ರ ಎಂ.ಜಿ. – ನ/ನಿ/ಸಂ.
4. ಶ್ರೀ ಸತೀಶ್ ಗಟ್ಟಿ–ಲೇ/ನ/ನಿ.–99648 82487

**ರಂಗ ಸಂಗೀತ:**
1. ಶ್ರೀ ಸಿದ್ದರಾಜು
2. ಶ್ರೀ ದೇವೇಂದ್ರ ಬಡಿಗೇರ

**ನಾಟಕ ಅಕಾಡೆಮಿ ಸದಸ್ಯರಾಗಿದ್ದವರು:** 1. ಶ್ರೀ ಸಿದ್ದಯ್ಯ ಕಾಗಿನೆಲ್ಲಿ

**ನಾಟಕ ಸೀನರಿ ಒದಗಿಸುವ ಸಂಸ್ಥೆ:** ಶ್ರೀ ಕರಿಬಸವೇಶ್ವರ ಡ್ರಾಮಾಸೀನ್ಸ್ ಸೆಟ್
ಕುಂಭಾರ ಕೇರಿ
ಮಹಾಂತ ಆಸ್ಪತ್ರೆ ಎದುರು, ಶಿರಾಳಕೊಪ್ಪ.

### ರಂಗಮಂದಿರ



ಸಾಂಸ್ಕೃತಿಕ ಭವನ, ಶಿಕಾರಿಪುರ: ಸುಸಜ್ಜಿತ ರಂಗಮಂದಿರ

## ಶಿಕಾರಿಪುರ ತಾಲೂಕು ರಂಗಭೂಮಿ ಪಕ್ಷಿನೋಟ

ಬ್ರಿಟಿಷರ ಆಗಮನಕ್ಕೂ ಮುಂಚೆ ಜನಪದ ಪ್ರಕಾರಗಳೇ ಜನರನ್ನು ತಲುಪುತ್ತಿದ್ದವು. ಬ್ರಿಟಿಷರ ಮೂಲಕ "ಕಂಪನಿ" ಎಂಬ ಟೆಂಟ್ ಎಂಬ ಥೇಟರ್ ಪರಿಭಾಷೆ ಬೆಳೆದು "ನಾಟಕ" ಕಂಪನಿಗಳು ಜನ್ಮತಾಳುತ್ತಿದ್ದ ಕಾಲ. ಬ್ರಿಟಿಷರು ತೊಂದರೆ ಕೊಡುತ್ತಾರೆ ಎಂಬ ಭಾವನೆಯಿಂದ ಧಾರವಾಡ, ಹಿರೇಕೇರಿ ಭಾಗದಿಂದ ಹಾರೋಮುಚುಡಿಗೆ ಬಂದು ನೆಲೆಸಿದ ಹಿರಿಯ ಕಲಾವಿದರಾದ ಶ್ರೀ ಮಾರ್ತಂಡರಾವ್ ನಾಡಿಗೇರ್ ಈ ಭಾಗದಲ್ಲಿ ನನಗೆ ದೊರೆತ ಹಿರಿಯ ಕಲಾವಿದರು, ನಾಟಕ ಅಕಾಡೆಮಿ ಪುರಸ್ಕೃತರು. 30 ವರ್ಷಗಳ ಕಾಲ ಕಲಾವಿದರಾಗಿದ್ದು, ಶಿಕಾರಿಪುರ ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಪ್ರದರ್ಶಿಸಿದ್ದನ್ನು ತಿಳಿಸಿದರು. ಈ ಎಲ್ಲ ಅನುಭವ ಧಾರೆಯನ್ನ 1958ರಲ್ಲಿ "ಪರಿಮಳ ನಾಟಕ ಕಲಾ ಸಂಘ" – ತೊಗರ್ಸಿ ಎಂಬ ತಂಡ (ಕಂಪನಿ) ರಚಿಸಿ ಅದರಲ್ಲಿ ತಾವು ಕಲಾವಿದರಾಗಿ ಅಭಿನಯಿಸಿದ 150ಕ್ಕೂ ಹೆಚ್ಚು ನಾಟಕಗಳನ್ನು ಪುನಃ ತಮ್ಮ ಕಂಪನಿಯಲ್ಲಿ ಆಡಿಸಿದ ಸಾಧನೆ ನಮ್ಮ ತಾಲ್ಲೂಕಿನ ಹೆಮ್ಮೆ. ಇವರು ರಚಿಸಿದ "ಕೆಳದಿ ಶಿವಪ್ಪನಾಯಕ" ನಾಟಕ ಜನಮೆಚ್ಚಿದರು. 1952ರಲ್ಲಿ "ಶ್ರೀ ಕಮಲ ಕಲಾ ಸಂಘ", ಸಾಗರ ಇವರು ಈ ನಾಟಕವನ್ನು ಕಲಿಸಿಕೊಂಡು ವಿವಿಧಕಡೆ ಪ್ರದರ್ಶಿಸಿದ್ದರು ಹಾಗೂ ಶಿವಮೊಗ್ಗದ ಶಾರದಾ ಕಲಾ ಸಂಘ, ದುರ್ಗಿಗುಡಿ 1977ರಲ್ಲಿ ನಾಡಿಗೇರ್ ನಿರ್ದೇಶನದಲ್ಲಿ "ಕೆಳದಿ ಶಿವಪ್ಪನಾಯಕ" ಪ್ರದರ್ಶಿಸಿದರು.

ಇನ್ನೋರ್ವ ಕೆ. ಕೃಷ್ಣ ಹೆಬ್ಬಾರ್ ದಂಪತಿಗಳು ಕರ್ನಾಟಕ ಥೇಟರ್ಸ್, ಮಂಗಳೂರು (1968–69)ರಲ್ಲಿ ಮೂಲಕ ಕಲಾವಿದರಾಗಿ ಶಿರಾಳಕೊಪ್ಪದಲ್ಲಿ ನೆಲೆಸಿದರು. ಟಿಪ್ಪುಸುಲ್ತಾನ್, ತಾಯಿಕರಳು, ಮಲಮಗಳು, ಮಹಾತಾಯಿ, ದತ್ತುಪುತ್ರ, ರಾಮಾಯಣ, ಶಿಕಾರಿಪುರ ತಾಲ್ಲೂಕಿನ ಶಿರಾಳಕೊಪ್ಪದಲ್ಲಿ 3 ತಿಂಗಳ ಕಾಲ ಪ್ರದರ್ಶನವಾಗುತ್ತಿದ್ದವು ಎಂಬ ಮಾತುಗಲು ನಮ್ಮ ತಾಲ್ಲೂಕಿನ ಜನರ ಕಲಾ ಪ್ರೋತ್ಸಾಹಕ್ಕೆ ಉದಾಹರಣೆಯಾಗುತ್ತವೆ. ದೀರೇಂದ್ರಗೋಪಾಲ್, ವಿನೋದ ವಿದ್ಯಾನಿಧಿ ಶಾಂತಕುಮಾರ್, ಇಂದುಶೇಖರ್ (ಇಂದಿನ ಸತ್ಯಭಾಮ ಅವರ ಪತಿ) ಇವರೆಲ್ಲ ಇವರ ಸಹಪಾಠಿಗಳಾಗಿದ್ದವರು.

ಅಲ್ಲದೆ ಚಿಂದೋಡಿ ವೀರಪ್ಪನವರ ಕಂಪನಿ, ಚಿತ್ತರಗಿ ಕಂಪನಿ, ಏಣಗಿ ಬಾಳಪ್ಪನವರ ಕಂಪನಿ, ಹೊನ್ನಪ್ಪ ಭಾಗವತರ್ ಕಂಪನಿ, ಗುಬ್ಬಿ ಕಂಪನಿ, ಜಮಖಂಡಿ ಕಂಪನಿಗಳು ಶಿರಾಳಕೊಪ್ಪ ತೊಗರ್ಸಿಗೆ ಬಂದವೆಂದರೆ ಹಲವಾರು ತಿಂಗಳು ಇಲ್ಲಿಯೇ ನೆಲೆಸುತ್ತಿದ್ದರ

ಪರಿಣಾಮ ಸುತ್ತಲಿನ ಹಳ್ಳಿಗಳಲ್ಲಿ ಯುವಕರೆಲ್ಲ ಸೇರಿ ವರ್ಷಕ್ಕೆ ಒಮ್ಮೆ ನಡೆಯುವ ಜಾತ್ರೆಯ ದಿನ ನಾಟಕವಾಡುವ ಹೊಸ ಬಗೆಯನ್ನ ಜನರು ರೂಢಿಸಿಕೊಂಡುರ, ನೇರಲಗಿ, ಹಿರೇಜಂಬೂರು, ಶಿರಾಳಕೊಪ್ಪ, ತೊಗರ್ಸಿ, ಈಸೂರು, ಗಾಮ, ಮುಡುಪ ಸಿದ್ಧಾಪುರ, ಚುರ್ಚಿಗುಂಡಿ, ಮಟ್ಟಿಕೋಟೆ, ಕಪ್ಪನಹಳ್ಳಿ, ಮಳೂರು ಇನ್ನೂ ಹಲವಾರು ಊರುಗಳಲ್ಲಿ ಇಂದಿಗೂ ವರ್ಷಕ್ಕೆ ಒಂದು ಸಾಮಾಜಿಕ ನಾಟಕ ಕಲಿತು ಆಡುವ ಸಂಪ್ರದಾಯ ಉಳಿಸಿಕೊಂಡಿದ್ದಾರೆ.

1968–69ರಲ್ಲಿ ಈ ಎಲ್ಲ ಪ್ರಭಾವಗಳಿಂದ ಶಿರಾಳಕೊಪ್ಪದಲ್ಲಿ ಇಂದಿನ ಮಲೆನಾಡು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಎ. ಎಸ್. ಪದ್ಮನಾಭ ಭಟ್ ಹಾಗೂ ಸ್ವಾತಂತ್ರ ಹೋರಾಟಗಾರರಾದ ಚಿದಂಬರಪ್ಪನವರು "ಗೆಳೆಯರ ಕಲಾ ಸಂಘ" ಎಂಬ (ಹವ್ಯಾಸಿ ಕಲಾ ತಂಡ ಎಂದು ಗುರುತಿಸಬಹುದು) ಸಂಸ್ಥೆಯನ್ನು ಸ್ಥಾಪಿಸಿದರು. ಕೆ. ಶಿವರಾಮಶೆಟ್ರು, ಕೆಳಗಿನ ಕೇರಿ ರಂಗಾಚಾರ್ರು ಎಲ್ಲಾ ಸೇರಿ "ಕಂಪನಿ ನಾಟಕ ಮಂಡಳಿ"ಗಳಿಗೆ ಸವಾಲು ಹಾಕಿದರು. ನಮ್ಮ ನಾಟಕಗಳನ್ನು ನೀವು ನೋಡಬೇಕು ಅಂತ ಸವಾಲ್ ಹಾಕಿದ್ರಂತೆ. "ಮಾತಮಗ ಕನ್ಯ" (ಕಂದಗಲ್ ಹನುಮಂತ ರಾಯರ ಕೃತಿ), ದೇವದಾಸಿ ಎಂಬ ನಾಟಕಗಳು ಇವರು ಅಭಿನಯಿಸಿದ್ದರು. ಮಾತಂಗ ಕನ್ಯ ನಾಟಕ ಮೈಸೂರಿನ ದಸರಾ ವಸ್ತು ಪ್ರದರ್ಶನದಲ್ಲೂ ಪ್ರದರ್ಶನ ಹಾಗೂ 10ಕ್ಕಿಂತ ಹೆಚ್ಚು ಪ್ರದರ್ಶನಗಳನ್ನು ನೀಡಿತ್ತು ಎಂಬುದು ಹೆಮ್ಮೆಯ ಸಂಗತಿ.

ಇಷ್ಟೇ ಅಲ್ಲದೆ 1976–77ರಲ್ಲಿ ಹಿರೇಜಂಬೂರಿನ ಯು. ಶಿವನಗೌಡ ಪಾಟೇಲರ ಆಸಕ್ತಿಯಿಂದ ಸಿರಿಗೆರೆ ಅಕ್ಕನ ಬಳಗದ ಸಂಗೀತ ಶಿಕ್ಷಕರಾದ "ರಾಜು ಮೇಸ್ತ್ರ'ನ್ನ ಕರೆಸಿ ತಮ್ಮ ಮಕ್ಕಳಿಗೆ ಸಂಗೀತ, ಹಾರ್ಮೋನಿಯಂ ಪಾಠ ಹೇಳಿಸಿದ್ದರು. ಇಡೀ ಊರಿನಲ್ಲಿ ಸಂಜೆಯಾಯಿತೆಂದರೆ ಸಂಗೀತ ಇಡೀ ಊರಿನಲ್ಲಿ ಆವರಿಸುತ್ತಿತ್ತು. ಹೀಗೆ ಸಾಂಸ್ಕೃತಿಕ ವಾತಾವರಣ ಹಿರೇಜಂಬೂರಿನಲ್ಲಿ ರೂಪಿತವಾಗುವ ಹೊತ್ತಿಗೆ, ಶಿವನ ಗೌಡರ ಧರ್ಮಪತ್ನಿ ಶ್ರೀಮತಿ ಲಲಿತಮ್ಮನವರು ಆಸಕ್ತಿಯಿಂದ "ಅಕ್ಕಮಹದೇವಿ ಮಹಿಳಾ ಸಮಾಜ" ಎಂಬ ಸ್ವಸಹಾಯ ಗುಂಪನ್ನು ಆರಂಭಿಸಿದರು. ಇದು ಜಿಲ್ಲೆಗೇ ಮೊದಲ ಸ್ವ–ಸಹಾಯ ಗುಂಪೆಂದರೂ ತಪ್ಪಾಗಲಾರದು. ಆ ಗುಂಪಿನ ಮೂಲಕ ತಮ್ಮ ಮಕ್ಕಳನ್ನು ಸೇರಿಸಿಕೊಂಡು ರಾಜು ಮೇಸ್ತ್ರ ಸಂಗೀತದೊಂದಿಗೆ ತಾವೇ "ಕಂಬಳಿ ನಾಗಿದೇವ" ನಾಟಕವನ್ನು ನಿರ್ದೇಶಿಸಿದ್ದರು. ಈ ನಾಟಕ 5ಕ್ಕಿಂತ ಹೆಚ್ಚು ಪ್ರದರ್ಶನ ನೀಡಿತು. ಮುಖ್ಯವಾಗಿ ಬಾಂಗ್ಲಾ ವಿಮೋಚನೆ ಸಂದರ್ಭದಲ್ಲಿ "ರಾಷ್ಟ್ರರಕ್ಷಣಾ ನಿಧಿ" ಸಹಾಯಕ್ಕೆ ಪ್ರದರ್ಶನ ನೀಡಿದ್ದು ಮಹತ್ವದ ಸಂಗತಿ ಎಂಬುದನ್ನು ಮರೆಯುವಂತಿಲ್ಲ. ಹಾಗೆಯೇ ಬೆಳೆದ ಈ ವಿಭಿನ್ನ ನಾಟಕಗಳ ಹೊಸ ಪ್ರಯತ್ನವೆಂದರೂ ತಪ್ಪಾಗಲಾರದು.

ಹಳ್ಳಿಹಳ್ಳಿಯಲ್ಲೂ ಸಾಮಾಜಿಕ ನಾಟಕಗಳು, ನಾಟಕಗಳನ್ನು ಕಲಿಸುವ ನಾಟಕದ ಮೇಸ್ತ್ರು, ಹೊಸ ಸೀನರಿಗಳನ್ನು ಬಳಸುವ ಕಂಪನಿಗಳು ಹೊಸ ಕಲಾ ಆಸಕ್ತಿಯನ್ನು

ಹುಟ್ಟುಹಾಕಿದವು. ಶಿರಾಳಕೊಪ್ಪದ "ಕರಿಬಸವೇಶ್ವರ ಡ್ರಾಮಾ ಸೀನರಿ" ಮತ್ತು ಕೊಟ್ಟುರೇಶ್ವರ ಡ್ರಾಮಾ ಸೀನರಿ"ಗಳು ಲೈಟ್ಸ್, ಸೀನರಿ, ಪ್ರಸಾದನಕ್ಕೆ ನಮ್ಮ ತಾಲ್ಲೂಕಿನಲ್ಲಿ ಪ್ರಸಿದ್ಧಿಯಾಗಿದ್ದವು. (ಆದರೆ ಇಂದಿನ ಆಧುನಿಕ ಯುಗದ ಹೊಡೆತಕ್ಕೆ ಸಿಕ್ಕು ಕೊಟ್ಟುರೇಶ್ವರ ಡ್ರಾಮಾ ಸೀನರಿ ಮುಚ್ಚಿದೆ ಎಂಬುದು ವಿಷಾದನೀಯ)

ಆದರೆ 1992ರಲ್ಲಿ ಕಲಾವಿದರಾದ ಕೊಪ್ಪಲು ಮಂಜಣ್ಣನವರ ನೇತೃತ್ವದಲ್ಲಿ "ಸ್ನೇಹರಂಗ" ಅಸ್ತಿತ್ವಕ್ಕೆ ಬಂತು. ಚುರ್ಚಿಗುಂಡಿ ಬಸವನಗೌಡ, ಸುಣ್ಣದ ಕೊಪ್ಪದ ರುದ್ರಗೌಡ ಇನ್ನೂ ಅನೇಕರ ಪರಿಶ್ರಮದಿಂದ ಪೂರ್ಣ ಪ್ರಮಾಣದ ಹವ್ಯಾಸಿ ಕಲಾತಂಡವಾಗಿ ತನ್ನ ಕಲಾ ಅಭಿಯಾನವನ್ನು ಮುಂದುವರೆಸಿತು. ಆಧುನಿಕ ಸ್ಪಾಟ್‌ಲೈಟ್, ಆಧುನಿಕ ತಂತ್ರಗಳು, ಸಾಮಾಜಿಕ ನಾಟಕಗಳ ಗುಂಗಿಂದ ಹೊರಬಂದದ್ದು, ಆಧುನಿಕ ವೇಷಭೂಷಣಗಳಿಂದ ಈ ತಂಡ ಶಿಕಾರಿಪುರ ತಾಲ್ಲೂಕಿನ ಮನೆಮಾತಾಯಿತು. ಉಡುಪಿ ರಥಬೀದಿ ನಾಟಕ ಸ್ಪರ್ಧೆಯಲ್ಲಿ ಅನೇಕ ಬಹುಮಾನ ಪಡೆದಿದೆ.

ಹಣದಬಟ್ಟೆ, ಮೂಟೆ, ಜೋಕುಮಾರಸ್ವಾಮಿ, ನಾಗಮಂಡಲ, ಒಂದು ವಾಡೇದ ಕತೆ. ಆಧುನಿಕ ನಾಟಕಗಳ ಸಾಲಿನಲ್ಲಿ ಪ್ರದರ್ಶನಗೊಂಡರೆ ಮುದುಕನ ಮದುವೆ, ಗೌಡ ಮೆಚ್ಚಿದ ಹುಡುಗಿ, ಕುಂಟಕುಂಟ ಕುರುವತ್ತಿ, ಗುರುತಿನವರು, ಯಮಲೋಕದಲ್ಲಿ ಮಾನವ, ಮದಗದ ಕೆಂಚವ್ವ, ಸಾಮಾಜಿಕ ನಾಟಕಗಳ ಚೌಕಟ್ಟಿನಲ್ಲಿ ಪ್ರದರ್ಶನಗೊಂಡವು. ಈ ತಂಡದ "ಜೋಕುಮಾರಸ್ವಾಮಿ" 20ಕ್ಕೂ ಹೆಚ್ಚು ಪ್ರದರ್ಶನ ಕಂಡಿದ್ದು ವಿಶೇಷ ಸಂಗತಿ. ಈ ಕಾಲದಲ್ಲಿ "ಕಾಗಿನೆಲ್ಲಿ ಮೂಕಾಂಬಿಕಾ ನಾಟಕ ಸಂಘ" – ಕಾಗಿನೆಲ್ಲಿ ಸಿದ್ದಯ್ಯ (ಇವರು ನಾಟಕ ಅಕಾಡೆಮಿಯ ಸದಸ್ಯರಾಗಿದ್ದವರು) ನೇತೃತ್ವದಲ್ಲಿ ಆರಂಭವಾದ ಈ ಕಂಪನಿ ದಶಕಗಳ ಕಾಲ ತನ್ನ ಕಲಾ ಸೇವೆಯನ್ನ ನಾಡಿಗೆ ಅರ್ಪಿಸಿತು. ಇದರಿಂದ ಪ್ರೇರಣೆ ಪಡೆದು ಕಾಗಿನೆಲ್ಲಿ ಕಲಾವಿದರ ಊರು, ಮನೆಗೊಬ್ಬ ಕಲಾವಿದ, ಮನೆಗೊಬ್ಬ ಮೇಸ್ತ್ರಿ, ಕಾಗಿನೆಲ್ಲಿ ಹನುಮಂತು, ಬರಮಣ್ಣ ಬೆಟಗೇರಿ, ಮಧುಮತಿ, ಜಂಗಮಶೆಟ್ಟಿ ಗುರುತಿಸಬಹುದಾದ ಕಲಾವಿದರು. ನನ್ನ ಅರಿವಿಗೆ ಬರದ ನಮ್ಮ ತಾಲ್ಲೂಕಿನ ಕಲಾವಿದರು ಇನ್ನೂ ಎಷ್ಟೋ ಜನ ಈಗಲೂ ನೇಪಥ್ಯದಲ್ಲೇ ಇದ್ದಾರೆ.

ಈ ಕಾಲ ಘಟ್ಟದಲ್ಲೇ ಕಮತಗಿ ಕಂಪನಿ ಪ್ರದರ್ಶಿಸಿದ "ಕಿವುಡ ಮಾಡಿದ ಕಿತಾಪತಿ" ನಾಟಕ 100 ಪ್ರದರ್ಶನಗಳನ್ನು ಕಂಡಿದ್ದು ವಿಶೇಷ.

ಆನಂತರ ಡಾ॥ ಬಿ. ವಿ. ವಸಂತ್‌ಕುಮಾರ್ ಅವರ ನೇತೃತ್ವದಲ್ಲಿ ಶಿಕಾರಿಪುರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಸಕ್ರೀಯವಾಗಿ ರಂಗಭೂಮಿಯಲ್ಲಿ ತೊಡಗಿಸಿಕೊಂಡರು. ಶೂರರ ಈಸೂರು, ಪ್ರಳಯ, ಬಾವಿಗೆ ಬಿದ್ದ ರೈತ ಮುಂತಾದ ನಾಟಕಗಳು ಪ್ರದರ್ಶನಗೊಂಡವು. ಇವರ ಗರಡಿಯಲ್ಲಿ ರಂಗಶಿಕ್ಷಣ ಪಡೆದ ಗುರುಪ್ರಸಾದ್, ಶಿರಾಳಕೊಪ್ಪ, ಕಲ್ಪನಾ, ರಾಘು, ಕುಬೇರ್, ಈಶ್ವರ್‌ರಾವ್ ಮುಂತಾದ ಗೆಳೆಯರೆಲ್ಲಿ ಸೇರಿ ಗುರುಪ್ರಸಾದ್ ನೇತೃತ್ವದಲ್ಲಿ "ಸಿರಿಯಾಳ ಕಲಾ ರಂಗ (ರಿ.) 2003ರಲ್ಲಿ

ಸ್ಥಾಪನೆಗೊಂಡೀತು. ಗುರುಪ್ರಸಾದ್ ಶಿವಸಂಚಾರದಲ್ಲಿ, ಕಲ್ಪನಾ ನೀನಾಸಂ, ತರಬೇತಿ ಪಡೆದ ಕಲಾವಿದರಾಗಿ ಸಿದ್ದರಾಮ ಹಾಗೂ ಸುರೇಶ್ ಕೇಸಾಪುರ ಸಂಗೀತಗಾರರಾದ ಈ ಯುವ ತಂಡ ರಾಜ್ಯದಲ್ಲಿ ತನ್ನ ಕಲಾ ಪ್ರದರ್ಶನಗಳಿಂದ ಗಮನಸೆಳೆಯಿತು. 1300ಕ್ಕೂ ಹೆಚ್ಚು ಪ್ರದರ್ಶನಗಳನ್ನು 30ಕ್ಕೂ ಹೆಚ್ಚು ನಾಟಕ ಪ್ರದರ್ಶನಗಳನ್ನು ಈಗಾಗಲೇ ನೀಡಿದೆ.

ಬಸವಲಿಂಗಯ್ಯ ನಿರ್ದೇಶನದ "ಬೆರಳ್ಗೆಕೊರಳ್" ಶಿವಕುಮಾರ್ ನಿರ್ದೇಶನದ ಜೊತೆಗಿರುವನು ಚಂದಿರ, ಕಲ್ಪನಾ ನಿರ್ದೇಶನದಲ್ಲಿ ರಕ್ತಾಕ್ಷಿ, ಗುರುಪ್ರಸಾದ್ ನಿರ್ದೇಶನದಲ್ಲಿ "ಕಲ್ಕಿ" ನಾಟಕಗಳು ಈ ತಂಡದಲ್ಲಿ ಪ್ರದರ್ಶಿತವಾಗುತ್ತಿವೆ. ಇವುಗಳಲ್ಲದೆ ಜನಪದ ರಂಗಭೂಮಿಯ ಆಯಾಮಗಳನ್ನೆಟ್ಟುಕೊಂಡು ರಾಜಧಾನಿಯಿಂದ ದೂರವಾಗಿ ಕಾರ್ಯನಿರ್ವಹಿಸುತ್ತಿರುವ ಈ ತಂಡ. ಆರ್ಥಿಕ ಅಡಚಣೆಗಳಿಂದ ತೊಂದರೆ ಇದ್ದರೂ ಸಕ್ರೀಯವಾಗಿ ಕಾರ್ಯನಿರ್ವಹಿಸುತ್ತಿದೆ. ಈ ತಂಡಕ್ಕೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಸಿಕ್ಕಲ್ಲಿ ರಾಷ್ಟ್ರದ ಮನೆಮಾತಾಗುವುದರಲ್ಲಿ ಸಂದೇಹವಿಲ್ಲ.

**– ಗುರುಪ್ರಸಾದ್ ಟಿ.ಆರ್.**

## ಮಕ್ಕಳ ರಂಗಭೂಮಿ

ರಾಜಕೀಯವಾಗಿ ಬಲಾಢ್ಯವಾಗಿರುವ ಶಿಕಾರಿಪುರ ಸಾಂಸ್ಕೃತಿಕವಾಗಿಯೂ ಬೇರೆ ಬೇರೆ ಕಲಾ ಪ್ರಕಾರಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಿರುತ್ತದೆ. ರಂಗಭೂಮಿಯ ಹಿನ್ನೆಲೆಯಲ್ಲಿ ತೀರಾ ಹಿನ್ನಡೆಯಲ್ಲಿ ಇದ್ದ ಶಿಕಾರಿಪುರ ಇತ್ತೀಚೆಗೆ ಕೆಲವು ರಂಗತಂಡಗಳ ಸೃಷ್ಟಿಯಿಂದಾಗಿ ಸೃಜನಾತ್ಮಕವಾದ ರಂಗಕ್ರಿಯೆಗಳು ನಿರಂತರತೆಯನ್ನು ಪಡೆದುಕೊಂಡಿರುವುದು ಹರ್ಷದ ಸಂಗತಿ. ದೊಡ್ಡವರ ರಂಗಭೂಮಿ ಜೊತೆಗೆ ಮಕ್ಕಳ ರಂಗಭೂಮಿಯ ಕಾರ್ಯಚಟುವಟಿಕೆ ತೀವ್ರ ಮಟ್ಟದಲ್ಲಿ ಜರುಗುತ್ತಿರುವುದಕ್ಕೆ ಇಲ್ಲಿನ ರಂಗಾಸಕ್ತರು ಹಾಗೂ ರಂಗತಂಡಗಳು ಕಾರಣವಾಗಿವೆ. ರಂಗದಲ್ಲಿ ರಂಗು ಎಂಬ ತಂಡವು ಕಳೆದ 5 ವರ್ಷಗಳಿಂದ ನಿರಂತರವಾಗಿ ಮಕ್ಕಳ ನಾಟಕವನ್ನು ಆಡಿಸುತ್ತಾ ಮಕ್ಕಳಿಗಾಗಿ ರಂಗ ತರಬೇತಿ ಶಿಬಿರ, ಮಕ್ಕಳ ನಾಟಕ, ನಾಟಕ ರಚನಾ ಶಿಬಿರ, ರಂಗಭೂಮಿಯಿಂದ ವ್ಯಕ್ತಿತ್ವ ವಿಕಸನ ಹಾಗೂ ತಾಲ್ಲೂಕಿನ ಎಲ್ಲಾ ಶಾಲೆಗಳಿಗೆ ತೆರಳಿ ಶಿಕ್ಷಣದಲ್ಲಿ ರಂಗಭೂಮಿ ಕಾರ್ಯಚಟುವಟಿಕೆಯನ್ನು ನಡೆಸುತ್ತಿದೆ. ಈ ತಂಡದ ಮುಖ್ಯ ನಾಟಕಗಳು " ತೊತೊಬಾನ್", ಮಕ್ಕಳ ಕನಸು, ಹಕ್ಕಿ ಹಾರಿತು ಇತ್ಯಾದಿ.

ಖ್ಯಾತ ನಿರ್ದೇಶಕ ಇಕ್ಬಾಲ್ ಅಹಮ್ಮದ್ ಅವರ ಗುಡಿ ಸಂಸ್ಥೆಯು ಕಳೆದ 3 ವರ್ಷಗಳಿಂದ ಮಕ್ಕಳ ಬೇಸಿಗೆ ಶಿಬಿರವನ್ನು ಏರ್ಪಡಿಸಿದೆ. ರಂಗ ಚಟುವಟಿಕೆ ಹಾಗೂ ಮಕ್ಕಳ ನಾಟಕವನ್ನು ಪ್ರದರ್ಶಿಸುತ್ತಿದೆ. ಅವುಗಳಲ್ಲಿ ಪಂಜರ ಶಾಲೆ, ಹಕ್ಕಿ ಹಾಡಿತು ಇತ್ಯಾದಿ.

ಶಿರಾಳಕೊಪ್ಪದಲ್ಲಿರುವ ಸಿರಿಯಾಳ ಕಲಾ ತಂಡವು ಅನೇಕ ವರ್ಷದಿಂದ ಶಿಕಾರಿಪುರ ತಾಲ್ಲೂಕಿನಲ್ಲಿ ರಂಗ ನಡೆಯನ್ನು ನಡೆಸುತ್ತಿರುವ ಮತ್ತೊಂದು ಮುಖ್ಯ ಸಂಸ್ಥೆಯಾಗಿದ್ದು ಇದು ಕೂಡ ಅನೇಕ ಮಕ್ಕಳ ನಾಟಕಗಳು ಹಾಗೂ ಬೇಸಿಗೆ ರಂಗಶಿಬಿರವನ್ನು ಮಕ್ಕಳಿಗಾಗಿ ಏರ್ಪಡಿಸಿ ಯಶಸ್ಸನ್ನು ಕಂಡಿದೆ. ಈ ತಂಡವು ಗೋವಿನಹಾಡು, ದೇವರು ರುಜು ಮಾಡಿದನು, ಕಲ್ಕಿ, ಕೆಂಪುಹೂವು, ಸುಮ್‌ಸುಮ್ನೆ, ಬಾರಮ್ಮ ಭಾಗೀರಥಿ, ಮುಂತಾದ ನಾಟಕಗಳನ್ನು ಪ್ರದರ್ಶಿಸಿದೆ.

ಹೀಗೆ ಶಿಕಾರಿಪುರ ತಾಲ್ಲೂಕಿನಲ್ಲಿ ಮಕ್ಕಳ ರಂಗಭೂಮಿಯು ತಾಲ್ಲೂಕಿಗೆ ಒಂದು ಹೊಸ ಆಯಾಮವನ್ನೇ ತಂದು ಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು.

– **ಸತೀಶ್ ಗಟ್ಟಿ**

## ಸಿರಿಯಾಳ ಕಲಾ ರಂಗ (ರಿ.),

ಸಂಪರ್ಕ: ಗುರುಪ್ರಸಾದ್ ಟಿ.ಆರ್., ದೂ: 97421 64151

ಸಿರಿಯಾಳ ಕಲಾ ರಂಗವು ಒಂದು ಹವ್ಯಾಸಿ ಕಲಾ ತಂಡವಾಗಿ 2003–04ನೇ ಸಾಲಿನಲ್ಲಿ ಆರಂಭವಾಯಿತು. ಕರ್ನಾಟಕ ಸರ್ಕಾರದ ಜಲನಿರ್ಮಲ ಯೋಜನೆಯ ಮೂಲಕ 180ಕ್ಕೂ ಹೆಚ್ಚು ಬೀದಿ ನಾಟಕಗಳನ್ನು ರಾಜ್ಯದಾದ್ಯಂತ ಪ್ರದರ್ಶಿಸಿತು. ಈ ಕಾರ್ಯಕ್ರಮ ಮುಗಿದಾಗ ಮುಂದೇನು? ಎಂಬ ಪ್ರಶ್ನೆ ಕಲಾವಿದರೆಲ್ಲರಲ್ಲಿ ಕಾಡಿತು. ಆಗ ಕಲಾವಿದರೆಲ್ಲರೂ ಸೇರಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಿಕರಂ ಒಂದು ಪ್ರಯೋಗಾತ್ಮಕ ಹಾಗೂ ಕಲಾತ್ಮಕ ಚಟುವಟಿಕೆಗಳ ಮೂಲಕ ನಿರಂತರ ಕಾರ್ಯಕ್ರಮಗಳನ್ನು ಸಾಮಾಜಿಕ ಕಳಕಳಿಯೊಂದಿಗೆ ನಡೆಸಬೇಕೆಂಬ ತೀರ್ಮಾನ ತೆಗೆದುಕೊಂಡೆವು.

ಅದರ ಫಲವಾಗಿ ಸಿರಿಯಾಳ ಕಲಾ ರಂಗ ಸಿ. ಬಸವಲಿಂಗಯ್ಯರವರ ಮಾರ್ಗದರ್ಶನದಲ್ಲಿ ಅನೇಕ ಕಾರ್ಯಕ್ರಮಗಳನ್ನು ನಡೆಸಿತು. ಬೆರಳ್ಗೆ ಕೊರಳ್, ಜೊತೆಗಿರುವನು ಚಂದಿರ, ನಾಟಕಗಳನ್ನು ಸಿದ್ಧಪಡಿಸಿ ರಾಜ್ಯ ಹಾಗೂ ರಾಷ್ಟ್ರೀಯ ನಾಟಕೋತ್ಸವಗಳಲ್ಲಿ ಪ್ರದರ್ಶಿಸಿತು. ಆದರೆ ಅಷ್ಟಕ್ಕೇ ಸೀಮಿತವಾಗದ ತಂಡದ ಪ್ರಯತ್ನ ಕಾಲೇಜು ವಿದ್ಯಾರ್ಥಿಗಳನ್ನು, ಶಾಲಾ ವಿದ್ಯಾರ್ಥಿಗಳನ್ನು ರಂಗ ಕಲೆಯಲ್ಲಿ ತೊಡಗಿಸಿಕೊಳ್ಳುವ ಕಾರ್ಯಕ್ರಮಗಳನ್ನು ನಡೆಸಿತು. ಅದರ ಫಲವಾರಿ ಬಿಸಿಲ್ಗುದುರೆಯ ಬೆನ್ನೇರಿ, ಶೋಷಣೆ, ಟೋಪಿ ಬೇಕಾ ಟೋಪಿ, ಗಂಗಿ ಆಟ, ಬಾರಮ್ಮ ಭಾಗೀರಥಿ ನಾಟಕಗಳನ್ನು ಸಿರಿಯಾಳ ಕಲಾ ರಂಗ ಕಲಿಸಿ ಪ್ರದರ್ಶಿಸಿತು. ಕಿರಿಯರಿಗಾಗಿ ನೃತ್ಯ ರೂಪಕಗಳಾದ ಎಲ್ಲಿ ಹೋದವೋ ಕಣ್ಣಿಗೆ ಕಣದಾದವೋ, ಕುರುಡು ಕಾಂಚಾಣ ಕುಣಿಯುತಲಿತ್ತಾ, ಒಂದು ಬೊಗಸೆ ನೀರು, ಓ ನನ್ನ ಚೇತನ, ಹುಟ್ಟಿದೇಳು ದಿವಸದಲಿ, ಸುಖ ಎಲ್ಲರಿಗೆಲ್ಲೈತವ್ವ ಗೀತ ರೂಪಕಗಳ ಜೊತೆಗೆ "ಬದುಕಲು ಬಿಡಿ" ನಾಟಕವನ್ನು ಕಲಿಸಿ ಪ್ರದರ್ಶಿಸಿದೆ.

ಗ್ರಾಮೀಣ ಪ್ರದೇಶದ ಯುವಕ ಯುವತಿಯರಿಗೆ ರಂಗ ತರಬೇತಿಯನ್ನು ನೀಡಿ ಪಾಪ್ಯುಲೇಷನ್ ಸರ್ವೀಸಸ್ ಇಂಟರ್ ನ್ಯಾಷನಲ್ ತಂಡದ ಜೊತೆ ಸೇರಿ 500ಕ್ಕೂ ಹೆಚ್ಚು ಪ್ರದರ್ಶನಗಳನ್ನು ಏಡ್ಸ್ ರೋಗದ ಬಗೆಗಿನ ಜಾಗೃತಿ ಅಭಿಯಾನದಲ್ಲಿ ಪ್ರದರ್ಶಿಸಿತು. ಅಲ್ಲದೇ ಕರ್ನಾಟಕ ಸರ್ಕಾರ ಹಾಗೂ ವಾರ್ತಾ ಇಲಾಖೆಯ ಗ್ರಾಹಕ ಜಾಗೃತಿ ಅಭಿಯಾನದಲ್ಲಿ "ಕೊಳ್ಳೋ ಗ್ಯಾನ" ನಾಟಕ ಪ್ರದರ್ಶನವನ್ನು ಶಿವಮೊಗ್ಗ, ಚಿಕ್ಕಮಗಳೂರು,

ಮಂಗಳೂರು, ಉಡುಪಿ, ಕಾರವಾರ ಹೀಗೆ ಐದು ಜಿಲ್ಲೆಗಳಲ್ಲಿ ಐವತ್ತಕ್ಕು ಹೆಚ್ಚು ಪ್ರದರ್ಶನಗಳನ್ನು ನೀಡಿತು.

ವಾರ್ತಾ ಇಲಾಖೆಯ ದೃಶ್ಯ ಚಿತ್ರೀಕರಣದಲ್ಲಿ ಮನುಕುಲ ಕಥನ, ಮಾಹಿತಿ ಹಕ್ಕು ಮುಂತಾದ ಸಾಕ್ಷ್ಯಾ ಚಿತ್ರಗಳಲ್ಲಿ ಅಭಿನಯಿಸಿ ಸಿಕರಂ ಕಲಾವಿದರು ಮೆಚ್ಚುಗೆ ಪಡೆದರು. ಅಲ್ಲದೇ ನೈರ್ಮಲ್ಯ ಆಂದೋಲನದಲ್ಲಿ ಬಾರಮ್ಮ ಭಾಗೀರಥಿ, ಚಂಬು ಪುರಾಣ, ನೀರಬೇರು, ನೀರಶಕುನ, ಎಲ್ಲಕ್ಕೋಗೋದೆಲ್ಲಿ, ನೀರ ಹಕ್ಕು ಜನರ ಹಕ್ಕು, ಊರು ನೀರು, ಗಂಗಿ ಆಟ ಇನ್ನೂ ಮುಂತಾದ ನಾಟಕಗಳ ಜೊತೆಗೆ ಸಾಲು ಮರದ ತಿಮ್ಮಕ್ಕ, ಅತ್ತಾರ ಭೂಮ್ತಾಯ ಕಣ್ಣಾಗ ನೀರಿಲ್ಲ, ಓ ನೀರೆ ಜೀವ ಜಲವೇ, ಓ ನಾಡ ಜನಗಳೇ ನಿಮ್ಮ ಕೈಲಿದೆ ಈ ಗಳಿಗೆ, ಸಾಲು ಮರದ ನೆರಳಿಂದ ಸಾಗಿ ಬರುತಿದೆ ಹಾಡು, ನೀರು ಸಾಬು ನಜೀರು ಸಾಬು, ಜೀವ ಜಲ ನಾನು ಮುಂತಾದ ದೃಶ್ಯ ರೂಪಕಗಳನ್ನು ರಾಜ್ಯದಾದ್ಯಂತ 600ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದೆ. ವ್ಯಕ್ತಿತ್ವ ವಿಕಸನ ಶಿಬಿರ, ರಂಗ ತರಬೇತಿ ಶಿಬಿರಗಳ ಮೂಲಕ 400ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತರಬೇತಿ ನೀಡಿದೆ. ಸಾಮಾಜಿಕ ಕಳಕಳಿಯಿಂದ ಮೈಸೂರಿನ ಒಡನಾಡಿ ಸಂಸ್ಥೆ ಹಾಗೂ ಬೆಂಗಳೂರು ಜನ ಸಂಸ್ಕೃತಿ ತಂಡದ ಜೊತೆ ಸೇರಿ ಕೆಂಪು ದೀಪದ ಕೆಳಗೆ, ಪಂಜರದ ಗಿಳಿ ನಾಟಕಗಳನ್ನು ಮೈಸೂರು ಪಟ್ಟಣದಲ್ಲಿ ಸ್ತ್ರೀಯರು ಮತ್ತು ಅನಾಥ ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯದ ವಿರುದ್ಧ ಜನಜಾಗೃತಿ ಅಭಿಯಾನದಲ್ಲಿ 70ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿತು. ಹಾಗೂ 200ಕ್ಕೂ ಹೆಚ್ಚು ಪವಾಡ ಬಯಲು ಕಾರ್ಯಕ್ರಮಗಳನ್ನು ಅನೇಕ ಜಾಥಾಗಳಲ್ಲಿ ನೀಡಿದೆ.

ಒಟ್ಟಾರೆ ಸಿರಿಯಾಳ ಕಲಾ ರಂಗವು 1676 ಕ್ಕಿಂತ ಹೆಚ್ಚು ಬೀದಿ ನಾಟಕಗಳನ್ನು 23 ಕ್ಕಿಂತ ಹೆಚ್ಚು ನಾಟಕ ಪ್ರದರ್ಶನಗಳನ್ನು ರಾಜ್ಯದಾದ್ಯಂತ ನೀಡಿದೆ.

## ಕಲಾವಿದರ ವಿವರ

| | |
|---|---|
| ಗುರುಪ್ರಸಾದ್ ಟಿ. ಆರ್. | ಕುಬೇರಗೌಡ ಹೆಚ್. ವೈ. |
| ರಾಘವೇಂದ್ರ ಎಂ. ಜಿ. | ಬಸವರಾಜ |
| ಈಶ್ವರರಾವ್ ಚವ್ಹಾಣ್ | ಕಿರಣ್‌ಕುಮಾರ್ ಯು. ಸಿ. |
| ಪ್ರಶಾಂತ್ | ಮನೋಜ್‌ಕುಮಾರ್ |
| ಸಿದ್ಧರಾಮ ಎಸ್. ಕೇಸಾಪುರ | ಸುರೇಶ್ ಎಸ್. ಕೇಸಾಪುರ |
| ಮಂಜುಸ್ವಾಮಿ | ಅಶೋಕ್ ಕಣಸೋಗಿ |
| ಕಲ್ಪನಾ ಕೆ. (ನೀನಾಸಂ ಪದವೀಧರೆ) | ರೂಪ ಡಿ. |
| ಸಾವಿತ್ರಿ | ಜ್ಯೋತಿ ಬಿ. |
| ಶಿಲ್ಪ | ಅಶ್ವಿನಿ |
| ಶೃತಿ | ಕುಮಾರ |
| ಶಿವಾನಂದ | ರಾಜು ದೇವೇಂದ್ರ ಬಡಿಗೇರ್ |

## ರಂಗದಲ್ಲಿ ರಂಗು

**ಸಂಪರ್ಕ: ಸತೀಶ್‌ಗಟ್ಟಿ, ದೂ: 99648 82487.**

2009ರಲ್ಲಿ ತನ್ನ ರಂಗ ಚಟುವಟಿಕೆಯನ್ನು ಪ್ರಾರಂಭಿಸಿದ ತಂಡ "ಸಂಸ್ಕೃತಿ ರಂಗ ಅಧ್ಯಯನ ಕೇಂದ್ರ", ಯಲೋದಹಳ್ಳಿ ಇದರ ಉಪಶಾಖೆ. ಮಕ್ಕಳಿಗಾಗಿ, ಮಕ್ಕಳಿಗೋಸ್ಕರ ಹುಟ್ಟಿಕೊಂಡಿರುವ ಮಕ್ಕಳ ನಾಟಕ ತಂಡ, "ರಂಗದಲ್ಲಿ ರಂಗು" ತಂಡ ಈಗಾಗಲೇ ತನ್ನ ಮೂರು ವರ್ಷ ವಯಸ್ಸಿನಲ್ಲಿ 9 ನಾಟಕವನ್ನು ಮಕ್ಕಳಿಂದಲೇ ಆಡಿಸಿದೆ. ಹಾಗೆಯೇ ಮಕ್ಕಳ ರಂಗಶಿಬಿರವನ್ನೂ 3 ಬಾರಿ ಏರ್ಪಡಿಸಿದರ. ಮುಂದಿನ ದಿನಗಳಲ್ಲಿ ಮಕ್ಕಳ ಸಾಹಿತ್ಯ ಕುರಿತು ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಯೋಚಿಸಿದೆ. ತುಮರಿಯ ಕನ್ನಡ ಮೇಳದ ಮಕ್ಕಳ ನಾಟಕವನ್ನು ಇಲ್ಲಿನ ಮಕ್ಕಳಿಗೆ ಪ್ರದರ್ಶನವನ್ನು ಏರ್ಪಡಿಸಿದೆ. ಕುತೂಹಲ, ನಿರೀಕ್ಷೆ, ಉತ್ಸಾಹ, ದೊಡ್ಡವರನ್ನು ಮತ್ತೆ ಮಕ್ಕಳ ಯುಗಕ್ಕೆ ಕರೆದೊಯ್ಯುವ ಕೆಲಸವನ್ನೂ "ರಂಗದಲ್ಲಿ ರಂಗು" ತಂಡ ನಿರ್ವಹಿಸುತ್ತಿದೆ.

**ತಂಡದ ನಾಟಕಗಳು**

| | |
|---|---|
| ಮಕ್ಕಳ ಕನಸ | ತೊತ್ತುಜಾನ್ |
| ಹಕ್ಕಿಹಾಡು | ಪ್ರಾಣಿಗಳ ಜಗಳ |
| ಮೂರ್ಖರಾಜ | ಮಾಯಾಕಲ್ಲು |
| ಪರಿವರ್ತನೆ | ಹಸಿವು |
| ಅನೆ ಸಾಂಬಾರ್ | |

**ತಂಡದ ಕಲಾವಿದರು**

| | |
|---|---|
| ಹನುಮಂತ ಕೊಗ್ಗರ್ | ಬಸವರಾಜ ಹುಗ್ಗಿ |
| ಭೋಜರಾಜನಾಯ್ಕ ಎಸ್. | ಯಲ್ಲಪ್ಪ |
| ಬಸವರಾಜ ಇ.ಹೆಚ್. | ಗಿಡ್ಡಪ್ಪ |
| ಸುಬ್ಬು | ನರಸಿಂಹಸ್ವಾಮಿ |
| ಕಾಳಿಂಗರಾವ್ | ಸತೀಶ್‌ಗಟ್ಟಿ |
| ಭಾವನಾ ನಾಡಿಗ | ಚೇತನಾ ನಾಡಿಗ |
| ಅರುಣಕುಮಾರ್ | ಪರ್ವಿನ್ |
| ಚಂದ್ರಕಲಾ | ರಂಜನಿ |
| ಶ್ರೀಲಕ್ಷ್ಮೀ ಸುರೇಶ್‌ನಾಯ್ಕ ವೈ.ಸಿ. | ಪ್ರಶಾಂತ |

## ಸ್ನೇಹರಂಗ, ಶಿಕಾರಿಪುರ

**ಸಂಪರ್ಕ: ಸೂ.ಹ.ಮಂಜುನಾಥ್, ದೂ: 98459 62628**

1992ರಲ್ಲಿ ತನ್ನ ಹುಟಟನ್ನು ಕಂಡು ರಂಗ ತೇಜಸ್ಸಿಗೆ ಜೀವ ಕೊಡಲು ಶಿಕಾರಿಪುರನ್ನು ಕೇಂದ್ರವಾಗಿರಿಸಿಕೊಂಡು ಈ ಕಲಾತಂಡ 19 ವರ್ಷಗಳಿಂದ ನಿರಂತರ ಕಲಾಸೇವೆಯಲ್ಲಿ ತೊಡಗಿಸಿಕೊಂಡಿದೆ.

ರಂಗಚಟುವಟಿಕೆಯನ್ನೇ ಕೇಂದ್ರವಾಗಿರಿಸಿಕೊಂಡು ಬೆಳೆಯುತ್ತಾ ಬಂದ ಸ್ನೇಹರಂಗ ಇಂದು ಶಿವಮೊಗ್ಗ ಜಿಲ್ಲೆ ಹಾಗೂ ರಆಜ್ಯದ ರಂಗಸಕ್ತರೆಲ್ಲಾ ತನ್ನತ್ತ ನೋಡುವಂತೆ ಮಾಡಿದೆ. ತಂಡದಲ್ಲಿ ಬಹುಪಾಲು ಕಲಾವಿದರು ಕೃಷಿಕರು. ಮುಖ್ಯ ಕಲಾಜೀವಿಗಳೆಲ್ಲರನ್ನೂ ಸ್ನೇಹರಂಗ ಸ್ವಾಗತಿಸಿ ಪ್ರೀತಿಯಿಂದ ಆತಿಥ್ಯ ನೀಡುತ್ತಾ ಬಂದಿದೆ.



ನಾಟಕ: ಜೋಕುಮಾರಸ್ವಾಮಿ, ನಿರ್ದೇಶನ: ಮಧುಮತಿ ಜಂಗಮಶೆಟ್ಟಿ

ಶಿಕಾರಿಪುರ ಲಯನ್ಸ್ ಬನಸಿರಿ ಮಕ್ಕಳಿಗೆ ನಾಟಕವನ್ನು ಆಡಿಸುವುದರ ಮೂಲಕ ಮಕ್ಕಳ ರಂಗಕ್ಕೆ ಚಾಲನೆ ನೀಡಿತು. ಐತಿಹಾಸಿಕ, ಸಾಮಾಜಿಕ ಹಾಗೂ ಮಕ್ಕಳಿಗೆ ತೀರಾ ಹತ್ತಿರ ಅನಿಸುವಂತಹ ಕತೆಯನ್ನು ನಾಟಕವಾಗಿಸುತ್ತಾ, ಕಾಲೇಜು ವಿದ್ಯಾರ್ಥಿಗಳಿಗೂ ರಂಗಭೂಮಿಯ ಪರಿಚಯ ಮಾಡಿಸಿ ರಂಗಾಸಕ್ತಿ ಮೂಡಿಸಿದೆ. ಅನೇಕ ಮಕ್ಕಳ ರಂಗಶಿಬಿರಗಳನ್ನು ಆಯೋಜಿಸಿದೆ.

ಚಂದದ ದಾಖೆ ಮಾಡುವ ಅಥವಾ ದಾಖಲೆಗಾಗಿಯೇ ಕೆಲಸ ಮಾಡಿದ ರಂಗಪ್ರಯೋಗದೊಂದಿಗೆ ಶಿಕಾರಿಪುರಕ್ಕೆ ಘನತೆ ತಂದ ತೃಪ್ತಿ ಸ್ನೇಹರಂಗದ್ದು.

**ಸ್ನೇಹರಂಗ ಕಟ್ಟಿದ ನಾಟಕಗಳು**

| | |
|---|---|
| ಮೂಟೆ ಮತ್ತು ಹೆಣದ ಬಟ್ಟೆ | ಜೋಕುಮಾರಸ್ವಾಮಿ |
| ಮುದುಕನ ಮದುವೆ | ನಾಗಮಂಡಲ |
| ಬಸ್ಸು ಹಮಾಲ | ಮದಗದ ಕೆಂಚವ್ವ (ಮಕ್ಕಳ ನಾಟಕ) |
| ಸಾಕ್ಷಿ ಕಲ್ಲು (ಮಕ್ಕಳ ನಾಟಕ) | ರಾವಿ ನದಿಯ ದಂಡೆಯಲ್ಲಿ |

**ಸ್ನೇಹರಂಗದ ಕಲಾವಿದರು**

| | |
|---|---|
| ಸೂಹ ಮಂಜುನಾಥ | ಬಿ. ರುದ್ರೇಗೌಡ |
| ಹೆಚ್.ವಿಠ್ಠಲ್ | ಹನುಮಂತಪ್ಪ ಕಾಗಿನೆಲ್ಲಿ |
| ಭರಮಣ್ಣ ಚಿಟಗೇರಿ | ಮಧುಮತಿ ಜಂಗಮಶೆಟ್ಟಿ |
| ಶಾಂತು | ಬಸವನಗೌಡ ಚುರ್ಚಗುಂಡಿ |
| ಜ್ಯೋತಿ | ಪ್ರಭಾಕರ |
| ವಿಜಯಕುಮಾರ | ದೊಡ್ಡಪ್ಪ ಜಿ. |
| ಚಂದ್ರಕಾಂತ | ಎಸ್.ವಿ.ಅಜಯ್ |
| ತಬಲಾ ನಾಗಪ್ಪ | ಕು॥ ಅಶ್ವಿನಿ |
| ಕು॥ ಅನುಪಮ | ವನಜಾ |
| ಕಲ್ಪನಾ | ಮಾಸ್ಟರ್ ಚಿನ್ಮಯ್ |

## ಕನ್ನಡ ಯುವಕ ಸಂಘ, ಕಾಗಿನೆಲೆ

**ಸಂಪರ್ಕ: ಮಹೇಶಪ್ಪ ಬಿ., ದೂ: 97316 26783**

ಶಿಕಾರಿಪುರ ತಾಲ್ಲೂಕಿನ ಕಾಗಿನೆಲ್ಲಿ ಗ್ರಾಮದಲ್ಲಿ 1974–75ರಲ್ಲಿ ಖ್ಯಾತ ಚಲನಚಿತ್ರ ನಿರ್ದೇಶಕರಾದ ಪುಟ್ಟಣ್ಣ ಕಣಗಾಲ್‌ರವರ ಹಾರೈಕೆಯೊಂದಿಗೆ ಒಂದು ನಿರ್ಮಲ ರಂಗಮಂದಿರವನ್ನು ಸ್ಥಾಪಿಸಲಾಯಿತು. ನಂತರ ಗ್ರಾಮದ ಯುವಕರು 1984–85ರಲ್ಲಿ ಕನ್ನಡ ಯುವಕ ಸಂಘವನ್ನು ಸ್ಥಾಪಿಸಿಕೊಂಡು ಅನೇಕ ಸಾಂಸ್ಕೃತಿಕ ಕ್ರಿಯೆಯನ್ನು ಪ್ರಾರಂಭಿಸಿದರು. ಸತ್ಯ ಹರಿಶ್ಚಂದ್ರ, ಜಗಜ್ಯೋತಿ ಬಸವಣ್ಣ, ಮಂಗಳ ನನ್ನ ಅತ್ತಿಗೆ ಇಂತಹ ಅನೇಕ ಸಾಮಾಜಿಕ, ಪೌರಾಣಿಕ, ಐತಿಹಾಸಿಕ ನಾಟಕಗಳನ್ನು ಪ್ರಯೋಗಿಸುತ್ತಾ ಬಂದಿದೆ. ಮಕ್ಕಳ ನಾಟಕವನನು ಈ ತಂಡ ಸ್ವತಃ ನಿರ್ಮಿಸಿಲ್ಲ. ಆದರೆ, ಹೊರಗಡೆಯಿಂದ ಮಕ್ಕಳ ರಂಗ ತಂಡವನ್ನು ಕರೆಸಿಕೊಂಡು ಪ್ರದರ್ಶನವನ್ನು ಅನುಭವಿಸಿದೆ.



ನಾಟಕ: ಕುಂಕುಮ ತಂದ ಸೌಭಾಗ್ಯ, ನಿರ್ದೇಶನ: ಓಂಕಾರಪ್ಪ ಬಿ.

## ಕಲಾವಿದರ ವಿವರ

| | | | | |
|---|---|---|---|---|
| ತಿರುಕಪ್ಪ ಕೆ.ಎ. | ಬಿ.ತಿಮ್ಮನಗೌಡ | ಜಿ.ಶಿವನಗೌಡ | ಕೆ.ಸಿದ್ದಪ್ಪ | |
| ಸುರೇಶ್ ಬಿ. | ಗದಿಗಪ್ಪ | ಮಹೇಶಪ್ಪ ಬಿ. | ಓಂಕಾರಪ್ಪ ಬಿ. | ಮಲ್ಲೇಶ |

## ಸೇವಾ ವಿದ್ಯಾವರ್ಧಕ ಸಂಘ, ಮುದ್ದೇನಹಳ್ಳಿ

1999ರಲ್ಲಿ ಶಿಕಾರಿಪುರ ತಾಲೂಕಿನ ಮುದ್ದೇನಹಳ್ಳಿ ಗ್ರಾಮದಲ್ಲಿ ಸೇವಾ ವಿದ್ಯಾವರ್ಧಕ ಸಂಘ ತನ್ನ ಹುಟ್ಟನ್ನು ಪಡೆದಿದೆ. ಹೆಚ್ಚು ಹೆಚ್ಚಾಗಿ ಸಾಮಾಜಿಕ ನಾಟಕವನ್ನು ದೊಡ್ಡವರೊಂದಿಗೆ ಆಡುತ್ತಾ ಬಂದ ನಾಟಕ ತಂಡ ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಯ ಬೇರೆ ಬೇರೆ ಆಯಾಮದಲ್ಲೂ ತನ್ನನ್ನು ತೊಡಗಿಸಿಕೊಂಡಿದೆ. ಸರ್ಕಾರದ ಚಿಗುರು ಹಾಗೂ ಹಳ್ಳಿಗೊಂದು ಸಾಹಿತ್ಯ ಯೋಜನೆಯಲ್ಲಿ ಅನೇಕ ಮಕ್ಕಳ ನಾಟಕವನ್ನು ಯಶಸ್ವಿಯಾಗಿ ಆಡಿಸಿದ ಹೆಮ್ಮೆ ಈ ತಂಡಕ್ಕಿದೆ.

**ಕಲಾವಿದರ ವಿವರ**

ಭೋಜರಾಜನಾಯ್ಕ ಎಸ್.
ರವೀಂದ್ರನಾಯ್ಕ
ಸೇವ್ಯಾನಾಯ್ಕ
ಹಾಲಪ್ಪ ಆರ್.

**ತಂಡ ಆಡಿಸಿದ ಮಕ್ಕಳ ನಾಟಕಗಳು**


ಮಕ್ಕಳ ಕನಸು
ಆನೇ ಸಾಂಬಾರ್
ರಾಕ್ಷಸ ಸಂಹಾರ
ಹಸಿವು
ಹಕ್ಕಿಹಾಡು




# ಅಗಲಿದ ರಂಗಭೂಮಿ ದಿಗ್ಗಜರು




ಕೆ.ವಿ.ಸುಬ್ಬಣ್ಣ



ಎನ್.ಆರ್.ಮಾಸೂರ್




ಹೆಚ್.ಎಂ.ಪ್ರಭಾಕರ್



ಶಿವಮೊಗ್ಗ ವೆಂಕಟೇಶ್



ಡಾ॥ ಗುರುರಾವ್ ಬಾಪಟ್



ಎಸ್. ಶಾಮಮೂರ್ತಿ

## ರಂಗಕೃತಿ ಕುರಿತು ರಂಗಕರ್ಮಿಗಳ ನುಡಿ...

### ಮೊದಲ ಪ್ರಯತ್ನದಲ್ಲಿಯೇ ಯಶಸ್ಸು ಕಂಡಿದೆ...

ಶಿವಮೊಗ್ಗ ಜಿಲ್ಲೆಯ ರಂಗ ಇತಿಹಾಸವನ್ನು ಪ್ರಕಟಿಸುವ ಪ್ರಯತ್ನ ಸ್ವಾಗತಾರ್ಹವಾದದ್ದು, ಇಂತಹ ಪ್ರಯತ್ನವೊಂದಕ್ಕೆ ಪ್ರೋತ್ಸಾಹ ನೀಡಿದ ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಸಂಕಲನ ಕಾರ್ಯ ಕೈಗೊಂಡಿರುವ ಹರಿಗೆ ಗೋಪಾಲಸ್ವಾಮಿಯವರು ಸ್ತುತ್ಯಾರ್ಹರು ಹಾಗೆಯೇ ಎಸ್.ಆರ್.ಗಿರೀಶ್ ಅವರು. ಇಂತಹ ಸಂಕಲನ ಕಾರ್ಯಗಳು ಒಮ್ಮೆಗೇ ಪರಿಪೂರ್ಣವಾಗಲಾರದು, ಮತ್ತೆ ಮತ್ತೆ ಪರಿಷ್ಕರಿಸಿ ಪುನರ್ ಮುದ್ರಿಸಬೇಕಾಗುತ್ತದೆ. ಆದರೆ ಈಗಿರುವ ರೂಪದಲ್ಲಿಯೇ, ಮೊದಲ ಪ್ರಯತ್ನದಲ್ಲಿಯೇ ಇದು ಸಾಕಷ್ಟು ವಿಸ್ತೃತವಾಗಿರುವುದು ಸಂತೋಷದ ವಿಷಯವಾಗಿದೆ.

**–ಪ್ರಸನ್ನ, ರಂಗ ನಿರ್ದೇಶಕರು, ಹೆಗ್ಗೋಡು**

### ರಂಗಾಸಕ್ತರ ಅಭಿನಂದನೆಗೆ ಪಾತ್ರವಾಗಿದೆ...

ಭವ್ಯವಾದ ನಾಟಕ ಸಂಸ್ಕೃತಿ ಹೊಂದಿರುವ ಶಿವಮೊಗ್ಗ ಜಿಲ್ಲೆಯ ರಂಗ ಇತಿಹಾಸವನ್ನು ದಾಖಲಿಸುವ ಕರ್ನಾಟಕ ನಾಟಕ ಅಕಾಡೆಮಿಯ ಈ ಪ್ರಯತ್ನಕ್ಕೆ ಮೊದಲನೆಯದಾಗಿ ನನ್ನ ಅಭಿನಂದನೆಗಳು. ಶಿವಮೊಗ್ಗ ಜಿಲ್ಲೆಯ ಎಲ್ಲಾ ರಂಗ ಪ್ರಕಾರಗಳನ್ನು ಅದರಲ್ಲೂ ಮುಖ್ಯವಾಗಿ ಹವ್ಯಾಸಿ ರಂಗ ಪ್ರಕಾರವನ್ನು ಹಾಗೂ ಅದರೊಂದಿಗೆ ಬಹಳ ವರ್ಷಗಳಿಂದ ತೊಡಗಿಸಿಕೊಂಡಿರುವ ಹವ್ಯಾಸಿ ನಾಟಕ ಸಂಸ್ಥೆಗಳು, ನಾಟಕಕಾರರು, ನಟರು, ನಿರ್ದೇಶಕರು ಹಾಗೂ ರಂಗ ತಂತ್ರಜ್ಞರನ್ನು ಗುರುತಿಸಿ ದಾಖಲಿಸುವ ಈ ಪ್ರಯತ್ನವನ್ನು ನಾಟಕ ಅಕಾಡೆಮಿ ತುಂಬಾ ಸುಂದರವಾಗಿಯೇ ಮಾಡಿದೆ. ಇದಕ್ಕಾಗಿ ಎಲ್ಲಾ ರಂಗಾಸಕ್ತರ ಅಭಿನಂದನೆಗೆ ಅದು ಪಾತ್ರವಾಗಿದೆ.

**–ಬಿ.ಎಂ.ಕುಮಾರಸ್ವಾಮಿ, ಹಿರಿಯ ರಂಗಕರ್ಮಿ, ಶಿವಮೊಗ್ಗ.**

## ಉಪಯುಕ್ತತೆಯನ್ನು ಹೆಚ್ಚಿಸಿದೆ...

ಕರ್ನಾಟಕ ನಾಟಕ ಅಕಾಡೆಮಿಯು ಪ್ರಕಟಿಸುತ್ತಿರುವ ಶಿವಮೊಗ್ಗ ಜಿಲ್ಲೆಯ ರಂಗತಂಡಗಳು ಹಾಗೂ ಕಲಾವಿದರ ಪರಿಚಯವನ್ನೊಳಗೊಂಡ ಪುಸ್ತಕವನ್ನು ಅವಲೋಕಿಸಿದೆ. ಅತ್ಯಂತ ಪರಿಶ್ರಮ, ಮುತುವರ್ಜಿ ಹಾಗೂ ಕಾಳಜಿಯಿಂದ ವಿಷಯಗಳನ್ನು ಸಂಗ್ರಹಿಸಲಾಗಿದೆ. ಇಡೀ ಜಿಲ್ಲೆಯ ಸಾಂಸ್ಕೃತಿಕ ಚಟುವಟಿಕೆಗಳ ಸಮಗ್ರ ಮಾಹಿತಿಯು ಈ ಪುಸ್ತಕದಲ್ಲಿ ದೊರಕುವುದರಿಂದ ಯಾವುದೇ ರಂಗ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಉಪಯುಕ್ತವಾದಂತಹ ಪುಸ್ತಕ ಇದು.

ಹೀಗೆ ರಂಗತಂಡಗಳನ್ನು, ಕಲಾವಿದರನ್ನು ಗುರುತಿಸಿ ದಾಖಲಿಸುವುದರ ಮೂಲಕ ಅವರು ಮಾಡುತ್ತಿರುವ ಕಾಯಕವನ್ನು ಗೌರವಿಸಿದಂತಾಗುತ್ತದೆ ಜೊತೆಗೆ ಮುಂದಿನ ತಲೆಮಾರಿಗೆ ಅವರನ್ನು ಪರಿಚಯಿಸಿದಂತಾಗುತ್ತದೆ. ಇದು ಕಲಾವಿದರು ಮತ್ತು ಆಸಕ್ತರಿಗೆ ಸ್ಫೂರ್ತಿಯನ್ನೊದಗಿಸುತ್ತದೆ. ಪುಸ್ತಕದಲ್ಲಿ ಆಯಾ ತಾಲೂಕಿನ ನಕ್ಷೆ ಹಾಗೂ ಇತರೆ ವೈಶಿಷ್ಟ್ಯಗಳನ್ನು ಸೇರಿಸಿರುವುದು ಅದರ ಉಪಯುಕ್ತತೆಯನ್ನು ಹೆಚ್ಚಿಸಿದೆ.

ಶಿವಮೊಗ್ಗ ಜಿಲ್ಲೆಯು ನಾಡಿನ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿರುವುದರಿಂದ ಕೆಲವು ತಂಡಗಳ ಹಾಗೂ ಕಲಾವಿದರ ಪರಿಚಯ ಬಿಟ್ಟು ಹೋಗಿರಬಹುದು. ಮುಂದಿನ ಪ್ರಕಟಣೆಗಳಲ್ಲಿ ಅವೆಲ್ಲವೂ ಸೇರ್ಪಡೆಯಾಗುವುದೆಂಬ ಭರವಸೆಯಿದೆ. ಇಂತಹ ಪುಸ್ತಕ ಪ್ರಕಟಣೆಗೆ ಮುಂದಾದ ನಾಟಕ ಅಕಾಡೆಮಿ ಹಾಗೂ ಸಂಪಾದಕ ಮಂಡಳಿಯು ನಿಜಕ್ಕೂ ಅಭಿನಂದನಾರ್ಹ.

**– ಕೆ.ಜಿ.ಕೃಷ್ಣಮೂರ್ತಿ, ನಿರ್ದೇಶಕರು, ಕಿನ್ನರ ಮೇಳ, ತುಮರಿ**

## ಇತರೆ ಜಿಲ್ಲೆಗಳಲ್ಲಿಯೂ ಈ ಪ್ರಯತ್ನ ನಡೆಯಲಿ...

ಇದು ಒಂದು ಒಳ್ಳೆಯ ಪ್ರಯತ್ನ. ಇದರಿಂದಾಗಿ ರಂಗತಂಡಗಳ ಬಗ್ಗೆ ವಿವರವಾದ ಮಾಹಿತಿ ಎಲ್ಲರಿಗೂ ದೊರಕುವುದು ಸಾಧ್ಯವಾಗುತ್ತದೆ. ಇಂತಹದ್ದೇ ಕಾರ್ಯವನ್ನು ಇತರೆ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಿರಿ. ನಾಟಕ ಅಕಾಡೆಮಿಗೆ ಅಭಿನಂದನೆಗಳು.

**–ಡಾ॥ ಗುರುರಾವ್ ಬಾಪಟ್, ಹಿರಿಯ ರಂಗ ನಿರ್ದೇಶಕರು, ಸಾಗರ.**

**ರಂಗಪ್ರತಿಭೆಗಳನ್ನು ಗುರುತಿಸಲು ಸಹಾಯಕವಾಗಲಿದೆ.**

ಶಿವಮೊಗ್ಗ ಜಿಲ್ಲಾ ರಂಗ ಮಾಹಿತಿ ಎನ್ನುವುದು ಒಂದು ಭಂಡಾರ. ಇದು ರಂಗ ಕಲಾವಿದರಿಗೆ ಒಂದು ದಾಖಲೆ ಮಾಡಲೇಬೇಕಾದಂತಹ ಕಾರ್ಯ. ಇದು ಬೇರೆಲ್ಲೂ ಸಿಗದಂತಹ ಮಾಹಿತಿ ಪುಸ್ತಕವಾಗಿದೆ. ರಂಗ ಕಲಾವಿದರು ಸಾಂಸ್ಕೃತಿಕ ರಾಯಭಾರಿಗಳು. ಈ ಕಾರ್ಯವು ನಿಜಕ್ಕೂ ಮಾಡಲೇಬೇಕಾದಂತಹ ಕಾರ್ಯ. ಮಾಹಿತಿ ಸಂಗ್ರಹಕಾರರು ಸುಮಾರು 50 ವರ್ಷಗಳ ಹಿಂದಿನಿಂದ ಮಾಹಿತಿ ಸಂಗ್ರಹಿಸಿರುವುದು ಅಭಿನಂದನಾರ್ಹ. ಇದು ಮುಂದಿನ ರಂಗಪೀಳಿಗೆಗೆ ಉಪಯುಕ್ತವಾಗುವುದರಲ್ಲಿ ಸಂದೇಹವಿಲ್ಲ.

**–ಶ್ರೀ ಹೊ.ನ. ಸತ್ಯ, ಪ್ರಥಮ ನಿರ್ದೇಶಕರು, ರಂಗಾಯಣ, ಶಿವಮೊಗ್ಗ.**

**ರಂಗಭೂಮಿಯಲ್ಲಿ ತೊಡಗಿಸಿಕೊಳ್ಳಲು ಸ್ಫೂರ್ತಿಯಾಗುತ್ತದೆ...**

ಶಿವಮೊಗ್ಗ ಜಿಲ್ಲೆಯು ಕಲೆಗಳ ತವರೂರು. ಈ ಜಿಲ್ಲೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕರ್ನಾಟಕದಲ್ಲಿಯೇ ಮುಂಚೂಣಿಯಲ್ಲಿದೆ ಎಂದರೆ ಖಂಡಿತಾ ತಪ್ಪಾಗಲಾರದು. ಕರ್ನಾಟಕದ ಕನ್ನಡ ರಂಗಭೂಮಿಯ ಇಂದಿನ ಸ್ಥಿತಿಯಲ್ಲಿ ರಂಗಭೂಮಿಯನ್ನು ಉಳಿಸಿ, ಓಲೈಸುವ ದಿಕ್ಕಿನಲ್ಲಿ ಇಂತಹ ಪ್ರಯತ್ನ ಬಹು ಅತ್ಯಗತ್ಯ.

ಇತ್ತೀಚಿನ ದಿನಗಳಲ್ಲಿ ಯುವಪೀಳಿಗೆಯವರಿಗೆ ರಂಗಭೂಮಿಯ ಬಗ್ಗೆ ಆಸಕ್ತಿ, ಉತ್ಸಾಹ ಮೂಡಿಸಲು ನಿಮ್ಮ ಪ್ರಯತ್ನ ಶ್ಲಾಘನೀಯ ಹಾಗೂ ಮುಂದಿನ ಯುವ ಕಲಾವಿದರಿಗೆ ಸ್ಫೂರ್ತಿದಾಯಕ.

ಜಿಲ್ಲೆಯ ಪ್ರತಿ ತಾಲೂಕಿನ ರಂಗತಂಡಗಳ ಹಿಂದಿನ–ಈಗಿನ ಕಲಾವಿದರ ನಾಟಕ ಪ್ರದರ್ಶನಗಳ ತಂತ್ರಜ್ಞರ ಹಾಗೂ ರಂಗ ನಿರ್ದೇಶಕರ ಮತ್ತು ಪ್ರಶಸ್ತಿ ಪಡೆದ ಕಲಾವಿದರ ರಂಗಭೂಮಿಗಾಗಿ ಸೇವೆ ಸಲ್ಲಿಸಿದ, ಸಲ್ಲಿಸುತ್ತಿರುವವರ ಸ್ಥೂಲ ಪರಿಚಯ ಮಾಡಿರುವ ಹಾಗೂ ಜಿಲ್ಲಾ ಮತ್ತು ತಾಲೂಕಿನ ರಂಗಮಂದಿರಗಳ ಮಾಹಿತಿಗಳನ್ನು ಕಲೆಹಾಕಿ ನಾಟಕ ಅಕಾಡೆಮಿಯು ಪುಸ್ತಕರೂಪದಲ್ಲಿ ಹೊರತರುವುದಿರುವುದಕ್ಕೆ ನನ್ನ ತುಂಬುಹೃದಯದ ಅಭಿನಂದನೆಗಳು.

ರಂಗಭೂಮಿಯಲ್ಲಿ ಈ ತರಹದ ಪ್ರಯತ್ನ ಬೇಕೇಬೇಕು. ಇದಕ್ಕೆ ಅದರದೇ ಸಾರ್ಥಕತೆ ಇದೆ. ಮುಂದಿನ ರಂಗ ಕಲಾವಿದರಿಗೆ ಇದು ಅತ್ಯವಶ್ಯಕತೆ. ಕಾರಣ, ಅವರುಗಳು ರಂಗಭೂಮಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಸ್ಫೂರ್ತಿ ಎಂದು ನನ್ನ ಭಾವನೆ. ನಾಟಕ ಅಕಾಡೆಮಿಯು ಸಮಗ್ರ ಜಿಲ್ಲೆಗಳ ಮಾಹಿತಿ ಕಲೆ ಹಾಕಲು ಕೈಗೊಂಡಿರುವ ಈ ಸಾರ್ಥಕ ಪ್ರಯತ್ನಕ್ಕೆ ಅಭಿನಂದಿಸುತ್ತಾ ಭದ್ರಾವತಿ ತಾಲೂಕಿನ ರಂಗ ತಂಡಗಳ, ಕಲಾವಿದರ ಪರವಾಗಿ ನಾಟಕ ಅಕಾಡೆಮಿಯ ಜಿಲ್ಲಾ ಸದಸ್ಯರಾದ ಶ್ರೀ ಹರಿಗೆ ಗೋಪಾಲಸ್ವಾಮಿ ಅವರ ಶ್ರಮದ ಪ್ರಯತ್ನಕ್ಕೆ ಶುಭ ಹಾರೈಸುತ್ತೇನೆ.

**– ಕಲಾಶ್ರೀ ಎಸ್.ಶ್ಯಾಮಮೂರ್ತಿ, ಹಿರಿಯ ರಂಗಕರ್ಮಿಗಳು, ಭದ್ರಾವತಿ**

## ಶ್ಲಾಘನೀಯ ಕಾರ್ಯ

ಶಿವಮೊಗ್ಗ ಜಿಲ್ಲಾ ರಂಗ ಮಾಹಿತಿ ಪುಸ್ತಕ ಹೊರತರುತ್ತಿರುವುದು ನಿಜವಾಗಲೂ ಒಂದು ಒಳ್ಳೆಯ ಕೆಲಸ. ಇದು ಜಿಲ್ಲೆಯಲ್ಲಿ ರಂಗಭೂಮಿ ಗಟ್ಟಿಗೊಳ್ಳುವುದಕ್ಕೆ ಪ್ರೇರಣೆ ನೀಡುತ್ತದೆ. ಇದುವರೆಗೆ ವೃತ್ತಿ ರಂಗಭೂಮಿ ಮಾಹಿತಿ ಪುಸ್ತಕ ಮಾತ್ರ ಲಭ್ಯವಿತ್ತು. ಈಗ ಹವ್ಯಾಸಿ ರಂಗಭೂಮಿ ಬಗ್ಗೆ ಮಾಹಿತಿ ಪುಸ್ತಕ ಹೊರತರುತ್ತಿರುವುದು ಶ್ಲಾಘನೀಯ.

**–ಶ್ರೀಮತಿ ಎಸ್. ಮಾಲತಿ, ರಂಗನಿರ್ದೇಶಕರು, ಸಾಗರ.**

## ಪರಸ್ಪರ ಅರಿಯಲು ಸಹಾಯಕವಾಗಲಿದೆ

ಶಿವಮೊಗ್ಗ ಜಿಲ್ಲಾ ರಂಗ ಇತಿಹಾಸ ಪುಸ್ತಕ ಅಕಾಡೆಮಿಯು ಹೊರತರುತ್ತಿರುವುದು ಶಿವಮೊಗ್ಗ ಜಿಲ್ಲೆಗೆ ಹೆಮ್ಮೆಯ ವಿಷಯ. ಇದರಿಂದ ಪರಸ್ಪರ ಅರಿತುಕೊಳ್ಳಲು ಅನುಕೂಲವಾಗುತ್ತದೆ. ಮತ್ತು ಇತರರಿಗೂ ಇದು ಮಾರ್ಗದರ್ಶನವಾಗಲಿದೆ.

**– ಶ್ರೀ ಕೆ.ವಿ. ಅಕ್ಷರ, ರಂಗನಿರ್ದೇಶಕರು, ನೀನಾಸಮ್**

## ರಂಗಪ್ರತಿಭೆಗಳನ್ನು ಗುರುತಿಸಲು ಸಹಾಯಕವಾಗಲಿದೆ.

ಶಿವಮೊಗ್ಗ ಜಿಲ್ಲಾ ರಂಗ ಮಾಹಿತಿ ಪುಸ್ತಕವನ್ನು ಅಕಾಡೆಮಿ ಹೊರತರುತ್ತಿರುವುದು ಶ್ಲಾಘನೀಯ. ಇದರಿಂದ ಪ್ರತಿ ತಾಲ್ಲೂಕಿನ ರಂಗಕರ್ಮಿಗಳ ಪರಿಚಯ ಹಾಗೂ ಹಿರಿಯ ರಂಗ ಕಲಾವಿದರಿಂದ ನಮಗೆ ಸ್ಫೂರ್ತಿ ದೊರೆಯುತ್ತದೆ. ಅಲ್ಲದೆ ತೆರೆಮರೆಯಲ್ಲಿದ್ದ ಅದೆಷ್ಟೋ ರಂಗಪ್ರತಿಭೆಗಳನ್ನು ಗುರುತಿಸಲು ಸಹಾಯಕವಾಗಲಿದೆ. ಒಟ್ಟಾರೆ ಇದೊಂದು ಸಾರ್ಥಕ್ಯದ ಕೆಲಸ.

**–ಶ್ರೀ ಸಂದೇಶ್ ಜವಳಿ, ಮಾಜಿ ಸದಸ್ಯರು, ನಾಟಕ ಅಕಾಡೆಮಿ, ತೀರ್ಥಹಳ್ಳಿ**